**ಬೆಂಗಳೂರು ನಗರ ವಿಶ್ವವಿದ್ಯಾಲಯ**

ಅಂಬೇಡ್ಕರ್ ವೀಧಿ, ಬೆಂಗಳೂರು–೧

# ಕನ್ನಡ ಭಾಷಾ ಪಠ್ಯ

## ಬಿಬಿಎ

## (ತೃತೀಯ ಸೆಮಿಸ್ಟರ್)

**ಪ್ರಧಾನ ಸಂಪಾದಕರು**

ಡಾ. ಡಿ. ಡೊಮಿನಿಕ್

**ಕಾರ್ಯನಿರ್ವಾಹಕ ಸಂಪಾದಕರು**

ಡಾ. ಕೆ ವೈ ನಾರಾಯಣ ಸ್ವಾಮಿ

**ಪರಿಶೀಲಕರು**

ಡಾ. ಬೆಳಕೆರೆ ಲಿಂಗರಾಜಯ್ಯ

**ಸಂಪಾದಕರು**

ಡಾ. ಎಸ್ ಎಲ್ ಮಂಜುನಾಥ

ಡಾ. ಎನ್ ರವಿ

ಡಾ. ಜಗದೀಶ್‌ಬಾಬು ಬಿ ವಿ

ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY

ಆಗು ನೀ ಅನಿಕೇತನ BE BOUNDLESS

**ಪ್ರಸಾರಂಗ**

**ಬೆಂಗಳೂರು ನಗರ**

**ವಿಶ್ವವಿದ್ಯಾನಿಲಯ**

# ಕನ್ನಡ ಭಾಷಾ ಪಠ್ಯ – ಬಿಬಿಎ (ತೃತೀಯ ಸೆಮಿಸ್ಟರ್)

## ಪರಿವಿಡಿ

### ಭಾಗ ೧ – ರಂಗಭೂಮಿ


| | | | |
|---|---|---|---|
| ೧ | ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿ | ಅ.ನ.ಕೃ | ೦೪ |
| ೨ | ನಾಟಕ ಓದುವ ಮತ್ತು ಅರ್ಥಮಾಡಿಕೊಳ್ಳುವ ಬಗೆ | ಡಾ.ಜಯಪ್ರಕಾಶ್ ಮಾವಿನಕುಳಿ | ೦೮ |
| ೩ | ಪಂಚಮ – ನಾಟಕ | ಡಾ. ಸಿದ್ದಲಿಂಗಯ್ಯ | ೧೩ |
| ೪ | ಓದು ಪಠ್ಯ – ಕನಸ ಬಿತ್ತಿ, ಬದಕನರಸುತ್ತಾ – ಉಮಾಶ್ರೀ | ಶಶಿಧರ ಭಾರಿಘಾಟ್ | ೨೭ |


### ಭಾಗ ೨ – ಸ್ವಾತಂತ್ರ್ಯ


| | | | |
|---|---|---|---|
| ೧ | ಗವಾಕ್ಷಿ | ವಿಜಯಾ ದಬ್ಬೆ | ೩೫ |
| | ಅಡುಗೆ ಮನೆಯ ಹುಡುಗಿ | ವೈದೇಹಿ | ೩೬ |
| ೨ | ಸುಸ್ಮಿತ ಮತ್ತು ಹಕ್ಕಿ ಮರಿ | ಪೂರ್ಣಚಂದ್ರ ತೇಜಸ್ವಿ | ೩೮ |
| ೩ | ಸ್ವಾತಂತ್ರ್ಯವೆಂಬ ಹೊಸ ಮೌಲ್ಯ | ಎಂ. ಗೋಪಾಲಕೃಷ್ಣ ಅಡಿಗ | ೪೫ |
| ೪ | ಓದು ಪಠ್ಯ – ಗಿಳಿಯ ಕಥೆ | ರವೀಂದ್ರನಾಥ್ ಠಾಕೂರ್ | ೪೭ |


### ಭಾಗ ೩ – ನೆರೆಹೊರೆ


| | | | |
|---|---|---|---|
| ೧ | ಬಕಾಸುರ ವಧೆ (ಕುಮಾರವ್ಯಾಸ ಭಾರತ) | ಕುಮಾರವ್ಯಾಸ | ೫೧ |
| ೨ | ನಿಮ್ಮೊಡನಿದ್ದೂ ನಿಮ್ಮಂತಾಗದೆ | ಡಾ.ಕೆ.ಎಸ್.ನಿಸಾರ್‌ಅಹಮದ್ | ೫೫ |
| ೩ | ಭೃಂಗದ ಬೆನ್ನೇರಿ | ಸುಶೀಲಾ ಡೋಣೂರ | ೫೬ |
| ೪ | ಓದು ಪಠ್ಯ – ಕಿನ್ನರಿ ಜೋಗಿಯರು | ಡಾ.ಹಿ.ಚಿ.ಬೋರಲಿಂಗಯ್ಯ | ೬೩ |


### ಭಾಗ ೪ – ಅಂತರಾಷ್ಟ್ರೀಯತೆ


| | | | |
|---|---|---|---|
| ೧ | ತಾಯ್ನಾಡು | ಮೂಲ : ಮಹಮೂದ್ ದರ್‌ವೇಶ್<br>ಅನುವಾದ : ವಿಜಯವಾಮನ | ೭೦ |
| ೨ | ಷೋಯಿಂಕಾ : ನಾಡಿನ ದುಃಖ ಪಾಪಗಳನ್ನು ಹೊರುವ ಲೇಖಕ | ಪಿ. ಲಂಕೇಶ | ೭೨ |
| ೩ | ಅಮೇರಿಕಾ... ಅಮೇರಿಕಾ... ಅಮೇರಿಕಾ... ಅಮೇರಿಕಾ... | ನಾ. ಡಿಸೋಜ | ೭೫ |
| ೪ | ಓದು ಪಠ್ಯ – ಅಂತರಜಾಲದ ವಿಶ್ವರೂಪ | ಟಿ.ಜಿ.ಶ್ರೀನಿಧಿ | ೮೨ |

# ೧. ರಂಗಭೂಮಿ

**ಆಶಯ :**

ಕನ್ನಡದಲ್ಲಿ ತೀರ ಇತ್ತೀಚಿನವರೆಗೆ ನಾಟಕ ಸಾಹಿತ್ಯ ಹುಟ್ಟದಿದ್ದುದು ಒಂದು ಅತ್ಯಂತ ಸೋಜಿಗದ ಸಂಗತಿಯಾಗಿದೆ. ೮–೯ನೆಯ ಶತಮಾನಗಳಿಂದಲೆ ಶ್ರೇಷ್ಠ ಕಾವ್ಯಗಳು, ಕೆಲವು ಗದ್ಯಗ್ರಂಥಗಳು ರಚಿತವಾದಾಗಲೂ ೧೭ನೆಯ ಶತಮಾನದವರೆಗೆ ಒಂದೂ ನಾಟಕ ರಚಿತವಾದಂತಿಲ್ಲ. ರಚಿತವಾಗಿದ್ದರೂ ಕಾವ್ಯ–ಗದ್ಯಗ್ರಂಥಗಳಂತೆ ಇಂದಿನವರೆಗೆ ಉಳಿದು ಉಪಲಬ್ಧವಾಗುವ ಯೋಗ್ಯತೆಯು ಇದ್ದಿರಲಿಕ್ಕಿಲ್ಲ. ಕಾವ್ಯ–ಗದ್ಯಗ್ರಂಥಗಳು ಸಂಸ್ಕೃತ ಸಾಹಿತ್ಯದಿಂದ ಪ್ರಭಾವಿತವಾಗಿ ಅಸ್ತಿತ್ವದಲ್ಲಿ ಬಂದುವು. ಆದರೆ ಅದೇ ಸಂಸ್ಕೃತದಲ್ಲಿ ಕ್ರಿಸ್ತಶಕದ ಮೊದಲಿನ ೬–೭ನೆಯ ಶತಮಾನಗಳಲ್ಲಿ ಶ್ರೇಷ್ಠ ನಾಟಕಗಳು ಹುಟ್ಟಿದರೂ ಅವುಗಳ ಪ್ರಭಾವವು ಕನ್ನಡ ನಾಟಕ ಸಾಹಿತ್ಯವನ್ನು ಪ್ರೇರಿಸಲಿಲ್ಲ.

ಒಂದು ಸಾವಿರ ವರ್ಷಗಳ ಮುಂಚಿತದಿಂದ ಸಂಸ್ಕೃತದ ಬಳಕೆ ಕಾವ್ಯ ಸಾಹಿತ್ಯದಲ್ಲಿ ಕಡಿಮೆಯಾಗತೊಡಗಿತು; ಪ್ರಾಕೃತ ಭಾಷೆಗಳ ಬಳಕೆ ಹೆಚ್ಚಾಗಿ ಆ ಭಾಷೆಗಳಲ್ಲಿ ಕೆಲವು ನಾಟಕಗಳು ರಚಿತವಾದುವು. ಪ್ರಾಕೃತಭಾಷೆಗಳು ಆಡುಮಾತಿನ ಭಾಷೆಗೆ ಹತ್ತಿರವಾಗಿದ್ದಲ್ಲಿ ಆ ಪ್ರಭಾವದಿಂದಲಾದರೂ ಕನ್ನಡದಲ್ಲಿ ನಾಟಕ ಸಾಹಿತ್ಯ ಹುಟ್ಟಬೇಕಾಗಿತ್ತು. ಯಾಕೆ ಹುಟ್ಟಲಿಲ್ಲ?

ಕನ್ನಡದಲ್ಲಿ ನಾಟಕ ಸಾಹಿತ್ಯ ಇಲ್ಲದ್ದಕ್ಕೆ ರಂಗಭೂಮಿಯೂ ಇದ್ದಿರಲಿಲ್ಲ ಎಂದು ಹೇಳಲಾಗದು. ಭಿನ್ನರುಚಿಯ ಜನರಿಗೆ, ಪಂಡಿತ–ಪಾಮರರಿಗೆ, ಸಾಕ್ಷರಿ–ನಿರಕ್ಷರಿಗಳಿಗೆ ರಂಜಕವಾದ ರಂಗಭೂಮಿ ಇದ್ದಿರಲೇಬೇಕು; ಇದ್ದಿತು–ಎಂಬುದಕ್ಕೆ ಕನ್ನಡ ಸಾಹಿತ್ಯದ ಇತಿಹಾಸಕಾರರು ಹಳೆಯ ಕನ್ನಡ ಸಾಹಿತ್ಯದಲ್ಲಿ ಸಾಕ್ಷಿ–ಪುರಾವೆಗಳನ್ನು ತೋರಿಸಿದ್ದಾರೆ. ಆದರೆ ನಾಟಕ ರಚನೆ ಇಲ್ಲದೆ ರಂಗಭೂಮಿ ಅಸ್ತಿತ್ವದಲ್ಲಿರುವುದು ಶಕ್ಯವಿಲ್ಲವಾದ್ದರಿಂದ ನಾಟಕಗಳು ಇದ್ದುವೆಂದು ಹೇಳಬಹುದು. ಅಂತಹ ನಾಟಕಗಳು ಈಗ ಉಪಲಬ್ಧವಿಲ್ಲದ್ದಕ್ಕೆ ಇಂದಿನ ನಮ್ಮ ಜನಪದ ರಂಗಭೂಮಿಯನ್ನೂ ಅದರ ಪರಂಪರೆಯನ್ನೂ ನೋಡಿದರೆ ಕಾರಣಗಳು ಸ್ಪಷ್ಟವಾಗುವುವು.

೧೭ನೆಯ ಶತಮಾನದ ಕೊನೆಗೆ ಸಿಂಗರಾರ್ಯನು ಬರೆದ ಮಿತ್ರವಿಂದಾ–ಗೋವಿಂದ ಎಂಬ ನಾಟಕವು ಭಾಷಾಭಿಮಾನದಿಂದ ಮಾಡಿದ ಒಂದು ಅನಗತ್ಯ ಸಾಹಸ ಎಂದು ಹೇಳಬಹುದು. ಯಾಕೆಂದರೆ, ಮೊದಲನೆಯದಾಗಿ, ಇದು ಸಂಸ್ಕೃತ ನಾಟಕವೊಂದರ ರೂಪಾಂತರ; ಎರಡನೆಯದಾಗಿ, ಸಂಸ್ಕೃತದ ಅತ್ಯಂತ ಶ್ರೇಷ್ಠ ನಾಟಕಕಾರನು ಬರೆದ ನಾಟಕವೂ ಇದಲ್ಲ; ಮೂರನೆಯದಾಗಿ, ಸಂಸ್ಕೃತವನ್ನು ಬಲ್ಲ ಮತ್ತು ಮೆಚ್ಚುವ ಸಮಕಾಲೀನ ಪಂಡಿತರಿಗೆ ಇದರ ಅಗತ್ಯವೂ ಇದ್ದಿರಲಿಲ್ಲ. ಅಂದಿನವರೆಗೆ ಯಾವ ಕನ್ನಡ ಕವಿಯೂ ಮಾಡ(ಲಾರ)ದ್ದನ್ನು ತಾನು ಮಾಡಬಲ್ಲನು ಎಂಬ ಹೆಮ್ಮೆಯಿಂದಾಗಲಿ, ಮೂಲ ಸಂಸ್ಕೃತನಾಟಕವಾದ ರತ್ನಾವಲೀ ಕಥೆ ರಾಮಾಯಣ–ಮಹಾಭಾರತಗಳ ಕಥೆಗಳಂತೆ ಸಾಮನ್ಯರಿಗೆ ಪರಿಚಿತವಾಗಿರಲಿಲ್ಲ ಎಂಬುದಕ್ಕಾಗಲಿ, ಇಲ್ಲವೆ ಯಾವುದೇ ನೆಪದಿಂದ ತನ್ನ ರಾಜನನ್ನೂ ಅವನ ಪ್ರಣಯ–ಜೀವನವನ್ನೂ ಪ್ರಶಂಸಿಸುವುದಕ್ಕಾಗಲಿ ಬರೆದ ನಾಟಕವಿದಾಗಿರಬಹುದಾಗಿದೆ. ಅದಕ್ಕೆಂದೇ ಮುಂದೆ ಎರಡು ಶತಮಾನಗಳವರೆಗೂ ಕನ್ನಡದಲ್ಲಿ ಸ್ವತಂತ್ರ್ಯ ಇಲ್ಲವೆ ಅನುವಾದತ್ಮಕವಾಗಿ ಯಾವ ನಾಟಕವೂ ರಚಿತವಾಗಲಿಲ್ಲ.

೧೯ನೆಯ ಶತಮಾನದ ಕೊನೆಯ ಸುಮಾರಿಗೆ ಆಧುನಿಕ ಕನ್ನಡ ರಂಗಭೂಮಿ ಅಸ್ತಿತ್ವದಲ್ಲಿ ಬಂದರೂ ಕನ್ನಡದಲ್ಲಿ ನಾಟಕ ಸಾಹಿತ್ಯ ರಚಿತವಾಗಲಿಲ್ಲ. ನಮ್ಮ ಪ್ರಾರಂಭದ ನಾಟಕಗಳು ಪಾರ್ಸಿ ಕಂಪನಿಯ ನಾಟಕಗಳ ಅನುವಾದವಾಗಿದ್ದುವು; ಅದಲ್ಲದಾಗ ಜಾನಪದ ಪರಂಪರೆಗೆ ಅನುಸಾರವಾಗಿ ರಾಮಾಯಣ–ಮಹಾಭಾರತ–ಪುರಾಣಗಳ ಕಥೆಗಳನ್ನೇ ವಸ್ತುವನ್ನಾಗಿ ಆಯ್ದುಕೊಂಡು ಹೆಚ್ಚಾಗಿ ನೃತ್ಯ–ಸಂಗೀತ–ವೇಷಭೂಷಣಗಳೆ ವೈಶಿಷ್ಟ್ಯವಾಗಿದ್ದುವು. ಆಶ್ಚರ್ಯದ ಮಾತೆಂದರೆ, ಇದೇ ಕಾಲಕ್ಕೆ ಸಂಸ್ಕೃತದ–ಕಾಲಿದಾಸ–ಭವಭೂತಿ–ಭಟ್ಟನಾರಾಯಣ ಮೊದಲಾದ ನಾಟಕಕಾರರ ಕೃತಿಗಳು ಕನ್ನಡಕ್ಕೆ ಅನುವಾದಿತವಾದುವು. ಇದಕ್ಕೆ ನಾವು ಎರಡು ಕಾರಣಗಳನ್ನು ಊಹಿಸಬಹುದಾಗಿದೆ: ಒಂದು, ಆಗ ನಮ್ಮನ್ನೂ ನಮ್ಮ ಪರಂಪರೆಯನ್ನೂ ತುಚ್ಛವಾಗಿ ನೋಡುವ 'ಮ್ಲೇಂಛ' ಬ್ರಿಟಿಷರಿಗೆ ನಮ್ಮ ಶ್ರೇಷ್ಠಸಾಹಿತ್ಯವನ್ನು ತೋರಿಸುವ ಸ್ಪರ್ಧಾತ್ಮಕ ಹೆಮ್ಮೆ; ಇನ್ನೊಂದು, ಪಾರ್ಸಿ ಕಂಪನಿಯ ಪ್ರಭಾವದಿಂದ ರಂಗಭೂಮಿ ಜನಪ್ರಿಯವಾಗುತ್ತಿರುವಾಗ, ಹೊಸ ಮತ್ತು ಸ್ವತಂತ್ರ ನಾಟಕಗಳನ್ನು ಬರೆಯುವ ಯೋಗ್ಯತೆ ಇಲ್ಲವೆ ಅವಕಾಶ ಇಲ್ಲದ್ದಕ್ಕೆ, ಸುಲಭೋಪಾಯವೆಂದು ಸಂಸ್ಕೃತ ನಾಟಕಗಳನ್ನು ಅನುವಾದಿಸಿರಬಹುದು. ಯಾವುದೇ ಕಾರಣವಿರಲಿ, ಉತ್ತರ ಕರ್ನಾಟಕದಲ್ಲಿ ಹೊಸತಾಗಿ ಜನಪ್ರಿಯವಾಗುತ್ತಿರುವ ಮರಾಠೀ ರಂಗಭೂಮಿಯಿಂದ ಕೆಣಕಲ್ಪಟ್ಟು, ಮೈಸೂರಿನಲ್ಲಿ ಪರಂಪರೆಯನ್ನು ಶ್ರದ್ಧೆಯಿಂದ ಕಾಯ್ದುಕೊಳ್ಳಬೇಕೆಂಬ ರಾಜರ ನೀತಿಯಿಂದ ಪ್ರೋತ್ಸಾಹಿಸಲ್ಪಟ್ಟು ಸಂಸ್ಕೃತ ನಾಟಕಗಳ ಅನುವಾದ, ರಂಗಭೂಮಿಗೆ ಸ್ವಾಭಿಮಾನ–ಗೌರವಗಳು ದೊರಕಲಿ ಎಂಬುದಕ್ಕೆ ಅವುಗಳ ಪ್ರದರ್ಶನ ಪ್ರಾರಂಭವಾಯಿತು.

– ಶ್ರೀರಂಗ

# 1. ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿ

**ಅ.ನ.ಕೃ**

"Theater should be a factory of throught, a prompter of conscience, an elucidator of social conduct, an armoury against despair and dulness, and a temple of the ascent of Man,"

George Bernard Shaw.

ಮನುಷ್ಯನ ಹುಟ್ಟುಗುಣಗಳಲ್ಲಿ ನಾಟಕೀಯತೆಯೂ ಒಂದು, ತನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡುವಾಗ, ಇತರರ ಅಭಿಪ್ರಾಯಗಳನ್ನು ವರ್ಣಿಸುವಾಗ ಮನುಷ್ಯ ನೈಸರ್ಗಿಕವಾಗಿ ಅಭಿನಯವನ್ನು ಬಳಸುತ್ತಾನೆ. ಭಾವೋದ್ರೇಕವಾದಾಗ, ಜೀವನಕ್ಕೆ ರಸಸ್ಪರ್ಶವಾದಾಗ ಮನುಷ್ಯ ಮಾತನ್ನು ಮರೆತು ಅಭಿನಯದಲ್ಲಿ ಲೀನನಾಗುತ್ತಾನೆ.

ನಾಟ್ಯ ಹೇಗೆ ಮನುಷ್ಯನ ಹುಟ್ಟುಗುಣವೂ ಹಾಗೆ ನಾಟ್ಯಾಭಿರುಚಿಯೂ ಅವನ ಹುಟ್ಟುಗುಣ. ಸಣ್ಣ ಮಕ್ಕಳು ತಾವೇ ಕುಳಿತುಕೊಂಡು, ಮನಸ್ಸಿಗೆ ಬಂದ ಸಂವಿಧಾನ ಕೂಡಿಸಿಕೊಂಡು, ಬಾಯಿಗೆ ಬಂದ ಸಂಭಾಷಣೆ ಮಾಡಿಕೊಂಡು ಮನೆಯಲ್ಲಿನ ಸೀರೆ ಧೋತ್ರಗಳನ್ನೇ ತೆರೆಯಾಗಿ ಉಪಯೋಗಿಸಿ ನಾಟಕವಾಡುವುದಿಲ್ಲವೇ? ದೊಡ್ಡವನಾದಮೇಲು ತನ್ನ ಹೆಡ್‌ಮಾಸ್ಟರ ಮುಂದೆ ಹೋಗಿ ಹೇಗೆ ನಿಲ್ಲಬೇಕು–ಹೇಗೆ ಮಾತನಾಡಬೇಕು ; ಕೆಲಸಕ್ಕೆ ಕೇಳುವುದಕ್ಕೆ ಅಧಿಕಾರಿಯ ಮುಂದೆ ಹೇಗೆ ಹೋಗಬೇಕು ; ಅಧಿಕಾರ ಸಿಕ್ಕಿದರೆ ಕುರ್ಚಿಯ ಮೇಲೆ ಕುಳಿತು ಹೇಗೆ ದರ್ಪ ತೋರಿಸಬೇಕೆಂದು ಮನುಷ್ಯ ಸದಾ ನಾಟಕವನ್ನು ಅಭ್ಯಸಿಸುತ್ತಲೊ ಅಭಿನಯಿಸುತ್ತಲೊ ಇರುತ್ತಾನೆ.

ಮಾನವನ ಈ ನೈಸರ್ಗಿಕ ಪ್ರವೃತ್ತಿಯನ್ನು ರಾಜಕಾರಣಪಟುಗಳು ಚೆನ್ನಾಗಿ ಬಳಸಿಕೊಂಡೂ ಬಿಡುತ್ತಾರೆ. ಜನ ಮರುಳಾಗಿದ್ದುದು ಹಿಟ್ಲರ್, ಮುಸಲೋನಿ, ಚರ್ಚಿಲ್ಲರ ರಾಜಕಾರಣಪಟುತ್ವಕ್ಕೇ ಅಲ್ಲ. ಅವರ ಅಭಿನಯ, ಮಾತುಗಾರಿಗೆ, ಜನಗಳ ಮನಸ್ಸನ್ನು ಆಕರ್ಷಿಸುವ ಚೇಷ್ಟೆಗಳು ಇವು ಅವರ ಪ್ರಾಬಲ್ಯಕ್ಕೆ ನೇರವಾದವು. ವ್ಯಕ್ತಿ ನಾಟ್ಯಸಾಧನವನ್ನು ಜನಾಂಗದ ಪ್ರಗತಿ ಅಪ್ರಗತಿಗಳಿಗೆ ಬಳಸಿಕೊಂಡಂತೆ ರಾಷ್ಟ್ರವೂ ಬಳಸಿಕೊಳ್ಳಬಹುದು.

ಸ್ವಾತಂತ್ರ್ಯ ಸಮರಗಳಲ್ಲಿ ಐರ್ಲೆಂಡ್, ರಷ್ಯಾ, ಚೀಣ ನಾಟಕವನ್ನು ಚೆನ್ನಾಗಿ ಬಳಸಿಕೊಂಡವು. ಅವರು ದೇಶಸೇವೆಯ ಕಹಿಗುಳಿಗೆಯನ್ನು ನಾಟಕದ ಮೂಲಕ ಸಿಹಿಗುಳಿಗೆಮಾಡಿ ಜನತೆಗಿತ್ತರು. ನಾಟಕ ಈ ದೇಶಗಳಲ್ಲಿ ಜನತೆಯ ಶಿಕ್ಷಣದ ಪ್ರಬಲ ಸಾಧನವಾಯಿತು.

ನಾಟಕಕ್ಕೆ ವಿಲಾಸದ ಮುಖವೊಂದಿರುವಂತೆ, ವಿಕಾಸದ ಮುಖವೂ ಒಂದಿದೆ. ತನ್ನ ಜೀವನದ ಒಗರನ್ನು ಕ್ಷಣಕಾಲ ಮರೆಯಲು ಮನುಷ್ಯ ಕಳ್ಳಂಗಡಿಗೋ ವೇಶ್ಯಾಗೃಹಕ್ಕೊ ಹೋಗುವಂತೆ ನಾಟಕಗೃಹಕ್ಕೂ ಹೋಗುತ್ತಾನೆ. ಅಲ್ಲಿ ಅವನು ಬೇಡುವ ತತ್ಕಾಲಿಕ ಉಪಶಯನ, ವಿಸ್ಮೃತಿ ದೊರೆಯುತ್ತವೆ. ಕಳ್ಳುಕುಡಿದು ಮೈಮರೆಯುವಂತೆ ನಾಟಕ ನೋಡುತ್ತ ಮೈಮರೆಯುತ್ತಾನೆ. ಕುಬೇರನ ವೈಭವ ನೋಡಿ ತಾನು ಕುಬೇರನಾದೆನೆಂದುಕೊಳ್ಳುತ್ತಾನೆ. ಹರಿಶ್ಚಂದ್ರನ ತ್ಯಾಗ ನೋಡಿ ತಾನೂ ಮಹಾತ್ಯಾಗಿಯೆಂದು ಭಾವಿಸಿಕೊಳ್ಳುತ್ತಾನೆ, ಅರ್ಜುನನ ಪೌರುಷ ಕಂಡು ತಾನೂ ಮಹಾ ಪೌರುಷಶಾಲಿ ಎಂದು ನಂಬುತ್ತಾನೆ–ಎಲ್ಲಾ ಕ್ಷಣ ಹೊತ್ತು. ಆ ಮೊಬ್ಬು ಹರಿದೊಡನೆಯೇ ಅವನು ಅವನೇ !

ಇನ್ನೊಂದು ಬಗೆಯ ರಂಗಭೂಮಿ ಪ್ರೇಕ್ಷಕನನ್ನು ವಿಸ್ಮೃತಿಗೊಳಿವುದಿಲ್ಲ. ಹೊಡೆದೆಬ್ಬಿಸುತ್ತದೆ. ಅವನ ಮುಖಕ್ಕೆ ಕನ್ನಡಿ ಹಿಡಿದು ಸತ್ಯದ ವಿಕರ್ಷಕ ಮುಖದ ಪರಿಚಯಮಾಡಿಕೊಡುತ್ತದೆ. ಅವನು ಅನುಭವಿಸುವ ಹಲವು ಭಾವನೆಗಳನ್ನು, ಸಂಕಟಗಳನ್ನು, ಅವನೇ ಎದುರಿಸುವ ಹಲವು ಸಮಸ್ಯೆಗಳನ್ನು ಬಿಚ್ಚಿ ಮುಂದಿಡುತ್ತದೆ. ನಿತ್ಯ ತಾನು ಬಾಳುವ ಬಾಳನ್ನು, ಅನುಭವಿಸುವ ರಸವಂತಿಗಳನ್ನು, ಕಾಣುವ ನೋಟ, ವ್ಯಕ್ತಿಗಳನ್ನು ರಂಗಭೂಮಿ ಕಾಣಿಸುತ್ತದೆ. ನಿಜಜೀವನ ಖೈದಿಯನ್ನು ಪೋಲೀಸಿನವರು ಬೆನ್ನು ಹತ್ತುವಂತೆ ಹತ್ತಿರುತ್ತದೆ. ಇದರಿಂದ ಪಾರಾಗುವುದು ಹೇಗೆ? ನಾಟಕ ಇಲ್ಲಿ ಜೀವನಕ್ಕೆ ಎದೆಗೊಟ್ಟು ನಿಲ್ಲಲು ಅಂಜಿ ಅಳುಕುವ ಉತ್ತರಕುಮಾರನನ್ನು ಹಿಡಿದು ತಂದು ರಣರಂಗದಲ್ಲಿ ನಿಲ್ಲಿಸುತ್ತದೆ. ಜೀವನದ ಸಮಸ್ಯೆಗಳನ್ನು ಮರೆಯಲೆತ್ನಿಸಿ, ಕಣ್ಣುಮುಚ್ಚಿ ಕುಳಿತರೆ ಅವುಗಳ ಪರಿಹಾರೋಪಾಯ ಕಂಡು ಹಿಡಿದಂತಾಗುವುದಿಲ್ಲ. ಸಮಸ್ಯೆಗಳನ್ನು ಮೊದಲು ಅರ್ಥಮಾಡಿಕೊಳ್ಳಬೇಕು, ಕೂಲಂಕುಷವಾಗಿ ಛಿದ್ರಛಿದ್ರಮಾಡಿ ಹೆಕ್ಕಿ ನೋಡಿ, ಸಮಸ್ಯೆಯ ಸಹಜ ರೂಪದ ಪರಿಚಯ ಮಾಡಿಕೊಳ್ಳಬೇಕು. ಈ ಪರಿಚಯ ಪರಿಹಾರವನ್ನು ತಾನೇ ಒದಗಿಸುತ್ತದೆ

ಈ ಎರಡು ಮುಖಗಳನ್ನೂ ಪ್ರಾಚೀನ ಭಾರತೀಯರು ಬಲ್ಲರು. ಒಂದು ಕಡೆ ಮಾನವನ ರುದ್ರಜೀವನಕ್ಕೆ ರಮಣೀಯತೆಯನ್ನು, ಲಾಲಿತ್ಯವನ್ನು ಸುಭಗತೆಯನ್ನು ನೀಡುವ ಶಾಕುಂತಲ, ರತ್ನಾವಳಿ, ವಿಕ್ರಮೋರ್ವಶೀಯ ನಾಟಕಗಳು ಬೆಳೆದವು. ಇನ್ನೊಂದು ಕಡೆ ಅದಕ್ಕೆ ವಿವೇಚನೆ, ಶಕ್ತಿ, ಯುಕ್ತಾಯುಕ್ತ ಪರಿಜ್ಞಾನಗಳನ್ನೊದಗಿಸುವ ಮೃಚ್ಛಕಟಕ,

ಮುದ್ರಾರಾಕ್ಷಸ, ಪ್ರಬೋಧ ಚಂದ್ರೋದಯ ನಾಟಕಗಳು ಬೆಳೆದವು. ನಾಟಕ ವಿಲಾಸ, ವಿಕಾಸಗಳೆರಡರ ಸಾಧನವು ಆಗಿತ್ತು. ಆದರೆ ಪ್ರಾಚೀನರು ವಿಕಾಸಕ್ಕಿಂತ ವಿಲಾಸಕ್ಕೆ ಪ್ರಬೋಧಕ್ಕಿಂತ ಪ್ರಮೋದಕ್ಕೆ ಹೆಚ್ಚು ಗಮನಕೊಟ್ಟರೆಂದು ಊಹಿಸಲು ಆಧಾರಗಳಿವೆ.

ಕನ್ನಡನಾಡಿನಲ್ಲಿ ನಾಟಕ ಬೆಳೆಯಲಿಲ್ಲವೇ? ಸಂಸ್ಕೃತ ಸಾಹಿತ್ಯದ ಪಡಿನೆಳಲಾಗಿ ಕನ್ನಡ ಸಾಹಿತ್ಯವೃಕ್ಷ ಒಂದು ಕಡೆ ಬೆಳೆಯಿತು. ರಾಮಾಯಣ, ಭಾರತ, ಭಾಗವತಗಳಿಂದ ಕಥೆಗಳನ್ನು ಇಡಿಯಾಗಿಯೋ, ಬಿಡಿಯಾಗಿಯೋ ಕನ್ನಡ ಕವಿಗಳು ಆಯ್ದುಕೊಂಡು ಕಾವ್ಯಗಳನ್ನು ಬರೆದರು. ಆದರೆ ಸಂಸ್ಕೃತ ನಾಟಕಗಳನ್ನು ಅನುಸರಿಸಿಯೇ ನಾಟಕಗಳನ್ನು ಏಕೆ ಬರೆಯಲಿಲ್ಲ? ಸಾಹಿತ್ಯದ ಪಂಡಿತರು ಬಿಡಿಸಲಾಗದಿರುವ ಸಮಸ್ಯೆ ಇದು.

ಕನ್ನಡದಲ್ಲಿ ಕಾವ್ಯ ಪಂಡಿತರ, ವಿವಿಧ ಕಳಾಮಂಡಿತರ ಸೊತ್ತೆಂಬ ಭಾವನೆಯಿತ್ತು. ಸಾಮಾನ್ಯ ಜನತೆಯನ್ನು ದುರ್ಲಕ್ಷಿಸಿದ ಕಾವ್ಯಪ್ರಯೋಗ ಪರಿಣತಮತಿಗಳು ನಾಟಕ ಸಾಮಾನ್ಯರ ವಿಹಾರಸಾಧನವೆಂದು ಅದನ್ನು ಅಲ್ಲೆಗಳದಿರಬಹುದು. ನಾಟಕ ಸಾಧನದಲ್ಲಿರಬಹುದಾದ ಕಸುವನ್ನು ರನ್ನ, ರಾಘವಾಂಕ, ಕುಮಾರ ವ್ಯಾಸರು ತಮ್ಮ ಕಾವ್ಯಗಳಲ್ಲಿಯೇ ತಂದಿದ್ದುದರಿಂದ ನಾಟಕವನ್ನು ಸಾಹಿತ್ಯದ ಒಂದು ಪ್ರತ್ಯೇಕಾಂಗವೆಂದು ಬೆಳೆಸುವ ಅವಶ್ಯಕತೆ ಅವರಿಗೆ ತೋರದೆ ಇರಬಹುದು.

ಕವಿಗಳು ದುರ್ಲಕ್ಷಿಸಿದರೆಂದು ನಾಟಕ ಸಾಯಲಿಲ್ಲ. ಜನತೆಯಲ್ಲಿ ಅದು ನಾನಾಮುಖವಾಗಿ ಬೆಳೆಯಿತು. ಸಾಹಿತ್ಯದ ದರ್ಜೆಗೆ ಸೇರುವ ನಾಟಕ ಸಿಂಗರಾರ್ಯರ 'ಮಿತ್ರವಿಂದಾ ಗೋವಿಂದ'ದಿಂದ ಆರಂಭವಾದರೂ ಅದಕ್ಕೂ ಪೂರ್ವದಲ್ಲಿ ಯಕ್ಷಗಾನ ರೂಪವಾಗಿ ನಾಟಕವನ್ನು ಜನತೆ ಬೆಳೆಸಿತು. ಜನ ಕಾವ್ಯಗಳಿಗಿಂತ ಹೆಚ್ಚಾಗಿ ಅವುಗಳನ್ನು ಓದುತ್ತಿದ್ದರು–ನೋಡುತ್ತಿದ್ದರು. ಆದರೆ ಅವುಗಳಿಗೆ ಸಾಹಿತ್ಯಮುದ್ರೆ ಬೀಳಲಿಲ್ಲ.

ಜನತೆಯ ರಂಗಭೂಮಿಯನ್ನು ಕರ್ನಾಟಕ ಸ್ವತಂತ್ರವಾಗಿ ಮೊದಲಿನಿಂದ ಬೆಳಸಿಕೊಂಡು ಬಂದಿದೆ. ತೊಗಲು ಗೊಂಬೆಯಾಟ, ನೆರಳಾಟ, ಯಕ್ಷಗಾನ, ತಾಳಮದ್ದಳೆ, ಬಯಲು ನಾಟಕಗಳಲ್ಲದೆ ಹರಿಕಥೆ ಶಿವಕಥೆಗಳು (ಈಚೆಗೆ ಯೇಸು ಕಥೆ) ಏಕವ್ಯಕ್ತಿ ಅಭಿನಯಿಸುವ ನಾಟಕಗಳೇ ಆಗಿವೆ. ಆದರೆ ಜನತೆ ವಿದ್ಯಾ ಸಾಂಸ್ಕೃತಿಕ ಕೇಂದ್ರಗಳಿಂದ ಬಹುದೂರ ನಿಂತಿದ್ದರಿಂದ ಅವರ ರಂಗಭೂಮಿ ಅವರ ಸಂಸ್ಕೃತಿಯ ಪ್ರತೀಕವಾಯಿತು.

ನಾಟಕದ ಪುನರೋದಯ ೧೯ನೆಯ ಶತಮಾನದ ಕೊನೆಯಲ್ಲಿ ಕರ್ನಾಟಕದಲ್ಲಿ ತಲೆದೋರಿದಾಗ ಅದೇ ಅನುಸರಿಸಿದುದು ಸಂಸ್ಕೃತ ಹಾಗೂ ಇಂಗ್ಲೀಷ್ ನಾಟಕಗಳನ್ನು. ಇಂಗ್ಲೀಷ್ ಬಾರದ ಸಂಸ್ಕೃತ ಪಂಡಿತರು, ಇಂಗ್ಲೀಷ್ ಬಲ್ಲವರ ನೆರವಿನಿಂದ ಷೇಕ್ಸ್‌ಪಿಯರ್ ನಾಟಕಗಳ ಅನುವಾದಕ್ಕೆ ಕೈಯಿಟ್ಟರು. ಇವುಗಳೂ, ಪ್ರತಿಭಾಶಾಲಿಗಳಾದ ನಟರು ತಮಗಾಗಿ ಬರೆಸಿಕೊಳ್ಳುತ್ತಿದ್ದ ನಾಟಕಗಳೂ ಬಹಳ ಕಾಲ ಜನಮನವನ್ನಾಕರ್ಷಿಸಿದ್ದವು. ಕವಿ ಹಾಗೂ ನಟನು ನಿರ್ದೇಶಕರ ಕೈಗೊಂಬೆ. ಮಂಡ್ಯದ ರಂಗಾಚಾರ್ಯರು, ಗೌರಿ ನರಸಿಂಹಯ್ಯನವರು, ಸುಬ್ಬಣ್ಣನವರು, ಸರ್ಟನ್ ರಾಮರಾಯರು, ಎ.ವಿ.ವರದಾಚಾರ್ಯರು ನಾಟಕ ಸಾಮ್ರಾಜ್ಯವನ್ನಾಳಿದರು. ಅವರ ರಾಜಸಭೆಯಲ್ಲಿ ನಾಟಕಕಾರರು, ದೊರೆಯನ್ನು ರಮಿಸುವ ವಿದೂಷಕರಂತಿದ್ದರು. ನಾಟಕದ ಸರ್ವಮಾನ್ಯ ನಟನದಾಗಿದ್ದು ; ನಾಟಕಕಾರ ಗೌಣವ್ಯಕ್ತಿ. ಜನ'ಗುಲೆಬಕಾವಲಿ'ಗೆ ಹೋಗುತ್ತಿದ್ದರೆ ವರದಾಚಾರ್ಯರ ಕಲಾ ಕೌಶಲ್ಯವನ್ನು ನೋಡುವುದಕ್ಕೇ ವಿನಾ, ಕವಿಯ ಕಾವ್ಯ ವೈಭವವನ್ನು ಕಾಣುವುದಕ್ಕಲ್ಲ. ಗುಬ್ಬಿ ವೀರಣ್ಣನವರು ನಾಟಕಕಾರ, ನಟ ಇಬ್ಬರಿಗೂ ಮೈತ್ರಿಯನ್ನುಂಟುಮಾಡಿ ಇಬ್ಬರಿಗೂ ಸಮಾನ ಪ್ರಾಧಾನ್ಯವನ್ನು ಕೊಡಲೆತ್ನಿಸಿದರು. ಅದರಿಂದಾಗಿ 'ಕುರುಕ್ಷೇತ್ರ–ಅಕ್ಕಮಹಾದೇವಿ' ನಾಟಕಗಳು ರಂಗದ ಮೇಲೆ ಬಂದವು. ದಿವಂಗತ ಮಹಮದ್ ಪೀರರು ಇಂಥ ಪ್ರಯತ್ನ ನಡೆಸಿ 'ಷಹಜಾನ್–ಬುದ್ಧ' ನಾಟಕಗಳನ್ನು ರಂಗದ ಮೇಲೆ ತಂದರು. ಆದರೂ ನಾಟಕಕಾರನ ಸ್ಥಾನ ರಂಗಭೂಮಿಯಲ್ಲಿ ಗೌಣವಾಗಿಯೇ ಉಳಿದಿತ್ತು.

ಇಂಗ್ಲೀಷ್ ರಂಗಭೂಮಿ ಇದೇ ರೀತಿಯಲ್ಲಿ ಪ್ರತಿಭಾಶಾಲಿಗಳಾದ ನಟರ ಕೈಗೊಂಬೆಯಾಗಿ ಕುಣಿಯುತ್ತಿದ್ದಾಗ ಅದನ್ನು ಕೈವಶಮಾಡಿಕೊಂಡವನು ನಾಟಕಕಾರ–ಜಾರ್ಚ್ ಬರ್ನಾರ್ಡ್ ಷಾ. ಷಾ ಇಂಗ್ಲೀಷ್ ರಂಗಭೂಮಿಗೆ ಮಾಡಿದ ಕೆಲಸವನ್ನು ಕನ್ನಡನಾಡಿಗೆ ಮಾಡಿದವರು ಕೈಲಾಸಂ. ೧೯೨೧ ರಿಂದ ಕೈಲಾಸಂ ಯುಗವೊಂದು ನಾಟಕ ಪ್ರಪಂಚದಲ್ಲಿ ಸ್ಥಾಪನೆಯಾಯಿತು. ಸಾಮಾನ್ಯ ಜೀವನದ ಚಿತ್ರಗಳು, ಪುಂಖಾನುಪುಂಖವಾಗಿ ರಂಗಭೂಮಿಯ ಮೇಲೆ ಬಂದವು. ನಾಟ್ಯಶಾಸ್ತ್ರದ ವಿಧಿನಿಯಮ, ನಿಷೇಧಗಳನ್ನು ಮುರಿದು ಮುನ್ನುಗ್ಗಿದರು ಕೈಲಾಸಂ ಒಂದು ಧೂಮಕೇತುವಿನಂತೆ.

ಆದರೆ ಕೈಲಾಸಂ ನಾಟಕಗಳು ನಾಟ್ಯವಿಲಾಸಿಗಳು, ಶಾಲಾ ಕಾಲೇಜು ವಾರ್ಷಿಕೋತ್ಸವಗಳು, ಸಾಹಿತ್ಯ ಸಂಘಗಳು ಹಬ್ಬಗಳಿಗೆ ಮೀಸಲಾಯಿತು. ಯಾವ ಬೋರ, ಸತ್ತಾರ್, ನಾಗತ್ತೆಯವರನ್ನು ಕುರಿತು ಕೈಸಾಸಂ ಬರೆದಿದ್ದರೋ ಅವರ ವಿನಾ ಮಿಕ್ಕವರು ಅವರ ನಾಟಕಗಳನ್ನು ನೋಡುತ್ತಿದ್ದರು. ಅವರ ರಂಗಭೂಮಿ ಮಧ್ಯಮವರ್ಗದವರ ವಿಲಾಸ ಸಾಧನವಾಯಿತು.

ಜನ ನಾಟಕ ನೋಡಿ ನಕ್ಕು ನಲಿದು 'Clever fellow, this Kailasam' ಎಂದು ಹೇಳಿಕೊಂಡು ಹೋಗುತ್ತಿದ್ದರು. ನಾಟಕ ಜನಸಾಮಾನ್ಯರ ಒಂದು ಸಜೀವಶಕ್ತಿ (Living Force) ಆಗಲಿಲ್ಲ.

ಜನತೆಯ ಅಕ್ಷಮ್ಯ ಅಜ್ಞಾನವೂ ಇದಕ್ಕೆ ಕಾರಣವಾಗಿರಬಹುದು. ಕೈಲಾಸಂರ ಅತಿಜಾಣತನವೂ ಕಾರಣವಾಗಿರಬಹುದು. ಆದರೆ 'ಗುಲೇಬ ಕಾವಲಿ', 'ಸದಾರಮೆ', 'ಬೋಜ ಪ್ರಬಂಧ'ಗಳನ್ನು ನೋಡುತ್ತಿದ್ದ ಲಕ್ಷಾಂತರ ಜನ ಕೈಲಾಸಂ ನಾಟಕಗಳನ್ನು ನೋಡುತ್ತಿರಲಿಲ್ಲವೆಂಬುದು ನಿರ್ವಿವಾದ.

ನಾಟಕ ಜನತೆಯ ಶಿಕ್ಷಣಕ್ಕೆ ದಿವ್ಯಸಾಧನವೆಂದು ತೋರಿಸಿಕೊಟ್ಟವರು ಕೈಲಾಸಂ. ಅವರು ಕನ್ನಡನಾಡಿನಲ್ಲಿ ಹುಟ್ಟದಿದ್ದರೆ ನಮ್ಮ ನಾಟಕವಿನ್ನೂ ೧೯ನೆಯ ಶತಮಾನದ ಪರಿಸ್ಥಿತಿಯನ್ನು ಬಿಟ್ಟು ಹೊರಬರುತ್ತಿರಲಿಲ್ಲ.

ಎಲ್ಲ ದೃಷ್ಟಿಯಿಂದ ಕನ್ನಡನಾಡಿನಲ್ಲಿ ಆಗಿರುವ ನಾಟಕ ಪ್ರಯತ್ನ ಹೆಮ್ಮೆ ಪಡುವಂತಿಲ್ಲ.

ನಾಟಕದ ಪುನರುದ್ಧಾರವಾಗಬೇಕು. ಅದು ನಮ್ಮ ವೈಯಕ್ತಿಕ, ಸಾಂಘಿಕ, ರಾಷ್ಟ್ರೀಯ ಜೀವನಕ್ಕೆ ಬೆಳಕನ್ನು, ಶಕ್ತಿಯನ್ನು, ಸ್ಥೈರ್ಯವನ್ನು ನೀಡುವಂತಾಗಬೇಕೆಂಬ ಅಭಿಪ್ರಾಯವನ್ನು ಪ್ರಾಯಶಃ ಎಲ್ಲರೂ ಒಪ್ಪುತ್ತಾರೆ. ಕರ್ನಾಟಕದಲ್ಲಿ ನಾಟಕದ ಪುನರುದ್ಧಾರ ಕಾರ್ಯ ಹೇಗೆ ಆಗಬಹುದೆಂಬುದನ್ನು ಯೋಚಿಸೋಣ.

ಟಾಕೀಯುಗವಾರಂಭವಾದ ಮೇಲೆ ನಾಟಕ ತಾತ್ಕಾಲಿಕವಾಗಿ ರಾಹುಗ್ರಸ್ತವಾಯಿತು. ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿ, ಒಂದೂವರೆ ಗಂಟೆ ಅವಧಿಯಲ್ಲಿ ಎಲ್ಲ ಆಮೋದವನ್ನೂ ನೀಡುವ ವಿಹಾರ ಸಾಧನ. ಅದು ಯಾಂತ್ರಿಕವಾದರೂ–ಜನತೆಯನ್ನು ಆಕರ್ಷಿಸಿತು. ಟಾಕೀಗೆ ವಿಶೇಷ ಪ್ರೋತ್ಸಾಹ ಸಿಕ್ಕುವುದಕ್ಕೆ ಅದರ ನವೀನತೆ, ವಿಹಾರಾನುಕೂಲ್ಯಗಳಲ್ಲದೆ ನಾಟಕದ ದುಃಸ್ಥಿತಿಯೂ ಕಾರಣವಾಯಿತು. ನಾಟಕರಂಗದಲ್ಲಿದ್ದ ಉತ್ತಮ ನಟರು ಸಿನಿಮಾ ಸೇರಿದ್ದರು. ಉತ್ತಮ ನಾಟಕಗೃಹಗಳು ಸಿನಿಮಾಮಂದಿರಗಳಾದವು. ಹೊಲಸು ಥಿಯೇಟರಿನಲ್ಲಿ ಹೊಲಸು ನಟರು ಅಭಿನಯಿಸುವ ಕೀಳುದರ್ಜೆಯ ನಾಟಕವನ್ನು ರಾತ್ರಿಯೆಲ್ಲಾ ನಿದ್ದೆಗೆಟ್ಟು ನೋಡುವುದಕ್ಕಿಂತ ಉತ್ತಮ ಥಿಯೇಟರಿನಲ್ಲಿ ಒಂದು ಸಿನಿಮಾ ನೋಡಿ ಊಟದ ಹೊತ್ತಿಗೆ ಮನೆಗೆ ಹೋಗುವುದು ಲೇಸೆಂಬ ಭಾವನೆ ಜನತೆಯಲ್ಲಿ ಬೆಳೆಯಿತು. ಈ ಅಭಿಪ್ರಾಯವನ್ನೆದುರಿಸಿ ಜನತೆಯ ಅಭಿರುಚಿಗನುಗುಣವಾಗಿ ಪ್ರದರ್ಶನ ವೈವಿಧ್ಯ, ನೂತನಪ್ರಯೋಗ ಸಿದ್ಧಿಗಳಿಗಿಂತ ನಾಟಕವನ್ನು ಊರ್ಜಿತಗೊಳಿಸುವ ಕೆಲಸಕ್ಕೆ ನಾಟ್ಯವಿಲಾಸಿಗಳಾಗಲಿ, ನಾಟ್ಯ ಜೀವಿಗಳಾಗಲಿ ಮನಸ್ಸು ಕೊಡಲಿಲ್ಲ. ಆದರೆ ನಾಟಕ ಕಲೆಯನ್ನು ಯಾವಯಂತ್ರಕಲೆಯೂ ಕೊಲ್ಲಲು ಸಾಧ್ಯವಿಲ್ಲ. ನಾಟಕದ ಮಾನವ ಸಂಪರ್ಕ, ಭಾವಪ್ರದರ್ಶನ ವೈವಿಧ್ಯ ಅದರ ಬಾಳನ್ನು ರಕ್ಷಿಸಿಕೊಂಡು ಬಂದಿದೆ.

ನಾಟಕದ ಪುನರುದ್ಧಾರಕ್ಕೆ ಮೊದಲು ಅದರ ತಳಪಾಯ ಭದ್ರವಾಗಬೇಕು. ಸಾಹಿತ್ಯ, ಕಲಾಸಂಸ್ಥೆಗಳು, ವಿಶ್ವವಿದ್ಯಾನಿಲಯ, ಶಿಕ್ಷಣ ಶಾಖೆಯವರು ಆಕರ್ಷಕ ಪಾರಿತೋಷಕಗಳನ್ನಿಟ್ಟು ನಾಟಕಗಳನ್ನು ಬರೆಸಬೇಕು. ೨ ಗಂಟೆ ಅಥವಾ ೩ ಗಂಟೆಯ ಪ್ರದರ್ಶನಕ್ಕೆ ಅಳವಡುವ ನಾಟಕಗಳು ಇಂದಿಗೂ ಕನ್ನಡದಲ್ಲಿ ಕೈ ಬೆರಳೆಣಿಸುವಷ್ಟೂ ಇಲ್ಲ. ನಾಟಕ ಲೇಖನ ಒಂದೇ ಜಾಡುಹಿಡಿಯದೆ ವಿವಿಧ ವಿಷಯಗಳು, ಅಭಿರುಚಿಗಳು, ದೃಷ್ಟಿಪಥಗಳನ್ನು ಪ್ರತಿಬಿಂಬಿಸಬೇಕು. ಸಿಂಜ್, ಯೀಟ್ಸ್, ಲೆನಾಕ್ಸ್ ರಾಬಿನ್ಸನ್ ಮೊದಲಾದವರು ಐರಿಷ್ ಪುನರೋದಯ ಕಾಲದಲ್ಲಿ ಮಿಸಸ್ ಹಾರ್‍ನಿಮನ್ನರ ನೇತೃತ್ವದಲ್ಲಿ ಐರ್ಲೆಂಡಿನ ವಿಶಿಷ್ಟ್ಯವನ್ನು ಪ್ರತಿಬಿಂಬಿಸುವ ನಾಟಕಗಳನ್ನು ರಚಿಸಿದಂತೆ ನಮ್ಮಲ್ಲಿಯೂ ನಾಟಕಕರ್ತರು ಕರ್ನಾಟಕದ ವಿವಿಧಾಂಗೀನ ಸಂಸ್ಕೃತಿಯನ್ನು ನಾಟಕಗಳಲ್ಲಿ ಮೂಡಿಸಬೇಕು. ಇಂಥ ನಾಟಕಗಳು:

೧. **ಐತಿಹಾಸಿಕ** : ಪ್ರಾಚೀನ ಕರ್ನಾಟಕದ ಐತಿಹಾಸಿಕ ವಸ್ತುಗಳ ನಾಯ್ದುಕೊಂಡು ಕನ್ನಡ ಜನರ ಪರಾಕ್ರಮ, ಕಲಾಪ್ರಿಯತೆ, ರಸಿಕತೆಗಳನ್ನು ಚಿತ್ರಸಬಹುದು. ಸತ್ಯಾಗ್ರಹದ ಇತಿಹಾಸ, ಆಗಸ್ಟ್ ೧೯೪೨ ರ ವೀರಕಥೆಗಳು, ವಿಜಾಪುರದ ಕ್ಷಾಮದ ದುರಂತ ಕಥೆಗಳೆಲ್ಲಾ ನಾಟಕಕ್ಕೆ ಚೆನ್ನಾಗಿ ಅಳವಡುತ್ತವೆ.

೨. **ಸಾಮಾಜಿಕ :** ಈ ರಂಗದಲ್ಲಿ ಸ್ವಲ್ಪ ಕೆಲಸ ಕನ್ನಡನಾಡಿನಲ್ಲಿ ನಡೆದಿದೆ. ಆದರೆ ನಮ್ಮಲ್ಲಿ ಚಿತ್ರಿತವಾಗಿರುವ ಸಮಾಜ ಮಧ್ಯವರ್ಗದ ಸಮಾಜ. ಸರ್ಕಾರಿ ಅಧಿಕಾರಿಗಳು, ಗುಮಾಸ್ತರಲ್ಲದೆ ಬೇರೆ–ಲಕ್ಷಾವಧಿ ಜನ ಕನ್ನಡ ನಾಡಿನಲ್ಲಿದ್ದಾರೆ. ಹಲವು ಬಗೆಯಲ್ಲಿ ಹೊಟ್ಟೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಅವರ ಜೀವನವನ್ನು ಚಿತ್ರಿಸುವ ಅವಕಾಶ ಇನ್ನೂ ಉಳಿದಿದೆ. ಗಾರ್ಕಿ ಇಂಥ ಜನತೆಯ ಪ್ರತಿನಿಧಿಯಾಗಿ ಅತ್ಯಮೂಲ್ಯ ನಾಟಕಗಳನ್ನು ಬರೆದು ಇಡೀ ರಷ್ಯವನ್ನೆಚ್ಚರಿಸಿದ.

ಸಾಮಾಜಿಕ ನಾಟಕವೆಂದರೆ ನಮ್ಮಲ್ಲಿ ಕೆಲಹೊತ್ತು ನಕ್ಕುಹೋಗುವ ಸಾಧನವೆಂದು ಅಭಿಪ್ರಾಯ ಬೇರೂರಿದೆ. ನಗಿಸುವ ನೆಪದಲ್ಲಿ ನಾಟಕಕಾರರು ಹಾಸ್ಯ, ವಿಡಂಬನಗಳನ್ನು ತೂರೆದು 'ಫಾರ್ಸು'ಗಳನ್ನು (Face) ಬರೆಯುತ್ತಿದ್ದಾರೆ. ಜನತೆಯಲ್ಲಿ ಹಾಸ್ಯಮುಖವೊಂದನ್ನು ಕಲ್ಪಿಸಿ ಅವರ ನಿತ್ಯದ ಜಂಜಡವನ್ನು ನಗುವಿನ ಚಿಕಿತ್ಸೆಯಿಂದ

ಪರಿಹರಿಸಬೇಕಾದುದಗತ್ಯ. ಆದರೆ ಅಷ್ಟೇ ಮುಖ್ಯವಾದುದು ಗಂಭೀರ ವಿಷಯಗಳ–ಸಮಸ್ಯೆಗಳ ಪ್ರತಿಪಾದನೆ. ಷಾ ಗಂಭೀರ ವಿಷಯಗಳನ್ನು ಹಾಸ್ಯದ ಸಹಾಯದಿಂದ ಪ್ರತಿಬಿಂಬಿಸುವ ನೂತನ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಯೂಜಿನ್ ಓ ನೀಲ್, ಗಾಲ್ಸ್‌ವರ್ದಿ, ಡ್ರೂಟನ್ ಸಾಮಾಜಿಕ ಸಮಸ್ಯೆಗಳನ್ನು ಅತ್ಯಂತ ಕೌಶಲ್ಯದಿಂದ ಗಂಭೀರವಾಗಿ ನಿರೂಪಿಸಿದ್ದಾರೆ. ನಿತ್ಯಜೀವನದ ಪೃಥಃಕರಣವನ್ನು ತೋರುವ ಗಂಭೀರ ನಾಟಕಗಳು ನಮ್ಮಲ್ಲಿ ಬೆಳೆಯಬೇಕು.

೩. **ಪೌರಾಣಿಕ :** ಇದುವರೆಗೆ ನಾಟ್ಯೋಪಜೀವಿಗಳ ರಂಗಭೂಮಿಯಲ್ಲಿ ಬಂದ ಪೌರಾಣಿಕ ನಾಟಕಗಳು ಕೇವಲ ಪುರಾಣ ಕಥೆಗಳ ನಿರೂಪಣೆಯಲ್ಲಿ ತೃಪ್ತಿ ಹೊಂದಿವೆ. ಹಲವು ಹಾಡುಗಳ ಕುಣಿಕೆ ಹಾಕಿಕೊಂಡ ಒಂದು ಕಥೆಯನ್ನು ಇಬ್ಬರು ಸಂಭಾಷಿಸಿದರೆ ನಾಟಕವಾಗುವುದಿಲ್ಲ. ನಾಟಕಕ್ಕೆ ಒಂದು ವಿಶಿಷ್ಟ ಕಲಾ ಸ್ವರೂಪವಿದೆ. ಪೌರಾಣಿಕ ನಾಟಕಗಳನ್ನು ಅಂದಿನ ಜೀವನ ಚಿತ್ರಗಳಾಗಿ ಪ್ರದರ್ಶಿಸಬಹುದು. ಅವುಗಳನ್ನು ಇಂದಿನ ಜೀವನಕ್ಕೆ ಅಳವಡಿಸಿಕೊಂಡು, ಹೇಗೆ ಕರ್ಣನ ಸಮಸ್ಯೆ, ಕೃಷ್ಣನ ಸಂದಿಗ್ಧ, ಹರಿಶ್ಚಂದ್ರನ ನಿರ್ಧಾರ ನಿತ್ಯ ನೂತನ ಪ್ರಶ್ನೆಗಳಾಗಿವೆಯೆಂಬುದನ್ನು ತೋರಿಸಬಹುದು.

ನಾಟಕ ಸಾಹಿತ್ಯ ವಿಪುಲವಾಗಿ ದೊರೆತರೂ ಅವುಗಳನ್ನು ಪ್ರದರ್ಶಿಸುವ ಮಂದಿರಗಳ ಪ್ರಶ್ನೆ ತಲೆಯೆತ್ತುತ್ತದೆ. ನಾಟಕಕಗಳ ಅವನತಿಗೆ ರಂಗಮಂದಿರಗಳ ಅಭಾವವೂ ಕಾರಣವಾಯಿತು. ಈ ತೊಡಕನ್ನು ಪ್ರಧಾನ ನಗರಗಳ ನಗರಸಭೆಗಳು ಬಿಡಿಸಬೇಕು. ಪ್ರತಿಯೊಂದು ಊರಿನಲ್ಲಿಯೂ ಒಂದೊಂದು 'ಮುನಿಸಿಪಲ್ ರಂಗಶಾಲೆ'ಯಿರಬೇಕು. ನಗರಸಭೆಗಳಿಗೆ ಸೊಳ್ಳೆ ಕೊಲ್ಲುವುದೆಷ್ಟು ಮುಖ್ಯ ಕೆಲಸವೋ ಜನತೆಯ ಅಜ್ಞಾನಕ್ರಿಮಿಗಳನ್ನು ಕೊಲ್ಲುವುದೂ ಅಷ್ಟೇ ಮುಖ್ಯ ಕೆಲಸ. ಹೊಸದಾಗಿ ಕಟ್ಟಲ್ಪಡುವ ಮಂದಿರಗಳನ್ನು 'ನಾಟಕಮಂದಿರ'ಗಳನ್ನಾಗಿ ಮಾರ್ಪಡಿಸಿ ಎಂದು ನಗರಪಿತರು ಧೈರ್ಯವಾಗಿ ಹೇಳಬಹುದು.

ಪ್ರದರ್ಶನದಲ್ಲಿ ಮಹಾಕ್ರಾಂತಿಯಾಗದ ಹೊರತೂ ನಾಟ್ಯೋಪಜೀವಿಗಳ ರಂಗಭೂಮಿ ಬದುಕಲು ಸಾಧ್ಯವಿಲ್ಲ. ಈಗಾಗಲೇ ಮಹಾರಾಷ್ಟ್ರ, ತಮಿಳುನಾಡಿನ ಹಾಗೂ ಹಿಂದಿಯ ನಾಟಕ ಪ್ರದರ್ಶಕರು ಸಿನೀಮಾ ತಂತ್ರವನ್ನಳವಡಿಸಿ ನಾಟಕಗಳನ್ನು ಹೊಸ ಬಗೆಯಲ್ಲಿ ಪ್ರದರ್ಶಿಸುತ್ತಾರೆ. ನಾಟಕಕ್ಕೆ ಸಿನಿಮಾ ತಂತ್ರವನ್ನು ಕಸಿಮಾಡುವುದು ಹಿತಕರವಲ್ಲ. ಸಿನಿಮಾ, ನಾಟಕ ಕಲೆಗಳು ಬೇರೆ ಬೇರೆ ಲಕ್ಷಣಗಳನ್ನನುಸರಿಸುತ್ತವೆ. ನಾಟಕ ನಾಟಕವಾಗಿದ್ದರೇ ಚೆನ್ನು, ಅದು ಕೀಳುದರ್ಜೆಯ ಸಿನಿಮಾ ಆದರೆ ಅದರ ವೈಶಿಷ್ಟ್ಯಕ್ಕೆ ಭಂಗ ಬರುತ್ತದೆ. ನಾಟಕವನ್ನೇ ವ್ಯವಸಾಯ ಮಾಡಿಕೊಂಡಿರುವ ಪ್ರದರ್ಶಕರು ಇನ್ನಾದರೂ ತಮ್ಮ ದೃಷ್ಟಿ ಬದಲಿಸಿ ಕಂದಾಚಾರದ ಪದ್ಧತಿಗಳನ್ನು ಬಿಡಬೇಕು. ಹಳೆಯ ಪರದೆ, ಕಿರೀಟ, ಬಟ್ಟೆಗಳ ಒಂದು ದಾಸ್ತಾನಿಟ್ಟುಕೊಂಡು ಅವುಗಳನ್ನೇ ಎಲ್ಲ ನಾಟಕಗಳಿಗೂ ಪ್ರಯೋಗಿಸುವ ಪದ್ಧತಿ ಒಳ್ಳೆಯದಲ್ಲ. ಪ್ರತಿಯೊಂದು ನಾಟಕಕ್ಕೂ ಪ್ರತ್ಯೇಕ ಪ್ರದರ್ಶದ ಸ್ವರೂಪ ಬರಬೇಕು. ಕಾಲೋಚಿತವಾದ ವಸ್ತ್ರಾಭರಣಗಳನ್ನು ಹೊಂದಿಸಬೇಕು. ಕಂಪನಿ ಯಜಮಾನ ಅಥವಾ ಮ್ಯಾನೇಜರ್ ತಾನೇ ಬೃಹಸ್ಪತಿ ಎಂದು ತಿಳಿಯುವುದು ಹೋಗಿ ತಜ್ಞರ ನೆರವು ಪಡೆಯುತ್ತ ಬಂದರೆ ಮಾತ್ರ ಈ ಸುಧಾರಣೆ ಸಾಧ್ಯ.

ಸಾವಿರಾರು ರೂಪಾಯಿ ಬಂಡವಾಳ ಹಾಕಿ ದೊಡ್ಡ ಕಂಪನಿಗಳನ್ನು ನಡೆಸುವ ಪ್ರಯತ್ನಗಳಿಂದಲೇ ನಾಟಕದ ಪುನರೋದಯ ಸಾಧ್ಯವಾಗುವುದಿಲ್ಲ. ಸಾಮಾನ್ಯ ಜನತೆಯ ನಿಕಟ ಸಂಬಂಧವುಳ್ಳ ಸಂಸ್ಥೆಗಳು 'ಬಯಲು ನಾಟಕ'ಗಳನ್ನು ಆಚರಣೆಯಲ್ಲಿ ತರಬೇಕು. ಇಂಥ ಜನಸಾಮಾನ್ಯ ನಾಟಕ ಮಂದಿರಗಳು ಊರು ಊರುಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಬೆಳೆಯಬೇಕು. ಹಳ್ಳಿಯಲ್ಲಿಯೇ ದೊರೆಯುವ ಸಾಧನ ಸಂಪತ್ತಿನಿಂದಲೇ ನಾಟಕವನ್ನು ಅಳವಡಿಸಬೇಕು. ರಾಷ್ಟ್ರೀಯ ರಂಗಭೂಮಿಗೆ ಇಂಥ ಪ್ರಯತ್ನ ಅಡಿಗಲ್ಲಾಗುತ್ತದೆ.

ಹಳ್ಳಿಗಳಲ್ಲಿ ಹುಟ್ಟುವ ರಂಗಭೂಮಿ ಯಕ್ಷಗಾನ, ಬಯಲು ನಾಟಕ, ತೊಗಲುಗೊಂಬೆ, ನರಳಾಟ ಸಾಧನಗಳನ್ನು ಬಳಸಿಕೊಂಡು ಅವುಗಳಿಗೆ ಆಧುನಿಕ ಸ್ವರೂಪ ಕೊಡಬಹುದು. ನಾಡಿನ ಪ್ರಚಲಿತ ಇತಿಹಾಸವನ್ನು ತೊಗಲುಗೊಂಬೆಗಳಿಂದ ತೋರಿಸಬಹುದು. ಯಕ್ಷಗಾನದ ಲಯವಿನ್ಯಾಸದಿಂದ ಜನತೆಯ ಹೃದಯದಲ್ಲಿ ಹೊಸಶಕ್ತಿಯನ್ನು ಮೂಡಿಸಬಹುದು.

ಒಂದು ನಾಡಿನ ಸಂಸ್ಕೃತಿಯ ಪ್ರತೀಕ ಅದರ ಕಲೆಗಳು. ಕನ್ನಡನಾಡು ಹಿಂದೆ ವೈಭವದಿಂದ ಬಾಳಿದೆ. ಇಂದಿನ ಸ್ವಾತಂತ್ರ್ಯ ಇತಿಹಾಸ ಕಟ್ಟುವುದರಲ್ಲಿ ಅದು ಅಪಾರಸೇವೆ, ತ್ಯಾಗ, ಪರಾಕ್ರಮ ತೋರಿದೆ. ಭಾರತದ ಅಮರ ಇತಿಹಾಸದಲ್ಲಿ ಕರ್ನಾಟಕ ತನ್ನ ಸ್ಥಾನವನ್ನು – ಸುಭದ್ರವಾದ ಸ್ಥಾನವನ್ನು ದೊರಕಿಸಿಕೊಂಡಿದೆ. ಹಲವು ವಿಷಯಗಳಲ್ಲಿ ಇಡೀ ಭಾರತಕ್ಕೆ ಕರ್ನಾಟಕ ಮಾರ್ಗದರ್ಶನ ಮಾಡಿದೆ. ಸಾಹಿತ್ಯ ಕಲೆಗಳ ಅಭಿರುಚಿ ಕನ್ನಡಿಗರ ಹುಟ್ಟು ಗುಣ. ಅವರಿಂದ ತಮ್ಮ ಸುಪ್ತಚೈತನ್ಯದರಿವುಮಾಡಿಕೊಂಡು ರಾಷ್ಟ್ರೀಯ ರಂಗಭೂಮಿಯನ್ನು ಬೆಳಸಿದರೆ ಇಡೀ ಭಾರತಕ್ಕೆ ಒಂದು ಮೇಲ್ಪಂಕ್ತಿ ಹಾಕಿಕೊಟ್ಟಂತಾಗುತ್ತದೆ.

**ಆಕರ : ಅ.ನ.ಕೃಷ್ಣರಾಯರು. ನಾಟಕಕಲೆ**

# 2. ನಾಟಕ ಓದುವ ಮತ್ತು ಅರ್ಥಮಾಡಿಕೊಳ್ಳುವ ಬಗೆ

ಡಾ.ಜಯಪ್ರಕಾಶ್ ಮಾವಿನಕುಳಿ

ನಾಟಕ ಓದುವುದೂ ಒಂದು ಕಲೆ, ನಾಟಕ ಎಂಬುದೇ ಒಂದು ಗೊಂದಲಕ್ಕೆ ಸಿಕ್ಕಿಹಾಕಿಕೊಂಡ ಶಬ್ದ. ಕಾರಣ ನಾಟಕ ಎಂದರೆ ಯಾವುದು ಎಂದು ವಿವರಿಸಲು ತೊಡಗುವುದು ಕಷ್ಟ ಸಾಧ್ಯ. ಇದು ಮೂಲ ಪ್ರತಿಗಿಂತ ಮಿಗಿಲಾಗಿ ಪ್ರದರ್ಶನಕ್ಕಿಂತ ಕೆಳಗಾಗಿ ಇರುವಂಥದ್ದು. ಯಾವುದಾದರೂ ರಾಸಾಯನಿಕ ವಸ್ತುವಿನಂತೆ ಬೇರ್ಪಡಿಸಿ ನೋಡಲಾರದ್ದಂತೇ ಇದು.

ನಾಟಕ ಓದುವುದೂ ಒಂದು ಹರ್ಷದಾಯಕ ಕೆಲಸ. ನಾಟಕ ಓದುವಾಗ ಅಕ್ಷರಗಳು ಕಾಣುತ್ತವೆ; ಶಬ್ದಗಳು ಕೇಳುತ್ತವೆ; ಆಕೃತಿಗಳು ಗೋಚರಿಸುತ್ತವೆ. ನಮ್ಮ ಊಹೆಗೆ ಎಲ್ಲವನ್ನೂ ಬಿಟ್ಟದ್ದು. ಡೆಸ್ಡಿ ಮೋನಾಳ ಸೌಂದರ್ಯವನ್ನೋ, ರತಿಯ ರೂಪವನ್ನೋ ಯಾರಾದರೂ ಪಾತ್ರ ಹಾಕಿದ್ದು ನೋಡುವುದಕ್ಕಿಂತಲೂ ಊಹಿಸಿಕೊಳ್ಳುವುದರಲ್ಲೇ ಹೆಚ್ಚು ಸತ್ವ ಇರುತ್ತದೆ. 'ಅನ್ ಹರ್ಡ್ ಮೆಲೋಡೀಸ್ ಆರ್ ಸ್ವೀಟರ್' ತಾನೇ. ಅದೇ ನಾವು ನಾಟಕದ ಥಿಯೇಟರ್‌ಗೆ ಹೋದಾಗ ಅಲ್ಲಿನ ಪರಿಸರ ಜನ ನಟ, ನಟಿಯರು, ನಮ್ಮನ್ನು ಬೇಸರಿಸಲುಬಹುದು.

ನಾವು ಯಾವುದೇ ನಾಟಕವನ್ನು ಓದಿದಾಗ ನಮ್ಮ ಮುಂದೆ ತಟ್ಟನೆ ಅಕ್ಷರಗಳ ನಡುವೆ ಆಕೃತಿ ಹರಿದು ಬಂದು ನಮ್ಮ ಮುಂದೆ ನಿಲ್ಲುತ್ತದೆ. ನಮ್ಮ ಮೆದುಳಿಗೆ ಅಷ್ಟು ಶಕ್ತಿ ಉಂಟು. ಆದರೆ ಪ್ರದರ್ಶನದಲ್ಲಿ ಮೌನ, ಶಬ್ದ, ಹಿನ್ನೆಲೆ ಸಂಗೀತ, ಮೂಕಾಭಿನಯ, ನೆರಳು–ಬೆಳಕು, ಬಣ್ಣ ಉಡುಪು ಹೀಗೆ ಎಲ್ಲವೂ ಮೂಡಿ ಬರಬೇಕಾಗುತ್ತದೆ. ಇದರ ಜೊತೆಯಲ್ಲಿಯೇ ನಾವು ನಮ್ಮಷ್ಟಕ್ಕೆ ತೊಡಗಿಸಿಕೊಂಡು ಉದ್ವೇಗಕ್ಕೆ ಒಳಗಾಗಿ ಇಂತಹ ಪಾತ್ರ ಕೆಟ್ಟದ್ದು ಇಂಥ ಪಾತ್ರ ಒಳ್ಳೇದು ಎಂಬ ತೀರ್ಮಾನಕ್ಕೆ ಬರುತ್ತೇವೆ. ನಮಗೆ ಸಿಗುವ ಶಬ್ದಗಳೆಲ್ಲ ಬಲೆಗಳಾಚೆಯಿಂದ ಬಂದ ಬಳುವಳಿಗಳು.

ನಾಟಕ ಓದುವಾಗ ನಾಟಕ ಕರ್ತೃ ಮೊದಲ ಅಧ್ಯಾಯದಲ್ಲೇ ಅಲ್ಲಿನ ಸನ್ನಿವೇಶ ಮತ್ತು ರಂಗಸಜ್ಜಿಕೆಗಳನ್ನು ಬರೆದುಬಿಡುತ್ತಾನೆ. ಇಂಥ ಸಂದರ್ಭದಲ್ಲಿ ಅಲ್ಲಿನ ವಾತಾವರಣವನ್ನು ನಮ್ಮ ಕಣ್ಣು ಮುಂದೆ ತಂದುಕೊಂಡು ನಾಟಕ ಓದಬೇಕಾಗುತ್ತದೆ. ಉದಾಹರಣೆಗೆ–ಗಿರೀಶ್ ಕಾರ್ನಾಡರ ತುಘಲಕ್. ಒಂದು ನಾಟಕವನ್ನು ಓದಿದಾಗ ತನ್ನಷ್ಟಕ್ಕೇ ತಾನೇ ಒಂದು ವಾತಾವರಣವನ್ನು ನಾವು ಮನಸ್ಸಿನಲ್ಲಿ ಮೂಡಿಸಿಕೊಳ್ಳುತ್ತೇವೆ. ಪ್ರತಿಯೊಬ್ಬ ನಟ, ನಟಿಯರ ವೇಷಭೂಷಣಗಳನ್ನು ಕರ್ತೃ ಕೊಟ್ಟಿದ್ದರೆ ಅವುಗಳ ಮೂಲಕ ಆ ಪಾತ್ರದ ಗುಣ ವಿಶೇಷಗಳನು ಹೇಳಿದ ಹಿನ್ನೆಲೆಯಲ್ಲೇ ಗಮನಿಸುತ್ತೇವೆ. ಇಂಥ ಸಂದರ್ಭದಲ್ಲಿ ನಮ್ಮ ಕಣ್ಣುಗಳು ಈ ಸನ್ನಿವೇಶದ ಕಲ್ಪನೆಯನ್ನು, ಕಿವಿಯು ಶಬ್ದ, ಸಂಭಾಷಣೆಯನ್ನು ಕೇಳುತ್ತಿರುತ್ತದೆ. ಅದಾದರೂ ಇದು ನಾಟಕ ನೋಡಿದಂತಲ್ಲ, ಒಬ್ಬ ಚಿತ್ರಗಾರ ಚಿತ್ರವನ್ನು ನೋಡದೇ "ಹೀಗೆ ಹೀಗೆ" ಎಂದರೆ ಹೇಗಾಗುತ್ತದೋ ಹಾಗಷ್ಟೇ. ತನ್ನದೇ ಆದ ಮಿತಿ ಇದಕ್ಕಿದೆ.

ಕಾದಂಬರಿಯ ವಿಸ್ತರಣೆಗೆ ಅಡ್ಡಿ ಇಲ್ಲ ; ಅಡೆತಡೆ ಇಲ್ಲ. ಎಲ್ಲಿ ಬೇಕಾದರೂ ಇದನ್ನು ಊಹಿಸಿಕೊಳ್ಳಬಹುದು. ಆದರೆ ನಾಟಕ ಮೂರು ಡೈಮನ್‌ಷನ್‌ನ ಚೌಕಟ್ಟಿನೊಳಗೆ ಆಗಬೇಕಾಗಿರುವುದರಿಂದ ಅದನ್ನೇ ಒಬ್ಬ ಓದುಗ ಮೊದಲು ಗಮನಿಸಬೇಕು. ಎರಡು ಡೈಮನ್‌ಷನ್ ಪುಟದ ಮೇಲೆ ಬರೆದ ನಾಟಕದಲ್ಲಿ ಮೂರು ಡೈಮನ್‌ಷನ್‌ನಿನ ಪಾತ್ರ ಕಲ್ಪಿಸಬೇಕಾಗುತ್ತದೆ. ಹೀಗೆ ಮಾಡುವಾಗ ಆತ ಮೊದಲೇ ನಾಟಕ ನೋಡಿದ್ದರೆ ಅದನ್ನೇ ಅವನು ನೆನಪಿಗೆ ತರುತ್ತಾನೆ. ಎಲ್ಲವೂ ಸ್ಪಷ್ಟವಾಗಿರುತ್ತದೆ. ಅಂತಲ್ಲ, ಕೆಲವು ಸ್ಪಷ್ಟ, ಹಲವು ಅಸ್ಪಷ್ಟ. ಕೆಲವು ಸಮಯ ಯಾವ ಆಕಾರವೂ ಬರದೇ ಬರಿಯ ಶಬ್ದವಾಗಿರಲೂಬಹುದು. ಹೀಗಾಗಿ ಓದುವಾಗ ಆತನ ಒಳಕಿವಿಯ ಜೊತೆ ಒಳನೋಟ ಸಹ ಸ್ಪಂದಿಸುತ್ತಲೇ ಇರಬೇಕಾಗುತ್ತದೆ.

ಪಾತ್ರವನ್ನು ನಾವು ರಂಗದ ಮೇಲೆ ಸೃಷ್ಟಿಮಾಡಿಕೊಳ್ಳುವುದರಿಂದ ನಾಟಕ ಕರ್ತೃವಿನ ಮೂಲ ಅಂಶವನ್ನು ಧಾರೆ ಎರೆಯುವ ಪಾತ್ರದ ಮಾತುಗಳು, ಸ್ವಗತಗಳು ನಮಗೆ ಹೆಚ್ಚು ಅಪ್ಯಾಯಮಾನವಾಗಿರುತ್ತದೆ. ನಾಟಕ ಓದುವುದು ಎಂದರೆ ಅಲ್ಲಿನ ಪಾತ್ರಗಳನ್ನು ತಟ್ಟಿ ಎಬ್ಬಿಸಿ ಅವರೊಂದಿಗೆ ಮಾತನಾಡುವುದು ಅಂತ ಅರ್ಥ. ನಾಟಕ ಒಂದು ಪ್ರದರ್ಶನ ಕಲೆ. ಆದುದರಿಂದ ಪ್ರೇಕ್ಷಕರೊಡನೆ, ಶಬ್ದಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಸಿನಿಮಾ ಮೂಲ ಕೃತಿಗಿಂತ ನಾಟಕದ ಸ್ಕ್ರಿಪ್ಟ್ ಓದುವುದು ಹೆಚ್ಚು ಆನಂದ ಕೊಡುತ್ತದೆ. ಕಾರಣ ಫಿಲ್ಮ್ ಸ್ಕ್ರಿಪ್ಟ್‌ನಲ್ಲಿ ಸಂಭಾಷಣೆಗೆ ಒತ್ತು ಕಡಿಮೆ ಇರುತ್ತದೆ. ಸಂಭಾಷಣೆಯ ಪೂರ್ತಿ ಪ್ರಭಾವ ಬರಬೇಕಾದರೆ ನಾವು ಹೇಳುವ ಮಾತಿನೊಳಗಿನ ಧ್ವನಿಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಆದುದರಿಂದ

ಬಹಳ ಸರ್ತಿ ನಾಟಕವನ್ನು ಗಟ್ಟಿಯಾಗಿ ಓದಬೇಕಾಗುತ್ತದೆ; ಗೆಳೆಯನೊಂದಿಗೆ ಸಂಭಾಷಿಸಿದಂತೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪಾತ್ರ ಎದ್ದು ಬಂದು ಮಾತನಾಡುವುದಿಲ್ಲ.

ನಿರ್ದೇಶಕ ಬಳಸಬಹುದಾದ ಕಲಾವಂತಿಕೆಯನ್ನು ಒಮ್ಮೊಮ್ಮೆ ಓದುಗ ಕಲ್ಪಿಸಿಕೊಳ್ಳುವುದು ರಂಗದ ಮೇಲೆ ಒಳ್ಳೆಯದು. ಪಾತ್ರಗಳ ಧ್ವನಿಯ ಏರಿಳಿತ, ಮೂಕಾಭಿನಯ, ರಂಗದಲ್ಲಿ ತಿರುಗೋದು, ಚಲಿಸೋದು, ಕುಣಿಯೋದು ಇತರೆಗಳನ್ನು ಸೃಷ್ಟಿಸಿಕೊಳ್ಳೋದು ಓದುಗನಿಂದ ಜೀವಂತ ನಾಟಕದೊಡನೆ ಸ್ಪಂದಿಸಲು ಆಗುತ್ತದೆ. ಹೀಗೆ ಕಲ್ಪಿಸಿಕೊಳ್ಳುವುದರೊಂದಿಗೆ ಓದುಗ ಭಾವೋದ್ವೇಗಕ್ಕೆ ಒಳಪಡಬಹುದು. ಇದು ಆಯಾ ನಾಟಕವನ್ನು, ಅದರಲ್ಲಿಯ ಸಂಘರ್ಷದ ತೀವ್ರತೆಯನ್ನು, ಓದುಗನ ಮನಸ್ಥಿತಿಯನ್ನು ಹೊಂದಿಕೊಂಡಿರುತ್ತದೆ. ಉದಾಹರಣೆಗೆ ಕಾಳಿದಾಸನ ಶಾಕುಂತಲಾ, ಮೇಘಧೂತ, ಷೇಕ್ಸ್‌ಪಿಯರ್‌ನ ಒಥೆಲೋ, ಹ್ಯಾಮ್ಲೆಟ್, ಬ್ರೆಕ್ಟ್‌ನ ಚಾಕ್‌ಸರ್ಕಲ್, ಗೆಲಿಲಿಯೋ, ಲಂಕೇಶರ, ಸಂಕ್ರಾಂತಿ, ಕಾರ್ನಾಡರ ಯಯಾತಿ, ತುಘಲಕ್, ಕಂಬಾರರ ಜೋಕುಮಾರಸ್ವಾಮಿ ಓದಿದಾಗ ಆಯಾ ನಾಟಕದ ವಸ್ತು ತೀವ್ರತೆ, ಸಂಘರ್ಷವನ್ನು ಹೊಂದಿಕೊಂಡು ಇರುವಂಥೆ ಕ್ರಿಯೆ ಇದು. ಆದುದರಿಂದ ಓದುಗನ ಕಲ್ಪನಾ ಶಕ್ತಿಗೆ ಎಲ್ಲಿ ಮಿತಿ? ತಿಂದು ನೋಡದ ರುಚಿಯನ್ನು ಎಷ್ಟೇ ಚೆಂದವಾಗಿ ಬೇಕಾದರೂ ಕಲ್ಪಿಸಿಕೊಳ್ಳಬಹುದು.

ನಾಟಕ ಓದುವವನಿಗೆ ತನ್ನದೇ ಆದ ಮಿತಿ ಹೇಗೆ ಇಲ್ಲವೋ ಅದಕ್ಕೆ ವಿರುದ್ಧವಾಗಿ ನಾಟಕ ಬರೆದವನಿಗೆ ಮಿತಿ ಇದೆ. ಆತ ಕಾದಂಬರಿಕಾರನಂತೆ ತಕ್ಷಣ ಯುದ್ಧದಿಂದ ಪ್ರೇಮಾಂಗಣಕ್ಕೆ ಹೋಗಲಾರ. ನಾಟಕ ನಿಲ್ಲಿಸಬೇಕಾಗುತ್ತೆ, ಊಹಿಸಬೇಕಾಗುತ್ತೆ, ಚಪ್ಪರಿಸುತ್ತಾ, ಚಪ್ಪರಿಸುತ್ತಾ, ಕುಡಿವ ಕೆನೆಹಾಲು. ನಾಟಕಕಾರ ಹಲವಾರು ದಿಕ್ಕಿನಲ್ಲಿ ಓದುಗನನ್ನು ಅವನ ಆಸಕ್ತಿಯನ್ನು ಕಟ್ಟಿಹಾಕಬೇಕಾಗುತ್ತೆ. ಯಾವಾಗಲೂ ಪ್ರಾರಂಭ ಒಳ್ಳೆಯದಾಗಿ ಕುತೂಹಲದ ಬಾಗಿಲನ್ನು ಬಡಿಯುವಂತಿರಬೇಕು. ಅದಕ್ಕಾಗಿಯೇ ಹೀಗೆ ಕುತೂಹಲ ತರುವ ಸಂದರ್ಭದಲ್ಲಿ ಸುಮ್ಮನೆ ಇಬ್ಬರು ಪಾತ್ರಗಳು ರಂಗದ ಮೇಲೆ ಬಂದು ಮುಖ ಮುಖ ನೋಡುತ್ತಾ ಕುಳಿತರೆ ಹೇಗೆ ಸಾಧ್ಯ? ಎರಡು ಪ್ರಾಣಿಗಳೂ ಮೃಗಾಲಯದಲ್ಲಿ ಒಂದೇ ಬೋನಿನಲ್ಲಿ ಸುಮ್ಮನಿರುತ್ತವೆಯೇ? ನಮ್ಮ ಕುತೂಹಲದ ತಾಳ್ಮೆಯ ಪರೀಕ್ಷೆ ಆಗಬಾರದು. ನಮಗೆ ಭಾಷೆ ಅರ್ಥ ಆಗದಿದ್ದರೂ ರಸ್ತೆಯಲ್ಲಿ ಆಗುವ ಗಲಾಟೆಯ ಧ್ವನಿಯ ಬಿರುಸು, ಶರೀರದ ವಿನ್ಯಾಸಗಳಿಂದ ಅವು ನಮ್ಮನ್ನು ತಾಗಿಯೇ ತಾಗುತ್ತವೆ. ಕಾವ್ಯ ಸ್ವಾದನದ ಬಗ್ಗೆ ರಿಚರ್ಡ್ ಹೇಳಿದ ಮಾತನ್ನು ಇಲ್ಲಿ ನೆನಪಿಸಬೇಕಾಗುತ್ತದೆ.

೧. ಕಣ್ಣಿನ ಮಾಧ್ಯಮದಿಂದ ಮುದ್ರಿತ ಅಕ್ಷರಗಳನ್ನು ಗ್ರಹಿಸುವುದು.
೨. ಕಣ್ಣಿನಿಂದ ಗ್ರಹಿಸಿದ ಸಂವೇದನೆಗಳಿಗೆ ಸಂಬಂಧಿಸಿದ ಪ್ರತಿಮೆಗಳನ್ನು ಗ್ರಹಿಸುವುದು.
೩. ಸ್ವತಂತ್ರ ಪ್ರತಿಮೆಗಳನ್ನು ಗ್ರಹಿಸುವುದು.
೪. ಭಾಷೆಯ ಅನುಭೂತಿ (ಫೀಲಿಂಗ್) ವಿಭಿನ್ನ ವಸ್ತುಗಳ ಅರ್ಥಗ್ರಹಣ.
೫. ದೃಷ್ಟಿಕೋನ (ಆ್ಯಟಿಟ್ಯೂಡ್)ದ ಸಾಮಂಜಸ್ಯ.

ನಾಟಕವನ್ನು ಓದುವಾಗ ಅದರ ಅಕ್ಷರಗಳ ಮುದ್ರಣ ಸೌಂದರ್ಯ, ಶುದ್ಧತೆಗಳ ಪ್ರಭಾವವು ಸಾಕಷ್ಟಾಗುತ್ತದೆ. ಒಂದು ನಾಟಕವನ್ನು ಓದಿದಾಗ, ಓದಿದ ಇಬ್ಬರ ಮನಸ್ಸಿನಲ್ಲಿಯೂ ಬೇರೆ ಬೇರೆ ದೃಶ್ಯಗಳೇ ನಿರ್ಮಾಣಗೊಳ್ಳುತ್ತವೆ. ಒಂದೇ ಸಾಲಿನ ಅರ್ಥ ಬೇರೆ ಬೇರೆಯವರ ಮನಸ್ಸಿನಲ್ಲಿ ಬೇರೆ ಬೇರೆ ದೃಶ್ಯ ಸಂಯೋಜನೆಯನ್ನು ಮೂಡಿಸಬಹುದು. ಶಬ್ದಗಳು ಸೂಚಿಸುವ ಅರ್ಥದಿಂದ ಬೇರೆ ಬೇರೆ ವಿಷಯಗಳನ್ನು ತಿಳಿಸಬಹುದು. ಇಂಥ ಸೂಚ್ಯ ಅರ್ಥವನ್ನು ಗ್ರಹಿಸಲು ಓದುಗನಿಗೆ ಶಿಕ್ಷಣ ಹಾಗೂ ಸಂಸ್ಕಾರ ಬೇಕಾಗುತ್ತದೆ. ಸೂಚ್ಯ ವಸ್ತುಗಳನ್ನು ತಿಳಿದಾಗ ಭಾವ (ಎಮೋಷನ್) ಮತ್ತು ದೃಷ್ಟಿಕೋನ (ಆ್ಯಟಿಟ್ಯೂಡ್)ಗಳ ಸಾಮಂಜಸ್ಯ ಸ್ಥಾಪಿತವಾಗುತ್ತದೆ. ಭಾರತೀಯ ರಸ ಸಿದ್ಧಾಂತದಲ್ಲಿ ಇದೇ ಸ್ಥಾಯೀಭಾವ. ರಸಸಿದ್ಧಾಂತದಲ್ಲಿ ರಸ ಅಥವಾ ಆನಂದವೇ ಬಹಳ ಮುಖ್ಯ ಉದ್ದೇಶವಾಗಿದೆ. ಆದರೆ ಪೂರ್ಣವಾಗಿ ಇದನ್ನು ಒಪ್ಪಲು ಸಾಧ್ಯವಿಲ್ಲ. ಯಾಕೆಂದರೆ ಈ ಆನಂದದ ವ್ಯಾಪ್ತಿಯ ಬಗ್ಗೆ ನಿಖರವಾಗಿ ಇದೇ ಕೊನೆಯ ಮಾತು ಎಂದು ಯಾರೂ ಹೇಳುವಂತಿಲ್ಲ.

ಉದಾಹರಣೆಗೆ, ದುಃಖಾಂತದ ನಾಟಕದ ಆಸ್ವಾದನೆ ಸಹ ಆನಂದ ಪೂರ್ಣವಾಗಿರುತ್ತದೆ ಎಂಬುದನ್ನು ಬಹಳ ಜನ ಒಪ್ಪುವುದಿಲ್ಲ. ಯಾಕೆಂದರೆ ಅಂಥವರ ದೃಷ್ಟಿಯಲ್ಲಿ ಆನಂದವೆಂಬುದು ಅಂತರ್‌ವೃತ್ತಿಗಳ ಕ್ರಿಯೆಯ ಯಶಸ್ಸು ಮಾತ್ರ; ಆನಂದದ ಚೇತನವುಂಟಾಗುವುದು ವೃತ್ತಿಗಳ ಕ್ರಿಯೆ ಸಫಲವಾದಾಗ, ಆದುದರಿಂದ ಕ್ರಿಯೆ ಮತ್ತು ಸಮನ್ವಯದಿಂದ ಮೂಡಿ ಬರಬೇಕಾದ್ದೇ ಆನಂದ. ಈ ಕಾರಣದಿಂದ ರಂಗಮಂಟಪದ ಮೇಲೆ ಇಂಥದೇ ಪ್ರಸಂಗವನ್ನು ನೋಡಿ ಅಥವಾ ಸ್ವಲ್ಪ ಭಿನ್ನವಾಗಿ ನಾಟಕವನ್ನು ಓದಿ ಅನುಭವಿಸುವುದು ಮೂಲಕ್ಕಿಂತ ಬೇರೆ ಎಂಬುದು ಎಲ್ಲರೂ ಒಪ್ಪುವ ಮಾತು.

ಪದ್ಯದ ಸೌಂದರ್ಯವನ್ನು ಹೆಚ್ಚಿಸಲು ಹೇಗೆ ಛಂದೋಬದ್ಧತೆ ಕಾರಣವಾಗುತ್ತದೆಯೋ ಹಾಗೇ ನಾಟಕಕ್ಕೆ ಛಂದೊಬದ್ಧತೆ ಇರಬೇಕು. ಇದು ಮಾತನಾಡುವಾಗ, ಯೋಚಿಸುವಾಗ, ಸಂಭಾಷಿಸುವಾಗ– ಈ ಎಲ್ಲಾ ಕ್ರಿಯೆಗಳಲ್ಲಿ ಹಾಸು ಹೊಕ್ಕಾಗಿ ಇರಬೇಕಾಗುತ್ತದೆ. ಆದರೆ ಇದಕ್ಕೆಲ್ಲ ಬೇಕಾಗಿರೋದು, ಓದುಗನಿಗೆ ಬೇಕಾದ್ದು ಸ್ವೀಕಾರ ಬುದ್ಧಿ. ಈ ಸ್ವೀಕಾರ ಬುದ್ಧಿ ವ್ಯಕ್ತಿ ವ್ಯಕ್ತಿಗಳಲ್ಲಿ ಬೇರೆ ಬೇರೆಯಾಗಿ ಕೆಲಸ ಮಾಡುತ್ತದೆ.

ನಾಟಕದ ಓದುಗ ಬರಿಯ ಶಬ್ದವನ್ನು ಓದುವುದಿಲ್ಲ. ಅದರಡಿಗೆ ಕುಳಿತಿರುವ ಮೌನವನ್ನು ವ್ಯಂಗ್ಯವನ್ನು ಓದಿಕೋಬೇಕು. ಹಲವು ನಾಟಕಗಳಲ್ಲಿ ಪಾತ್ರದ ವ್ಯಂಗ ಅಲ್ಲ, ಶಬ್ದದ ವ್ಯಂಗ್ಯಾರ್ಥ ಮುಖ್ಯವಾಗುತ್ತದೆ; ಈ ಶಬ್ದದೊಳಗೆ ಅಡಗಿ ಕುಳಿತಿರುವ ಅಭೀಪ್ಸೆಗಳಿಗೆ ಧ್ವನಿಗೂಡಿಸುವುದು ಮುಖ್ಯವಾಗುತ್ತದೆ. ಉದಾಹರಣೆಗೆ ಜ್ಯೂಲಿಯಸ್ ಸೀಸರ್‌ನಲ್ಲಿ ಬ್ರೂಟಸ್ ಉಪಯೋಗಿಸುವ 'ಗೌರವಾನ್ವಿತರೇ' (Honourable) ಎಂಬ ಶಬ್ದದೊಳಗೆ ಅಡಗಿರುವ ವ್ಯಂಗ್ಯ.

ನಾಟಕಕಾರನಿಂದ ಬಳಸಲ್ಪಟ್ಟಿರುವ ಮೌನಕ್ಕೆ ವಿಶೇಷ ಅರ್ಥವಿದೆ. ಆದರೆ ಇದನ್ನು ಓದುಗ ಹೇಗೆ ಗಮನಿಸಬೇಕೆಂಬುದು ಬಹಳ ಮುಖ್ಯ. ಇಂಥ ಸಂದರ್ಭದಲ್ಲಿ ಓದುಗ ಮೂರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

೧. ಮೌನವನ್ನು ಎಲ್ಲಿ ಬಳಸಿದೆ?
೨. ಮೌನದ ದೀರ್ಘ ಎಷ್ಟು?
೩. ಮೌನದ ಪರಿಣಾಮ ಏನು?

ನಾಟಕಕಾರ ಸೂಚನೆಗಳನ್ನು ಬಳಸಿದ್ದರೆ ಓದುಗನಿಗೆ ಅನುಕೂಲವಾಗುತ್ತದೆ. ಹೀಗೆ ಬಳಸಲ್ಪಟ್ಟ ಸೂಚನೆಗಳನ್ನು ಪಾತ್ರಧಾರಿ ಮಾತ್ರ ಅಲ್ಲದೇ ನಾಟಕ ಓದುವವನೂ ಪರಿಪಾಲಿಸಬೇಕು. ನಾಟಕದಲ್ಲಿ ಬಳಸಲ್ಪಟ್ಟ ಚುಕ್ಕೆಯ ಮೇಲೆ ಕಡಿಮೆ ಅಥವಾ ದೀರ್ಘ ಮೌನವನ್ನು ಗುರುತಿಸಬೇಕು. ನಾಲ್ಕು ಚುಕ್ಕೆ ಸ್ವಾಭಾವಿಕವಾಗಿಯೇ ಮೂರು ಚುಕ್ಕೆಗಿಂತ ಹೆಚ್ಚು ಮೌನವನ್ನು ಹೇಳುತ್ತದೆ. ಆದರೆ ಎಷ್ಟೋ ಜನ ನಾಟಕಕಾರರು ಶೇಕ್ಸ್‌ಪಿಯರನನ್ನೂ ಸೇರಿಸಿ ಇಂಥ ಸೂಚನೆಗಳನ್ನು ಆದಷ್ಟು ಕಡಿಮೆ ಬಳಸುತ್ತಾರೆ. ಅಂಥ ಸಂದರ್ಭದಲ್ಲಿ ಓದುಗನ ಹೊಣೆ ಇನ್ನೂ ಹೆಚ್ಚಾಗುತ್ತದೆ.

ಪ್ರೇಕ್ಷಕಗಿಂತಲೂ, ನಾಟಕ ಓದುವವನು ನಾಟಕಕಾರನಿಗೆ ಹತ್ತಿರ, ಯಾಕೆಂದರೆ ಕೃತಿ ಆತನ ಕೈಯಲ್ಲಿ ಇರುವುದರಿಂದ. ಎಲ್ಲಿಯೂ ತಪ್ಪದೇ ಸಂದೇಹ ಬಂದಾಗ ಮತ್ತೊಮ್ಮೆ, ಮಗದೊಮ್ಮೆ ನೋಡುವ ಅವಕಾಶ ಇರೋದರಿಂದ, ನಾಟಕ ಓದಿದ ತಕ್ಷಣ ನಮ್ಮನ್ನು ಸೆಳೆಯುವುದು ಅಲ್ಲಿರುವ ಸಂಭಾಷಣೆಗಿಂತ ಮುಖ್ಯವಾಗುವುದು ನಾಟಕ ರಂಗದ ಮೇಲೆ ಮೂಡಿ ಬಂದಾಗಿನ ದೃಶ್ಯ. ಅಲ್ಲಿಯವರೆಗೂ ನಾಟಕ ಭಾವನಾತ್ಮಕತೆಗಿಂದ ಬೌದ್ಧಿಕವಾಗಿರುತ್ತೆ.

**ನಾಟಕವನ್ನು ಅರ್ಥಮಾಡಿಕೊಳ್ಳುವುದು ಹೇಗೆ?**

ಹತ್ತೊಂಭತ್ತನೇ ಶತಮಾನದ ಆದಿಭಾಗದಲ್ಲಿ ಇಡೀ ನಾಟಕಕ್ಕೆ ಒಂದು ಅರ್ಥಕೊಡುವುದಕ್ಕಿಂತಲೂ ಪ್ರತಿಯೊಬ್ಬ ನಟ ತನ್ನನ್ನು ತಾನೇ ಅರ್ಥೈಸಿ ವಿಶ್ಲೇಷಿಸಿಕೊಳ್ಳುತ್ತಿದ್ದ. ಹೀಗಾಗಿ ಒಂದು ನಾಟಕದಲ್ಲಿ ಇರಬಹುದಾದ ಅನೇಕ ನಟರು ತಮ್ಮದೇ ಅರ್ಥ ಕೊಡುವುದರಿಂದಾಗಿ ಇಡೀ ನಾಟಕದ ಒಟ್ಟು ಆಶಯ ಇಲ್ಲವಾಗಿ ಬಿಡುತ್ತಿತ್ತು ಅಥವಾ ನಟರ ವಿಶ್ಲೇಷಣೆಯನ್ನು ಹೊಂದಿಕೊಂಡು ಇಡೀ ನಾಟಕವನ್ನು ಅರ್ಥಮಾಡಿಕೊಳ್ಳಬೇಕಾಗಿತ್ತು. ಈಗ ಹಾಗಲ್ಲ–ನಿರ್ದೇಶಕ ಒಂದು ನಾಟಕವನ್ನು ಎತ್ತಿಕೊಳ್ಳುವಾಗಲೇ ನಾಟಕದ ಮೂಲ ಆಶಯವನ್ನು ನಿರ್ಧರಿಸಿರುವುದರಿಂದ ನಟರು ರಂಗಸಜ್ಜಿಕೆ, ಸಂಗೀತ, ಬೆಳಕು ಎಲ್ಲವೂ ನಿರ್ದೇಶಕನ ಆಶಯಕ್ಕೆ ತಕ್ಕ ಹಾಗೆ ಇರಬೇಕಾಗುತ್ತದೆ.

ಆಶಯವನ್ನು ನಿರ್ಧರಿಸುವಾಗ ತುಲನೆಗೆ ತೆಗೆದುಕೊಳ್ಳಬೇಕಾದ ಮೊದಲ ವಿಷಯ ನಾಟಕದ ವಸ್ತು. ಒಂದು ನಾಟಕದ ಕೇಂದ್ರ ಬಿಂದುವಿನ ಮೇಲೆ ಇಡೀ ದಾರ್ಶನಿಕ ವಿಚಾರ ಇರುತ್ತದೆ–ಒಂದು ರೀತಿಯಲ್ಲಿ ಅದು ಅಡಿಪಾಯ. ಆದರೆ ಒಂದು ನಾಟಕಕ್ಕೆ ಒಂದೇ ವಿಚಾರ ಇರುತ್ತದೆ. ಅಂತ ಅಲ್ಲ; ಅನೇಕ ವಿಚಾರಗಳಿರಬಹುದು. ಕಾರ್ನಾಡರ 'ಯಯಾತಿ'ಯಲ್ಲೇ ಅನೇಕ ವಿಚಾರಗಳು ಅಡಕವಾಗಿವೆ. ಅಸ್ತಿತ್ವವಾದ, ಅಸೂಯೆ, ತಪಃಶಕ್ತಿಯ ಸರ್ವಾಧಿಕಾರ, ಯೌವ್ವನದ ಅತ್ಯಾಶೆ, ತ್ಯಾಗದ ಮೋಹ ಹೀಗೆ. ಹಾಗೆಯೇ ಶೇಕ್ಸ್‌ಪೀಯರ್‌ನ 'ಮ್ಯಾಕ್‌ಬೆತ್'ನಲ್ಲಿ ಮ್ಯಾಕ್‌ಬೆತ್‌ನ ವ್ಯಕ್ತಿ ಚಿತ್ರಣ ಅಪರಾಧಿ ಮನೋಭಾವ, ಅತಿ ಆಸೆ, ಮೃತ್ಯುವಿಗೆ ಕಾರಣ–ಹೀಗೆ ನಿರ್ದೇಶಕರು ಇವುಗಳಲ್ಲಿ ಯಾವ ವಿಷಯಕ್ಕೆ ಒತ್ತುಕೊಡಬೇಕು ಎಂಬುದನ್ನು ನಾಟಕ ತೆಗೆದುಕೊಳ್ಳುವಾಗಲೇ ನಿರ್ಧರಿಸುವುದು ಒಳಿತು. ಎಲ್ಲವನ್ನೂ ಹೇಳುತ್ತಾ ಕೇಂದ್ರೀಯ ಐಕ್ಯತೆಯ ಬಗ್ಗೆ ಪ್ರೇಕ್ಷಕರ ಮನಸ್ಸನ್ನು ಸೆರೆ ಹಿಡಿಯುವುದು ಸೃಜನಶೀಲ ನಿರ್ದೇಶಕರಿಗೆ ಮಾತ್ರ ಸಾಧ್ಯ. ಆತನಿಗೆ ಎಲ್ಲವೂ ಬೇಕು, ಎಲ್ಲಕ್ಕಿಂತ ಮಿಗಿಲಾಗಿ ತಾನು ಇಟ್ಟುಕೊಂಡ ಕೇಂದ್ರ ಉದ್ದೇಶ ಇನ್ನೂ ಹೆಚ್ಚಬೇಕು. ಎಲ್ಲ ಹೇಳುತ್ತೇನೆಂದು ಯಾವುದನ್ನೂ ಸರಿಯಾಗಿ

ಹೇಳದಿದ್ದರೆ? ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಹಾರುತ್ತಾ ಕಲಸುಮೇಲೋಗರ ಮಾಡಿ ಇಡೀ ನಾಟಕ ಗೊಂದಲಾಪುರ ಮಾಡುವುದನ್ನು ಅನೇಕ ಬಾರಿ ನಾವು ನೋಡುತ್ತೇವೆ. ಯಾಕೆಂದರೆ ನಿರ್ದೇಶಕ ಆರಿಸಿಕೊಂಡ ಕೇಂದ್ರೀಯ ವಿಷಯದ ಮೇಲೆ ಇಡೀ ನಾಟಕದ ಉಳಿದ ಅಂಶಗಳು ಕೆಲಸ ಮಾಡಬೇಕಾಗುತ್ತದೆ.

ಹೀಗೆ ಆರಿಸಿಕೊಂಡ ನಾಟಕದ ಕೇಂದ್ರ ಆಶಯವನ್ನು ಹೇಗೆ ಹೇಳುವುದು, ನಾಟಕವನ್ನು ಹೇಗೆ ಪ್ರಯೋಗಿಸಬಹುದು ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಇತರ ಸಾಹಿತ್ಯ ಕೃತಿಗಳಿಗಿಂತ ಭಿನ್ನವಾಗಿ ನಾಟಕದಲ್ಲಿ ಪ್ರೇಕ್ಷಕರೊಡನೆ ಸಂವಾದ ಏರ್ಪಡಿಸುವುದು ಹೇಗೆ ಎನ್ನುವುದು ಮುಖ್ಯ ಅಂಶ.

ಈ ಹೇಳುವ ವಿಧಾನದಲ್ಲಿ ದೃಷ್ಟಿಕೋನ ಮುಖ್ಯವಾದದ್ದು. ಇದನ್ನು ನಿರ್ಧರಿಸುವಾಗ ಪ್ರೇಕ್ಷಕರ ಮನಸ್ಸು ಮತ್ತು ಕೃತಿಯ ಸಂಭಾಷಣೆಗಳು ಮುಖ್ಯವಾಗುತ್ತವೆ. ಅಂಕದ ಪರದೆ ಮೇಲೇಳುವವರೆಗೂ ಪ್ರೇಕ್ಷಕನ ಮನಸ್ಸನ್ನು ಅರಿಯುವುದು ಕಷ್ಟ. ಒಮ್ಮೆ ನಾಟಕದ ಜೊತೆಗೆ ಸ್ಪಂದಿಸಲು ಶುರುಮಾಡಿದರೆ ನಂತರ ಇಡೀ ನಾಟಕದ ಸತ್ವವನ್ನು ಹೀರಲು ಆತ ಪ್ರಯತ್ನಿಸುತ್ತಾನೆ. ಇದೇ ಕಾರಣದಿಂದ ಹೊಸ ನಾಟಕಗಳನ್ನು ಪದೇ ಪದೇ ನೋಡಿ ಸಂಸ್ಕಾರ ಬೆಳೆಸಿಕೊಳ್ಳಬೇಕು ಎನ್ನುತ್ತೇವೆ. ಹೀಗೆ ಆದಾಗ ನಮ್ಮ ಕಣ್ಣು ಕಿವಿಗಳು ಮುಖ್ಯವಾಗಿ ಸ್ಪಂದಿಸುವ ಶಕ್ತಿಯನ್ನು ಸ್ಫುರಿಸುತ್ತವೆ. ಆದುದರಿಂದ ಯಾವುದಾದರೂ ಸಣ್ಣ ಲೋಪದೋಷಗಳೂ ಸಹ ನಿಚ್ಚಳವಾಗಿ ಪ್ರೇಕ್ಷಕನಿಗೆ ಗೋಚರಿಸುತ್ತದೆ. 'ಆಷಾಡದ ಒಂದು ದಿನದಲ್ಲಿ' ಪ್ರತಿಯೊಂದು ಅಂಕದ ಮೊದಲು ಸವಿಸ್ತಾರವಾದ ಸೂಚನೆಗಳಿವೆ. ಕಾಲಕಳೆದಿದೆ ಎಂದೋ, ಅಂಬಿಕೆ ಅನಾರೋಗ್ಯದಿಂದ ಮಲಗಿದ್ದಾಳೆ ಎಂದೋ, ಮಲ್ಲಿಕಾಳಿಗೆ ವಯಸ್ಸಾಗುತ್ತಿದೆ ಎಂದೋ, ಗೋಡೆಗಳ ಮೇಲಿನ ಸ್ವಸ್ತಿಕ್ ಚಿಹ್ನೆಗಳು ಅಳಸಿವೆ ಎಂದಾಗ ಧ್ವನಿಸುವ ಭಾವನೆಗಳನ್ನೋ, ಒಡೆದ ಕೊಡಾ ಮಲ್ಲಿಕಾಳ ಬಾಳೀನ ಸಂಕೇತವೋ, ಜರ್ಜರವಾಗಿ ಅಸ್ತವ್ಯಸ್ತವಾದ ಪಾತ್ರಗಳು ಪ್ರೀತಿ ಒಡೆದುಹೋದುದಕ್ಕೋ ಇರುತ್ತವೆ. ಅವೆಲ್ಲವನ್ನೂ ಸೃಜನಾತ್ಮಕ ನಿರ್ದೇಶಕ ಮಾತ್ರ ಗಮನಿಸುತ್ತಾನೆ. ಈ ಕಾರಣದಿಂದ ಯಾವ ದೃಷ್ಟಿಯಲ್ಲಿ ಪ್ರೇಕ್ಷಕರು ನಾಟಕಗಳನ್ನು ಸ್ವೀಕರಿಸಬೇಕು ಎಂಬುದು ಯಾವ ದೃಷ್ಟಿಯಲ್ಲಿ ನಾಟಕವನ್ನು ಹೇಳಲಾಗಿದೆ ಎಂಬುದರ ಮೇಲೆಯೇ ನಿರ್ಣಯವಾಗುತ್ತದೆ. ನಾಟಕವನ್ನು ಯಾವ ರೀತಿಯಲ್ಲಿ ಕೊನೆಮಾಡುತ್ತೇವೆ ಎಂಬುದೂ ಮುಖ್ಯ. ಉದಾಹರಣೆಗೆ ಸುಖಾಂತ, ದುಃಖಾಂತ ಇತ್ಯಾದಿ.

ಪ್ರೇಕ್ಷಕ ನಾಟಕ ನೋಡಲು ಬರುವುದು ಆನಂದಪಡುವುದಕ್ಕೆ. ಈ ಆನಂದಕ್ಕೆ ತಮಾಷೆಯ ನಾಟಕವೇ ಆಗಬೇಕೆಂದಿಲ್ಲ. ಆನಂದ ಎನ್ನುವುದು ವ್ಯಕ್ತಿಯ ಸ್ವಂತದ್ದು. ಆದ್ದರಿಂದ ಅದೂ ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ರೀತಿಯಲ್ಲಿ ದೊರಕಬಹುದು. ಹೆಂಡ ಕುಡಿಯುವವನ ಆನಂದಕ್ಕೂ, ಪದ್ಯ ರಚಿಸಿದಾಗ ಆಗುವ ಆನಂದಕ್ಕೂ, ಪರಮಹಂಸರಿಗೆ ಆದ ಆನಂದಕ್ಕೂ ಅಗಾಧ ಅಂತರವಿದೆ. ಹಾಗಾದರೆ ನಾಟಕ ಯಾವ ಆನಂದವನ್ನು ಪ್ರೇಕ್ಷಕನಿಗೆ ಕೊಡಬೇಕು.

ಈ ಕಾರಣದಿಂದಲೇ ನಾಟಕವನ್ನು ಯಾರ ಮುಂದೆ ಆಡುತ್ತಿದ್ದೇವೆ ಎಂಬ ಪ್ರಶ್ನೆ ಬಹಳ ಮುಖ್ಯ ಎಂದು ಭರತ ಮುನಿ ಹೇಳಿದ. ಪ್ರೇಕ್ಷಕರಿಗೆ ಹಾಸ್ಯ, ತಿಳಿ ಹಾಸ್ಯ, ವ್ಯಂಗ್ಯ, ಕ್ರಾಂತಿ, ಸಾಮಾಜಿಕ, ಐತಿಹಾಸಿಕ–ಹೀಗೆ ಯಾವುದು ಬೇಕು ಎಂಬುದು ಗಮನಿಸಬೇಕಾದ ಅಂಶ. ಹಾಗಾದರೆ ಉಳಿದವರು ಪ್ರೇಕ್ಷಕರ ಜವಾನರೇ? ಎಂಬುದು ಬಹುಶಃ ಜಿಜ್ಞಾಸೆಯ ವಿಷಯ. ಹೀಗೆ ಮಾಡುತ್ತಾ ಹೋದಾಗ ಹೊಸದು ಯಾವ ಮೂಲೆಯಿಂದ ಹುಟ್ಟಿಬರಬೇಕು; ಹೊಸ ಹಸಿರು ಯಾವ ನೆಲ ಸೀಳಿ ಹೊರಹೊಮ್ಮಬೇಕು? ಡಿ.ಎಚ್.ಲಾರೆನ್ಸ್‌ನ ಕಾದಂಬರಿ "ಲೇಡಿ ಚಾಟರ್ಲೀಸ್ ಲವರ್" ಬಂದಾಗ ಇಡೀ ಇಂಗ್ಲೆಂಡಿನ ಮಡಿವಂತ ಸಮಾಜ ದಿಗಿಲುಪಟ್ಟಿತು. ಕೋರ್ಟ್‌ಗೆ ಹೋಗಿಯೇ ಅದು ವಿಮುಕ್ತಿಗೊಂಡು ಹೊರಬರಬೇಕಾಯಿತು. ಯಾವುದು ಬೇಕು ಯಾವುದು ಬೇಡ, ಯಾವುದು ಶ್ಲೀಲ ಯಾವುದು ಅಶ್ಲೀಲ ಎಂದು ನಿರ್ಧರಿಸುವವನು ಯಾರು? ಪ್ರೇಕ್ಷಕನೇ? ಸಮಾಜವೇ? ನಾಟಕಕಾರನೆ? ಅಥವಾ ನಿರ್ದೇಶಕನೆ?

ಪ್ರೇಕ್ಷಕ ಒಂದು ಮಗು ಇದ್ದ ಹಾಗೆ; ಒಂದು ಹಸಿಮಣ್ಣಿನ ಗೋಡೆ ಇದ್ದ ಹಾಗೆ. ಕೊಟ್ಟದ್ದನ್ನು ಆತ ಸ್ವೀಕರಿಸಬಲ್ಲ, ವಿಚಾರ ಮಾಡಬಲ್ಲ. ಆತನಿಗೆ ಹೊಸ ಒಲವುಗಳನ್ನು ತೋರ್ಪಡಿಸದೇ ಇದ್ದರೆ ತಪ್ಪು ಆತನದಲ್ಲ. ಹಾಗೆ ಹೇಳುವಾಗಲೂ ಚಿಂತನದ ವಿಷಯವನ್ನು ಹಾಸ್ಯದ ಪ್ರಹನದಲ್ಲಿ ಸೇರಿಸಬಾರದೆಂದಿಲ್ಲ. ಆದರೆ ಎಲ್ಲಿಯೂ ಒಂದಕ್ಕೊಂದು ಹೊರಗಿನಿಂದ ತುರುಕಲ್ಪಟ್ಟಿದೆ ಎಂದು ಭಾಸವಾಗಬಾರದು. ಈ ಕಾರಣದಿಂದಲೇ ನಾಟಕದ ಉದ್ದಕ್ಕೂ ಇವು ಹರಡಿರಬೇಕು. ಹೀಗೆ ಹರಡಲು ಒಂದು ವಾತಾವರಣವನ್ನು ಸೃಷ್ಟಿಸಿಕೊಳ್ಳಬೇಕು. ಇದು ನಿರ್ದೇಶಕ ಆಯಾ ನಾಟಕದ ಸಂದರ್ಭದಲ್ಲಿ ರೂಪಿಸಿಕೊಳ್ಳಬೇಕಾದ ಶೈಲಿಯನ್ನು ಹೊಂದಿಕೊಂಡು ಇದೆ. ಯಕ್ಷಗಾನದಲ್ಲಿ ಇಡೀ ಗಂಭೀರ ಸಂದರ್ಭದಲ್ಲೂ ಒಬ್ಬ ಹಾಸ್ಯಗಾರನ ಪ್ರವೇಶ ಆಗುತ್ತದೆ. ಜನ ಇದನ್ನೂ ಸ್ವೀಕರಿಸಿ ಬಿಡುತ್ತಾರೆ.

ಶೈಲಿ ಎಂದು ಹೇಳಿದಾಗ ಅದು ಪ್ರೇಕ್ಷಕ ನಾಟಕ ಮತ್ತು ವಾಸ್ತವಿಕತೆಯ ಸಂಬಂಧವನ್ನು ನೋಡುವ ದೃಷ್ಟಿಕೋನ. ಇದನ್ನು ವಾಸ್ತವಿಕ ಶೈಲಿ ಮತ್ತು ಅವಾಸ್ತವಿಕ ಶೈಲಿ ಎಂದೇ ಕರೆಯಬಹುದು. ನಮ್ಮ ಜನಜೀವನದ ಸ್ವಾಭಾವಿಕ

ದೃಷ್ಟಿಕೋನದಲ್ಲೇ ನಾಟಕ ನೋಡಲು ಸಾಧ್ಯವಾದರೆ ಅದು ವಾಸ್ತವಿಕ ಅಥವಾ ಸಾಂಕೇತಿಕ ಅಥವಾ ಅಸ್ವಾಭಾವಿಕತೆಯನ್ನು ನಾಟಕದ ಯಾವುದೇ ಅಂಶದಲ್ಲೂ ಕಾಣುವುದಿಲ್ಲ. ಒಂದು ನಿರ್ದಿಷ್ಟ ಚೌಕಟ್ಟಿಗೆ ನಾವು ಪ್ರೇಕ್ಷಕರನ್ನು ಸಿಕ್ಕಿಸಿ ಬಿಡುತ್ತೇವೆ. ಆದರೆ ಅವಾಸ್ತವಿಕ ಶೈಲಿಯಲ್ಲಿ ಇದಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಇದಕ್ಕೆ ಮೇಲೆ ಹೇಳಿದ ವಿರುದ್ಧವಾದ ಚೌಕಟ್ಟಿರುತ್ತದೆ. ಇದರ ವಸ್ತು ಸಹ ಒಂದು ರೀತಿಯ ಸಾರ್ವತ್ರಿಕ ಸಾವಯವ ಸಂಬಂಧವನ್ನು ನಿರಂತರ ಹೊಂದಿರಬಲ್ಲ ವಿಷಯಗಳಿಗೆ ಸೀಮಿತವಾಗಿರುತ್ತದೆ. ನಿತ್ಯಜೀವನದಿಂದ ಹೆಕ್ಕಿಕೊಂಡ ಇಂತಹ ವಿಷಯ ಇರುವುದಿಲ್ಲ. ಸೋಫೋಕ್ಲೆಸ್ ಬರೆದ ಗ್ರೀಕ್ ದುರಂತ ನಾಟಕಗಳು ಈ ಶೈಲಿಗೆ ಉತ್ತಮ ಉದಾಹರಣೆ. ಇದನ್ನು ಅವರು 'ಶಾಸ್ತ್ರೀಯವಾದ' ಎಂದು ಕರೆಯುತ್ತಿದ್ದರು. ಕೆಲವೇ ನಾಟಕಗಳು ಅನೇಕ ರೀತಿಯ ಅರ್ಥವನ್ನು ಬಿಟ್ಟುಕೊಡುತ್ತವೆ. ಈ ಕಾರಣದಿಂದ ಅದರಲ್ಲಿ ಒಂದೇ ಬಗೆ ಶೈಲಿ ಇರಲು ಸಾಧ್ಯವಿಲ್ಲ. 'ಮ್ಯಾಕ್‌ಬೆತ್' ನ ಮೂಲಶೈಲಿ ನವೋದಯ ರೀತಿಯದು. ಅಂದರೆ ಪ್ರೇಕ್ಷಕರಿಗೆ ಚಿತ್ರವಿಚಿತ್ರಗಳನ್ನು, ರಂಗುರಂಗುಗಳನ್ನು ತೋರಿಸುವುದು. ಆದರೆ ನಾಟಕದ ಪಾತ್ರಗಳನ್ನು ವಿಶ್ಲೇಷಿಸುತ್ತಾ ಹೋದಾಗ ಅದು ವಾಸ್ತವಿಕ ಶೈಲಿಗೆ ಹತ್ತಿರವಾಗುತ್ತಾ ಹೋಗುತ್ತದೆ. ಅದರಲ್ಲಿ ಬರುವ ಮಾಟಗಾರ್ತಿಯರ ಬಗ್ಗೆ ಹೆಚ್ಚು ಒತ್ತುಕೊಟ್ಟಿತು ಎಂದರೆ ಅದು ಭ್ರಮೆಗೆ ಹತ್ತಿರವಾಗುತ್ತಾ ಹೋಗುತ್ತದೆ.

ಒಮ್ಮೆ ಒಂದು ಶೈಲಿ ನಿರ್ಧಾರ ಆದ ಮೇಲೆ ಅದೂ ಯಾವ ದೃಷ್ಟಿಕೋನವನ್ನು ಹೇಳಲು ಪ್ರಯತ್ನಿಸುತ್ತಿದೆ ಎಂಬುದನ್ನು ಆಲೋಚಿಸಿಕೊಳ್ಳಬೇಕು. ಅದಕ್ಕೆ ಉಳಿದ ಎಲ್ಲ ವಿಷಯಗಳು ಹೊಂದಿಕೆ ಆಗುತ್ತದೆಯೇ ಎಂಬುದನ್ನು ಚಿಂತಿಸಬೇಕು. ಕೆಲವು ನಾಟಕಗಳಿಗೆ ಎಲ್ಲಾ ಶೈಲಿ ಹೊಂದಿಕೆ ಆಗದಿದ್ದರೂ ಒಂದು ನಾಟಕಕ್ಕೆ ಒಂದು ಶೈಲಿ ಎಂದೇನೂ ಹೇಳಿಲ್ಲ. 'ಸತ್ತವರ ನೆರಳು' ಅನೇಕ ಬಗೆಯ ಶೈಲಿಗಳನ್ನು ಆಹ್ವಾನಿಸುವ ನಾಟಕ. ಆದರೆ ಇಲ್ಲಿಯೂ ಸಹ ಅನಾವಶ್ಯಕ ವಿಷಯಗಳ ಸಂತೆ ಆಗುವುದು ಸರಿಯಲ್ಲ. ಅರಿಸ್ಟಾಟಲ್ ಹೇಳಿದ: "ಅನಗತ್ಯವಾಗಿ ಯಾವ ಪಾತ್ರವನ್ನೂ ತುರುಕಬೇಡ" ಹೀಗಾದಾಗ ಮಾತ್ರ ಉತ್ತಮ ಪಾತ್ರಗಳು ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸಬಹುದಾದ ಅವಕಾಶ ಹೆಚ್ಚು ಇರುತ್ತದೆ. ಇದನ್ನು ನಾಟಕವನ್ನು ಅರ್ಥ ಮಾಡುವಾಗ ಸೂಕ್ಷ್ಮವಾಗಿ ಗಮನಿಸಬೇಕು.

# 3. ಪಂಚಮ (ನಾಟಕ)

**ಡಾ. ಸಿದ್ದಲಿಂಗಯ್ಯ**

**ಪಾತ್ರಗಳು**

ಹಯವದನರಾವ್
ಪುಟ್ಟಲಕ್ಕಮ್ಮ
ಶೇಷಾದ್ರಿ
ಗಾಂಧಿದಾಸ್
ಪಾಪಣ್ಣ
ಪಂಚಮ
ಹಾಡುಗಾರರು

**ದೃಶ್ಯ–೧**

(ಈಗ ಮಧ್ಯಾಹ್ನ ಹನ್ನೊಂದು ಘಂಟೆ. ನೀವು ನೋಡುತ್ತಿರುವ ಜಾಗ ಸಮಾಜ ಕಲ್ಯಾಣ ಇಲಾಖೆಯ ಕಛೇರಿ. ಗೋಡೆಯ ಒಂದು ಕಡೆ 'ನಗರ ಹರಿಜನೋದ್ಧಾರ ಮಂಡಲಿ' ಎಂದು ದಪ್ಪ ಅಕ್ಷರಗಳಲ್ಲಿ ಬರೆದಿದ್ದಾರೆ. ಅದರ ಪಕ್ಕದಲ್ಲೇ ಮಹಾತ್ಮ ಗಾಂಧಿ, ಇಂದಿರಾ ಗಾಂಧಿ, ಇವರ ಫೋಟೋಗಳಿವೆ. ಗಾಂಧೀಜಿಯ ಭಾವಚಿತ್ರದ ಕೆಳಗೆ ಒಂದು ಮೇಜು. ಅದರ ಮುಂದೆ ಒಂದು ಕುರ್ಚಿ ಇದೆ. ಮೇಜಿನ ಮೇಲೆ ಹರಿಜನೋದ್ಧಾರ ಮಂಡಲಿಯ ಕಛೇರಿಗೆ ಕಟ್ಟಿಸಬೇಕಾಗಿರುವ ಭವ್ಯವಾದ ಬಿಲ್ಡಿಂಗಿನ ಮಾದರಿ ಚಿತ್ರವೂ ಅದೇ ಮೇಜಿನ, ಮೇಲಿದೆ. ಸಂದರ್ಶನಕ್ಕೆ ಬಂದವರು ಕುಳಿತುಕೊಳ್ಳಲು ಮೇಜಿನ ಒಂದು ಕಡೆ ಕುರ್ಚಿಯನ್ನು ಹಾಕಲಾಗಿದೆ. ಗತ್ತಿನಿಂದ ಕುಳಿತಿರುವ ಅಧಿಕಾರಿ; ಸೂಟುಧಾರಿ. ತಲೆ ಎತ್ತಿದರೆ ಅವನು ಹಣೆಯಲ್ಲಿ ಧರಿಸಿರುವ ಒಂದು ಕೆಂಪು ನಾಮ ಕಾಣಿಸುತ್ತದೆ. ಶುಭ್ರವಾಗಿ ರಸಿಕನಂತೆ ಕಾಣುವ ಇವನು ಚಟುವಟಿಕೆಯಿಂದ ಕೂಡಿದವನು. ಒಂದು ಕೈ ಫೋನಿನ ಮೇಲೆ, ಒಂದು ಕೈ ಟೇಬಲ್ಲಿನ ಮೇಲೆ. ಹರಿಜನ ನಿರುದ್ಯೋಗಿ ಪದವೀಧರರಿಗೆ ತಾತ್ಕಾಲಿಕವಾಗಿ ಉದ್ಯೋಗ ವ್ಯವಸ್ಥೆ ಮಾಡುವ ಕಾರಣದಿಂದ ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದೆ. ಬಂದಿರುವ ಐದು ಜನರನ್ನು ಒಬ್ಬೊಬ್ಬರನ್ನಾಗಿ ಸಂದರ್ಶನ ಮಾಡುತ್ತಾನೆ).

ಹಯವದನರಾವ್ : (ಫೋನ್ ಮಾಡುತ್ತಾನೆ) ಹಲೋ, ನಮಸ್ಕಾರ ಸಾರು,
ನಾನ್ ಸಾರ್ ಹಯವದನರಾವ್ ಐ.ಎ.ಎಸ್ ಆಫೀಸರ್. ಅದೇ ಸಾರ್ ಇವತ್ತು ಇಂಟ್ರುವ್ಯೂ ಇತ್ತು ಅಂತಾ ಹೇಳಿದ್ನಲ್ಲಾ ಸಾರ್. ನೀವು ಯಾರನ್ನೊ ಕಳಸ್ತೀನಿ ಅಂತಾ ಹೇಳಿದ್ರೀ. ಓ ಹೌದಾ ಸಾರ್, ಸರಿ ಸಾರ್. (ಅಭ್ಯರ್ಥಿಗಳ ಕಡೆ ತಿರುಗಿ) ಯಾವೊನೋ ಅವ್ನು ಮುಟ್ಟಾಳ ಗಲಾಟೆ ಮಾಡ್ತಾ ಇರೋದು (ಮತ್ತೆ ಫೋನಿನಲ್ಲಿ) ಛೇ! ಛೇ! ನಿಮ್ಗಲ್ಲ ಸಾರಿ ಕ್ಷಮಿಸಬೇಕು ಸಾರ್. ಅದೇ ಇವತ್ತು ಇಂಟ್ರವ್ಯೂ ಇದೆ ಅಂತಾ ಹೇಳಿದ್ನಲ್ಲ ಸಾರ್ ಈ ಎಸ್.ಸಿ.ಗಳಿಗೆ, ಸಾರ್, ಸಾರ್ ಎಸ್.ಸಿ.ಗಳಿಗೆ. ಕುಡುಕ್‌ನನ್ ಮಕ್ಳು ಬಂದ್ಬಿಟ್ಟಿವೆ, ನಮ್ ತಲೆ ತಿನ್‌ತವೆ ಸಾರ್. ಏನೋ ರಿಜರ್‌ವೇಷನ್ ಅಂತಾ ಡಿಗ್ರಿ ಮಾಡ್ಬಿಟ್ಟಿವೆ, ತಲೇಲಿ ಏನೂ ಇರಲ್ಲಾ. ನಮ್ಮ ತಲೆ ತಿನ್‌ತವೆ. ಸಾರು ಅದೇ ನನ್ ಪ್ರಮೋಷನ್ ಬಗ್ಗೆ ಏನಾಯ್ತು ಅಂತಾ. ಹ್ಞೆ..... ಜ್ಞಾಪಕ ಇರಬೋದು ಸಾರ್. ನಾನು ನಿಮ್ಮವನೆ ಸಾರ್. ಸರಿ ಸಾರ್ ಅದೆಲ್ಲ ಮಾಡ್ತೀನಿ ಸಾರ್. ಓಕೆ ಸಾರ್, ನಮಸ್ಕಾರ ಸಾರ್ (ಅಭ್ಯರ್ಥಿಗಳ ಬಳಿ ಬಂದು) ಯಾವೋನೊ ಅವ್ನು ಗಲಾಟೆ ಮಾಡ್ತಾ ಇರೋದು. ಸರೀರಿ ಹಿಂದಕ್ಕೆ. ಅನ್‌ಕಲ್ಚರ್ಡ್ ಜನಗಳು, ಕೊಳಕು ಜನಗಳು, ಛೀ. (ಏಕೈಕ ಮಹಿಳಾ ಅಭ್ಯರ್ಥಿಯ ಕಡೆ ನೋಡಿ) ಎಲ್ಲಮ್ಮಾ ನೀನ್ ಮುಂದೆ ಬಾರಮ್ಮ (ಪುನಃ ಅಭ್ಯರ್ಥಿಗಳನ್ನು ಬಯ್ಯುತ್ತಾ) ಸುಮ್ನೆ ನಿಂತ್ಕೋಳಕ್ ಆಗಲ್ವ ನಿಮ್ಗೆ ಗಲಾಟೆ ಮಾಡ್ದೆ ನಿಂತ್ಕೊಳಿ.

ನಾನ್ ಬೆಲ್ ಮಾಡ್ದಾಗ ಒಳಗ್ ಬರಬೇಕು. (ಅಧಿಕಾರಿ ತನ್ನ ಜಾಗಕ್ಕೆ ಬರುವಾಗ ಅಭ್ಯರ್ಥಿಗಳನ್ನು ಶಪಿಸುತ್ತಾ ಬರುತ್ತಾನೆ) ದರಿದ್ರ ಮುಂಡೇವು ಆಫೀಸ್‌ಗಳಿಗೆ ಬಂದ್ ಬಿಡ್ತಾವೆ, ಆಫೀಸ್‌ನಲ್ಲಿ ಹೆಂಗ್ ನಡ್ಕೋಬೇಕು ಅನ್ನೋ ಕಾಮನ್‌ಸೆನ್ಸ್ ಇಲ್ಲಾ. (ಪ್ರೇಕ್ಷಕರನ್ನು ಉದ್ದೇಶಿಸಿ) ಕರೀ ನಾಯೀನ ಬಿಳೀ ನಾಯ್ ಮಾಡೋಕಾಗುತ್ತೇನ್ರೀ. ಐದ್ ಬೆರಳೂ ಒಂದೇ ಸಮಾ ಇರೋಕಾಗುತ್ತೇನ್ರೀ? ಈ ಹಾಳ್ ಸರ್ಕಾರ ನಮ್ ಹೆಣ ತೆಗೆಯುತ್ತೆ. ನೋಡಿ ಈ ಹುಡುಗ್ರು, ತಂಗಳ್ ತಿಂದ್ ಬಂದ್‌ಬಿಟ್ಟಿವೆ. ಮ್ಯಾನರ್ಸ್ ಗೊತ್ತಿಲ್ಲ. ಎಷ್ಟ್ ಡಿಗ್ರೀ ಮಾಡಿದ್ರೇನು? ಅಯೋಗ್ಯರು. (ಕುರ್ಚಿಯ ಮೇಲೆ ಬಂದು ಕೂರುತ್ತಾನೆ. ಬೆಲ್ ಒತ್ತುತ್ತಾನೆ.)

(ಅಧಿಕಾರಿ ಬೆಲ್ ಒತ್ತಿದ ತಕ್ಷಣ ಸಂದರ್ಶನಕ್ಕೆ ರಂಗದ ಮೇಲೆ ಬರುವವಳು ಮಹಿಳಾ ಅಭ್ಯರ್ಥಿ. ಈ ದಲಿತ ಹುಡುಗಿಗೆ ಇಪ್ಪತ್ತೈದು ವರ್ಷ ವಯಸ್ಸಾಗಿರಬಹುದು. ಡಿಗ್ರಿ ಪಡೆಯಲು ಈಕೆ ವಿವಿಧ ತರಗತಿಗಳಲ್ಲಿ ಒಂದು ವರ್ಷ, ಎರಡು ವರ್ಷ, ವಿಶ್ರಾಂತಿ ಪಡಿದಿದ್ದಾಳೆ. ಕಪ್ಪಗೆ ಇರುವ ಇವಳು ಒಳ್ಳೆಯ ಬಟ್ಟೆಯನ್ನೇನು ಹಾಕಿಲ್ಲ. ಅತ್ಯಂತ ವಿನಯದಿಂದ ನಗುತ್ತಾ ಮೇಜಿನ ಮುಂದೆ ಬಂದು ನಿಲ್ಲುತ್ತಾಳೆ. ಮನೆ ಕೆಲಸದವಳಂತೆ ಈ ಕಛೇರಿ ಪ್ರವೇಶಿಸುವ ಇವಳು ಇಲ್ಲಿ ಎಲ್ಲದನ್ನೂ ಸರಿಯಾಗಿ ಒರಸಿದೆಯೋ, ಗುಡಿಸಿದೆಯೋ ಎಂದು ಪರೀಕ್ಷಿಸುವ ರೀತಿಯಲ್ಲಿ ಒಳಗೆಲ್ಲ ಕಣ್ಣಾಡಿಸುತ್ತಾಳೆ. ಅಧಿಕಾರಿಗೆ ಭಕ್ತಿಯಿಂದ ನಮಸ್ಕರಿಸುತ್ತಾಳೆ).

ಪುಟ್ಟಲಕ್ಕಮ್ಮ : ನಮಸ್ಕಾರ ಸಾರ್

ಹಯವದನರಾವ್ : ಕುತ್ಕೋಳ್ರೀ, ನಿಮ್ಮ ಹೆಸ್ರು?

ಪುಟ್ಟಲಕ್ಕಮ್ಮ : ಆರ್. ಪುಟ್ಟಲಕ್ಕಮ್ಮ ಸಾರ್

ಹಯವದನರಾವ್ : ಆರ್ ಅಂದರೆ ಏನ್ರೀ?

ಪುಟ್ಟಲಕ್ಕಮ್ಮ : ರಾವಳಯ್ಯ ಸಾರ್.

ಹಯವದನರಾವ್ : ನಿಮ್ಮೂರು ಲಂಕೆ ಏನ್ರೀ? (ನಗುತ್ತಾನೆ)

ಪುಟ್ಟಲಕ್ಕಮ್ಮ : (ನಾಚಿಕೆಯಿಂದ) ಇಲ್ಲ ಸಾರ್, ಬೆಂಕಿಪುರ.

ಹಯವದನರಾವ್ : ಊರಿಗ್ ಲೈಟ್ ಬಂದಿದೆಯೋ? (ವ್ಯಂಗ್ಯವಾಗಿ)

ಪುಟ್ಟಲಕ್ಕಮ್ಮ : ಇನ್ನೂ ಇಲ್ಲ ಸಾರ್.

ಹಯವದನರಾವ್ : ನೋಡ್ರಿ ನಿಮ್ಮೂರಿಗೆ ಲೈಟ್ ಬಂದಿಲ್ಲ. ಸ್ವಾತಂತ್ರ್ಯ ಬಂದು ಮೂವತ್ತೊಂದು ವರ್ಷ ಆದ್ರೂ ಲೈಟ್ ಬಂದಿಲ್ಲ. ಇದೇ ತೋರ್ಸುತ್ತೆ ಹರಿಜನ ಗಿರಿಜನರು ಭಾರತ ದೇಶದಲ್ಲಿ ಕತ್ತಲೆಯಲ್ಲಿ ಭೂತ ಪ್ರೇತಗಳಂತೆ ವಾಸ ಮಾಡುತ್ತಾ ಇದ್ದಾರೆ ಅನ್ನೋದನ್ನ. ಅವ್ರಿಗೆ ಹಿಡಿದಿರುವಂಥ ಘೋರಾಂಧಕಾರದ ಭೂತವನ್ನು ಬಿಡುಸ್‌ಬೇಕು. ಅವರನ್ನಾ ಮನುಷ್ಯರನ್ನಾಗಿ ಮಾಡ್ಬೇಕು ಅಂತಾ ಈ ಇಂಟ್ರುವ್ಯೂ ಕರ್ದಿದ್ದೀವಿ.

ಪುಟ್ಟಲಕ್ಕಮ್ಮ : (ಭಯದಿಂದ ನೋಡುತ್ತಾಳೆ) ಏನ್ ಸಾರ್ ನನ್ಗೆ ಭೂತ ಹಿಡ್ದಿದೆಯಾ?

ಹಯವದನರಾವ್ : (ಅವಳನ್ನು ಸಂಪೂರ್ಣವಾಗಿ ಅಡಿಯಿಂದ ಮುಡಿಯ ತನಕ ಗಮನಿಸಿ) ನೀವ್ ಸರಿಯಾಗಿದ್ದೀರಿ, ವಜನ್ ಆಗಿದ್ದೀರಿ.

ಪುಟ್ಟಲಕ್ಕಮ್ಮ : ಹಾಗಾದ್ರೆ ಕೆಲ್ಸ ಕೊಡ್ತೀರ ಸಾರ್?

ಹಯವದನರಾವ್ : ಏನ್ರೀ......ನಿಮ್ ಜಾತಿ ಹೆಂಗಸು ಮೇಲ್ಜಾತಿ ಗಂಡಸರಿಗಿಂತ ಬಲವಾಗಿರ್ತ್ತಾರೆ. ಅದಕ್ಕೆ ನೀವೇ ಸಾಕ್ಷಿ. ಬಹಳ ಘಾಟಿ ಅಂತಾನೂ ಕೇಳಿದ್ದೀನಿ ನಿಜಾನಾ?

ಪುಟ್ಟಲಕ್ಕಮ್ಮ : ಏನೋ ಗೊತ್ತಿಲ್ಲ ಸಾರ್, ಬೇರೆ ಜಾತಿ ಗಂಡಸರ ವಿಚಾರ ನನಗೆ ಯಾಕ್ ಸಾರ್?

ಹಯವದನರಾವ್ : ಅಲ್ರೀ ನಿಮ್ ಜಾತೀಲಿ ಹೆಂಡ್ತಿರೂ ಗಂಡಂದೀರ್ನ ಕೋಳಿಪಿಳ್ಳೆ ಚಚ್‌ದಂಗೆ ಚೆಚ್ತ್ತಾರಂತೆ ! ಇದು ನಿಜ್ವ ಅಂದೆ?

ಪುಟ್ಟಲಕ್ಕಮ್ಮ : ಅದೇನೋ ಗೊತ್ತಿಲ್ಲ ಸಾರ್.

ಹಯವದನರಾವ್ : ಏನ್ರೀ ನೀವು ತಿಳಿದಿರೋದು? ಇದೆಲ್ಲಾ ಜನರಲ್ ನಾಲೇಡ್ಜ್. ಇದೆಲ್ಲ ಗೊತ್ತಿಲ್ದೆ ಇದ್ರೆ ನೀವು ದಡ್ರು ಅಂತಾ ಆಯ್ತು.

ಪುಟ್ಟಲಕ್ಕಮ್ಮ : ಹಂಗಾ ಸಾರ್?

ಹಯವದನರಾವ್ : ನೋಡ್ರೀ ಮುಖ್ಯ ವಿಷಯಕ್ಕೆ ಬರ್ತೀನಿ. ಸರ್ಕಾರದ ಸಮಾಜ ಕಲ್ಯಾಣದ ಅಂಗವಾಗಿ ಈ ಹರಿಜನೋದ್ಧಾರ ಮಂಡಲಿಯನ್ನು ಆರ್ಗನೈಸ್ ಮಾಡ್ತಿದ್ದೀವಿ. ನಮ್ ಸಂಘದ ಉದ್ದೇಶಾನ ನಿಮ್ಗೆ ಬಿಡ್ಸಿ ಹೇಳ್ದೆ ಇದ್ರೆ ಸರ್ಕಾರಕ್ಕೆ ಮತ್ತು ನಿಮ್ಗೆ ಇಬ್ಬರಿಗೂ ದ್ರೋಹ ಮಾಡ್ದಂಗ್ ಆಗ್ತದೆ! ಅದೇನೂ ಅಂದ್ರೆ, ಇವತ್ತು ಡಿಗ್ರಿ ಪಡೆದು ಕಾಲೇಜುಗಳಿಂದ ಹೊರಗೆ ಬರ್‍ತಾ ಇರೋ ನಿಮ್ಮವರ್ಗದ ವಿದ್ಯಾರ್ಥಿಗಳು ಬೇರೆಯವರಿಗಿಂತ ಎಲ್ಲಾ ವಿಚಾರದಲ್ಲೂ ಬಹಳ ಹಿಂದು ಮತ್ತು ಮಂದ ಎಂಬ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಅಧಿಕಾರದ ಯಂತ್ರದಲ್ಲಿ ಇದರಿಂದ ಆಗಬಹುದಾದಂಥ ಅನಾಹುತನ ತಪ್ಪುಸೋಕೋಸ್ಕರ್ ಈ ಸ್ಕೀಮ್‌ನ ವಿಧಿಯಿಲ್ದೆ ತೆರೀಬೇಕಾಯ್ತು. ಇಲ್ಲಿ ನಿಮ್ಗೆ ಸ್ಟೈಫಂಡ್ ಕೊಟ್ಟು ಟ್ರೈನಿಂಗ್ ಕೊಡ್ತೀವಿ. ಅದರಲ್ಲಿ ಏನಾದರೂ ಪಾಸಾದರೆ ಕೆಲಸ ಗ್ಯಾರಂಟಿ.

ಪುಟ್ಟಲಕ್ಕಮ್ಮ : ತುಂಬಾ ಥ್ಯಾಂಕ್ಸ್ ಸಾರ್.

ಹಯವದನರಾವ್ : ನಿಮ್ಮ ವಿದ್ಯಾಭ್ಯಾಸದ ಮಟ್ಟ ಏನು?

ಪುಟ್ಟಲಕ್ಕಮ್ಮ : ಡಿಗ್ರಿ ಪಾಸ್ ಮಾಡಿದ್ದೀನಿ ಸಾರ್.

ಹಯವದನರಾವ್ : ಪಿ.ಯು.ಸಿ ಆಗಿದೆಯೋ?

ಪುಟ್ಟಲಕ್ಕಮ್ಮ : ಹ್ಞಾ...... ಏನ್ ಸಾರ್?

ಹಯವದನರಾವ್ : ಎಸ್.ಎಸ್.ಎಲ್.ಸಿ ಪಾಸ್ ಮಾಡದ್ದೀರ ಅಂದೆ?

ಪುಟ್ಟಲಕ್ಕಮ್ಮ : ನಾನು ಡಿಗ್ರಿ ಪಾಸ್ ಮಾಡಿದ್ದೀನಿ ಸಾರ್.

ಹಯವದನರಾವ್ : ರೀ, ಒಂದು ವಿಚಾರ.......

ಪುಟ್ಟಲಕ್ಕಮ್ಮ : ಅದೇನ್ ಹೇಳಿ ಸಾರ್.

ಹಯವದನರಾವ್ : ನಿಮ್ಮನ್ನ ಪುಟ್ಟಲಕ್ಕಿ ಅಂತೀನಿ.

ಪುಟ್ಟಲಕ್ಕಮ್ಮ : (ಅಸಹಾಯಕಳಂತೆ ಸುಮ್ಮನಿರುತ್ತಾಳೆ. ಮೌನ)

ಹಯವದನರಾವ್ : ನಿಮಗೆ ಬೇಜಾರಾಗುತ್ತಾ?

ಪುಟ್ಟಲಕ್ಕಮ್ಮ : ಕೆಲ್ಸ ಕೊಡದಿದ್ರೆ ಬೇಜಾರಾಗುತ್ತೆ ಸಾರ್.

ಹಯವದನರಾವ್ : ಮದ್ವೆ ಆಗಿದೆಯೋ?

ಪುಟ್ಟಲಕ್ಕಮ್ಮ : ಇಲ್ಲ ಸಾರ್.

ಹಯವದನರಾವ್ : ಮಕ್ಕಳೆಷ್ಟು?

ಪುಟ್ಟಲಕ್ಕಮ್ಮ : ಹ್ಞಾ...... ಏನಂದ್ರಿ ಸಾರ್?

ಹಯವದನರಾವ್ : ನಿಮ್ಮ ಮನೆಯವರ ಜೊತೆಯಿದ್ದೀರೋ ಅಥವಾ ಒಂಟಿಯಾಗಿದ್ದೀರೋ?

ಪುಟ್ಟಲಕ್ಕಮ್ಮ : ಮನೆಯವರ ಜೊತೇಲೆ ಇದ್ದೀನಿ ಸಾರ್.

ಹಯವದನರಾವ್ : ನೀವು ಯಾವ ಸ್ಕೂಲ್‌ನಲ್ಲಿ ಓದಿದ್ದು.

ಪುಟ್ಟಲಕ್ಕಮ್ಮ : ಸಾಯಿಬಾಬಾ ಬಾಲಕ ಬಾಲಕಿಯರ ಪ್ರಾಥಮಿಕ ಪಾಠಶಾಲೆ ಸಾರ್.

ಹಯವದನರಾವ್ : ಹೈಸ್ಕೂಲ್ ಎಲ್ಲಿ ಓದಿದ್ದು?

ಪುಟ್ಟಲಕ್ಕಮ್ಮ : ಮಾತೆ ಮಹಾದೇವಿ ಹೈಸ್ಕೂಲ್ ಸಾರ್.

ಹಯವದನರಾವ್ : ಕಾಲೇಜು ಯಾವುದ್ರಿ?

ಪುಟ್ಟಲಕ್ಕಮ್ಮ : ಗುರು ಬಾಲಲೀಲ ಕಾಲೇಜು ಸಾರ್.

ಹಯವದನರಾವ್ : ಈ ಸ್ಕೂಲ್ ಕಾಲೇಜುಗಳೆಲ್ಲ ಬೆಂಗಳೂರ್‌ನಲ್ಲೇ ಅಲ್ವೇನ್ರಿ ಇರೋದ್?

ಪುಟ್ಟಲಕ್ಕಮ್ಮ : (ಆನಂದದಿಂದ) ಹೌದು ಸಾರ್.

ಹಯವದನರಾವ್ : ಬಹಳ ಫೇಮಸ್ ಮತ್ತು ಸ್ಟ್ಯಾಂಡರ್ಡ್ ಅಲ್ವೇನ್ರಿ?

ಪುಟ್ಟಲಕ್ಕಮ್ಮ : (ಇನ್ನೂ ಆನಂದದಿಂದ) ಹೌದು ಸಾರ್!!

ಹಯವದನರಾವ್ : ರೀ ನೀವು ಸ್ಕೂಲ್‌ಗೋಗ್ತಾ ಇದ್ದಾಗ, ಸ್ಕೂಲ್‌ಗೋಗೋದು ಇಷ್ಟ ಇತ್ತಾ?

ಪುಟ್ಟಲಕ್ಕಮ್ಮ : ಪ್ರೈಮರಿ ಸ್ಕೂಲ್‌ನಲ್ಲಿ ಒಂಥರಾ ಇಷ್ಟ ಇತ್ತು ಸಾರ್.

ಹಯವದನರಾವ್ : ಅದೆಂಥಾದ್ರೀ ಒಂಥರಾ ಇಷ್ಟ? ವಾಟ್ ಡು ಯು ಮೀನ್?

ಪುಟ್ಟಲಕ್ಕಮ್ಮ : ಉಪ್ಪಿಟ್ಟು ಕೊಡ್ತಿದ್ರು ಸಾರ್.

ಹಯವದನರಾವ್ : ಹೈಸ್ಕೂಲ್‌ನಲ್ಲಿ? ಕಾಲೇಜ್‌ನಲ್ಲಿ?

ಪುಟ್ಟಲಕ್ಕಮ್ಮ : ಆವಾಗ್ಲೂ ಇಷ್ಟ ಇತ್ತು ಸಾರ್. ಗಂಡ್ ಹುಡುಗ್ರು ಬರ್ತಿದ್ರು, ಮೇಷ್ಟ್ರು ಬರ್ತಿದ್ರು, ಜೊತೆಗೆ ಸರ್ಕಾರದವರು ಸ್ಕಾಲರ್‌ಷಿಪ್ ಕೊಡ್ತಿದ್ರು ಸಾರ್.

ಹಯವದನರಾವ್ : ಕಾಲೇಜಿಗೆ ಹೋದಮೇಲೆ ಏನ್ ಕಲಿತ್ರೀ?

ಪುಟ್ಟಲಕ್ಕಮ್ಮ : ಬಟ್ಟೆ ಚನ್ನಾಗ್ ಹಾಕಬೇಕು, ಹಣವಂತರಾಗಬೇಕು, ಅನ್ನೋದನ್ನ ಕಲ್ತೆ ಸಾರ್.

ಹಯವದನರಾವ್ : ಬಟ್ಟೆ ಚನ್ನಾಗ್ ಹಾಕುದ್ರೋ! ಹಣವಂತರಾದ್ರೋ!

ಪುಟ್ಟಲಕ್ಕಮ್ಮ : ಇಲ್ಲ ಸಾರ್.

ಹಯವದನರಾವ್ : ಕಾಲೇಜ್‌ಗೆ ಹೋಗಿ ಏನ್ ಕಲ್ಕೊಂಡ್ರಿ?

ಪುಟ್ಟಲಕ್ಕಮ್ಮ : ಸೋಬಾನ ಸಾರ್.

ಹಯವದನರಾವ್ : ಜನಪದ ಸಾಹಿತ್ಯದಲ್ಲಿ ಇಂಟರೆಸ್ಟ್ ಇದೆ ಅಂತಾ ಆಯ್ತು. ಈ ಜನಪದ ಸಾಹಿತ್ಯವನ್ನು ಕಾಪಾಡಿ ದಷ್ಟಪುಷ್ಟವಾಗಿ ಬೆಳೆಸಬೇಕು ಅಂತಾ ಸರ್ಕಾರ ಕೆಲವು ಯೋಜನೆಗಳನ್ನು ಈಗಾಗಲೇ ಸಿದ್ಧಪಡಿಸಿದೆ. ನಿಮ್ಮ ನೆನಪಿನ ಆಳದಿಂದ ಒಂದು ಸೋಬಾನ ಹೇಳ್ತೀರಾ?

ಪುಟ್ಟಲಕ್ಕಮ್ಮ : (ಸಂಕೋಚದಿಂದ) ನನ್ಗೆ ಯಾವ್ದೂ ಪೂರ್ತಿ ಬರಲ್ಲ ಸಾರ್. ಎಲ್ಲಾ ಮರ್‍ತೋಗದೆ.

ಹಯವದನರಾವ್ : ಬಂದಷ್ಟು ಹೇಳಿ, ಬರೋದೆಲ್ಲ ಹೇಳುದ್ರೆ ಇದು ಕೇಳೋ ಸ್ಥಳಾನೂ ಅಲ್ಲ.

ಪುಟ್ಟಲಕ್ಕಮ್ಮ : (ರಾಗವನ್ನು ಸುರು ಮಾಡಿದವಳು ತಲೆಯನ್ನು
ನಿಧಾನವಾಗಿ ಮೇಲಕ್ಕೆತ್ತಿ ಕೆಳಗಿಳಿಸುತ್ತಾ ಹಾಡುತ್ತಾಳೆ)
ಬೋರೆ ಬಾರೆ ಮದುವೆಗೆ
ಬೋರಕ್ಕ ಬಾರೆ ಮದುವೆಗೆ
ನಿಂಗಿ ಬಾರೆ ಮದುವೆಗೆ
ನಿಂಗಕ್ಕ ಬಾರೆ ಮದುವೆಗೆ
ಮುದ್ದಿ ಬಾರೆ ಮದುವೆಗೆ
(ರಾಗ ಬದಲಿಸಿ)
ಬಾರೆ ನನ್ನಾ ನಾದುನಿಯೇ
ನಾದುನಿ ಗಂಡ ನನ ತಮ್ಮ .............

ಹಯವದನರಾವ್ : ನೀವು ಈ ರೀತಿ ಹಾಡ್ತ ಇದ್ರೆ ಒಳ್ಳೆ ಕೆಲ್ಸ ಸಿಗುತ್ತೆ.
ನೀವ್ ಹೀಗೆ ಹಾಡೋದೇ ಒಂದು ಒಳ್ಳೆ ಕೆಲ್ಸ. ಈಗ ನೀವು ಟ್ರೈನಿಂಗ್ ಮುಗಿಸಬೇಕು. ಅಲ್ಲಿ ಅಡ್ಗೆ ಮಾಡೋದು, ಬಟ್ಟೆ ಹೊಲಿಯೋದು, ಮಕ್ಕಳ ಪೋಷಣೆ ಬಗ್ಗೆ ನಿಮಗೆ ವೈಜ್ಞಾನಿಕವಾದ ತಿಳುವಳಿಕೆ ಕೊಡ್ತಾರೆ.

ಪುಟ್ಟಲಕ್ಕಮ್ಮ : ಆದ್ರೆ ನಾನು ಈವಾಗ್ಲೆ ಕೆಲ್ಸ ಕೋಡೋವಷ್ಟು ಚೆನ್ನಾಗಿ ಅಡ್ಗೆ ಮಾಡೋದು, ಬಟ್ಟೆ ಹೊಲಿಯೋದು ಕಲ್ತಿದ್ದೀನಿ ಸಾರ್.

ಹಯವದನರಾವ್ : ಆದ್ರೂ ನೀವು ಟ್ರೈನಿಂಗ್ ಮುಗಿಸಲೇಬೇಕು. ಮಕ್ಕಳ ಪೋಷಣೆ ಬಗ್ಗೆ ನಿಮ್ಮ ಟ್ರೈನಿಂಗ್ ಇನ್ನೂ ಆಗಿಲ್ಲ. ಆಮೇಲೆ ಟ್ರೈನಿಂಗ್ ಆಗ್ವಾಗ ನಿಮ್ಗೆ ಸ್ಟೈಫಂಡ್ ಕೊಡ್ತಾರೆ. (ಅವಳ ಕಡೆ ನೋಡಿ) ಓ ನೀವೀಗ್ ನಗ್ತಾ ಇದ್ದೀರಾ. ನನಗಿದು ಮೊದಲೇ ಗೊತ್ತು. ನಮ್ಮ ಈ ಕಲ್ಯಾಣ ಯೋಜನೆಯಿಂದ ನಿಮ್ಮಂಥ ಆಸೆ ಕಳ್ಕೊಂಡಿರೋರ್‍ಗೆ ಆಸೆ ಹುಟ್ಟುತ್ತೆ. ನಿರಾಶೆಯ ಮರುಭೂಮಿ ಆಗಿರುವಂಥ ನಿಮ್ಮ ಮನಸ್ಸಿನಲ್ಲಿ ಭರವಸೆಯ ಬೀಜ ಬಿತ್ತುತ್ತೇ ಅಂಥಾ ನಮ್ಗೆ ಚೆನ್ನಾಗ್ ಗೊತ್ತು. ನೀವು ಜೀವಾನ ತೇದಿದ್ದೀರಿ. ಗಂಧ ತೇಯೋ ಹಂಗೆ ತೇದಿದ್ದೀರಿ. ನೀವು ತ್ಯಾಗ ಮಾಡೋಕೇ ಆಗ್ಲಿ ಕಳ್ಕೊಳ್ಳೋಕೇ ಆಗ್ಲಿ ಈಗ ನಿಮ್ಹತ್ರ ಏನೂ ಇಲ್ಲ. ನೀವು ಬರಿದಾಗಿದ್ದೀರಿ. ಆದ್ರೆ ನಮ್ಮ ಕಲ್ಯಾಣ ಯೋಜನೆ ನಿಮ್ಮ ಮುಖದಲ್ಲಿ ನಗು ತರುತ್ತೆ ನೋಡಿ. ನೀವೀಗ ನಗ್ತಾ ಇದ್ದೀರಿ. ನನಗಿದು ಗೊತ್ತು.

ಪುಟ್ಟಲಕ್ಕಮ್ಮ : ನಿಜ ಸಾರ್.

ಹಯವದನರಾವ್ : ನಾಳೆ ನೀವು ಈ ಪತ್ರದ ಸಮೇತ ಇಲ್ಲಿರೋ ಅಡ್ರೆಸ್‌ಗೆ ಹೋಗ್ಬೇಕು. ಅಲ್ಲಿ ನಿಮ್ಮನ್ನು ರಿಕ್ರೂಟ್ ಮಾಡ್ಕೋತ್ತಾರೆ.

ಪುಟ್ಟಲಕ್ಕಮ್ಮ : ಥ್ಯಾಂಕ್ಯೂ ಸರ್, ಉಪಕಾರ ಆಯ್ತು ಸಾರ್.

ಹಯವದನರಾವ್ : ಥ್ಯಾಂಕ್ಯೂ, ಉಪಕಾರ ಮಾಡೋಕೇನೆ ನಾವು ಇರೋದು! (ಪುನಃ ಕರೆದು) ರೀ, ರೀ ಹೋ....... ಹೋ ಹೊಂ. (ನಗುತ್ತಾನೆ) ಮತ್ತೆ ಯಾವಾಗ ಬರ್ತೀರಿ?

ಪುಟ್ಟಲಕ್ಕಮ್ಮ : ಯಾಕೆ ಸಾರ್?

ಹಯವದನರಾವ್ : ಹೊ............. ಓ .............. ಹೊ......... (ನಗು)

ಪುಟ್ಟಲಕ್ಕಮ್ಮ : ನಾನು ಬರ್ತೀನಿ ಸಾರ್.

ಹಯವದನರಾವ್ : ನೆನಪಿರಲಿ.......... ನನ್ ಮರೀಬೇಡಿ.

(ಬೇಸರಗೊಂಡವನಂತೆ ಕಾಣುತ್ತಾನೆ. ಕುರ್ಚಿಯಿಂದ ಎದ್ದು ಬಂದು ಬಾಗಿಲವರೆವಿಗೂ ಅವಳನ್ನು ಬೀಳ್ಕೊಡುತ್ತಾನೆ. ಅವಳು ಹೋಗುವುದನ್ನೇ ನೋಡುತ್ತಾ ಬೇಸರಗೊಂಡವನಂತೆ ಮತ್ತೆ ಬಂದು ಕೂರುತ್ತಾನೆ. ಬೆಲ್ಲು ಒತ್ತುತ್ತಾನೆ. ಎರಡನೇ ಅಭ್ಯರ್ಥಿಯ ಆಗಮನವಾಗುತ್ತದೆ. ಅಧಿಕಾರಿ ಎರಡನೇ ಅಭ್ಯರ್ಥಿಯನ್ನು ಬರುವಂತೆ ಕೈಸನ್ನೆ ಮಾಡುತ್ತಾನೆ. ಕೃತಕ ನಗೆ ಅಭ್ಯರ್ಥಿಯ ಮುಖದಲ್ಲಿ ಎದ್ದು ಕಾಣುತ್ತದೆ. ಅವನು ಗುಡಿಗೆ ಹೋಗುವ ಭಕ್ತನಂತೆ ಹೆಜ್ಜೆ ಹಾಕುತ್ತಾ ಬರುತ್ತಾನೆ. ಬರುವಾಗ ಅವನ ಹೆಗಲ ಮೇಲೆ ಒಂದು ಬ್ಯಾಗು. ಅದರ ತುಂಬಾ ತರಕಾರಿ. ಕೈಯಲ್ಲಿ ಕೂಡ ತರಕಾರಿ ಹಿಡಿದಿದ್ದಾನೆ. ತರಕಾರಿಯನ್ನು ಕಂಡ ಅಧಿಕಾರಿಗೆ ಒಂದು ಬಗೆಯ ಆನಂದ. ನೋಡುತ್ತಿದ್ದ ಹಾಗೆ ಅಭ್ಯರ್ಥಿ ತರಕಾರಿಯ ಬ್ಯಾಗನ್ನು ಮೇಜಿನ ಮೇಲಿಡುತ್ತಾನೆ. ಎರಡೂ ಕೈ ಜೋಡಿಸಿ ನಮಸ್ಕರಿಸುತ್ತಾನೆ.)

ಹಯವದನರಾವ್ : ಎಲ್ರೀ ಇಡೋದು? ಎಲ್ರಿಗೂ ಕಾಣೋ ಹಂಗೆ? ಎಜುಕೇಟೆಡ್ ಆಗಿದ್ದೀರಾ ಅಷ್ಟು ಗೊತ್ತಾಗಲ್ಲ. ಮನೆಗೆ ತಂದು ಕೊಡೋಕೆ ಏನಾಗಿತ್ತು ರೀ.

ಶೇಷಾದ್ರಿ : (ಬ್ಯಾಗನ್ನು ಹಿಂದುಗಡೆ ಇಡುತ್ತಾನೆ) ಮೇಜಿನ ಮುಂದುಗಡೆ ಬಂದು ಭಕ್ತಿಯಿಂದ ನಮಸ್ಕಾರ ಸಾ.

ಹಯವದನರಾವ್ : ಕುತ್ಕೊಳ್ರೀ.

ಶೇಷಾದ್ರಿ : ಪರವಾಗಿಲ್ಲ ಹಂಗೇನೇ ಇಂಟ್ರ್ಯೂ ಮಾಡಿ ಸಾ.

(ನಮ್ರತೆ ಮತ್ತು ಅತಿ ವಿಧೇಯತೆಯನ್ನು ತೋರಿಸುವನು)

ಹಯವದನರಾವ್ : ರೀ, ನೀವು ಕೂತ್ಕೋಬೇಕು ಅನ್ನೋದು ಗೌರ್ನಮೆಂಟ್ ರೂಲ್ಸ್, ಕುತ್ಕೋಳ್ರಿ.

ಶೇಷಾದ್ರಿ : ಅದ್ ಹೆಂಗ್ ಸಾ....... ಇಂಥಾ ದೊಡ್ಡೋರ್ ಎದುರ್ ಬದುರ್ಗೆ ಕುಂತು ಮಾತಾಡೋದು.

ಹಯವದನರಾವ್ : ರೀ, ನೀವು ನಿಂತಿರೋದು, ನಾನು ಕುಂತಿರೋದು ಇಬ್ಬರಿಗೂ ಇಷ್ಟ ಇರಬಹುದು. ಆದ್ರೆ ಗೌರ್ನಮೆಂಟ್ ರೂಲ್ಸ್‌ಗೆ ಮೋಸ ಮಾಡಕ್ ಆಗಲ್ಲ. ಕುತ್ಕೊಳ್ತೀರೋ ಇಲ್ಲಾ (ಕೋಪಗೊಂಡವನಂತೆ ಬಾಗಿಲ ಕಡೆ ಬೆಟ್ಟು ಮಾಡುತ್ತಾನೆ. ಅಭ್ಯರ್ಥಿಗೆ ಭಯವಾಗುತ್ತದೆ. ಅವನು ತಪ್ಪು ಮಾಡಿದವನಂತೆ ಹಲ್ಲು ಗಿಂಜುತ್ತಾ, ಅಧಿಕಾರಿಯ ಕಡೆ ನೋಡುತ್ತಾ ಎದುರು ಕುರ್ಚಿಯ ಮೇಲೆ, ಮೊದಲು ತುದಿಯಲ್ಲಿ ನಂತರ ಸರಿಯಾಗಿ ಕೂರುತ್ತಾನೆ.)

ಶೇಷಾದ್ರಿ : ಸರೀಗೆ, ಕೂತ್ಕೋಂಡಿದ್ದೀರೇನ್ರೀ?

ಹಯವದನರಾವ್ : (ಲವಲವಿಕೆ ಬಂದವನಂತೆ, ಉತ್ಸಾಹದಿಂದ ಚಿಮ್ಮುತ್ತಾ ಆಫೀಸಿನ ಗೋಡೆ ಕಡೆ ಕಣ್ಣಾಡಿಸಿ ಅಧಿಕಾರಿಯ ಮೇಜು, ಕುರ್ಚಿ ಹರಿಜನೋದ್ಧಾರ ಮಂಡಲಿಯ ಬೋರ್ಡು, ಗಾಂಧಿಗಳ ಫೋಟೋ ಇವೆಲ್ಲವನ್ನು ನೋಡಿ, (ಭಾವಾವೇಶಕ್ಕೆ ಒಳಗಾದವನಂತೆ ಕಾಣುತ್ತಾನೆ. ಕಣ್ಣು ಒದ್ದೆಯಾಗುತ್ತದೆ. ಕಣ್ಣಿನ ಬಳಿಗೆ ಬೆರಳುಗಳು ಹೋಗುತ್ತವೆ) ಹೂಂ ಕಣಿಸಾ.

ಹಯವದನರಾವ್ : ಏನ್ರೀ ಭಾವಾವೇಶಕ್ಕೆ ಒಳಗಾಗಿದ್ದೀರ? ಯಾಕ್ರಿ?

ಶೇಷಾದ್ರಿ : ಈ ಟೈಮ್‌ನಲ್ಲಿ ಭಾವಾವೇಶಕ್ಕೆ ಒಳಗಾಗ್ದೆ ಇನ್ನೇನ್ ಆಗ್ಬೇಕು ಸಾ? ಹೊಲೆಯರು,

ಮಾದಿಗರು, ಚಂಡಾಳರು ಅಂತ ಅವಮಾನಕ್ಕೆ ಈಡಾಗಿ ಈಡುಗಾಯಿ ಆಗಿದ್ದಂಥಾ ನಮ್ಗೆ ಈವತ್ತಿನ ದಿನಾ ಈ ಆಫೀಸಿನಲ್ಲಿ ಕುರ್ಚಿ ಮ್ಯಾಲ್ ಕುಂಡ್ರುಸೋದು ಅಂದ್ರೆ ಸುಮ್ನೆ ಆಗೋಯ್ತು ಸಾ?

ಹಯವದನರಾವ್ : ಈ ಲೋ ಕ್ಲಾಸ್ ಜನ ಬಹಳ ಸೆಂಟಿಮೆಂಟಲ್ ಮತ್ತು ಎಮೋಷನಲ್ ರೀ.

ಶೇಷಾದ್ರಿ : ನಿಜಾ ಸಾ............ ನಿಜ.

ಹಯವದನರಾವ್ : ನಿಮಗೆ ಹರಿಜನೋದ್ಧಾರ ಮಂಡಲಿಯಲ್ಲಿ ನಂಬಿಕೆಯಿದೆ ಅಂತಾ ಅಯ್ತು. ನಿಮ್ ಜನದಲ್ಲಿ ಈಗ ಇರತಕ್ಕಂಥ ಕೆಲವು ಪೋಲಿಗಳಿಗೂ ನಿಮಗೂ ಬಹಳ ವ್ಯತ್ಯಾಸ ಇದೇರಿ! ನಮ್ಮ ಸ್ಕೀಮ್ ಬಗ್ಗೆ ನಿಮಗೆ ಏನನ್‌ಸುತ್ತೇ ರೀ?

ಶೇಷಾದ್ರಿ : ಏನನ್‌ಸುತ್ತೆ ಸಾ? ಏನೂ ಅನ್ಸಲ್ಲ ಸಾ. ಮಾತ್ರ ಕಣ್ಣೀರು ಬರುತ್ತೆ ಸಾ. ಒಂದು ಬೋರ್ಡುನ ಮ್ಯಾಲೆ ನಮ್ಮ ಜನಗಳ ಹೆಸ್ರು ಇದೆ ಅನ್ನೋದೆ ದೊಡ್ ಸಂತೋಷದ ವಿಚಾರ ಅಲ್ವಾ ಸಾ. ನಮ್ಮ ಜನರಲ್ಲಿ ಅಪರೂಪಕ್ಕೆ ಇರತಕ್ಕಂಥ ನಮ್ಮಂಥ ವಿದ್ಯಾವಂತರು ನಿಮ್ಮಂಥೋರ್ ಜೊತೆ ಕುರಿತು ಮಾತಾಡೋದೆ ದೊಡ್ ವಿಚಾರ ಅಲ್ವ ಸಾ?

ಹಯವದನರಾವ್ : ಅದ್ ಸರಿ ರೀ, ನೀವು ಮ್ಯಾಲಕ್ ಹೋಗ್ತೀರಾ ಅನ್ನೋದ್ರ ಬಗ್ಗೆ ನಿಮ್ಗೆ ನಂಬಿಕೆ ಇಲ್ವೇನ್ರೀ?

ಶೇಷಾದ್ರಿ : ಓಹೋ! ಹೊ! ಇದೆ ಸಾ. ವಿಧಾನಸೌಧದಲ್ಲಿ ಲಿಫ್ಟು ಮೇಲಕ್ಕೆ ಜನಾನ ಎತ್ಕೊಂಡೋಗೋಥರಾ ನಿಮ್ ಹರಿಜನೋದ್ಧಾರ ಮಂಡಲಿ ನಮ್ಮುನ್ನಾ ಮ್ಯಾಲುಕ್ ತಗೊಂಡ್ ಹೋಯ್ತದೆ ಸಾ, ಹೆಲಿಕ್ಯಾಪ್ಟರ್ ತರ ನಮ್ ಜನಾನ ಎಲ್ಲೆಲ್ಲೋ ಹಾರುಸ್ಕೊಂಡೋಯ್ತದೆ ಸಾ. ಇದಕ್ಕಿನ್ನ ಇನ್ನೇನಿಸಾ ಮಾತು.

ಹಯವದನರಾವ್ : ಹಾಗಾದ್ರೆ ನಿಮ್ ಅತೃಪ್ತಿಗೆ ಕೂಗಾಟಕ್ಕೆ ಇನ್‌ಮ್ಯಾಲೇ ಆಸ್ಪದಾನೇ ಇರಲ್ಲಾ ಅಂತ ಆಯ್ತು. (ತೃಪ್ತಿ ಮುಖದಲ್ಲಿ ಎದ್ದು ಕಾಣುತ್ತದೆ)

ಶೇಷಾದ್ರಿ : ಗ್ಯಾರಂಟಿ ಸಾ. ನಮ್ ಜನಾನ ಉದ್ಧಾರ ಮಾಡೋಕೇನೆ ನೀವ್ ಹುಟ್ಟಿರೋದು. ಭಗವಂತ ನಿಮಗೆ ಮನಸ್ಸು, ಶಕ್ತಿ ಎರಡೂ ಕೊಟ್ಟವನೆ. ನೀವು ನಮ್ ಭಾಗದ ದೇವರು ಸಾ.

ಹಯವದನರಾವ್ : ನಿಮ್ ಹೆಸರೇನ್ರಿ?

ಶೇಷಾದ್ರಿ : ಸೇಸಾದ್ರಿ ಸಾ.

ಹಯವದನರಾವ್ : Pronounce it properly I say (ಜೋರಾಗಿ), ಶೇಷಾದ್ರಿ ಅಲ್ವೇನ್ರೀ?

ಶೇಷಾದ್ರಿ : ಹೂ ಕಾಣಿ ಸಾ. ನಾವೂ ನಿಮ್‌ಥರಾ ಹುಚ್ಚಾರ ಮಾಡೋದುನ್ನಾ ಕಲೀತೀವಿ. ನಾವು ಹರಿಜನ ಆಗಿರೋದ್ರಿಂದ ಮಹಾ ಪ್ರಾಣ ಸ್ವಲ್ಪ ಕಷ್ಟ. ಯಾಕೇ ಅಂದ್ರೆ................

ಹಯವದನರಾವ್ : (ಕೋಪದಿಂದ) ಏನ್ರೀ ನಿಮ್ ತಕರಾರು? ಯಾಕ್ರೀ ನಮ್‌ಥರಾ ಉಚ್ಚಾರ ಮಾಡೊಕ್ ಬರೊಲ್ಲ. ಶಬ್ದ ಶಬ್ದಾನೇ ರೀ, ಅಲ್ಯಾಕ್ರೀ ಜಾತಿ ಪ್ರಶ್ನೆ ತರ್ತೀರಿ.

ಶೇಷಾದ್ರಿ : ಆದ್ರೇ ನಾವು ಆದಿಮಾನವರು ನೋಡಿ ಸಾ, ಅದಕ್ಕೆ ಗೌರ್‍ನಮೆಂಟ್‌ನೋರು ಆದಿಕರ್ನಾಟಕ ಅಂತ ಕರಿತಾರೆ. ಆದಿ ಕನ್ನಡದಲ್ಲಿ ಮಹಾಪ್ರಾಣ ಇರಲಿಲ್ಲ. ಆದ್ದರಿಂದ ಆವತ್ತಿನ ಆದಿಮಾನವರು ಇವತ್ತಿನ ಹರಿಜನರು. (ಗೋಡೆಗೆ ನೇತು ಹಾಕಿದ್ದ ಗಾಂಧೀಗಳ ಫೋಟೋಗಳಿಗೆ ಭಕ್ತಿಯಿಂದ ನಮಸ್ಕರಿಸುತ್ತಾನೆ)

ಹಯವದನರಾವ್ : ನಿಮ್ ಹೆಸ್ರು ಹೇಳಿದ್ರಲ್ವಾ?

ಶೇಷಾದ್ರಿ : ಶೇಷಾದ್ರಿ ಎಚ್. ಅಂತ ಹೇಳ್ಳಿಲ್ವ ಸಾ?

ಹಯವದನರಾವ್ : ಎಚ್. ಅಂದ್ರೆ?

ಶೇಷಾದ್ರಿ : ನನ್ ಇನ್‌ಷಿಯಲ್ ಸಾ. ನಮ್ ತಂದೆಯವರ ಹೆಸ್ರು ಸಾ.

ಹಯವದನರಾವ್ : ನಿಮ್ ತಂದೆ ಹೆಸರು ಏನ್ರೀ?

ಶೇಷಾದ್ರಿ : ಅದೆಲ್ಲಾ ಈಗ್ಯಾಕೆ ಬುಡಿ ಸಾ.

ಹಯವದನರಾವ್ : ಯಾಕ್ರೀ ತಂದೆ ಇಲ್ಲಿಲ್ವಾ ಅಥವಾ ಈಗಿಲ್ವ?

ಶೇಷಾದ್ರಿ : ಛೇ! ಛೇ! ಇದ್ರು. ಈಗ್ಲೂ ಇದ್ದಾರೆ ಸಾ. ಏನ್ ಸಾ, ಹೆತ್ತು ಹೊತ್ತು ಸಾಕಿ ಸಲಹುದೋರ್‍ನ ಹಂಗತೀರ?

ಹಯವದನರಾವ್ : ಮತ್ತೆ ನಿಮ್ ತಂದೆ ಹೆಸರು ಹೇಳ್ರೀ. ಏಕ್ರಿ ಅವರ ಹೆಸರು ಹೇಳೋಕ್ ನಾಚಿಕೆ?

ಶೇಷಾದ್ರಿ : ಬಿಡಿ ಸಾ, ನಿಮ್‌ಗೂ ಬೇಜಾರಾಗ್ಬೋದು.

ಹಯವದನರಾವ್ : ಯಾಕ್ರಿ ಬೇಜಾರು? ನನ್ ಕೆಲ್ಸಾರೀ ಅದು.

ಶೇಷಾದ್ರಿ : ತಪ್ ತಿಳ್ಕೊಳಲ್ಲ ಅಂದ್ರೆ ಹೇಳ್ತೀನಿ ಸಾ.

ಹಯವದನರಾವ್ : ಹೇಳ್ರಿ ಪರವಾಗಿಲ್ಲ (ರಿಯಾಯಿತಿ ಕೊಟ್ಟವನಂತೆ, ಉಪಕಾರ ಮಾಡಿವನಂತೆ ಕಾಣುತ್ತಾನೆ)

ಶೇಷಾದ್ರಿ : (ಧೈರ್ಯ ಮಾಡಿ) ಹುಚ್‌ಯಂಗಟಪ್ಪ ಅಂಥ ಸಾ (ಅಧಿಕಾರಿಯನ್ನೇ ಹಿಂಡಿಕೊಳ್ಳುತ್ತಾನೆ) ಅವ್ರ ಹೆಸ್ರನ್ನೂ ಚೇಂಜ್ ಮಾಡುಸ್‌ಬುಡ್ತಿದ್ದೆ ಸಾ, ಆದ್ರೆ ವಯಸ್ಸಾಗಿರೋ ಮುದುಕರಿಗೆಲ್ಲ ಹೊಸ ಹೆಸ್ರು ಕಟ್ಬೋದು ಅದೆಂಥದೂ ಅಂಥ ಸುಮ್ನಾದೇ ಸಾ.

ಹಯವದನರಾವ್ : (ಆಶ್ಚರ್ಯದಿಂದ) ಹಾಗಾದ್ರೆ ನಿಮ್ಮ ಹೆಸರನ್ನ ಚೇಂಜ್ ಮಾಡಿಸ್ಕೊಂಡ್ರೇನ್ರೀ? ನಿಮ್ ಮೊದಲನ್ನೇ ಹೆಸ್ರೇನ್ರೀ?

ಶೇಷಾದ್ರಿ : (ಅವಮಾನಿತನಾದವನಂತೆ) ಈ ಗತಕಾಲದ ವಿಚಾರ ಮರೆತು ಬಿಡಿ ಸಾ. ಏನೋ ನಮ್ ತಂದೆ ತಾಯಿಗಳು ನಾಯಿಗಳು, ಅನಾಗರೀಕರು uncivilized. ಆ ಶೋಷಣೇನ ಮತ್ತೆ ಮತ್ತೆ ಯಾಕ್ ನೆನಪು ಮಾಡ್ಕೋಬೇಕು ಸಾ, ನಿಮ್ ಮನಸ್ಗೆ ಬೇಜಾರಾಗ್‌ಬೋದು ಸುಮ್ನಿರೀ ಸಾ.

ಹಯವದನರಾವ್ : ರೀ ಏನೋ ಆಗೋದಾಗೋಯ್ತು. ಅದು ಸರಿ ಅಂಥಾನೂ ನಾ ಹೇಳೊಲ್ಲ, ತಪ್ಪು ಅಂಥಾನೂ ಹೇಳಲಿಲ್ಲ. ಇದ್ರಿಂದ ನನ್ಗೆ ಬೇಜಾರೂ ಆಗೊಲ್ಲ. ಹೆಸರು ಹೇಳ್ರೀ?

ಶೇಷಾದ್ರಿ : (ಧೈರ್ಯ ತಂದುಕೊಂಡು) ಚಿಕ್‌ಯಂಗಟ ಸಾ (ತಾನೇ ನಗುತ್ತಾನೆ) ಆದ್ರೆ ಈಗ ಶೇಷಾದ್ರಿ ಎಚ್.ಸಾ, ಡಿಗ್ರಿ ಹೋಲ್ಡರ್ ಸಾ.

ಹಯವದನರಾವ್ : ಸದ್ಯ, ಅಷ್ಟೇ ತಾನೆ ಇನ್ನೇನು ಚೇಂಜ್ ಆಗಿಲ್ವಲ್ಲಾ?

ಶೇಷಾದ್ರಿ : ಅಯ್ಯೋ ಆಗಿದೆ ಸಾ. ಕಾಣುಸ್‌ಲಿಲ್ವಾ ಸಾ?

ಹಯವದನರಾವ್ : (ಕುತೂಹಲದಿಂದ) ಇನ್ನೇನ್ರೀ ನಿಮ್ಮದು ಚೇಂಜ್ ಆಗಿರೋದು?

ಶೇಷಾದ್ರಿ : ನನ್ನ ದೇಹ ಸಾ. (ಷರಟು ಮತ್ತು ಬನೀನಿನ ಒಳಗಿರುವ ಜನಿವಾರವನ್ನು ಆತುರದಿಂದ ತಡಕಿ ನೋಡಿಕೊಂಡು ಅಧಿಕಾರಿಗೆ ಕಾಣುವಂತೆ ಎಳೆದು ಒಳಕ್ಕೆ ಬಿಡುತ್ತಾನೆ) ದಾರ ಕಾಣ್‌ತಾ ಇಲ್ವ ಸಾ. ನಾವು ಒಂದಲ್ಲಾ ಒಂದಿನ ನಿಮ್ ಥರಾ ಆಯ್ತೀವಿ ಸಾ. ನಾನು ವಿದ್ಯಾವಂತ ಅಂತಾ ನನಗೇ ಗೊತ್ತಾದ್ ತಕ್ಷಣ ನಮ್ ಮನೇಲಿದ್ದ ಮುಳುಕಟ್ಟಮ್ಮನ್ ಫೋಟಾನಾ ತಿಪ್ಪೇಗಾಕಿ ಬುಟ್ಟೆ ಸಾ. ಈಗ (ದನಿ ಏರಿಸಿ) ನಮ್ಮ ಮನೆ ದೇವ್ರು ಶ್ರೀ ಶ್ರೀ ಶ್ರೀ ರಾಘವೇಂದ್ರಸ್ವಾಮಿ ಸಾ.

ಹಯವದನರಾವ್ : (ವ್ಯಂಗ್ಯಪೂರಿತವಾಗಿ) ಹೌದ್ರೀ, ನೀವ್ ನಮ್ ಥರಾ ಆದ್ರೆ ನಾವ್ ಯಾರ್ ಥರ ಆಗ್‌ಬೇಕ್ರೀ? ನನ್ ಹೆಸ್ರು ಹಯವದನರಾವ್. ನಾನ್ ಚಿಕ್‌ಯಂಗಟ ಅಂತಾ ಹೆಸ್ರು ಚೇಂಜ್ ಮಾಡಿಸ್ಕೋಬೇಕೇನ್ರೀ (ವ್ಯಂಗ್ಯವಾಗಿ ನಗುತ್ತಾನೆ)

ಶೇಷಾದ್ರಿ : ಇಲ್ಲಾ ಸಾ. ನೀವು ಆದಿಗುರುಗಳು. ಭೋಲೋಕದ ದೇವತೆಗಳು. ಪುರಾಣ ಶಾಸ್ತ್ರದಲ್ಲಿ ನಿಮ್ ಕೀರ್ತಿ ಬೆಳಗ್ತಾ ಇದೆ. ನೀವು ಈಗ ಇದ್ದಂಗೇ ಇರಿ, ನಾವ್ ನಿಮ್ಮಂಗ್ ಆಯ್ತೀವಿ ಅಷ್ಟೇ. ನೀವ್ ಯಂಗೋ ನಾವು ಹಂಗೇ.

ಹಯವದನರಾವ್ : ನಿಮ್ ಕಂತೆ ಪುರಾಣ ಸಾಕು. ನಿಮ್ಗೆ ಕೆಲ್ಸ ಸಿಗುತ್ತೋ ಬಿಡುತ್ತೋ ಅನ್ನೋದಕ್ಕೆ ಮನೆಗೆ ಲೆಟರ್ ಬರುತ್ತೆ.

ಶೇಷಾದ್ರಿ : ನನ್ ಅಡ್ರಸ್‌ಗೇ ಬರುತ್ತಾ ಸಾ?

ಹಯವದನರಾವ್ : ಹೌದು. ನಿಮ್ ಅಡ್ರೆಸ್‌ಗೆ. ಎಲ್ಲೂ ಹೋಗ್ದೆ ಮನೆ ಹತ್ರನೇ ಕಾಯ್‌ಕೊಂಡಿರಿ. ಆಯ್ತು, ನಡಿರಿ, ನಡಿರಿ ಇನ್ನು, ಡೋಂಟ್ ವೇಸ್ಟ್ ಮೈ ಟೈಮ್.

ಶೇಷಾದ್ರಿ : (ಬಾಗಿಲವರೆವಿಗೂ ಹೋಗಿ ಏನನ್ನೊ ನೆನಪಿಸಿಕೊಂಡವನಂತೆ ಮತ್ತೆ ಬಂದು) ಸಾ ಬ್ಯಾಗು ಸಾ.

ಹಯವದನರಾವ್ : ಹೋಗ್ರಿ, ನಾಳೆ ಬಂದು ತಗೊಂಡು ಹೋಗಿವ್ರಿ.

ಶೇಷಾದ್ರಿ : ಸಾ............... ನಂದಲ್ಲ ಸಾ.

ಹಯವದನರಾವ್ : ನಾವೇನು ಜೇಬಿನಲ್ಲಿ ತೆಗೆದುಕೊಂಡು ಹೋಗ್ಲ ತರಕಾರೀನಾ? ಒಂದ್ ಸಾರಿ ಹೇಳುದ್ರೆ

ತಿಳ್ಕೋಬೇಕು.

ಶೇಷಾದ್ರಿ : (ತಲೆ ಬಗ್ಗಿಸಿಕೊಂಡು ಅಧಿಕಾರಿಗೆ ಬೆನ್ನು ತೋರಿಸದೆ ಬಾಗಿಲವರೆವಿಗೂ ಹೋಗಿ ಕಣ್ಮರೆಯಾಗುತ್ತಾನೆ)

ಹಯವದನರಾವ್ : (ಬೆಲ್ ಒತ್ತುತ್ತಾನೆ. ಯಾರೂ ಬರುವಂತೆ ಕಾಣುವುದಿಲ್ಲ. ಬೇಸರಗೊಂಡವನಂತೆ ಕಾಣುತ್ತಾನೆ.) ಅರೆ! ಏನಾಯ್ತು! ಮೂರನೇಯವ ಏನಾದ? (ಫೈಲಿನಲ್ಲಿ ಒಂದು ಹಾಳೆಯನ್ನು ನೋಡುತ್ತಾ) ಗಾಂಧಿದಾಸ್, ಗಾಂಧಿದಾಸ್ (ಜೋರಾಗಿ ಕೂಗುತ್ತಾನೆ)

ಗಾಂಧಿದಾಸ್ : (ಕಣ್ಣು ಉಜ್ಜಿಕೊಳ್ಳುತ್ತಾ, ತೂಕಡಿಕೆಯಿಂದ ಎಚ್ಚೆತ್ತು, ಗಾಬರಿಯಲ್ಲಿ ಬರುತ್ತಾನೆ. ಬಿಳಿ ಪೈಜಾಮ, ಬಿಳಿ ಷರಟು, ಬಿಳಿ ಟೋಪಿಯನ್ನು ಹಾಕಿರುವ ಈತ ಸಕಲ ಹಲ್ಲುಗಳನ್ನೂ ಗಿಂಜುತ್ತಾ ಅಧಿಕಾರಿಗೆ ಕೈ ಮುಗಿದು ತಲೆಬಾಗುವನು) ಕ್ಷಮಿಸಿ ಸಾರ್, ನಮಸ್ಕಾರ ಸಾರ್.

ಹಯವದನರಾವ್ : ಏನ್ರೀ ಗಾಂಧಿಗೆ ಅವಮಾನ ರೀ! ಗಾಂಧಿದಾಸ್ ಅಂಥ ಹಾಕ್ರೀ ನಿಮಗೆ ಹೆಸರಿಟ್ರು, ಯಾರೀ ಹೆಸರಿಟ್ರು?

ಗಾಂಧಿದಾಸ್ : ನಾವು ದಸ್ಯು ಜನ ಸಾರ್. ಕಾಲಾನುಕಾಲದಿಂದ ನಾವು ದಾಸರು. ಸಾರ್. ಹಿಂದೆ ಇದ್ದ ಗಾಂಧಿಗೆ, ಈಗಿನ ಗಾಂಧಿಗೆ, ಮುಂದಿನ ಗಾಂಧಿಗೆ. ಹೀಗೆ ನಾವು ಸದಾ ದಾಸರು ಸಾರ್. ಮಹಾತ್ಮ ಗಾಂಧಿ ನಮ್ಮೂರಿಗೆ ಬಂದಿದ್ದಾಗ ನಮ್ ತಾತ ಅವರ್ನ ಖುದ್ದಾಗಿ ಕಂಡು ನಾವು ಮಾಂಸ ಮುಟ್ಟಲ್ಲ, ಹೆಂಡ ಮುಟ್ಟಲ್ಲ, ಅಂತ ಅವರ ಕೈ ಮುಟ್ಟಿ ಬಲಗೈ ಭಾಷೆ ಕೊಟ್ರಂತೆ ಸಾರ್. ಅದರ ಗುರ್ತಾಗಿ ನನ್ ಹೆಸರು ಗಾಂಧಿದಾಸ್ ಅಂಥ ಇಟ್ಟಿದ್ದಾರೆ ಸಾರ್.

ಹಯವದನರಾವ್ : ನೀವು ನಿಮ್ ತಾತನ ಮಾತ್ನ ಇನ್ನೂ ನಡವಳಿಕೇಲ್ ತರ್‍ತಾ ಇದ್ದೀರೋ?

ಗಾಂಧಿದಾಸ್ : ಅಯ್ಯೋ ನಿಮ್ ಹತ್ರ ಸುಳ್ ಯಾಕ್ ಹೇಳ್ಲೀಸಾರ್.
ನಮ್ಮ ತಾತನ ಮಾತು, ತಾತನ ಜೊತೇನೇ ಹೋಯ್ತು ಸಾರ್. ನಾವು ಈಗ ಮಾರ್ಡರ್ನ್ ಸಾರ್, ಮಟನ್ ಡ್ರಿಂಕ್ಸ್ ಇಂಟರ್ ನ್ಯಾಷನಲ್ ಫುಡ್ ಆಗಿರೋದ್ರಿಂದ ನಾವೂ ಇಂಟರ್ ನ್ಯಾಷನಲ್ ಸಿಟಿಜನ್ಸ್ ಆಗ್‌ಬೇಕು ಅಂತ, ಈಗ ಅವನ್ನೆಲ್ಲಾ ಪ್ರಾಕ್ಟೀಸ್ ಮಾಡ್ತಾ ಇದ್ದೀವಿ ಸಾ. ಆದ್ದರಿಂದ ನಮ್ಮ ಹರಿಜನಗಳೆಲ್ಲ ಈಗ ಇಂಟರ್ ನ್ಯಾಷನಲ್ ಸಿಟಿಜನ್ಸ್ ಸಾ.

ಹಯವದನರಾವ್ : (ಬೇಸರಗೊಂಡವನಂತೆ) ಸಾಕ್ ನಿಲ್ಲಿಸ್ರಿ ನಿಮ್ ಭಾಷಣ. ಓಟ್ ಕೇಳೋಕ್ ಬಂದಿದ್ದೀರೋ? ಕೆಲ್ಸ ಕೇಳೋಕ್ ಬಂದಿದ್ದೀರೋ?

ಗಾಂಧಿದಾಸ್ : ಕೆಲ್ಸ ಸಾರ್. ನೀವು ಕೆಲ್ಸ ಕೊಟ್ರೆ ನಾನು ಆಫಿಸಿಯಲ್ ಆಗ್ತೀನಿ. ಅಕಾರ್ಡಿಂಗ್ ಟು ಗೌರ್ನಮೆಂಟ್ ರೂಲ್ಸ್ ಅಫಿಸಿಯಲ್ ಒಟ್‌ಗ್ ನಿಲ್ಲಾಂಗಿಲ್ಲ ಸಾರ್.

ಹಯವದನರಾವ್ : ಕೆಲ್ಸ ಕೊಡೊದ್‌ಕಿನ್ನಾ ಮೊದ್ಲೇ ಏನ್ರೀ ಇಷ್ಟೊಂದು ತರಲೆ? ಯಾವಾಗಾದ್ರು ಓಟ್‌ಗ್ ನಿಂತಿದ್ರೇನ್ರೀ?

ಗಾಂಧಿದಾಸ್ : ಛೇ...... ಛೇ...... ಛೆ..... ನನ್ ಲೈಫ್‌ನ್ನಲ್ಲಿ ಕ್ಯಾನ್‌ವಾಸ್ ಮಾಡಿದ್ದೀನೇವರ್‍ತೂ ನಾನೇ ಕಂಟೆಸ್ಟ್ ಮಾಡಿಲ್ಲ ಸಾರ್.

ಹಯವದನರಾವ್ : ಕ್ಯಾನ್‌ವಾಸ್ ಅಂದ್ರೇ?

ಗಾಂಧಿದಾಸ್ : ಎಲೆಕ್ಸನ್ ಕ್ಯಾನ್‌ವಾಸ್ ಸಾರ್.

ಹಯವದನರಾವ್ : ವೆರಿ ಗುಡ್, ಯಾವ ಪಾರ್ಟೀನ್ರಿ ನಿಮ್ದು.

ಗಾಂಧಿದಾಸ್ : ಯಾವ್ ಪಾರ್ಟಿ ಅಂದ್ರೆ ಏನ್ ಹೇಳ್ಲೀ ಸಾರ್. ನಿರ್ಗತಿಕರಾದ ನಮ್ಮ ಜನಕ್ಕೆ ಸಹಾಯ ಮಾಡೋ ಪಾರ್ಟಿ ಸಾರ್.

ಹಯವದನರಾವ್ : ಸಹಾಯ ಅಂದ್ರೆ ಎಲೆಕ್ಷನ್ ಟೈಮ್‌ನಲ್ಲೋ ಅಧಿಕಾರಕ್ಕೆ ಬಂದ್ ಮೇಲೋ?

ಗಾಂಧಿದಾಸ್ : ಎಲೆಕ್ಷನ್ ಟೈಮ್‌ನಲ್ಲಿ ಮಾಡುದ್ರೆ ತಪ್ಪೇನ್ ಸಾರ್? ಸಹಾಯ ಮುಖ್ಯ.

ಹಯವದನರಾವ್ : ಏನು ಸಹಾಯ ಆಗಿದೆ ನಿಮ್ಗೆ?

ಗಾಂಧಿದಾಸ್ : ಸಾರ್, ನಾನು ನಿಸ್ವಾರ್ಥಿ. ನಮ್ ಜನಾಂಗಕ್ಕೆ ಆಗೋ ಸಹಾಯ ಮುಖ್ಯ.

ಹಯವದನರಾವ್ : ಜನಾಂಗಕ್ಕೆ ಸಹಾಯ ಅಂದ್ರೆ ಅರ್ಥ ಏನ್ರೀ?

ಗಾಂಧಿದಾಸ್ : ನೋಡಿ ಸಾರ್, ನಮ್ಮ ಜನಾಂಗ ಬಡವರಾಗಿರೋದ್ರಿಂದ ಗಂಡಸ್ರುಗಾದ್ರೆ ಪಂಚೆ ಕೊಡಬೇಕು.

ಹೆಂಗಸಾದ್ರೆ ಸೀರೆ ಕೊಡಬೇಕು. ಇದರಿಂದ ನಮ್ ಬಟ್ಟೆ ಸಮಸ್ಯೆ ಬಗೆಹರೀತು. ಮನ್ ಮನೆಗೂ ಒಂದೊಂದು ಬಾಟಲ್ ಹೆಂಡ ಕೊಟ್ರೆ ನಮ್ ಹೊಟ್ಟೆ ಸಮಸ್ಯೆಗೂ ಬಗೆಹರೀತು. ಇದರಿಂದ ಶತಮಾನಗಳ ನೋವನ್ನು ಮರೆತು ಸೊಲ್ಪ ಹೊತ್ತಾದ್ರು ಕುಣೀಬೋದು.

ಹಯವದನರಾವ್ : ಫೆಂಟಾಸ್ಟಿಕ್ ! ದಲಿತ ಪ್ರಜ್ಞೆ ಅಂದ್ರೆ ಇದು ರೀ!

ಗಾಂಧಿದಾಸ್ : ಸೆಂಟ್ ಪರ್ಸಂಟ್ ಕರೆಕ್ಟ್ ಸಾರ್. ಇದನ್ನೆಲ್ಲಾ ಸಪ್ಲಯ್ ಮಾಡೋಕೆ ನಾನೆ ಸಾರ್ ಏಜೆಂಟು. ಏನೋ ಸಾರ್, ಶೋಷಿತ ಜನಕ್ಕೆ ನಂದೂ ಒಂದು ಅಳಿಲು ಸೇವೆ ಆಗ್ತಾ ಇದೆ ಸಾರ್.

ಹಯವದನರಾವ್ : ನೀವು ಗ್ರಾಜುಯೇಟ್ ಆಗಿದ್ದಕ್ಕೂ ಸಾರ್ಥಕ ಆಯ್ತುರೀ. ನಿಮ್ದು ಪಂಚೆ ಮತ್ತು ಸೀರೆ ಪಾರ್ಟಿ. ಇದೇ ದಲಿತ ಪಾರ್ಟಿ. ಆಹಾ! ಹ ! (ಜೋರಾಗಿ ನಗುವನು)

ಗಾಂಧಿದಾಸ್ : ಹೌದು ಸಾರ್, ಮಹಾತ್ಮ ಗಾಂಧೀಜಿಯವರ ಕಾಲದಿಂದಲೂ ಈ ದಲಿತ್ ಪಾರ್ಟಿನ ಐದು ವರ್ಷಕ್ ಒಂದ್ಸಾರಿ ನಡುಸ್ತೀವಿ ಸಾರ್. ಎನ್‌ಜಾಯ್ ಮಾಡ್ತೀವಿ ಸಾರ್.

ಹಯವದನರಾವ್ : ಈ ದಲಿತ ಪಾರ್ಟಿ ಮೂಲಕ ನೀವೇಕ್ರೀ ಎಂ.ಎಲ್.ಎ.ನೋ ಮಿನಿಸ್ಟ್ರೋ ಆಗ಼್ಬಾರ್ದಾಗಿತ್ತು?

ಗಾಂಧಿದಾಸ್ : ನಮ್ಗೆ ಆ ಪುಣ್ಯ ಇಲ್ಲ ಬುಡಿ ಸಾರ್. ಪ್ರಾಮಾಣಿಕರಿಗೆ ರಾಜಕೀಯದಲ್ಲಿ ಸ್ಥಾನ ಇಲ್ಲಾ ಬುಡಿ ಸಾರ್. ಆದ್ರೆ ಈವತ್ತು ಹರಿಜನರ ಹೆಸ್ರು ಹೇಳ್ಕಂಡು ಎಂ.ಎಲ್.ಎ., ಮಿನಿಸ್ಟರ್ ಆಗಿರೋರೆಲ್ಲ ಸೀರೆ, ಪಂಚೆ, ಹೆಂಡ ಹಂಚೀನೇ ಸಾರ್ ಎಲೆಕ್ಷನ್‌ನಲ್ಲಿ ಗೆದ್ದಿರೋದು. ಅವರೆಲ್ಲ ನಮ್ಮ ದಲಿತ ಪಾರ್ಟಿ ಮೆಂಬರುಗಳೇ ಸಾರ್.

ಹಯವದನರಾವ್ : ಟ್ರಾಜಿಡಿ ! ಇದು ದಲಿತ ಜನಾಂಗದ ಟ್ರಾಜಿಡಿ! ನಿಮ್ಗೆ ಕೆಲ್ಸ ಬೇಕೇ ಬೇಕೆ?

ಗಾಂಧಿದಾಸ್ : ಹೌದು ಸಾರ್, ರೆಕ್ಮೆಂಡೇಷನ್ ಲೆಟರ್ ತಗೊಳ್ಳಿ ಸಾರ್. (ರೆಕ್ಮೆಂಡೇಷನ ಪತ್ರಗಳ ಕಂತೆಯನ್ನು ಬಿಚ್ಚಿ ಹರಡುತ್ತಾನೆ)

ಹಯವದನರಾವ್ : ಎಷ್ಟು ಜನಾರಿ ನಿಮ್ಗೆ ಮಾಡಿರೋದು ರೆಕ್ಮೆಂಡೇಷನ್?

ಗಾಂಧಿದಾಸ್ : ಎಲ್ಲಾರ್ ಕಂಟಾಕ್ಟು ಅಯ್ತೇ ಸಾರ್!

ಹಯವದನರಾವ್ : (ಒಂದು ಪತ್ರವನ್ನು ವಿಚಿತ್ರವಾಗಿ ನೋಡುತ್ತಾ) ಏನ್ರೀ ಹೋಟೆಲ್ ಓನರ್‌ದೊಂದು ರೆಕ್ಮೆಂಡೇಷನ್ ಪತ್ರ ತಂದಿದ್ದೀರೀ?

ಗಾಂಧಿದಾಸ್ : ಹೌದು ಸಾರ್. ನಿಮ್ಮ ಜಾತಿಯವ್ರು ಅಂತಾ ಗೊತ್ತಾಯ್ತು ಸಾರ್, ಅದ್ಕೆ ತಂದೇ.

ಹಯವದನರಾವ್ : ನೋಡ್ರೀ, ನಿಮ್ಗೆ ನನ್ನ ಸಲಹೆ ಏನೂ ಅಂದ್ರೆ......

ಗಾಂಧಿದಾಸ್ : ಏನ್ ಹೇಳೀ ಸಾರ್.

ಹಯವದನರಾವ್ : ಇಷ್ಟೆಲ್ಲ ಪ್ರತಿಭೆ ಇರೋ ನೀವು ರಾಜಕೀಯಕ್ಕೆ ಇಳಿಯೋದೆ ಒಳ್ಳೆ ಮಾರ್ಗ. ಆಗ ನಿಮಗೆ ಮತ್ತು ನಿಮ್ಮ ಜನಕ್ಕೆ ಎಲ್ಲಾರಿಗೂ ಒಳ್ಳೆಯದಾಗುತ್ತೆ. ನೀವು ನೀರಿಗೆ ಇಳೀರಿ. ಚಳಿ, ಮಳೆ ಏನೂ ಗೊತ್ತಾಗೊಲ್ಲ.

ಗಾಂಧಿದಾಸ್ : ಅದೇನೋ ಸರಿ ಸಾರ್. ಕೊನೇ ಪಕ್ಷ ತಾಲೋಕ್ ಬೋರ್ಡ್ ಮೆಂಬರ್ ಆದ್ರೂ ಆಗಬೋದು.

ಹಯವದನರಾವ್ : ವಿಷ್ ಯು ಆಲ್ ದಿ ಬೆಸ್ಟ್, ನೀವಿನ್ ಹೋಗ್ತೀರಾ?

ಗಾಂಧಿದಾಸ್ : ಥಾಂಕ್ಯೂ ಸಾರ್.

(ಗಾಂಧಿದಾಸ್ ಹೋಗುತ್ತಾನೆ. ಅಧಿಕಾರಿ ಕಾಲಿಂಗ್ ಬೆಲ್ ಒತ್ತುತ್ತಿದ್ದಂತೆ ೪ನೇ ಅಭ್ಯರ್ಥಿ ಪ್ರವೇಶಿಸುವನು. ಈತ ಅಧಿಕಾರಿಗೆ ಹೇಗೋ ಪರಿಚಯಸ್ಥ. ಆದ್ದರಿಂದಲೋ ಏನೋ ಎಸ್.ಎಸ್.ಎಲ್.ಸಿ ಆಗಿದ್ದರೂ ಪದವೀಧರ ಜೊತೆ ಸಂದರ್ಶನಕ್ಕೆ ಬಂದಿದ್ದಾನೆ.)

ಪಾಪಣ್ಣ : ನಮಸ್ಕಾರ ಸಾರ್.

ಹಯವದನರಾವ್ : ಹೋ! ನೀನು ನಮ್ಮ ಗಾರೆ ವೆಂಕಟಪ್ಪನ ಮಗ ಅಲ್ವೇನೋ!

ಪಾಪಣ್ಣ : ಹೌದು ಸಾರ್.

ಹಯವದನರಾವ್ : ಹ್ಹಾ.......... ಈಗ ಏನ್ಮಾಡ್ತಾ ಇದಿಯಾ?

ಪಾಪಣ್ಣ : ಎಸ್.ಎಸ್.ಎಲ್.ಸಿ ಒಂದೇ ಅಟೆಮ್ಟಿಗೆ ಪಾಸಾಯ್ತು ಸಾರ್. ಎತ್ಲಾಗೂ ಕೆಲ್ಸ ಸಿಗ್ಲಿಲ್ಲ. ನೆನ್ನೇ ಪೇಪರ್‌ನಲ್ಲಿ ನಿಮ್ಮ ಸ್ಕೀಮ್ ಬಗ್ಗೆ ಓದ್ದೆ ಸಾರ್; ಏನೋ ಹರಿಜನರು ಬಡವರು ಬಗ್ಗರ್ಗೆಲ್ಲ ಮನೆಗಳನ್ನಾ ಕಟ್ಸ್ ಕೊಡ್ತಾಯಿದ್ದೀರಂತೆ. ನಮ್ಮ ಅಪ್ಪನ ಜೊತೆ ಮನೆ ಕಟ್ಟಿ ನನಗೂ

ರೂಢಿಯಿದೆ ಸಾರ್. ಅದಕ್ಕೆ ನೀವು ನನಗೆ ಇಲ್ಲೊಂದು ಕೆಲ್ಸ ಕೊಡಬಹುದು ಅಂತ ಬಂದೆ ಸಾರ್.

ಹಯವದನರಾವ್ : ಓಹೋ! ನಮ್ಮ ಸ್ಕೀಮ್ ಬಗೆ ಪೇಪರ್‌ನಲ್ಲಿ ಓದಿದ್ದೀಯ? ವೆರಿಗುಡ್, ನೋಡಯ್ಯ ಇದು ನಾವು ಬಡಜನಗಳಿಗೆ ತಕ್ಕಂತೆ ಕಟ್ಟಿಸ್‌ಕೊಡ್ತ ಇರೋ ಲೋಕಾಸ್ಟ್ ಹೌಸ್. ಲೋಕ್ಲಾಸ್ ಜನಕ್ಕೆ ಲೋ ಕಾಸ್ಟ್ ಹೌಸಸ್, ಹ್ಹಾ....... ಹ್ಹಾ....... ಹ್ಹಾ....... ನೋಡು ಇಲ್ಲಿದೇ ನೋಡು, ಇದು ಹೇಗಿದೆ? ಇದು ನಮ್ ಅಧಿಕಾರಿಗಳಿಗೆ ತಕ್ಕಂತೆ ಮಲ್ಟಿಸ್ಟೋರೀಡ್ ಬಿಲ್ಡಿಂಗ್. ಹೇಗಿದೆಯಯ್ಯಾ? (ಅಣಕಿಸುವ ರೀತಿಯಲ್ಲಿ ಕೇಳುತ್ತಾನೆ)

ಪಾಪಣ್ಣ : ಇಂತಾ ಮಹಡಿ ಕಟ್‌ವಾಗ್ಲೆ ಸಾರ್ ನಮ್ಮಪ್ಪ ಮೇಲಿಂದ ಬಿದ್ದು ತಲೆ ಹೊಡ್ದು ಸತ್ತಿದ್ದು. (ದುಃಖಿಸುತ್ತಾನೆ)

ಹಯವದನರಾವ್ : ಏನ್ಮಾಡಕ್ಕಾಗುತ್ತಯ್ಯ? ನಿಮ್ಮಪ್ಪ ಮಹಡಿ ಕಟ್ಟೋಕ್ಕೋಗಿ ತಲೆ ಹೊಡ್ಕೊಂಡ್ ಸತ್ತ. ಇಲ್ಲಿ ನನ್ಗೆ ಪ್ರಮೋಷನ್ ಸಿಗ್ತು. ಇದೆಲ್ಲ ದೇವರ ಇಚ್ಛೆ, ಕಣಯ್ಯಾ ಹ್ಹಾ....... (ನಗು) ನೋಡು ನಿನಗೆ ಇನ್ನೂ ಚಿಕ್ಕ ವಯಸ್ಸು; ನಮ್ಮ ಸ್ಕೀಮ್‌ನಲ್ಲೂ ಯಾವುದೂ ಕೆಲಸ ಇಲ್ಲ...... ಸರಿ...... ನಿನಗೆ ಯಾವುದಾದರು ಸಣ್ಣ ಪುಟ್ಟ ಕೆಲಸ ಮಾಡೋಕ್ ಬರ್‌ತದೊ?

ಪಾಪಣ್ಣ : ಹೂ....... ಬರುತ್ತೇ ಸಾರ್.

ಹಯವದನರಾವ್ : ಹಾಗಾದರೆ ನಾನು ಒಂದು ಅಡ್ರಸ್ ಕೊಡ್ತೀನಿ, ಅಲ್ಲಿಗೆ ಹೋದರೆ ನಿನ್ನನ್ನ ಕೆಲಸಕ್ಕೆ ಸೇರ್‍ಸ್ಕೊತಾರೆ ಹಾಂ....... ಇರು. ನಾನು ಮೊದಲು ಫೋನ್ ಮಾಡಿ ಹೇಳ್‌ಬಿಡ್ತೀನಿ (ರಿಸೀವರ್ ಕೈಗೆತ್ತಿಕೊಂಡು) ಹಲೋ ಯಾರ್ ಮಾತ್ನಾಡ್ತಾ ಇರೋದು? ಶ್ರೀನಿವಾಸ್ ಐಯಾಂಗಾರ್‌ರವರ.....? ನಾನ್ ಸ್ವಾಮಿ ಹಯವದನ್‌ರಾವ್..... ಹಾ..... ಅದೂ..... ಮೊನ್ನೆ ನಮ್ಮಾಕೆ ನಿಮ್ಮನೆಗೆ ಬಂದಿದ್ದಾಗ ನಿಮ್ಮಾಕೆ ಏನೋ ಹೇಳ್ತಾ ಇದ್ದರಂತೆ, ಮನೆ ಕೆಲಸದವಳು ಸರಿಯಾಗ್ ಬರ್ತಾಇಲ್ಲ, ಬಹಳ ಕಷ್ಟ ಆಗ್ತಾ ಇದೆ ಅಂತ. ಅದಕ್ಕೆ ಇವತ್ತು ಇಂಟ್ರ್ಯ ಇತ್ತು ನೋಡಿ..... ಒಬ್ಬನ್ನ ಆರಿಸಿಬಿಟ್ಟಿದ್ದೀನಿ..... "ಏನ್ ಸ್ವಾಮಿ ಅಯ್ಯೋ..... ಛೇ..... ಛೇ ಇಲ್ಲ ಸ್ವಾಮಿ ಕೈಬಾಯಿ ಎಲ್ಲ ಬಹಳ ಚೊಕ್ಕ ಸ್ವಾಮಿ..... ಅದೇ ನಮ್ಮ ಗಾರೇ ವೆಂಕಟಪ್ಪ ಇರ್‍ಲಿಲ್ವೇ ಅವನ ಮಗ. ಆ ಏನು ಇವತ್ತು ಸಂಜೆ ಮನೀಗ್ ಬರಬೇಕೆ..... ಏಕೆ ಸ್ವಾಮಿ..... ಏನು ಇವತ್ತು..... ನಿಮ್ಮ..... ಮುತ್ತಜ್ಜನವರ ವೈಕುಂಠ ಸಮಾರಾಧನೇನೆ ಓಹೋ..... ಹಾಗಾದರೆ ಇವತ್ತು ಭೋಜನ ಭರ್ಜರಿ ಅಂತ ಆಯ್ತು. ಸರಿ ಸಂಜೆ ಬರ್‍ತೇನೆ..... ಆ ಮೇಲೆ ಈ ಹುಡುಗನ್ನ ಈಗ ಕಳಿಸಿಕೊಡ್ತೇನೆ. ಆಯ್ತು, ಸರಿ ಸ್ವಾಮಿ..... ನಮಸ್ಕಾರ. ಏನೂ ಸಂಬ್ಳಾನಾ? ಅಯ್ಯೋ ನಿಮ್ಗೆ ತಿಳಿದಷ್ಟು ಕೊಡೀ ಸ್ವಾಮಿ..... ಇನ್ನು ಮಿಕ್‌ಪಕ್ಕಿದ್ ತಂಗ್ಳು ಗಿಂಗ್ಳು ಹಾಕಿ..... ತಿಂದ್ಕಂದು ಬಿದ್ದಿರ್‍ತಾನೆ..... ಆಯ್ತು ಸರಿ ಸ್ವಾಮಿ ನಮಸ್ಕಾರ. (ಅಭ್ಯರ್ಥಿಯ ಕಡೆಗೆ) ನೋಡಯ್ಯ ನಾನು ಅವರಿಗೆ ತಿಳಿಸಿದ್ದೇನೆ. ನೀನು ಅಲ್ಲಿಗೆ ಹೋದ್ರೆ ಅವ್ರು ನಿನಗೆ ಕೆಲ್ಸ ಕೊಡ್ತಾರೆ.

ಪಾಪಣ್ಣ : ಏನ್ ಕೆಲ್ಸ ಸಾರ್?

ಹಯವದನರಾವ್ : ಏನ್ ಕೆಲ್ಸ? ಅದೇ ಮುಸುರೆ ಗಿಸುರೆ ತಿಕ್ಕೋದು.

ಪಾಪಣ್ಣ : (ಗಾಬರಿಯಾಗಿ) ಏನ್ ಸಾರ್ ಮುಸುರೆ ತಿಕ್ಕೋದ! .....?

(ಇಬ್ಬರು ರಂಗದ ಮೇಲೆ ಪ್ರವೇಶಿಸಿ ತಮಟೆ ಹೊಡೆಯುತ್ತಾ ಹಾಡುತ್ತಾರೆ)

ದಾರಿ ಯಾವುದೊ ...........
ಸರಿ ದಾರಿ ಯಾವುದೊ ...........?
ಕತ್ತಲೆಯಲ್ಲಿ ಮುಳುಗಿದ ಜನಕೆ
ಸುತ್ತಲು ಸಾವನು ಕಾಣುವ ಜನಕೆ
ಕರುಣೆಯ ಸರಪಳಿ ಕೊಲ್ಲುವ ಜನಕ
ಬಿಡುಗಡೆಯನ್ನು ನೀಡುವ ಒಂದು
ದಾರಿ ಯಾವುದೋ?

ಸರಿ ದಾರಿ ಯಾವುದೋ?

ಭಿಕ್ಷೆಯ ಕೊಟ್ಟು ಶಿಕ್ಷೆಯ ಕೊಟ್ಟು
ನಾಯಿಯ ಬಾಳಿಗೆ ದಲಿತರ ನೂಕಿ
ನಡೆಸುವ ಹಿಂಸೆಯ ಕೊನೆಗಾಣಿಸುವ
ಸಮತೆಯ ಹೂವು ಅರಳುವ ತೋಟಕೆ
ದಾರಿ ಯಾವುದೋ?
ಗೆಳೆಯ ದಾರಿ ಯಾವುದೋ?

ಅವಮಾನದ ಕಣ್ಣೀರನು ತೊಳೆಯಲು
ಸಾವಿರ ಕೈಗಳು ಮೇಲಕ್ಕೇಳುವ
ಎಲ್ಲಾ ಮನುಜರು ಒಂದೇ ಎನ್ನುವ
ಬಡವರ ಬಾಳಿಗೆ ಬೆಳಕನು ತರುವ
ದಾರಿ ಯಾವುದೋ?
ಸರಿ ದಾರಿ ಯಾವುದೋ?
ದಾರಿ ಯಾವುದೋ?
ಸರಿ ದಾರಿ ಯಾವುದೋ?

(ಹಾಡು ಮುಗಿದ ತಕ್ಷಣ ೪ನೇ ಅಭ್ಯರ್ಥಿಯ ನಿರ್ಗಮನ. ಬೆಲ್ಲು ಬಾರಿಸಿದ ತಕ್ಷಣ. ೫ನೆಯ ಅಭ್ಯರ್ಥಿ ಬರುತ್ತಾನೆ. ಈತ ಒಂದು ಷರಟು ಪ್ಯಾಂಟನ್ನು ಬೇಕಾಬಿಟ್ಟಿ ತೊಟ್ಟವನಂತೆ ಕಾಣುತ್ತಾನೆ, ತಲೆಕೂದಲನ್ನು ನೆನ್ನೆಯೋ, ಇವತ್ತಿನ ಬೆಳಗ್ಗೆಯೋ ಬಾಚಿರಬಹುದು. ಹೆಗಲಿಗೆ ಒಂದು ಬ್ಯಾಗನ್ನು ನೇತು ಹಾಕಿಕೊಂಡಿದ್ದಾನೆ. ಚೀಲದಲ್ಲಿ ಒಂದು ಏಕನಾದವಿದೆ. ತನ್ನನ್ನು ಒಳಗೆ ಕರೆದ ಕೂಡಲೇ ಬಂದು, ಕುರ್ಚಿಯ ಮೇಲೆ ಅಧಿಕಾರಿ ಹೇಳುವುದಕ್ಕಿಂತ ಮೊದಲೇ ಕೂತುಕೊಳ್ಳುತ್ತಾನೆ)

ಹಯವದನರಾವ್ : ಕ್ಷಮಿಸಿ, ನೀವು ಕೊನೆಯವರು. ಆದ್ದರಿಂದ ಬಹಳ ಹೊತ್ತುಕಾಯಿಸ್ದೆ.

ಪಂಚಮ : ಬಿಡಿ ಸಾರ್, ಸಾವಿರಾರು ವರ್ಷಾನೆ ಕಾದಿದ್ದೀವಿ. ಈ ನಿಮಿಷದ್ದು ಯಾವ ಲೆಕ್ಕ?

ಹಯವದನರಾವ್ : (ಈ ರೀತಿಯ ಪ್ರತ್ಯುತ್ತರದಿಂದ ಕಕ್ಕಾಬಿಕ್ಕಿ ಆಗುವನು. ಅಭ್ಯರ್ಥಿಯನ್ನು ನೋಡಿ ಭಯಮಿಶ್ರಿಯವಾಗಿ ಮುಗುಳ್ನಗೆ ಬೀರುವನು) ಏನೋ ಒಂಥರಾ ಮಾತಾಡ್ತೀರಲ್ಲ. ಏನಾಗಿದೆ ನಿಮಗೆ

ಪಂಚಮ : ಇದು ಕನ್ನಡ ಭಾಷೆ. ನಾವು ಯಾವ ಭಾಷೆಯಲ್ಲಿ ಮಾತಡ್‌ಬೇಕಾಗಿತ್ತೊ ಆ ಭಾಷೇಲೆ ಮಾತಾಡ್ತಿದ್ದೀನಿ.

ಹಯವದನರಾವ್ : ನಿಮ್ ಹೆಸರೇನ್ರಿ?

ಪಂಚಮ : ನನ್ ಹೆಸರು ಹೊಲೆ ಮಾದಿಗ.

ಹಯವದನರಾವ್ : ನಿಮ್ಮನ್ನ ನೀವೇ ಯಾಕ್ ಹೀಗೆ ಅವಮಾನ ಮಡ್ಕೋತೀರ?

ಪಂಚಮ : ಹೊಲೆಮಾದಿಗ ಅಂದ್ರೆ ನಿಮಗೆ ಸಂತೋಷ ಆಗ್ತದೆ ಅಂತ ನನಗೆ ಗೊತ್ತು. ಅದಕ್ಕೇನೆ ನನ್ ಹೆಸರು ಹೊಲೆ ಮಾದಿಗ.

ಹಯವದನರಾವ್ : ಹರಿಜನ ಅಂತಾ ಗಾಂಧೀಜಿಯವರು ನಿಮ್ಮನ್ನ ಕರೆದದ್ದು ಏನಾಗಬೇಕು? ಯಾಕಿಷ್ಟು ದುಗುಡ? ನೀವು ಖಂಡಿತವಾಗಲೂ ದೇವರ ಮಕ್ಕಳು.

ಪಂಚಮ : ನಾವು ಖಂಡಿತವಾಗಲೂ ದೇವರ ಮಕ್ಕಳಲ್ಲ. ನಾವು ನಮ್ ತಂದೆ ತಾಯಿ ಮಕ್ಕಳು.

ಆದ್ದರಿಂದ ನಾವು ಹರಿಜನರಲ್ಲ. ಹರಿಜನ ಅನ್ನೋ ಹೆಸರನ್ನು ನೀವು ನಮಗೆ ಇಟ್ಟಿದ್ದೀರ. ಆದರೆ ಇವತ್ತು ನಮ್ಮ ಜನರ ಪರವಾಗಿ ಹರಿಜನ ಅನ್ನೋ ಹೆಸರ್ನ ನಿಮ್ಗೇ ವಾಪಸ್ ಕೊಡ್ತೀನಿ. ನೀವೇ ಇಟ್ಕೊಳ್ಳಿ.

ಹಯವದನರಾವ್ : ರೀ, ಅಧಿಕ ಪ್ರಸಂಗ ಮಾಡ್‌ಬೇಡಿ. ನಿಮಗೆ ನಮ್ಮ ಇಲಾಖೆಯಲ್ಲಿ ಕೆಲ್ಸ ಬೇಡ್ವೆ?

ಪಂಚಮ : ನಾನ್ ನಿಮ್ ಹತ್ರ ಕೆಲ್ಸ ಕೇಳಾಕ್ ಬಂದಿಲ್ಲ. ನಮ್ಮ ಜನರೆಲ್ಲ ಮಾಡ್‌ಬೇಕಾಗಿರೋ ಕೆಲ್ಸಾನ ಮಾಡಿ ಮುಗ್‌ಸಾಕ್ ಬಂದಿದ್ದೀನಿ. ನಮಗೆ ಉಳಿದಿರೋ ಒಂದೇ ಒಂದು ಕೆಲ್ಸಾನ ಮಾಡಬೇಕು ಅಂತ ಬಂದಿದ್ದೀನಿ.

ಹಯವದನರಾವ್ : ರೀ ಮಿಸ್ಟರ್, ಹರಿಜನರ ಬಗ್ಗೆ ನಮಗೆ ಖಂಡಿತವಾಗಲೂ ಕರುಣೆ ಇದೆ. ಸಹಾಯ ಮಾಡ್‌ಬೇಕು ಅನ್ನೋ ಆಸೆ ಇದೆ.

ಪಂಚಮ : ನಿಮ್ಮ ಕರುಣೆ, ಸಹಾಯ ಬೇಕಾಗಿಲ್ಲ. ಸಾವಿರಾರು ವರ್ಷದಿಂದ ನಿಮ್ಮ ಅನುಕಂಪದ ಪಂಜರದಲ್ಲಿ ನಮ್ಮ ಕೋಳಿಗಳ ಥರಾ ಕೂಡಿದ್ರಿ ಆದ್ರೆ ಇವತ್ತು ನಾವು ಎಚ್ಚೆತ್ತಿದ್ದೇವೆ. ನಾವು ಹರಿಜನರಲ್ಲ........ ನಿಮ್ಮ ಅನ್ಯಾಯವನ್ನು ಕೊನೆಗಾಣಿಸೋ ನಿಮ್ಮ ವೈರಿಗಳು.

ಹಯವದನರಾವ್ : ನಿಮ್ ಹೆಸರನ್ನು ಸರಿಯಾಗ್ ಹೇಳ್ತಾ ಇಲ್ಲ. ಫೋನ್ ಮಾಡ್ತೇನೆ, ಪೋಲೀಸ್ ಕರೆಸ್ತೇನೆ.

ಪಂಚಮ : ಪೋಲೀಸ್ ಕರ್ಸ್ಗೊ ಕಾಲ ಮಿಂಚ್ ಹೋಯಿತು (ಫೋನನ್ನು ತನ್ನ ಕೈಗೆ ತೆಗೆದುಕೊಳ್ಳುತ್ತಾ) ಫೋನ್ ಮಾಡ್ಕೊಂಡ್ ಹೆಚ್ಚು ದಿನಾ ಇರಕಾಗಲ್ಲ. ಜನ ಬಲದ ಮುಂದೆ ಪೋಲೀಸ್ ಬಲ ಏನೂ ಮಾಡಾಕಾಗಲ್ಲ.

ಹಯವದನರಾವ್ : (ಪುಸಲಾಯಿಸುತ್ತಾ) ನಿಮ್ಗೆ ನಮ್ಮ ಇಲಾಖೇಲಿ ಒಳ್ಳೆಕೆಲ್ಸ ಕೊಡುಸ್ತೀನಿ. ಕೈತುಂಬ ಸಂಬಳ. ಇಂಥ ಕ್ರಾಂತಿಕಾರಿಗಳೆ ನಮ್ಗೆ ಬೇಕಾಗಿರೋದು. ನಿಮ್ಮ ರೋಷ, ರೊಚ್ಚು ಎಲ್ಲಾ ನನಗೆ ಅರ್ಥ ಆಗುತ್ತೆ. ಯ್ ಆಕೆ ಅಂದ್ರೆ ಇವಕ್ಕೆ ಸಾಮಾಜಿಕ ಕಾರಣಗಳಿವೆ.

ಪಂಚಮ : (ತಿರಸ್ಕಾರದಿಂದ) ನಿಮ್ ಎಂಜಲ್ ತಿಂದ್ಕಂಡು ಬಡವರನ್ನು ಸುಲಿಯೋ ಏಜಂಟ್‌ರಾಗಾಕೆ ನಾನ್ ತಯಾರಿಲ್ಲ. ನನಗೆ ನಿಮ್ಮ ಹತ್ರ ನಾಯಿ ರೀತಿ ಇರೋ ಕೆಲ್ಸ ಬ್ಯಾಡ. ನನಗೆ ಸಮಾಜದ ಸಂಪೂರ್ಣ ಬದಲಾವಣೆಬೇಕು.

ಹಯವದನರಾವ್ : ಹೋಗ್ರಿ, ಎಸ್.ಸಿ.ಗಳಿಗೆ ಏನೋ ಸ್ವಲ್ಪ ಸಹಾಯ ಮಾಡೋಣ ಅಂದ್ರೆ, ಅದಕ್ಕೆ ನಿಮ್ಮಂಥೋರು ಕಲ್ ಹಾಕ್ತೀರಿ. ಸ್ವತಂತ್ರ ಭಾರತದಲ್ಲಿ ನಿಮಗೆ ಏನ್ ಕಡಿಮೆ ಮಾಡಿದ್ದೀವಿ?

ಪಂಚಮ : ನಿಮ್ಮ ಭಿಕ್ಷೆ ರಾಜ್ಯ ಹೋಗ್‌ಬೇಕು, ಸಮತಾ ರಾಜ್ಯ ಬರಬೇಕು ಅನ್ನೋದೆ ನಮ್ಮ ಗುರಿ. ಆದ್ರೆ ನಿಮ್ಮಂಥೋರು ನಮ್ಮ ಜನರಿಗೆ ಸುಳ್ಳು ಬರವಸೆ ಕೊಟ್ಟು ಭ್ರಮೇಲಿ ಮುಳುಗಿಸಿದ್ದೀರಿ. ನಿಮ್ಮ ಸುಳ್ಳು ನಿಲ್ಲಬೇಕಾದ್ರೆ ನಿಮ್ಮ ಉಸಿರಾಟ ನಿಲ್ಲಬೇಕು. ನಿಮ್ಮ ಕಬ್ಬಿಣದ ಬೇಲಿಯಿಂದ ತಪ್ಪುಸ್‌ಕೊಂಡು ಹೊರಗೆ ಬರೋವರ್ಗೂ ನಮ್ಗೆ ಸಮಾಧಾನ ಇಲ್ಲ. ನಮ್ಗೆ ಭಿಕ್ಷೆ ಬೇಡ. ಆರ್ಥಿಕ ಸಮಾನತೆ ಬೇಕು. ಸಾಮಾಜಿಕ ಸಮಾನತೆ ಬೇಕು. ಎಲ್ಲೆಲ್ಲೂ ಎಲ್ಲಾದ್ರಲ್ಲೂ ಬದಲಾವಣೆ ಬೇಕು.

ಹಯವದನರಾವ್ : ಎಷ್ಟ್‌ರೀ ಗರ್ವ. ಮಾತೋಡೋವಾಗ ನಾಲ್ಗೆ ಮೇಲೆ ಹಿಡಿತ ಇಲ್ಲ. ನಿಮ್ಮಂಥೋರ್ನ ನೋಡಿದ್ರೆ ಮೊದಲು ಹೇಗೆ ನಿಮ್ಮನ್ನ ದೂರ ಇಟ್ಟಿದ್ವೊ ಹಾಗೆ ಇಡಬೇಕು ಅನ್ಸುತ್ತೆ. ನಮ್ಮ ಹಿರಿಯರು ನಿಮ್ಮ ಹಿರಿಯರ್ನ ಕಜ್ಜಿ ನಾಯಿಗಳಿಗಿಂತ ಕೀಳಾಗಿ ಕಾಣ್‌ತಿದ್ರು ಗೊತ್ತಾ?

ಪಂಚಮ : ಗೊತ್ತು, ಅದನ್ನೇ ನಾನೂ ಹೇಳ್ತಾ ಇರೋದು. ನೀವು ನಮ್ಮನ್ನ ಈಗ ನಾಯಿಗಳಿಗಿಂತ ಕೀಳಾಗಿ ಕಾಣ್ತಾ ಇದ್ದೀರ. ನೀವು ಕೊಡ್ತಾ ಇರೋ ಸ್ಕಾಲರ್‌ಶಿಪ್, ಗ್ರಾಂಟು, ರಿಸರ್ವೇಷನ್ ಎಲ್ಲಾ ನಾಯಿಗೆ ಎಂಜಲು ಹಾಕೋ ರೀತಿ ತಾನೆ?

ಹಯವದನರಾವ್ : ರೀ ದಲಿತ, ಈ ಎಂಜಲೇನಾದರೂ ನಿಮಗೆ ಸರಕಾರದ ಕೃಪಾಕಟಾಕ್ಷದಿಂದ ಸಿಗ್ದೆ ಇದ್ದಿದ್ರೆ, ಹುಳಾಹುಪ್ಪಟೆ ಥರಾ ಸತ್ತೋಗ್ತಿದ್ರಿ, ಗೊತ್ತಾ?

ಪಂಚಮ : ಈ ಎಂಜಲ್ ಹಾಕೋದ್ರಿಂದಾನೇ ನೀವು ಉಳಿದಿರೋದು. ನಮ್ಮ ಜನರ ರೊಚ್ಚನ್ನ ಕಡಿಮೆ ಮಾಡ್ತಿರೋದು ಈ ಎಂಜಲು ಸ್ವಾಮೀ. ನಮಗೆ ಎಂಜಲು ಬೇಕಾಗಿಲ್ಲ. ನಮಗೆ ಬೇಕಾಗಿರೋದು ಹೊಸ ಜೀವನ, ಸ್ವಾಭಿಮಾನದ ಬದುಕು.

ಹಯವದನರಾವ್ : ಸರ್ಕಾರ್ದ ಉಪ್ಪು ತಿಂದು ಸರ್ಕಾರಕ್ಕೆ ದ್ರೋಹಾ ಬಗೆಯೋ ನಿಮ್ಮಂಥವರನ್ನು ಗಲ್ಲಿಗೆ ಹಾಕ್ ಬೇಕ್ರೀ. ನಿಮ್ಮನ್ನ ಒಳಕ್ಕೆ ಕರ್ದು ಕುರ್ಚಿ ಮ್ಯಾಲ್ ಕೂರಿಸ್ತೀವಲ್ಲ, ನಮ್ದು ತಪ್ಪು. ಸ್ನಾನಾ ಮಾಡ್ದೆ, ದುರ್ವಾಸನೆ ಬರ್ತಾ ಇದ್ರೂ ನಿಮ್ಮುನ್ನ ಕರ್ದು ಕೈ ಕುಲುಕ್‌ತೀರಲ್ಲಾ ನಮ್ದು ತಪ್ಪು.

ಪಂಚಮ : ನೀವು ನಮ್ಗೆ ಉಪಕಾರ ಖಂಡಿತವಾಗ್ಲೂ ಮಾಡ್ತಾ ಇಲ್ಲ. ನಮ್ಮನ್ನ ನೀವು ದರೋಡೆ ಮಾಡ್ತಾ ಇದ್ದೀರಾ. ನೀವು ಕುಳಿತಿದ್ದೀರಲ್ಲಾ ಬಿಲ್ಡಿಂಗು ಅದನ್ನ ನಿಮ್ ತಾತಾ ಕಟ್ಸುದ್ನಾ? ಕಟ್ಟಿದವರು ನಮ್ಮ ಜನ. ಆಫೀಸಿಗ್ ಬರುವಾಗ ಚನ್ನಾಗ್ ಊಟಾ ಜಡದ್ ಬಂದಿದ್ದೀರಲ್ಲಾ: ಹೊಲಗದ್ದೇಲಿ ಬೆಳೆ ತೆಗೆದೋನ್ ನಿಮ್ಮಪ್ಪಾನಾ? ಖಂಡಿತ ಇಲ್ಲ. ದಲಿತ. ನೀವ್ ತಿನ್ನೋ ಅನ್ನಾ, ತೊಡೋ ಬಟ್ಟೆ, ನಿಮ್ ಕಾರ್ ಓಡಾಡೋ ರಸ್ತೇನಾ ಮಾಡಿರೋರ್ ಯಾರ್ ಸ್ವಾಮೀ? ಆದ್ದರಿಂದ ಯಾರಿಗೆ ಉಪಕಾರ ಆಯ್ತಾ ಇದೆ ಅನ್ನೋದ್ನ ತಿಳದ್ ಮಾತಾಡಿ.

ಹಯವದನರಾವ್ : ಹೀಗೆ ಹೇಳ್ತಾಹೋದ್ರೆ ಏನೇನೋ ಹೇಳಬಹುದು. ನೀವು ಇಲ್ಲಿಗ್ ಬಂದದ್ ಏನಕ್ಕೆ? ಕೆಲ್ಸಾ ಬೇಕೋ, ಬೇಡ್ವೊ?

ಪಂಚಮ : ಕೆಲ್ಸ ಕೇಳಾಕಲ್ಲ ನಾನ್ ಬಂದಿರೋದು, ಕೆಲ್ಸ ಮಾಡಾಕ್ ಬಂದಿದ್ದೀನಿ? (ತನ್ನ ಚೀಲಕ್ಕೆ ಕೈ ಹಾಕಿ ಏಕನಾದವನ್ನು ಹೊರಕ್ಕೆ ತೆಗೆಯುತ್ತಾನೆ. ಅದನ್ನು ಮೇಲಕ್ಕೆತ್ತಿ ಅಧಿಕಾರಿಯ ತಲೆಗೆ ರಪರಪ ಹೊಡೆಯುತ್ತಾನೆ. ಅಧಿಕಾರಿ ಫೋನಿಗೆ ಕೈ ಹಾಕುತ್ತಿದ್ದಂತೆ ಅವನನ್ನು ಜಾಡಿಸಿ ಒಡೆಯುತ್ತಾನೆ. ಅಧಿಕಾರಿ ಒಂದು ಮೂಲೆಯಲ್ಲಿ ಅವಿತುಕೊಳ್ಳಲು ಓಡುತ್ತಾನೆ. ಅಧಿಕಾರಿಗೆ ಅಭ್ಯರ್ಥಿಯಿಂದ ಸತತವಾದ ಹೊಡೆತ ಮತ್ತು ಒದೆತ.)

ಹಯವದನರಾವ್ : ಅಯ್ಯಯ್ಯೋ ರಾಘವೇಂದ್ರಾ, ಸಾಯಿಬಾಬಾ, ಶಿರಡೀ ಬಾಬಾ, ನಿನ್ಗೆ ಒಳ್ಳೆ ಆಫೀಸರ್ ಪೋಸ್ಟ್ ಕೊಡುಸ್ತೀನಿ. ನನ್ ಪ್ರಾಣ ಉಳಿಸು. ಅಯ್ಯಯ್ಯೋ.

ಪಂಚಮ : ನಾವು ನಿಮ್ ಹತ್ರ ಹಲ್‌ಗಿಂಜ್‌ಕೊಂಡು ಪೋಸ್ಟ್ ಕೇಳೋ ಕಾಲ ಹೊರಟು ಹೋಯ್ತು. ನಿಮ್ಮ ಸಮಾಜ ವ್ಯವಸ್ಥೇನ ಸಂಪೂರ್ಣವಾಗಿ ಬದಲಾಯಿಸೋವರೆಗೂ ನಮಗೆ ಶಾಂತಿ ಇಲ್ಲಾ. ನಮ್ಗೆ ಸಮಾಜ ಬದಲಾವಣೆಬೇಕು.

ಹಯವದನರಾವ್ : (ಮೂಲೆಯಲ್ಲಿ ನರಳುತ್ತಾ ಬಿದ್ದಿದ್ದವನು ಬೇಡಿಕೊಳ್ಳುವ ಭಂಗಿಯಲ್ಲಿ ಎದ್ದು ನಿಂತು) ಸಮಾಜ ಬದಲಾವಣೆ, ಹಾ! ಸಮಾಜ ಬದಲಾವಣೆ!! ಇಷ್ಟೇ ತಾನೆ ನಿನ್ನ ಬೇಡಿಕೆ. ನಮ್ಮ ಕಮಿಟಿ ಮೀಟಿಂಗ್‌ನಲ್ಲಿ ಇದನ್ನ ಇಡ್ತೀನಿ. ಅಪ್ರೂ ಮಾಡುಸ್ತೀನಿ, ನನ್ ಹೊಡಿಬೇಡಾ....... ಬಿಟ್‌ಬಿಡು.

ಪಂಚಮ : ಸಮಾಜ ಬದಲಾವಣೆ, ಸರ್ಕಾರ ಮಾಡೋ ಕೆಲ್ಸಾ ಅಲ್ಲಾ...... ಜನ ಮಾಡೋ ಕೆಲ್ಸ. (ತಲೆ, ಹೊಟ್ಟೆ, ಸೊಂಟದ ಮೇಲೆ ಹೊಡೆಯುತ್ತಾನೆ.)

ಹಯವದನರಾವ್ : ಹಾಗಾದ್ರೆ, ಹಾಗಾದ್ರೆ ಏನ್ ಮಾಡ್‌ಬೇಕು? ನೀನೇ ಹೇಳು?

ಪಂಚಮ : ಜನ ಎಚ್ಚರ ಆಗ್‌ಬೇಕು. ನಾನ್ ಮಾಡೋದನ್ನಾ ಎಲ್ಲ ಜನರೂ ಮಾಡ್‌ಬೇಕು.

ಹಯವದನರಾವ್ : ಈಗ್ ಗೊತ್ತಾಯ್ತು. ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಸೋಸಿಯಲ್ ಚೇಂಜ್ ಬಗ್ಗೆ ಒಂದು ಸೆಮಿನಾರ್ ಕಂಡಕ್ಟ್ ಮಾಡೋಣ. ನಾನೂ ಒಂದು ಪೇಪರ್ ಪ್ರೆಸೆಂಟ್ ಮಾಡ್ತೀನಿ. ನಾನು ಇಂಟಲೆಕ್ಚುಯಲ್, ನನ್ ಹೊಡೀಬೇಕಾ. ನಾನು ಮಿಡಲ್ ಕ್ಲಾಸ್. ನನ್ ಹೊಡೀಬೇಡಾ.

ಪಂಚಮ : ಹೊಡೀದೇ ರಕ್ತಾ ಚೆಲ್ಲದೇ ಏನೂ ಆಗೋಲ್ಲ. ನಿಮ್ಮ ಜಮೀನುದಾರರ ಕೈಲಿ, ಪೋಲೀಸರ ಕೈಲಿ, ಗೂಂಡಾಗಳ ಕೈಲಿ ಏಟು ತಿಂದು ಸಾಯ್ತಾ ಇರೋ ನಮ್ ಜನಾ ಮತ್ತೆ ವಾಪಸ್ ಹೊಡೀಬೇಕು. ಬಡ್ಡೀ, ಚಕ್ರ ಬಡ್ಡೀ ಸಮೇತ ಸೇಡು ತೀರುಸ್ಕೋಬೇಕು.

ಹಯವದನರಾವ್ : ನನ್ ನಂಬು ನನ್ ಪ್ರಾಣಾ ಉಳಿಸು. ನನ್ ಮಾತ್ ನಂಬು.

ಪಂಚಮ : ಸಾವಿರ ಸಾವಿರ ವರ್ಷದಿಂದಾ ನಿಮ್ಮ ಮಾತ್ ನಂಬಿದ್ದೀವಿ. ನಿಮ್ಮ್ ಬೂಟ್ ನೆಕ್ಕಿದ್ದೀವಿ. ನಿಮಗೆ ಓಟ್ ಹಾಕಿದ್ದೀವಿ. ನಿಮ್ ಹೆಂಡ, ಎಂಜಲು ತಿಂದಿದ್ದೀವಿ. ಆದ್ರೆ ಕಾಲ ಬದಲಾಗಿದೆ. ನಮಗೆ ನಾಯಿ ಪಾಡು ಬೇಡ. ಮನುಷ್ಯರ ಥರಾ ಬದುಕಬೇಕು. (ಅವನನ್ನು ಹೊಡೆಯುವುದನ್ನು ಮುಂದುವರೆಸುತ್ತಾನೆ)

ಹಯವದನರಾವ್ : ಅಯ್ಯೋ ದೇವ್ರೇ, ನಾರಾಯಣಾ, ಶಂಕರಾ, ದೇವ್ರು ಇದ್ರೆ ನನ್ ಪ್ರಾಣಾ ಉಳೀಲಿ.

ಪಂಚಮ : ನಿನಗೆ ಎಲ್ಲಾ ವಿಚಾರನೂ ಗೊತ್ತು. ಆದ್ರೆ ದೇವ್ರಿಲ್ಲ ಅನ್ನೋದು ಗೊತ್ತಿಲ್ಲಾ. ನಿಮ್ಮ ದೇವ್ರು

ಸತ್ತೋಗವ್ನೆ. ವಡಸ್ಕೊಂಡ್ರೆ ಹೆಂಗ್ ಆಯ್ತದೆ ಅನ್ನೋದನ್ನ ಈಗ್‌ಲಾದ್ರು ತಿಳ್ಕೊ. ಯಾರನ್ನಾದರೂ ಬೇಡಿಕೊಳ್ಳೋದು ಅಂದ್ರೆ ಏನು ಅನ್ನೋದನ್ನಾ ಅನುಭವದಿಂದಾನೆ ತಿಳ್ಕೊ (ಮತ್ತೆ ಮತ್ತೆ ಹೊಡೆಯುತ್ತಾನೆ)

ಹಯವದನರಾವ್ : ನೀನ್ ಕಮ್ಯೂನಿಸ್ಟ್ ಅನ್ನುಸ್ತದೆ. ನಿಗ್ಗೆ ತಲೆ ಕೆಟ್ಟದೆ. ನೀನು ಕೊಲೆಗಡುಕ. ನೀನು ಖಂಡಿತವಾಗಲೂ ಹರಿಜನ ಅಲ್ಲ. ನನ್ ಹೊಡೀಬೇಡಾ.

ಪಂಚಮ : ನಾನು ಕೊಲೆಗಡುಕ ಅಲ್ಲ. ಇಡೀ ಜನಾ ಬದುಕಬೇಕಾದ್ರೆ ಮಾಡ್‌ಬೇಕಾಗಿರೋ ಕೆಲ್ಸಾನ ನಾನ್ ಮಾಡ್ತಾ ಇದ್ದೀನಿ ಅಷ್ಟೆ. ಖಂಡಿತವಾಗಲೂ ನಾನು ಹರಿಜನ ಅಲ್ಲ. ನಾನು ಹೊಲೆಮಾದಿಗ. ಪ್ರಪಂಚ ಇರೋವರೆಗೂ ಹೊಲೆಮಾದಿಗರು ನಿಮ್ಮ ಗುಲಾಮರಾಗಿರಬೇಕು ಅನ್ನೋದು ನಿಮ್ ಇಷ್ಟ. ಆದ್ರೆ ಹೊಲೆಮಾದಿಗರು ಅದಕ್ಕೆ ತಯಾರಿಲ್ಲ. ಈ ದೇಶದಲ್ಲಿ ಮಾನಮರ್ಯಾದೆಯಿಂದ ಬದುಕಬೇಕು ಅನ್ನೋ ಆಸೆ ಇದ್ರೆ ಎಲ್ಲಾ ಹೊಲೆಮಾದಿಗ್ರು ಕೂಡ ಇದನ್ನೇ ಮಾಡ್‌ಬೇಕು. (ಅಧಿಕಾರಿಗೆ ಕೊನೆಯ ಹೊಡೆತ ಕೊಡುತ್ತಾನೆ. ಅಧಿಕಾರಿ ಕೆಳಗುರುಳುತ್ತಾನೆ. ಕ್ರಮೇಣ ಅವನ ನರಳಾಟದ ಸದ್ದು ಕಡಿಮೆ ಆಗುತ್ತದೆ. ಚೀಲದಲ್ಲಿದ್ದ ಒಂದು ಬಟ್ಟೆಯನ್ನು ಅವನ ಮೇಲ್ ಹೊದಿಸಿ ಹೊರಡಲು ಅನುವಾಗುತ್ತಿದ್ದಂತೆ, ಇಬ್ಬರು ಹಾಡುಗಾರರು ಪ್ರವೇಶಿಸುತ್ತಾರೆ)

ಹಾಡು : ಕುಂತ ಮನಗಳೇ  
ನಿಂತ ಜನಗಳೇ  
ಕೇಳದೇ ಹೊಸ ನುಡಿ  
ಕಾಣದೇ ಕೆಂಗಿಡಿ  
ಹೋರಾಟವೆ ದಾರಿ!  
ಕೊನೆಗಾಣದ ಗೋಳಿಗೆ  
ಹೋರಾಟವೆ ದಾರಿ!  
ಭಿಕ್ಷಾನ್ನಕೆ ಕೈಯನ್ನು ಒಡ್ಡುವ  
ಕೈಗಳು ಕೊಳೆಯುವವು!  
ಬೇಡುವ ನೀಡುವ ಜಾಲದಂತ್ಯದಲಿ  
ಸೌಖ್ಯದ ನಾಡುದಯ!  
ಸಮಸೌಖ್ಯದ ನಾಡುದಯ!  
ಕಪ್ಪು ಕತ್ತಲೆಯ ಕಗ್ಗವಿಯಲ್ಲಿ  
ಕೆಂಪು ಬೆಳಕಿನ ಕಿರಣಗಳು !  
ಸರಪಳಿ ಕಿತ್ತ ಕೆಂಪು ದಾರಿಯಲಿ  
ಕೋಟಿ ಕಂಠಗಳ ಸಾಲು!

ಕುಂತ ಮನಗಳೆ  
ನಿಂತ ಜನಗಳೆ  
ಕೇಳದೆ ಹೊಸ ನುಡಿ;  
ಕಾಣದೆ ಕೆಂಗಿಡಿ;  
ಹೋರಾಟವೇ ದಾರಿ!  
ಕೊನೆಗಾಣದ ಬಾಳಿನ ಗೋಳಿಗೆ,  
ಹೋರಾಟವೇ ದಾರಿ!

# 4. ಓದು ಪತ್ಯ – ಕನಸ ಬಿತ್ತಿ, ಬದಕನರಸುತ್ತಾ – ಉಮಾಶ್ರೀ

**ಶಶಿಧರ ಭಾರಿಘಾಟ್**

---

ಆಳುತನದ ಮಾತನೇರಿಸಿ, ನುಡಿದಂತೆ
ಆಗಲೆ ಕಟ್ಟಿದೆನು ಗಂಡುಗಚ್ಚೆಯ
ತಿಮಿರನೇರಿಸಿ, ತಿಲಕವನ್ನಿಟ್ಟು
ಕೈದುವಕೊಂಡು ಕಳನೇರಿದ ಬಳಿಕ
ಕಟ್ಟಿದ ನಿರಿ ಸಡಿಲಿದಡೆ
ಇನ್ನು ನಿಮ್ಮಾಣೆ ಕಣಾ ಚೆನ್ನಮಲ್ಲಿಕಾರ್ಜುನಾ

– ಅಕ್ಕಮಹಾದೇವಿ

ಕನಸ ಬೆಂಬತ್ತಿ ಹೋಗುವವರು ಅಸಂಖ್ಯ ಜನ. ಅದನ್ನು ನನಸಾಗಿಸಿಕೊಳ್ಳುವವರು ಅತಿ ವಿರಳ. ಅಂತಹ ವಿರಳರಲ್ಲಿ ಉಮಾಶ್ರೀ ಒಬ್ಬರು.

ಸಾಮಾನ್ಯ ಕುಟುಂಬದ ಹೆಣ್ಣುಮಗಳೊಬ್ಬಳು, ರಂಗಸಿರಿಯಾಗಿ ಬೆಳೆದ ಪರಿ ಅಮೋಘವಾದದ್ದು. ಒಬ್ಬ ತಾಯಿಯಾಗಿ, ಮಗಳಾಗಿ, ಪತ್ನಿಯಾಗಿ, ಗೆಳತಿಯಾಗಿ, ಅತ್ತೆಯಾಗಿ ಏನೆಲ್ಲಾ ಆಗಿ ತನ್ನ ಬದುಕನ್ನು ಕಟ್ಟಿಕೊಂಡ ಉಮಾಶ್ರೀ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡದ್ದು, ಬೆಳೆದದ್ದು ಒಬ್ಬ ಅನನ್ಯ ಸಾಧಕಿಯಾಗಿ.

ಉಮಾಶ್ರೀ ಅವರ ಪೂರ್ವಾಶ್ರಮದ ಹೆಸರು ಉಮಾದೇವಿ. ಬಡ ನೇಕಾರರ ಕುಟುಂಬದ ರಂಗಪ್ಪ–ನಿಂಗಮ್ಮ ದಂಪತಿಗಳ ಕರುಳಿನ ಕುಡಿಯಾಗಿ ಹುಟ್ಟಿದ ಉಮಾದೇವಿ, ಎಳೆಗೂಸಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ನತದೃಷ್ಟೆ. ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ನೊಣವಿನಕೆರೆ ಗ್ರಾಮದ ಉಮಾದೇವಿ ಹೆತ್ತವ್ವನ ಅಕ್ಕ ರೇವಮ್ಮ ಮತ್ತು ಡಿ. ಮುನಿನರಸಪ್ಪ ದಂಪತಿಗಳ ದತ್ತು ಪುತ್ರಿಯಾಗಿ ಬೆಂಗಳೂರಿಗೆ ಬಂದಳು. ಆಗ ಎಳೆಗೂಸಿಗೆ ೮ ತಿಂಗಳು. ಹೀಗೆ ಬರುವ ಮುನ್ನ ಮುಸ್ಲಿಂ ಕುಟುಂಬವೊಂದು ಈ ಕೂಸಿಗೆ ಆಸರೆ ನೀಡಿತ್ತು. ಸಾಕು ತಾಯಿಯ ಮಡಿಲು ಸೇರುವವರೆಗೆ.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಮುನಿನರಸಪ್ಪ ಕೆ ಹಿರಣ್ಣಯ್ಯ ಮಿತ್ರಮಂಡಳಿಯ ರಂಗಮಂದಿರ ಆವರಣದಲ್ಲಿ ಒಂದು ಪೆಟ್ಟಿಗೆ ಅಂಗಡಿ ಹಾಕಿಕೊಂಡಿದ್ದರು. ಬಾಲಕಿ ಉಮಾದೇವಿ ಆಗಾಗ್ಗೆ ಈ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುತ್ತಿದ್ದಳು. ಒಂದಿಷ್ಟು ನಾಟಕಗಳನ್ನು ನೋಡಿತ್ತಿದ್ದಳು. ಅಪ್ಪನೊಂದಿಗೆ ಅಂಗಡಿ, ರಂಗಮಂದಿರ, ಮಾರ್ಕೆಟ್ ಒಡನಾಟ ಒಂದೆಡೆಯಾದರೆ, ಮಾಸ್ಟರ್ ಹಿರಣ್ಣಯ್ಯ, ನಟಭಯಂಕರ ವಜ್ರಮುನಿ, ಮುಸುರಿ ಕೃಷ್ಣಮೂರ್ತಿ ಅವರ ಅಭಿನಯದ ನೋಟ ಮೊತ್ತೊಂದೆಡೆ. ಇದೇ ಸಂದರ್ಭದಲ್ಲಿ ಗಿರಿಜಕ್ಕ (ಗಿರಿಜಾ ಲೋಕೇಶ್) ಅವರ ಪಾತ್ರಗಳನ್ನು ನೋಡುತ್ತಿದ್ದಳು. ಅನೇಕ ನಾಟಕಗಳು, ಹಲವು ಪಾತ್ರಗಳು, ಆದರೂ ಉಮಾದೇವಿ ತಾನು ಮುಂದೆ ನಟಿಯಾಗಬಹುದೆಂಬ ಕಲ್ಪನೆಯನ್ನು ಮಾಡಿರಲಿಲ್ಲ.

ಚುರುಕುತನ, ತುಂಟತನ, ನಿರಂತರ ಚಟುವಟಿಕೆ ಉಮಾದೇವಿಗೆ ಸಹಜವಾಗಿ ಬಂದಿತ್ತು. ಬಾಲ್ಯದ ಮುಗ್ಧತೆಯೂ ಸೇರಿ ತಮ್ಮ ಮನೆಯ ಬೀದಿಯಲ್ಲಿ, ಅಕ್ಕಪಕ್ಕದ ಬೀದಿಗಳಲ್ಲಿ ನಡೆಯುತ್ತಿದ್ದ ಗಣೇಶೋತ್ಸವ, ಅಣ್ಣಮ್ಮ ದೇವಿ ಉತ್ಸವಗಳ ವೇದಿಕಯ ಮೇಲೆ ನೃತ್ಯ ಮಾಡುವುದನ್ನು ಉಮಾದೇವಿ ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಆದರೆ ಇದನ್ನೆಲ್ಲಾ ತಾಯಿಯ ಕಣ್ತಪ್ಪಿಸಿ ಮಾಡಬೇಕಿತ್ತು. ಮಗಳನ್ನು ಹುಡುಕಿಕೊಂಡು ಬಂದ ರೇವಮ್ಮ ನೃತ್ಯ ಮಾಡುತ್ತಿದ್ದ ಉಮಾದೇವಿಯನ್ನು ದಂಡಿಸಿ ಮನೆಗೆ ಕರೆದೊಯ್ಯುತ್ತಿದ್ದರು. ಅವರಿಗೆ ನೃತ್ಯ ನಾಟಕಗಳೆಂದರೆ ಅಷ್ಟಕಷ್ಟೆ. ಬೆಳೆಯುತ್ತಿರುವ ಮಗಳ ಬಗೆಗೆ ಕಾಳಜಿ, ಒಮ್ಮೊಮ್ಮೆ ಅವರು ಕಠಿಣವಾಗಿ ವರ್ತಿಸುವಂತೆ ಮಾಡುತ್ತಿತ್ತು. ತಾಯಿಯವರ ಈ ರೀತಿಯ ಕಾಠಿಣ್ಯ ಮುಗ್ಧೆ ಉಮಾದೇವಿಗೆ, ವಯಸ್ಸಿನ ಕಿರಿತನದಿಂದಾಗಿ ತಿಳಿಯುತ್ತಿರಲಿಲ್ಲ. ಶಾಲಾ ದಿನಗಳಲ್ಲೂ ಉಮಾದೇವಿ ಸಾಕಷ್ಟು ಚುರುಕಾಗಿದ್ದಳು. ಓದಿನಲ್ಲಿ ಮುಂದು, ಆಟ, ಓಟ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಸಮಾನ ಆಸಕ್ತಿ. ಹಾಡು, ನಾಟಕ,

ನೃತ್ಯಗಳಲ್ಲಿ ಭಾಗವಹಿಸುತ್ತಿದ್ದ ಬಾಲಕಿ, ಏಕಪಾತ್ರಾಭಿನಯಗಳಲ್ಲೂ ಮೆಚ್ಚುಗೆ ಗಳಿಸುತ್ತಿದ್ದಳು. ಪ್ರಾಥಮಿಕ ಶಿಕ್ಷಣದ ನಂತರ ಉಮಾದೇವಿ ಕಬ್ಬನ್‌ಪೇಟೆಯ ಶ್ರೀ ಶಾರದಾ ಗರ್ಲ್ಸ್ ಹೈಸ್ಕೂಲ್, ಮುಂದೆ ಪ್ರಥಮ ಪಿಯುಸಿಗೆ ಸೇರ್ಪಡೆಯಾದರು.

ತಾಯಿ ರೇವಮ್ಮ ಅವರ ಕಣ್ಗಾವಲು, ಹಾಕಿದ ಗೆರೆ ದಾಟಬಾರದೆಂಬ ತಾಕೀತು ಸಾಕಷ್ಟು ರೂಪವತಿಯಾಗಿದ್ದ ಉಮಾದೇವಿಗೆ ತಾಯಿಯ ನಿಯಂತ್ರಣ ಕಸಿವಿಸಿ ಹುಟ್ಟಿಸುತ್ತಿತ್ತು. ವಯಸ್ಸಿಗೆ ಸಹಜವಾದ ಕನಸುಗಳು, ಆಲೋಚನೆಗಳು, ಮನೆಯ ವಾತಾವರಣಕ್ಕೆ ಹೋಲಿಸಿದಾಗ ಸ್ವಲ್ಪ ಮುಕ್ತವಾದ ಶಾಲಾ ವಾತಾವರಣ, ಇವೆಲ್ಲಾ ಉಮಾದೇವಿಯ ಮೇಲೆ ಪ್ರಭಾವ ಬೀರುತ್ತಿದ್ದವು. ತಾಯಿಯ ಮಾತು ಅಪಥ್ಯವಾಗುತ್ತಿತ್ತು. ಉಪದೇಶವನ್ನು ಹಿರಿಯರು ಕೊಡುತ್ತಾರೆ. ಆದರೆ ಕೇಳಬೇಕೆಂಬ ವ್ಯವಧಾನ ಕಿರಿಯರಿಗೆಲ್ಲಿ? ಉಮಾದೇವಿ ಇದರಿಂದ ಸ್ವಲ್ಪ ವಿಚಲಿತರಾಗಿದ್ದು ನಿಜ.

ಉಮಾದೇವಿ ಪದವಿಪೂರ್ವ ಶಿಕ್ಷಣದ ಹಂತದಲ್ಲೇ ತಮ್ಮ ಜನಾಂಗದ ಯುವಕನೊಬ್ಬನನ್ನು ಪ್ರೀತಿಸಿದರು. ಮದುವೆಯೂ ಆಯಿತು. ಮಾನವೀಯತೆಯ ಮೂರ್ತಿವೆತ್ತಂತೆ, ಅಂತಃಕರಣ ಮಿಡಿಯುವ ಅತ್ತೆ ಇದ್ದರೂ ನೂರಾರು ಕನಸು ಹೊತ್ತು ಹೊಸ ಜೀವನಕ್ಕೆ ಕಾಲಿಟ್ಟಿದ್ದರು. ಮದುವೆಯಾದ ವರ್ಷದಲ್ಲೇ ಮೊದಲ ಮಗಳು ಗಾಯತ್ರಿಗೆ ಜನ್ಮ ನೀಡಿದರು.

ಉಮಾದೇವಿಯ ಸಾಂಸಾರಿಕ ಬದುಕಿನಲ್ಲಿ ಯಾಕೋ ಅಪಸ್ವರ ಉಂಟಾಯಿತು. ಕಂಡ ಕನಸುಗಳಲ್ಲೆಲ್ಲ ನೀರಿನ ಮೇಲಿನ ಗುಳ್ಳೆಯಂತೆ ಒಡೆದು ಹೋದವು. ಬೇಜವಾಬ್ದಾರಿತನ ಮೈಗಳ್ಳತನವನ್ನು ಕಂಡರೆ ಸಹಿಸಲಾಗದಷ್ಟು ಕೋಪ ಉಮಾದೇವಿಗೆ ಬರುತ್ತಿತ್ತು. ಒಮ್ಮೊಮ್ಮೆ ಸಾಂಸಾರಿಕ ಬದುಕಿನಲ್ಲಿ ಉಂಟಾಗುತ್ತಿದ್ದ ವಿರಸ ವಿಕೋಪಕ್ಕೂ ಹೋಗಿ ಅತ್ತೆಯ ಮನೆಯಿಂದ ದೂರವಾಗಿ ತಾಯಿಯ ಆಶ್ರಯಕ್ಕೆ ಬಂದರು. ಅತ್ತೆ ತೋರುತ್ತಿದ್ದ ಅಪಾರ ಪ್ರೀತಿಯ ಸೆಳೆತವಿದ್ದರೂ, ಆ ಮನೆಯಲ್ಲಿ ಬದುಕು ಏಗಲಾಗದ ಪರಿಸ್ಥಿತಿ. ಬಡತನವೇ ಹಾಸಿ ಹೊದ್ದು ಮಲಗಿದ್ದ ತಾಯಿಯ ಮನೆಯಲ್ಲಿ ಒತ್ತಾಯ ಮಾಡಿ ಆಶ್ರಯ ಪಡೆಯಬೇಕಾಯಿತು.

ಸ್ವತಂತ್ರವಾದ ಬದುಕು ಸಾಗಿಸಲು ಯಾರ ಹಂಗು ಇಲ್ಲದೆ ಏನಾದರೊಂದು ಕೆಲಸ ಬೇಕು. ಕೆಲಸ ಕೊಡುವವರಾರು? ಓದು ಅರ್ಧಕ್ಕೆ ನಿಂತಿತ್ತು. ಜೀವನ ನಿರ್ವಹಣೆಗೆ ಇಡ್ಲಿ ವಡೆ ಮಾರಿ ಬದುಕುವ ನಿರ್ಧಾರಕ್ಕೆ ಉಮಾದೇವಿ ಬಂದರು. ಅಷ್ಟಿಷ್ಟು ಕಾಸು ಸಂಪಾದನೆಯಾಗುತ್ತಿತ್ತು. ತಾಯಿಯೊಂದಿಗೆ ಮಾತಿನ ಜಟಾಪಟಿ, ನಿರಂತರ ಮಾನಸಿಕ ವೇದನೆ, ಏನು ಮಾಡುವುದೆಂದು ತೋರದೆ, ಕೂಡಿಟ್ಟ ಕಾಸನ್ನು ತೆಗೆದುಕೊಂಡು ನೆಮ್ಮದಿಯನ್ನರಸಿ ತುಮಕೂರಿನತ್ತ ಹೊರಟರು.

ತುಮಕೂರಿನಲ್ಲಿ ಚಿಕ್ಕಪ್ಪ ಮುನಿರಂಗಪ್ಪ ನಾಟಕ ಕಂಪನಿ ನಡೆಸುತ್ತಿದ್ದರು. ಗಂಡನನ್ನು ತೊರೆದು ಸೊಂಟದಲ್ಲಿ ಬಟ್ಟೆಯ ಗಂಟು, ಕಂಕುಳಲ್ಲಿ ಕೂಸು ಎತ್ತಿಕೊಂಡು ಬಂದ ಉಮಾದೇವಿಗೆ ಅಲ್ಲಿ ಆಶ್ರಯ ದೊರಕಲಿಲ್ಲ. ಗಂಡ, ಮನೆ ಬಿಟ್ಟವಳೆಂದು ಅವರ ಚಿಕ್ಕಮ್ಮ ನೆಲೆ ನೀಡಲಿಲ್ಲ. ನಾಟಕ ಕಂಪನಿಯಲ್ಲೇ ಕೆಲಸ ಮಾಡುತ್ತಿದ್ದ ಉಮಾದೇವಿಯ ಅಕ್ಕ ಅನಸೂಯ ಮತ್ತು ಅವರ ಗಂಡ ವೆಂಕಟೇಶ್, ಕಂಪನಿಯ ಮಾಲೀಕ ಮುನಿರಂಗಪ್ಪನವರನ್ನು ಎದುರು ಹಾಕಿಕೊಂಡು ಉಮಾದೇವಿಗೆ ಆಶ್ರಯ ಕೊಡಲು ಶಕ್ತರಾಗಿರಲಿಲ್ಲ. ಹಾಗಾಗಿ ಉಮಾದೇವಿ ಬೀದಿಗೆ ಬರಬೇಕಾಯಿತು. ನಾಟಕ ಕಂಪನಿ ಹೂಡಿದ್ದ ಬಳಿ ಇದ್ದ ದ್ವಾರಕ ಹೋಟೆಲ್‌ನಲ್ಲಿ ಕಾಡಿಬೇಡಿ, ಅಳುದುಳಿದ ದೋಸೆ, ಇಡ್ಲಿಗಳ ಚೂರುಪಾರು ತಿಂದು, ಎರಡು ಮೂರು ದಿನ ಕಳೆದರು.

ಗೊಂದಲದ ಮನಸ್ಸು, ಬಾಳಿನಲ್ಲಿ ಸುಖದುಃಖಗಳು ಹೇಗೆ ಬರುತ್ತವೆ, ಹೇಗೆ ನಿವಾರಣೆಯಾಗುತ್ತವೆ ತಿಳಿಯದ ವಯಸ್ಸು. ವರ್ಷ ತುಂಬುವ ಮೊದಲೇ ತಾಯಿಯನ್ನು ಕಳೆದುಕೊಂಡು, ಮತ್ತೊಬ್ಬರ ಮಡಿಲು ಸೇರಿ ಬೆಳೆದು, ಮೆಚ್ಚಿದಾತನ ಬಾಳ ಸಂಗಾತಿಯಾಗಿ, ಸುಂದರವಾದ ನೆಮ್ಮದಿಯ ಬದುಕಿಗಾಗಿ ಹಾತೊರೆದ ಮನಸ್ಸು ಘಾಸಿಗೊಂಡಿತ್ತು. ಯಾತಕ್ಕಾಗಿ ಈ ಬದುಕು? ಯಾರಿಗಾಗಿ ಈ ಬದುಕು? ಮುಂದಿನ ಜೀವನದ ಗತಿ ಏನು? ಎಲ್ಲಿ ಹೋಗುವುದು? ಏನು ಮಾಡುವುದು? ಜೀವ ಕಳೆದುಕೊಳ್ಳೋಣವೆಂದರೆ ಹಸುಗೂಸು ಗಾಯಿತ್ರಿ. ಒಡಲಿನಲ್ಲೊಂದು ಮಿಸುಕಾಡುತ್ತಿರುವ ಜೀವ. ನಾಟಕ ಕಂಪನಿಯ ಮುಂದಿದ್ದ ಕಲ್ಲೊಂದರ ಮೇಲೆ ಕುಳಿತು ಉಮಾದೇವಿ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸುತ್ತಿದ್ದರು.

ನೊಣವಿನಕೆರೆಯಿಂದ ಆರಂಭಗೊಂಡ ಬದುಕಿನ ಪಯಣ ಬೆಂಗಳೂರಿನತ್ತ ಸಾಗಿ, ಅಲ್ಲಿಯೂ ನೆಲೆಗಾಣದೆ, ತುಮಕೂರಿಗೆ ಬಂದು ನಿಂತಿತ್ತು. ಮುಂದೆ?

ಉಮಾದೇವಿಯವರ ತಳಮಳ, ತಾಕಲಾಟಕ್ಕೆ ಒಂದಿಷ್ಟು ಕಾಲ ವಿರಾಮ ಹಾಕುವಂತೆ ಮೂರ್ತಿ ಅಣ್ಣ ಬಂದರು. ನಾಟಕದ ಸೀನರಿ, ಪರದೆ, ರಂಗಸಜ್ಜಿಕೆಗಳನ್ನು ಒದಗಿಸುತ್ತಿದ್ದ ಮೂರ್ತಿ ಅಣ್ಣನ ಕಣ್ಣಿಗೆ, ಕಂಪನಿ ಮನೆಯ ಮುಂದಿನ ಜಗಲಿಯ ಮೇಲೆ ಮುದುಡಿ ಕುಳಿತಿದ್ದ ಉಮಾದೇವಿ ಕಣ್ಣಿಗೆ ಬಿದ್ದರು. ಉಮಾದೇವಿಯ ದೀನ ಪರಿಸ್ಥಿತಿಯನ್ನು ಮನಗಂಡು, ಆಕೆಯನ್ನು ಹೀಗೆಯೇ ಬಿಟ್ಟರೆ, ಏನಾದರೂ ಅನಾಹುತ ಮಾಡಿಕೊಂಡರೆ ಎಂಬ ಆತಂಕದಿಂದ ಮಧುಗಿರಿಗೆ

ಕರೆದುಕೊಂಡು ಹೊರಟರು. ಆ ದಿನ ಮಧುಗಿರಿಯಲ್ಲಿ ನಾಟಕವಿತ್ತು. ಉಮಾದೇವಿ ಬೇರೆ ದಾರಿ ಕಾಣದೆ ಮಧುಗಿರಿಗೆ ಹೋದರು.

ಮಧುಗಿರಿಯಲ್ಲಿ ರಾತ್ರಿ ನಾಟಕ ನಡೆಯಿತು. ಮುಗಿಯಿತು. ಬೆಳಿಗ್ಗೆಯಾಗುತ್ತಲೇ ಮತ್ತೆ ಏನು ಮಾಡುವುದು. ಮೂರ್ತಿ ಅಣ್ಣ ಉಮಾದೇವಿಯ ಮುಂದಿನ ಬದುಕಿನ ಬಗ್ಗೆ ಚಿಂತಿಸಿದ್ದಾರೆಯೇ? ಮತ್ತೆ ಉಮಾದೇವಿಯ ಆತಂಕ ಪ್ರಾರಂಭವಾಯಿತು. ಕಾಕತಾಳೀಯವೆಂಬಂತೆ ಮಧುಗಿರಿಯ ಬಳಿಯ ಪುರವರದ ಗ್ರಾಮದವರು ತಮ್ಮೂರಿನ ನಾಟಕಕ್ಕೆ ನಟಿಯೊಬ್ಬರನ್ನು ಹುಡುಕಿ ಬಂದಿದ್ದರು. ಮೂರ್ತಿ ಅಣ್ಣ ಉಮಾದೇವಿಯ ಮನ ಒಲಿಸಿ ಪಾತ್ರ ಅಭಿನಯಿಸಲು ಪುರವರಕ್ಕೆ ಕಳಿಸಿದರು.

ನಾಟಕವನ್ನು ಉಮಾದೇವಿ ನೋಡಿದ್ದರು. ಎಂದೂ ಮಾಡಿರಲಿಲ್ಲ. ಶಾಲಾ ಕಾಲೇಜುಗಳ ಸಾಂಸ್ಕೃತಿಕ ಚಟುವಟಿಕೆಗಳ ಅನುಭವ ಬಿಟ್ಟರೆ ಮತ್ತೇನು ಇರಲಿಲ್ಲ. ತಾನು ಪಾತ್ರ ಮಾಡುವುದು ಹೇಗೆ? ಅದೂ ಅಪರಿಚಿತರೊಂದಿಗೆ, ಅಪರಿಚಿತ ಸ್ಥಳದಲ್ಲಿ... ಮೂರ್ತಿ ಅಣ್ಣ ಧೈರ್ಯ ತುಂಬಿದರು. ಪುರವರದ ಜನ ಒಳ್ಳೆಯವರು. ಒಳ್ಳೇ ಸಂಸ್ಕಾರ ಪಡೆದಿದ್ದಾರೆ. ಸದ್ಯದ ನಿನ್ನ ಜೀವನಕ್ಕೆ ಒಂದು ನೆಲೆ ಸಿಗಬಹುದು ಎಂದೆಲ್ಲ ಹೇಳಿ ಒಪ್ಪಿಸಿದರು. ಪುರವರದ ಗ್ರಾಮಸ್ಥರೊಂದಿಗೆ ನಾಟಕಾಭ್ಯಾಸ ಹೊಸ ಅನುಭವ. ರುಕ್ಮಿಣಿಯ ಪಾತ್ರದಲ್ಲಿ ಉಮಾದೇವಿ ಅಭಿನಯಿಸಿದರು. 'ಸುಮಾ' ಎಂದು ತಮ್ಮ ಹೆಸರು ಹೇಳಿ, ನಿಜದ ಹೆಸರು ಮರೆಮಾಚಿದರು.

ರಂಗಭೂಮಿಯ ಉಮಾ ಅವರ ಆಯ್ಕೆಯಾಗಿರಲಿಲ್ಲ. ತತ್ಕಾಲಕ್ಕೆ ಪುರವರದಲ್ಲಿ ನಾಟಕ ಅಭಿನಯಿಸಿದರು. ತಾಲೀಮು ಇದ್ದಷ್ಟು ಕಾಲ ನೆತ್ತಿನ ಮೇಲಿನ ಸೂರಿಗೆ, ಎರಡು ಹೊತ್ತಿನ ತುತ್ತಿಗೆ ತೊಂದರೆ ಇರಲಿಲ್ಲ. ಹಿಂದೂಪುರದಿಂದ ಬಂದಿದ್ದ ಅನುಭವಿ ನಟಿಯರು, ನೃತ್ಯಗಾರ್ತಿಯರು ನೋಡಿ ಬೆರಗಾದರು. ರಂಗಭೂಮಿಯ ಮೊದಲ ಅನುಭವ ಅವರಲ್ಲಿ ಆತಂಕ ಹುಟ್ಟಿಸಿತ್ತು. ಅಭದ್ರತೆಯ ಜೀವನವನ್ನು ಎದುರಿಸಲು ಮುಖಕ್ಕೆ ಬಣ್ಣ ಹಚ್ಚಿದರು. ಆದರೇ ಅದೇ ಬಣ್ಣ ಬದುಕಿಗೆ ನಾಂದಿಯಾಗಬಹುದೆಂದು ಉಮಾ ಅವರಿಗೆ ತಿಳಿದಿರಲಿಲ್ಲ.

ಅಪರಿಚಿತ ಊರು, ಜನಗಳು... ಹಾಗೂ ಹೀಗೂ, ನಾಟಕದ ತಾಲೀಮು ಪ್ರದರ್ಶನಗಳನ್ನು ನಿಭಾಯಿಸಿದರು. ನಾಟಕ ಪ್ರದರ್ಶನ ಮುಗಿದು ಬಣ್ಣವನ್ನು ಅಳಿಸಿಹಾಕುತ್ತಿದ್ದಂತೆ ಮತ್ತೆ ಭವಿಷ್ಯದ ಪ್ರಶ್ನೆಗಳು ಭೂತಾಕಾರವಾಗಿ ನಿಂತಿತು. ಪುರವರದ ಮನೆಯೊಂದರ ಜಗಲಿಯ ಮೇಲೆ ಮಗಳು ಗಾಯಿತ್ರಿಯೊಂದಿಗೆ ಬದುಕು ನಡೆದಿತ್ತು. ನಾಟಕ ಮುಗಿದ ಮಾರನೆಯ ದಿನ ಉಮಾ ಅವರ ಬದುಕಿಗೆ ಮತ್ತೊಂದು ಆಸರೆ ಒದಗಿ ಬಂತು.

ಅದೇ ಊರಿನವರಾದ ನಂಜಪ್ಪನವರು ಉಮಾದೇವಿಯ ಅಸಹಾಯಕತೆಯ ಕಥೆ ಕೇಳಿ ತಮ್ಮ ತೋಟದ ಮನೆಯಲ್ಲಿ ಆಶ್ರಯ ನೀಡಿದರು. ಛೇರ್ಮನ್ ನಂಜಪ್ಪನವರ ಹೆಂಡತಿ ಸರ್ವಕ್ಕ, ಉಮಾದೇವಿಯವರ ಸರ್ವಸ್ವವೂ ಆದರು. ಮನೆಯ ಮಗಳಂತೆ ನೋಡಿಕೊಂಡರು. ಬಸರಿ ಬಯಕೆಯನ್ನು ತೀರಿಸಿದರು.

ಆಶ್ರಯದಾತರ ಮನೆಯ ಮಕ್ಕಳಿಗೆ ಪಾಠ ಹೇಳಿ ಕೊಡುವುದು. ಅವರ ಮೆಣಸಿನ ಗದ್ದೆ, ಗಬ್ಬಿನ ಗದ್ದೆ ಕಾಯುವುದು ಉಮಾದೇವಿ ಅವರ ಪಾಲಿಗೆ ಬಂದ ಕೆಲಸ. ಪುರವರದಲ್ಲಿ ಮತ್ತೊಂದು ನಾಟಕಕ್ಕೆ ತಯ್ಯಾರಿ ನಡೆಯಿತು. ನಾಟಕ ದೇವದಾಸಿ. ಮಣಿಮಂಜರಿ ಪಾತ್ರವನ್ನು ಒಪ್ಪಿ ಅಭಿನಯಿಸಿದರು.

ಎಲ್ಲಾ ವಿಷಯವನ್ನು ಛೇರ್ಮನ್ ನಂಜಪ್ಪನವರಿಗೆ ಉಮಾದೇವಿ ವಿವರವಾಗಿ ತಿಳಿಸಿದರು.

ತನ್ನ ಬದುಕಿನ ಕಥೆ–ವ್ಯಥೆಯನ್ನು ಹೇಳಿಕೊಂಡು ಹಗುರಾದ ಉಮಾದೇವಿಗೆ ತವರು ಮನೆಯ ಸೆಳೆತ. ನಂಜಪ್ಪನವರ ಅನುಮತಿ ಪಡೆದು ತಾಯಿಯ ಮನೆಗೆ ಬಂದರೆ, ಬೀಗ ಜಡಿದಿದ್ದ ಬಾಗಿಲು, ವಿಧಿಯಿಲ್ಲದೆ ಮತ್ತೆ ಪುರವರಕ್ಕೆ ಹೋದರೆ, ಅಲ್ಲಿ ತಾಯಿ ರೇವಮ್ಮ ತಂದೆ ಮುನಿನರಸಪ್ಪ ನಂಜಪ್ಪನವರ ಮನೆಯಲ್ಲಿ ಉಮಾದೇವಿ ನಿರೀಕ್ಷೆಯಲ್ಲಿದ್ದರು.

ಮುಂದೆ ತಾಯಿ ಮನೆಯಲ್ಲಿ ವಾಸ್ತವ್ಯ. ತಂದೆ ತಾಯಿಗೆ ಹೊರೆಯಾಗದಂತೆ ಬದುಕುವ ಸಂಕಲ್ಪ. ಒಂಟಿ ಹೆಣ್ಣು ಈ ಸಮಾಜದಲ್ಲಿ ಬದುಕುವುದು ಸವಾಲಿನ ಕೆಲಸ. ಛಲವಂತೆ ಉಮಾದೇವಿ ಅರ್ಧಕ್ಕೆ ನಿಂತ ಓದು ಮುಂದುವರೆಸಲು ತೀರ್ಮಾನಿಸಿದರು. ಮಕ್ಕಳಿಗಾಗಿ ಎಲ್ಲ ರೀತಿಯ ಸಂಕಷ್ಟ ಎದುರಿಸಲು ನಿರ್ಧರಿಸಿದರು. ನರ್ಸರಿ ಟೀಚರ್ ಟ್ರೈನಿಂಗ್ ಸೇರಿದರು. ಇವರ ವಾಸಸ್ಥಾನ ಸೋಮೇಶ್ವರ ಬಡಾವಣೆ (ಜಯನಗರ)ಗೆ ಸ್ಥಳಾಂತರಗೊಂಡಿತ್ತು. ಸೋಮೇಶ್ವರ ಬಡಾವಣೆಯಿಂದ ಟಿ.ಆರ್.ಮಿಲ್ ಬಳಿ ಇದ್ದ ನರ್ಸರಿ ತರಬೇತಿ ಕೇಂದ್ರಕ್ಕೆ ಕಾಲ್ನಡಿಗೆಯಲ್ಲಿ ಹೋಗಿ ಬರುತ್ತಿದ್ದರು. ಕೈಚೀಲದಲ್ಲಿ ಒಂದೆರೆಡು ಪುಸ್ತಕ, ಕಂಕುಳಲ್ಲಿ ಕೂಸು, ದಿನನಿತ್ಯದ ಓಡಾಟ ಸೋಮೇಶ್ವರ ಬಡಾವಣೆಯಿಂದ ಟಿ.ಆರ್.ಮಿಲ್‌ಗೆ, ಮತ್ತೆ ಹಿಂದಕ್ಕೆ.

ಹೀಗೊಂದು ದಿನ ಚಾಮರಾಜಪೇಟೆಯ ಗೆಳತಿಯ ಮನೆಯಿಂದ ಮನೆಗೆ ಹಿಂತಿರುಗಿ ಹೋಗುವಾಗ ಮಕ್ಕಳ ಕೂಟವನ್ನು ಹಾದು ಹೋದರು. ಮಕ್ಕಳಕೂಟದ ಒಳಕ್ಕೆ ದಣಿವಾರಿಸಿಕೊಳ್ಳಲು ಹೋದಾಗ ಅಲ್ಲೊಂದು ನಾಟಕ ತಂಡ

ನಾಟಕದ ರಿಹರ್ಸಲ್ ನಡೆಸುತ್ತಿತ್ತು. ಕುತೂಹಲ ತಾಳಲಾರದೆ ಅತ್ತಕಡೆ ಹೋದರು. ಒಂದಿಷ್ಟು ಮಂದಿ ಸೇರಿ ಅಭ್ಯಾಸ ನಡೆಸುತ್ತಿದ್ದರು. ಅಲ್ಲಿದ್ದ ಹಿರಿಯರೊಬ್ಬರಿಗೆ ತನ್ನ ಪರಿಚಯ ಹೇಳಿಕೊಂಡು ನಾಟಕವಾಡುವ ಬಯಕೆ ವ್ಯಕ್ತಪಡಿಸಿದ್ದರು. ಆ ಹಿರಿಯರು "ಸದ್ಯ ಯಾವುದೇ ಪಾತ್ರವಿಲ್ಲ. ಮುಂದೆ ಅವಕಾಶವಾದಾಗ ನೋಡೋಣ" ಎಂದು ಸಾಗುಹಾಕಿದರು.

ಬಾಲ್ಯದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಉಮದೇವಿಗೆ, ಪುರವರದಲ್ಲಿ ನಾಟಕದಲ್ಲಿ ಅಭಿನಯಿಸುವ ಅವಕಾಶ ತಾನಾಗಿ ಬಂತು. ಮನದ ಮೂಲೆಯಲ್ಲಿ ನಟನೆ ಬಗ್ಗೆ ಉಮಾದೇವಿಗೆ ಆಸೆ ಮೂಡಿರಬಹುದು? ಬಹುಶಃ ಕಲೆಯ ಸೆಳೆತವೇ ಹೀಗಿರಬೇಕು. ತಾನಾಗಿ ಪಾತ್ರ ಕೇಳಿದಾಗ ಇಲ್ಲವೆಂದವರು, ಅನಿರೀಕ್ಷಿತವಾಗಿ ಉಮಾದೇವಿಯನ್ನು ಭೇಟಿಯಾಗಿ ನಾಟಕವಾಡಲು ಆಹ್ವಾನಿಸಿದರು. ಉಮಾದೇವಿಯವರನ್ನು ಆಧುನಿಕ ರಂಗಭೂಮಿಗೆ ಪರಿಚಯಿಸಿದವರು ಹಿರಿಯ ನಟ ಮೈಕೋ ಚಂದ್ರಶೇಖರ್.

ರಂಗಸಂಪದ ಬೆಂಗಳೂರಿನ ಪ್ರಖ್ಯಾತ ರಂಗತಂಡ, ಉತ್ಸಾಹಿ ನಟನಟಿಯರನ್ನು ಹೊಂದಿದ್ದ ತಂಡ. ಡಾ.ಚಂದ್ರಶೇಖರ ಕಂಬಾರ 'ಸಂಗ್ಯಾಬಾಳ್ಯ' ನಾಟಕದ ಸಿದ್ಧತೆಗೆ ತೊಡಗಿದ್ದರು. ಉಮಾದೇವಿ ಮಕ್ಕಳಕೂಟದಲ್ಲಿ ಒಮ್ಮೆ ಭೇಟಿಯಾಗಿದ್ದ ತಂಡಕ್ಕೆ ತನ್ನ ವಿಳಾಸವನ್ನೇನು ಕೊಟ್ಟಿರಲಿಲ್ಲ. ಒಂದು ದಿನ ಅಶೋಕ ಪಿಲ್ಲರ್ ದಾಟಿ, ಮಾಧವನ್ ಉದ್ಯಾನವನದತ್ತ ಹೋಗುತ್ತಿದ್ದ ಉಮಾದೇವಿಯನ್ನು ಗುರುತಿಸಿ, ಮಕ್ಕಳ ಕೂಟದ ಪರಿಚಯ ಹೇಳಿ, ನಾಟಕದಲ್ಲಿ ಮಾಡಲು ಮೈಕೋ ಚಂದ್ರು ಆಹ್ವಾನಿಸಿದರು.

"ಯುಟಿಲಿಟಿ ಬಿಲ್ಡಿಂಗ್ ಹಿಂಭಾಗದಲ್ಲಿ ನಾಟಕದ ತಾಲೀಮು ನಡೆಯುತ್ತಿದೆ. ಆಸಕ್ತಿ ಇದ್ದರೆ ಬನ್ನಿ" ಎಂದು ಕರೆದರು. ಅನಿರೀಕ್ಷಿತವಾದ ಆಹ್ವಾನದಿಂದ ಗೊಂದಲಗೊಂಡರೂ ಉಮಾದೇವಿ, ಮೈಕೋ ಚಂದ್ರು ಹೇಳಿದ ಸ್ಥಳಕ್ಕೆ ಹೋದರು. 'ರಂಗಸಂಪದ'ದ ನಟಿಯಾಗಿ ಅವರ ಭವಿಷ್ಯ ಅವರಿಗೆ ತಿಳಿದಿರಲಿಲ್ಲ. 'ಸಂಗ್ಯಾಬಾಳ್ಯ' ನಾಟಕದಲ್ಲಿ ಮೇಳದಲ್ಲಿ ಹಾಡಿದರು. ಹೀಗೆ ಕಲಾಕ್ಷೇತ್ರವನ್ನರಸಿ ಉಮಾದೇವಿ ಬಂದರು.

ಸಾಮಾನ್ಯರ ಬದುಕಿನಲ್ಲಿ ಎಲ್ಲವೂ ಅನಿರೀಕ್ಷಿತಗಳೇ. ಯಾವುದನ್ನೂ ಯೋಚನಾ ಬದ್ಧವಾಗಿ ಮಾಡುವ, ವ್ಯವಧಾನದ ಬದುಕು ಉಮಾದೇವಿಯದ್ದಾಗಿರಲಿಲ್ಲ. ಬಾಲ್ಯದಲ್ಲಿ ಅಷ್ಟೋ ಇಷ್ಟೋ ನೆಮ್ಮದಿ ಕಂಡುಂಡು ಬೆಳೆದಿದ್ದ ಉಮಾದೇವಿ ಸಾಂಸಾರಿಕ ಬದುಕಿನ ತಲ್ಲಣಗಳ ನಡುವೆ ಸಮಾಧಾನವನ್ನು ಹೇಗೆ ನಿರೀಕ್ಷಿಸಲಾದೀತು. ಒಂದು ಸಾಂಘಿಕ ಕ್ರಿಯೆ ಎಲ್ಲಾ ನೋವುಗಳನ್ನು ಮರೆಸಬಲ್ಲದು. ರಂಗಭೂಮಿಯ ಶಕ್ತಿಯೇ ಅಂತಹದ್ದು. ತಾಯಿಯ ವಿರೋಧವಿದ್ದರೂ ನಾಟಕದ ತಾಲೀಮಿಗೆ ಬಂದರು. ರಂಗ ಸಂಪದದ ಒಡನಾಟದಲ್ಲಿ ತಮ್ಮ ರಂಗಾನುಭವವನ್ನು ವಿಸ್ತರಿಸಿಕೊಳ್ಳತೊಡಗಿದರು.

'ಸಂಗ್ಯಾಬಾಳ್ಯ' ನಾಟಕದ ನಿರ್ದೇಶಕರು ಟಿ.ಎಸ್.ನಾಗಾಭರಣ. ಉಮಾದೇವಿ ನಾಟಕದ ತಾಲೀಮುಗಳನ್ನು ಒಂದು ಮೂಲೆಯಲ್ಲಿ ಕುಳಿತು ಬೆರಗುಗಣ್ಣಿನಿಂದ ನೋಡುತ್ತಿದ್ದರು. ಸಹ ನಟನಟಿಯರೊಂದಿಗೆ ಸಹಜವಾಗಿ ಬೆರೆಯಲು ಹಿಂಜರಿಕೆ. ನಾಟಕದಲ್ಲಿ ಎಲ್ಲಾ ಪಾತ್ರಗಳನ್ನು ತನ್ನದಾಗಿಸಿಕೊಳ್ಳುವ ತವಕ. ಪಾತ್ರಗಳ ಚಲನೆ, ಅಭಿನಯದ ರೀತಿ, ಹಾವಾಭಾವ, ಅಭಿವ್ಯಕ್ತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅಭ್ಯಾಸ ಮಾಡುತ್ತಿದ್ದರು. ಸುಮಾರು ೮–೧೦ ಪ್ರದರ್ಶನಗಳಿಗೆ ಮೇಳದಲ್ಲಿ ಸಹಗಾಯಕಿಯಾಗಿದ್ದರು.

ಅದೊಂದು ಭಾನುವಾರ ರವೀಂದ್ರ ಕಲಾಕ್ಷೇತ್ರದಲ್ಲಿ 'ಸಂಗ್ಯಾಬಾಳ್ಯ' ನಾಟಕದ ಮರುಪ್ರದರ್ಶನ 'ಪರಮ್ಮ' ಪಾತ್ರ ಮಾಡುತ್ತಿದ್ದ ನಟಿ ಅಭಿನಯಿಸಲು ಸಾಧ್ಯವಾಗುತ್ತಿಲ್ಲ ಎಂಬ ಸಂಗತಿ ಹಿಂದಿನ ದಿನ ತಿಳಿಯಿತು. ಮರುದಿನದ ಬೆಳಗಿನ ಪ್ರದರ್ಶನ ನಡೆಯುವುದೆಂತು. ಎಲ್ಲರಲ್ಲು ಆತಂಕ. ನಿರ್ದೇಶಕರಿಗೆ ಸಿಟ್ಟು, ಪರ್ಯಾಯ ನಟಿಯ ಚಿಂತನೆಯ ಸಂದರ್ಭದಲ್ಲಿ ಗೆಳತಿಯ ಮೂಲಕ ಉಮಾದೇವಿ ಆ ಪಾತ್ರ ಮಾಡಲು ಪ್ರಯತ್ನಿಸುವುದಾಗಿ ತಿಳಿಸಿದರು. ಎಲ್ಲರಿಂದಲೂ ತಣ್ಣಗಿನ ಪ್ರತಿಕ್ರಿಯೆ. ಮಾರನೇ ದಿನ ಬಂದವರೇ ಉಮಾದೇವಿ ತಾನು ಮಾಡುವ ಪಾತ್ರದ ಮೇಕಪ್ ಹಾಕಿಸಿಕೊಂಡರು. ಅಂದು ಅವರು ನೀಡಿದ ಅಭಿನಯ ಎಲ್ಲರನ್ನು ಮಂತ್ರಮುಗ್ಧಗೊಳಿಸಿತು. ಎಲ್ಲರೂ ಪ್ರಶಂಶಿಸಿದರು. ಮುಂದಿನ ಪ್ರದರ್ಶನಗಳಿಗೆ ಅವರೇ ಖಾಯಂ ನಟಿಯಾದರು.

ಸಾಂಸ್ಕೃತಿಕ ರಂಗದಲ್ಲಿ ಉಮಾದೇವಿ 'ಉಮಾಶ್ರೀ'ಯಾಗಿ ಮಾರ್ಪಾಡುಗೊಂಡು ಮಹತ್ತನ್ನು ಸಾಧಿಸಿದ್ದನ್ನು ನಮ್ಮ ಜನರು ನೋಡಿದ್ದಾರೆ. ಒಬ್ಬ ಅಭಿನೇತ್ರಿ ಉಮಾಶ್ರೀ ಅವರಲ್ಲಿ ಸುಪ್ತವಾಗಿದ್ದಳು. ಬಂದ ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಂಡು ಯಶಸ್ವಿಯಾದದ್ದು ಇತಿಹಾಸ.

ಇವರ ಸಾಧನೆಗೆ ಒತ್ತಾಸೆಯಾಗಿ ನಿಂತವರು, ಉಮಾಶ್ರೀ ಅವರ ಪ್ರತಿಭೆಯನ್ನು ಗುರುತಿಸಿದ ಕನ್ನಡದ ಖ್ಯಾತ ನಿರ್ದೇಶಕರುಗಳು ಅವರಿಗೆ ಸವಾಲಾಗಿರುವ ಪಾತ್ರಗಳನ್ನೇ ನೀಡುತ್ತಾ ಬಂದರು. ಆಧುನಿಕ ಕನ್ನಡ ರಂಗಭೂಮಿಯ ಮೇರು ರಂಗಕೃತಿಗಳ ಯಶಸ್ಸಿಗೆ ಉಮಾಶ್ರೀ ಮುಖ್ಯ ಕಾರಣಕರ್ತರಾದರು. ಯಯಾತಿ, ಹಯವದನ, ಹರಕೆಯ ಕುರಿ, ರಕ್ತಾಕ್ಷಿ, ಯರ್ಮಾ, ತುಘಲಕ್, ಮೀಸೆ ಬಂದೋರು, ಋಷ್ಯಶೃಂಗ, ಕಳವು, ಒಡಲಾಳ ಮುಂತಾದವು. ಉಮಾಶ್ರೀ ಅವರ ಅಭಿನಯ

ಪ್ರತಿಭೆಯನ್ನು ಒರೆಗೆ ಹಚ್ಚಿದವು. ಖ್ಯಾತ ನಿರ್ದೇಶಕರಾದ ಬಿ.ವಿ.ಕಾರಂತ, ಆರ್.ನಾಗೇಶ್, ಸಿಜಿಕೆ, ಉಮಾಶಂಕರಸ್ವಾಮಿ, ಪ್ರಮೋದ್ ಶಿಗ್ಗಾಂವ್, ಜರ್ಮನ್‌ನ ಖ್ಯಾತ ರಂಗನಿರ್ದೇಶಕ ಫ್ರಿಟ್ಸ್ ಬೆನಿವಿಟ್ಸ್ ಮುಂತಾದವರ ನಿರ್ದೇಶನದಲ್ಲಿ ನಾಟಕಗಳನ್ನು ಮಾಡಿ ಖ್ಯಾತಿಯ ಉತ್ತುಂಗಕ್ಕೇರಿದರು.

'ರಂಗಸಂಪದ' ತಂಡದ 'ಒಡಲಾಳ'ದ ಅಧ್ಭುತ ಯಶಸ್ಸು ಉಮಾಶ್ರೀ ಅವರಿಗೆ ತಾರಾ ಮೌಲ್ಯವನ್ನು ತಂದುಕೊಟ್ಟಿತು. ಇಂದಿಗೂ ಈ ನಾಟಕದ ಮರು ಪ್ರದರ್ಶನವಾದರೆ ಪ್ರೇಕ್ಷಕರು ತುಂಬಿ ತುಳುಕುತ್ತಾರೆ. ೮೦ ರ ದಶಕದ ಆರಂಭದ 'ಒಡಲಾಳ' ನಾಟಕ ಖ್ಯಾತ ಕಥೆಗಾರ ದೇವನೂರು ಮಹಾದೇವರ ನೀಳ್ಗತೆ ಆಧಾರಿತ ರಂಗರೂಪ.

ರಂಗ ಸಂಪದ ಏರ್ಪಡಿಸಿದ್ದ ನಾಟಕ ರಚನಾ ಸ್ಪರ್ಧೆಗೆ ಈ ಕಥೆಯನ್ನು ಆಧರಿಸಿ ಸಿಜಿಕೆ ನಾಟಕ ರಚನೆ ಸ್ಪರ್ಧೆಗೆ ಕಳಿಸಿದ್ದರು. ಆದರೆ ಆ ಕೃತಿಗೆ ಬಹುಮಾನ ಬರಲಿಲ್ಲ. ಇದೇ 'ಒಡಲಾಳ'ವನ್ನು ಸಿಜಿಕೆ ರಂಗಸಂಪದಕ್ಕೆ ನಿರ್ದೇಶಿಸಲು ಉತ್ಸುಕತೆ ತೋರಿದರು. ಅಪಾರ ಕನಸುಗಾರ ಸಿಜಿಕೆ, ತನ್ನ ಏಕಲವ್ಯ ಪ್ರತಿಭೆಯಿಂದ ಅನೇಕ ಮುಖ್ಯ ನಾಟಕಗಳನ್ನು ರಂಗಕ್ಕೆ ತಂದಿದ್ದ ಕ್ರಿಯಾಶೀಲ ನಿರ್ದೇಶಕ. ಇವರಿಗೆ ಒತ್ತಾಸೆಯಾಗಿ ನಿಂತವರು ರಂಗಸಂಪದದ ಗೆಳೆಯರು ಹಾಗೂ ಸಂಘಟಕರಾದ ಜೆ. ಲೋಕೇಶ್, ಖ್ಯಾತ ನೇಪಥ್ಯ ತಜ್ಞ ಶಶಿಧರ ಅಡಪ ಅವರ ರಂಗ ವಿನ್ಯಾಸ. ಅ.ನ.ರಮೇಶ ಅವರ ಬೆಳಕು ವಿನ್ಯಾಸ. ತಾಂತ್ರಿಕವಾಗಿ ಅತ್ಯಂತ ಶ್ರೀಮಂತಿಕೆಗೆ ಸಾಕ್ಷಿಯಾದ ಈ ನಾಟಕ ಖ್ಯಾತಿ ಪಡೆದದ್ದು ಮುಖ್ಯವಾಗಿ ಎರಡು ಕಾರಣಕ್ಕೆ, ಒಂದು ಸಿಜಿಕೆಯವರ ಸಮರ್ಥ ನಿರ್ದೇಶನ ಹಾಗು ಉಮಾಶ್ರೀ ಅವರ ಭಾವಪೂರ್ಣ, ಶಕ್ತವಾದ ಸಹಜ ಅಭಿನಯ. 'ಒಡಲಾಳ'ದ 'ಸಾಕವ್ವ'ನಾಗಿ ಉಮಾಶ್ರೀ ಅಭಿನಯ ಪ್ರೇಕ್ಷಕರ ಮನಸೂರೆಗೊಂಡಿತ್ತು.

'ಒಡಲಾಳ'ದ ಅಭ್ಯಾಸಕ್ಕೆ 'ರಂಗಸಂಪದ' ಮೊದಲಾದಾಗ ಮುಖ್ಯಪಾತ್ರ 'ಸಾಕವ್ವ'ನಾಗಿ ಅಭಿನಯಿಸಲು ಉಮಾಶ್ರೀ, ಸಿಜಿಕೆ ಅವರ ಮೊದಲ ಆಯ್ಕೆಯಾಗಿರಲಿಲ್ಲ. ಬೇರೊಬ್ಬರು ಅಭಿನಯಿಸುತ್ತಿದ್ದರು. ಎಂದಿನಂತೆ ಉಮಾಶ್ರೀ 'ಒಡಲಾಳ' ಅಭ್ಯಾಸದ ಸಮಯದಲ್ಲಿ ಸಾಕವ್ವನನ್ನು ತಮ್ಮ ಅಂತರಂಗಕ್ಕೆ ತೆಗೆದುಕೊಂಡು ತನ್ನೊಳಗೆ ಒಳಗುದಿ ಅನುಭವಿಸುತ್ತಿದ್ದರು. ತಾನೇ ಸಾಕವ್ವನ ಪಾತ್ರ ಮಾಡಬೇಕೆಂಬ ಮನೋಇಚ್ಛೆಯಿದ್ದರೂ ನಿರ್ದೇಶಕರ ಆಯ್ಕೆಯೇ ಅಂತಿಮ ತಾನೆ. ಸಾಕವ್ವನನ್ನು ಅಭಿನಯಿಸುತ್ತಿದ್ದ ನಟಿ ಅನಿವಾರ್ಯ ಕಾರಣದಿಂದ ಬರಲಾಗಲಿಲ್ಲ. ಆಗ 'ಸಾಕವ್ವ' ಉಮಾಶ್ರೀಗೆ ಒಲಿದು ಬಂದಳು. ಮೆಚ್ಚಿದ ಪಾತ್ರ, ಇಚ್ಛಿಸಿದ ಪಾತ್ರ ಮಹಾ ಕನಸುಗಾರನ ಕಲ್ಪನೆಯನ್ನು ಸಾಕಾರಗೊಳಿಸಲು ಉಮಾಶ್ರೀ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು.

ದೇವನೂರು ಮಹಾದೇವರು ಚಿತ್ರಿಸಿದ್ದ 'ಸಾಕವ್ವ' ರಂಗದ ಮೇಲೆ ಮೈತಳೆದಾಗ ಎಲ್ಲರಲ್ಲೂ ಸಂಚಲನ. ಭಾರತದ ಹಳ್ಳಿಗಳಲ್ಲಿ ಅಸ್ಪೃಶ್ಯರಾಗಿ, ಸಮಾಜದ ಅಂಚಿನಲ್ಲಿ ಬದುಕುತ್ತಿರುವ ದಲಿತ ಸಮಾಜದ ಅಪರಿಚಿತಲೋಕ ರಂಗದ ಮೇಲೆ ಅನಾವರಣಗೊಂಡಾಗ ಪ್ರೇಕ್ಷಕರು ಬೆಚ್ಚಿಬಿದ್ದರು.

ಆವರೆಗೆ ನಮ್ಮ ಪ್ರೇಕ್ಷಕರು ಕಂಡಿದ್ದು ರಮ್ಯ ಕಥಾನಕಗಳನ್ನು. ಜಾನಪದ ಹೆಸರಿನ ರಂಜನೀಯ ನಾಟಕಗಳನ್ನು, ಹಾಡು, ಕುಣಿತಗಳೊಂದಿಗೆ ಮನರಂಜನೆಯನ್ನು ಹೆಚ್ಚಿಸುತ್ತಿದ್ದ ನಾಟಕಗಳನ್ನು. ಇಲ್ಲವೇ ವಿಚಾರದ ಭಾರದಿಂದ ತೂಗುತ್ತಿದ್ದ ಏಕತಾನತೆಯ ದೃಶ್ಯರೂಪಗಳನ್ನ.

'ಒಡಲಾಳ' ಅಂತಹ ಎಲ್ಲಾ ರಂಗನಿರ್ಮಿತಿಗಳನ್ನು ಏಕ ಕಾಲಕ್ಕೆ ಹೊಡೆದು ಹಾಕಿಬಿಟ್ಟಿತು. ಹಸಿವು, ಬಡತನ, ಶೋಷಣೆಯ ತುಳಿತದಿಂದ ತಳಸೇರಿದ್ದ ಒಂದು ಸಮುದಾಯದ ಪ್ರತಿನಿಧಿಯಾಗಿ ಸಾಕವ್ವ, ತನ್ನ ಕೋಳಿಯನ್ನು ಕಳೆದುಕೊಂಡು, ಹುಡುಕುತ್ತಾ ಹುಡುಕುತ್ತಾ ನಮ್ಮ ವ್ಯವಸ್ಥೆಯ ಹುಳುಕುಗಳನ್ನು ಅನಾವರಣಗೊಳಿಸಿದ ಪರಿ ಅನನ್ಯವಾದುದು. ಒಡಲಾಳದ ಸಾಕವ್ವನಾಗಿ ಉಮಾಶ್ರೀ ಪರಕಾಯ ಪ್ರವೇಶ ಮಾಡಿದ ರೀತಿ ಇಂದಿಗೂ ವಾಸ್ತವವಾದಿ ಅಭಿನಯದಲ್ಲಿ ಒಂದು ಅಪೂರ್ವ ದಾಖಲೆ. ಈ ನಾಟಕ ದೆಹಲಿಯ ಉತ್ಸವದಲ್ಲಿ ಪ್ರದರ್ಶಿತವಾದಾಗ ರಾಜಧಾನಿಯ ಪ್ರತಿಷ್ಠಿತ ಪತ್ರಿಕೆಗಳು, ಖ್ಯಾತ ರಂಗ ವಿಮರ್ಶಕರು ಉದ್ಗರಿಸಿದ್ದು, "ರಂಗಾಭಿನಯಕ್ಕೆ ಆಸ್ಕರ್ ಪ್ರಶಸ್ತಿ ಇದ್ದಿದ್ದರೆ, ಅದು ನಿಸ್ಸಂಶಯವಾಗಿ ಸಾಕವ್ವ ಪಾತ್ರಧಾರಿ ಉಮಾಶ್ರೀಗೆ ಸಲ್ಲುತ್ತದೆ" ಎಂದು. ಇಪ್ಪತ್ತನಾಲ್ಕರ ಹರೆಯದ ಉಮಾಶ್ರೀಗೆ ೮೦ ರ ವಯಸ್ಸಿನ ಮುದುಕಿಯಾಗಿ ನೀಡಿದ ಅಭಿನಯ ಕನ್ನಡ ರಂಗಭೂಮಿಯಲ್ಲಿ ಚಿರಸ್ಥಾಯಿಯಾಗುವಂತೆ ಮಾಡಿತು. ಯಾವುದೇ ಉತ್ಪ್ರೇಕ್ಷಿತ ವಿವರಣೆಗಳು ಇಲ್ಲದೆ ಒಡಲಾಳ ನಾಟಕ, ಒಡಲಾಳದ ಸಾಕವ್ವ ಕನ್ನಡ ರಂಗಭೂಮಿಯನ್ನು ಸದಾಕಾಲ ಕಾಡುವ ರಂಗಪ್ರಯೋಗವಾಗಿ ಜನಜನಿತವಾಗಿದೆ.

ಉಮಾಶ್ರೀ ಆಧುನಿಕ ರಂಗಭೂಮಿಯಲ್ಲಿ ತಮ್ಮನ್ನು ಹವ್ಯಾಸವಾಗಿ ತೊಡಗಿಸಿಕೊಂಡರೆ, ತಮ್ಮ ಜೀವನ ನಿರ್ವಹಣೆಗೆ ಆಶ್ರಯಿಸಿದ್ದು ನಮ್ಮ ಗ್ರಾಮೀಣ ರಂಗಭೂಮಿಯನ್ನು, ನಂತರ ವೃತ್ತಿ ಕಂಪನಿಗಳನ್ನು. ಗ್ರಾಮೀಣ ರಂಗಭೂಮಿಗೆ ಇವರು ಪರಿಚಿತರಾಗಿದ್ದು ಇವರ ಬಾಲ್ಯದ ಗೆಳತಿ ಪುಷ್ಪ ಅವರ ಮೂಲಕ.

ಪುರವರದಲ್ಲಿ ಆರಂಭಗೊಂಡ ಅವರ ಬಣ್ಣದ ಬದುಕು ನಿರಂತರವಾಗಿ ಅವರನ್ನು ಹಿಂಬಾಲಿಸುತ್ತಲೇ ಇತ್ತು. ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಾ, ರವೀಂದ್ರ ಕಲಾಕ್ಷೇತ್ರದ ನಾಟಕಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದ ಉಮಾಶ್ರೀ ಅವರಿಗೆ ಶ್ರೀ ಶಾರದ ಗರ್ಲ್ಸ್ ಪ್ರೌಢಶಾಲೆಯ ಸಹಪಾಟಿ ಪುಷ್ಪ, ಸುಬ್ಬಯ್ಯ ಸರ್ಕಲ್ ಬಳಿ ಆಕಸ್ಮಿಕವಾಗಿ ಭೇಟಿಯಾದರು. ಹಳೆಯ ನೆನಪುಗಳನ್ನು ಕೆದಕುತ್ತಾ ಕಳೆದ ಬದುಕಿನ ಅನುಭವವನ್ನು ಹಂಚಿಕೊಳ್ಳುತ್ತಾ, ತಮ್ಮ ಬದುಕಿನ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿದ್ದಾಗ ಗ್ರಾಮೀಣ ರಂಗಭೂಮಿ ಅವರಿಗೆ ನೀಡಿದ ಆಸರೆ, ಇಂದಿಗೂ ಅವರ ಮನಸ್ಸಿನಲ್ಲಿ ನೆಲೆ ನಿಂತಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದ್ದ ಪೌರಾಣಿಕ ನಾಟಕಗಳಲ್ಲಿ ಉಮಾಶ್ರೀ ಖಾಯಂ ನಟಿಯಾದರು. ರುಕ್ಮಿಣಿ, ಚಿತ್ರಾಂಗದ, ಹನುಮಂತ, ದ್ರೌಪದಿ ಮುಂತಾದ ಪಾತ್ರಗಳ ಲೆಕ್ಕವಿಲ್ಲದಷ್ಟು ಪ್ರದರ್ಶನಗಳು. ನೂರಾರು ಹಳ್ಳಿಗಳು, ಉಮಾಶ್ರೀ ಕಲೆಯನ್ನು ಬದುಕಿನ ಉಸಿರಾಗಿಸಿಕೊಂಡರು. ಕಲೆ ಇವರ ಕೈ ಹಿಡಿಯಿತು. ಕುರುಕ್ಷೇತ್ರ, ಸಂಪೂರ್ಣ ರಾಮಾಯಣ, ರುಕ್ಮಿಣಿ ಸ್ವಯಂವರ, ಬಬ್ರುವಾಹನ, ಚಾಮುಂಡೇಶ್ವರಿ ಮಹಿಮೆ, ಸತ್ಯಹರಿಶ್ಚಂದ್ರ ಮುಂತಾದ ನಾಟಕಗಳು, ವೈವಿಧ್ಯಮಯ ಪಾತ್ರಗಳು.

ಕನ್ನಡ ರಂಗಭೂಮಿಯಲ್ಲಿ ೭೦–೮೦ ರ ದಶಕ ಬಹಳ ಕ್ರಿಯಾಶೀಲರಾಗಿದ್ದ ಕಾಲ. ಹವ್ಯಾಸಿ ರಂಗತಂಡಗಳ ಮಹತ್ವದ ಪ್ರಯೋಗಗಳು ಒಂದೆಡೆಯಾದರೆ, ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಖಾನೆಗಳು, ಖಾಸಗಿ ಕಾರ್ಖಾನೆಗಳು, ಬ್ಯಾಂಕುಗಳು ರಂಗ ಚಟುವಟಿಕೆಗಳಲ್ಲಿ ವಿಶೇಷವಾಗಿ ತೊಡಗಿಸಿಕೊಂಡಿದ್ದವು.

ಕೈಗಾರಿಕಾ ನಾಟಕ ಸ್ಪರ್ಧೆಗಳ ಏರುಗತಿಯ ಕಾಲವದು. ಪ್ರತಿಯೊಂದು ಕೈಗಾರಿಕಾ ಸಂಸ್ಥೆಗಳು ತಮ್ಮ ಲಲಿತಕಲಾ ಸಂಘ, ಕನ್ನಡ ಸಂಘಗಳ ಮೂಲಕ ಪೈಪೋಟಿಯ ಮೇಲೆ ನಾಟಕಗಳನ್ನು ಆಡುತ್ತಿದ್ದವು. ಹತ್ತು ಹಲವು ಸ್ಪರ್ಧೆಗಳು, ನೂರಾರು ನಾಟಕಗಳು, ಅವರ ಎಲ್ಲಾ ಪ್ರಯೋಗಗಳಿಗೆ ಮಹಿಳಾ ಕಲಾವಿದೆಯರ ಅಗತ್ಯವಿತ್ತು. ಮಹಿಳಾ ಕಲಾವಿದೆಯರ ಕೊರತೆ ತುಂಬಿದ್ದು ಉಮಾಶ್ರೀ.

ಸ್ಪರ್ಧೆಯ ಎಲ್ಲ ನಾಟಕಗಳ ಮುಖ್ಯ ಪಾತ್ರಧಾರಿ ಉಮಾಶ್ರೀ. ಉತ್ತಮ ನಟಿ, ಉತ್ತಮ ಪೋಷಕ ನಟಿ ಪ್ರಶಸ್ತಿಗಳಿಗೆ ತಮಗೆ ತಾವೇ ಸ್ಪರ್ಧಿಸುವ ಸಂದರ್ಭ. ಒಂದರ ನಂತರ ಒಂದು ಪ್ರಶಸ್ತಿ, ನೂರಾರು ಪ್ರಶಸ್ತಿಗಳು. ಹಾಗೆಯೇ ತಿಂಗಳಿಗೆ ಇಷ್ಟು ಎಂಬ ಸ್ಥಿರವಾದ ಸಂಪಾದನೆ. ರಾತ್ರಿ ಹಗಲು ನಾಟಕದ ರಿಹರ್ಸಲ್, ಕಾರ್ಖಾನೆಗಳ ಶಿಫ್ಟ್‌ಗಳಂತೆ ನಾಟಕದ ರಿಹರ್ಸಲ್‌ಗೆ ಶಿಫ್ಟ್.

ರಕ್ತಾಕ್ಷಿ, ಕಾಡ್ಮನ್ಸ, ಹಯವದನ, ಕತ್ತಲೆ ಬೆಳಕು, ಜೋಕುಮಾರ ಸ್ವಾಮಿ, ಮೀನಿನ ಹೆಜ್ಜೆ, ಕತ್ತಲೆ ದಾರಿ ದೂರ, ಸನ್ನಿವೇಶ, ಕದಡಿದ ನೀರು ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದರು. ವೈವಿಧ್ಯಮಯ ಪಾತ್ರಗಳು, ನೂರಾರು ನಾಟಕಗಳು, ಪ್ರದರ್ಶನ ನಿರಂತರವಾಗಿ ನಟನೆಯಲ್ಲಿ ತೊಡಗಿಕೊಂಡ ಉಮಾಶ್ರೀ ಕೈಗಾರಿಕಾ ರಂಗಭೂಮಿಯ ಅವಿಭಾಜ್ಯ ಅಂಗವಾದರು. ತಮ್ಮ ವೃತ್ತಿಪರತೆ, ಶಿಸ್ತುಬದ್ಧ ನಟನೆ, ಸಮಯಪಾಲನೆ ಉಮಾಶ್ರೀ ತಮ್ಮ ವೃತ್ತಿ ಬದುಕಿನಲ್ಲಿ ಮೇಲೇರಲು ಸಹಾಯಕವಾಯಿತು.

ದಾವಣಗೆರೆಯಲ್ಲಿ 'ಸೂಳೆ ಸಂಪತ್ತು' ನಾಟಕದ ಮೂಲಕ ವೃತ್ತಿ ರಂಗಕ್ಕೆ ಬಂದರು. ಜನತೆಯೂ ಉಮಾಶ್ರೀ ಅವರನ್ನು ಪ್ರೀತಿಯಿಂದ ಒಪ್ಪಿಕೊಂಡರು. ಒಂದೊಂದು ಕಂಪನಿಯಲ್ಲಿ ಒಂದೊಂದು ಅನುಭವ, ಸಾಲುಸಾಲು ನಾಟಕಗಳು. ಉಮಾಶ್ರೀ ಪಾತ್ರ ಮಾಡುತ್ತಾರೆಂದರೆ, ಅಂದು ಗಲ್ಲಾಪೆಟ್ಟಿಗೆ ತುಂಬಿ ತುಳುಕುತ್ತಿತ್ತು. ವೃತ್ತಿ ಕಂಪನಿಗಳು ಅಂತಹ ಸುಸ್ಥಿತಿಯಲ್ಲೇನು ಇರಲಿಲ್ಲ. ಒಂದು ರೀತಿಯಲ್ಲಿ ನಶಿಸಿ ಹೋಗುತ್ತಿರುವ ಭವ್ಯ ಪರಂಪರೆ. ಉಮಾಶ್ರೀ ಬಡ ಕಂಪನಿಗಳಿಗೆ ಆಸರೆಯಾದದ್ದಂತೂ ನಿಜ. ಹಣಕಾಸು ಮುಗ್ಗಟ್ಟು, ಕಂಪನಿ ಮುಳುಗುತ್ತಿರುವ ಸಂದರ್ಭದಲ್ಲಿ ಉಮಾಶ್ರೀ ಕಂಪನಿಯ ಸಹಾಯಕ್ಕೆ ಧಾವಿಸುತ್ತಿದ್ದರು. ಉಮಾಶ್ರೀ ಅವರಿಗೆ ರಂಗಭೂಮಿ ಹೇಗೆ ಅನಿವಾರ್ಯವಾಯಿತೋ, ಹಾಗೆಯೇ ಕಂಪನಿ ನಾಟಕಗಳಿಗೆ ಉಮಾಶ್ರೀ ಅನಿವಾರ್ಯವಾದರು.

ಶ್ರೀ ಸಂಗಮೇಶ್ವರ ನಾಟ್ಯ ಸಂಘ, ಗುಡಗೇರಿ, ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಶ್ರೀ ಕುಮಾರ ವಿಜಯ ನಾಟ್ಯ ಸಂಘ, ಹಾನಗಲ್, ಚಿತ್ತರಗಿ ಕಂಪನಿ, ಕೆ.ಬಿ.ಆರ್ ಡ್ರಾಮಾ ಕಂಪನಿ, ಶ್ರೀ ಕುಮಾರೇಶ್ವರ ನಾಟ್ಯ ಸಂಘ, ಚಿತ್ರದುರ್ಗ, ರಾಜುತಾಳಿಕೋಟೆ ಕಂಪನಿ, ಶೇಖ ಮಾಸ್ತರರ ಕಂಪನಿ ಸೇರಿದಂತೆ ಹಲವಾರು ಕಂಪನಿಗಳ ನೂರಾರು ನಾಟಕಗಳಲ್ಲಿ ಅಭಿನಯಿಸಿದರು. ದಣಿವರಿಯದ ದೇಹ, ಮನಸ್ಸು ಕಲೆಯೇ ಕಾಯಕವೆಂಬಂತೆ ತೊಡಗಿಕೊಂಡ ದೈತ್ಯಪ್ರತಿಭೆ. ತನ್ನ ಮಕ್ಕಳ ಭವಿಷ್ಯ, ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಬೇಕೆಂಬ ಹೆಬ್ಬಯಕೆ, ಪಾಲಿಗೆ ಬಂದ ಪಾತ್ರಗಳಿಗೆ ನಿರ್ವಂಚನೆಯಿಂದ ಜೀವ ತುಂಬುತ್ತಿದ್ದ ಕಲಾವಿದೆ.

ಸೂಳೆ ಸಂಪತ್ತು, ಬಸ್ ಕಂಡಕ್ಟರ್, ಎಚ್ಚರ ತಂಗಿ ಎಚ್ಚರ, ಗೌಡ್ರ ಗದ್ಲ, ಹಸಿರು ಬಳೆ, ಮಲಮಗಳು, ಧರ್ಮ ದೇವತೆ, ಚಿನ್ನದ ಗೊಂಬೆ, ಕಾಳಿಂಗ ಸರ್ಪ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಅಪಾರ ಹೆಸರು ಮಾಡಿದರು.

ಕಲಾವಿದರು ಪಾತ್ರಕ್ಕಾಗಿ ಕಾಯುವುದು ಒಂದೆಡೆಯಾದರೆ, ಪಾತ್ರವೇ ಕಲಾವಿದರನ್ನು ಹುಡುಕಿಬರುತ್ತದೆ. ಹಾಗೆ ಉಮಾಶ್ರೀ ಅವರನ್ನು ಹುಡುಕಿಬಂದ ಪಾತ್ರ 'ಪುಟ್ನಂಜ' ಚಿತ್ರದ 'ಪುಟ್ಮಲ್ಲಿ' ಪಾತ್ರ. ಅವರ ವೃತ್ತಿ ಜೀವನಕ್ಕೆ ಮತ್ತೊಂದು ತಿರುವು ಕೊಟ್ಟ ಅಪರೂಪದ ಪಾತ್ರ. ತಮ್ಮ ಸಹಜ ಅಭಿನಯದಿಂದ ಮನೆಮಾತಾದ ಉಮಾಶ್ರೀ ತಮ್ಮ ಕಲಾ ಜೀವನದಲ್ಲಿ ಮತ್ತೊಂದು ಎತ್ತರಕ್ಕೆ ಏರಿದರು.

ಸದಭಿರುಚಿಯ ಹಾಸ್ಯ ಪಾತ್ರಗಳಲ್ಲಿ ಮಿಂಚತೊಡಗಿದರು. ಪ್ರಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಗುಲಾಬಿ ಟಾಕೀಸ್' ಚಿತ್ರದಲ್ಲಿ ನಟಿಸಿದರು. 'ಗುಲಾಬಿ' ಪಾತ್ರದ ನಟನೆಗೆ ರಾಷ್ಟ್ರ ಪ್ರಶಸ್ತಿ ಪಡೆದರು. ಕಾಸರವಳ್ಳಿಯವರ ಮತ್ತೊಂದು ಚಿತ್ರ ಕನಸೆಂಬೋ ಕುದುರೆಯನೇರಿಯಲ್ಲೂ ನಟಿಸಿ ಅಪಾರ ಮೆಚ್ಚುಗೆ ಗಳಿಸಿದರು. ಕಿರುತೆರೆಯಲ್ಲೂ ಸಾಕ್ಷ್ಯ ಚಿತ್ರಗಳು, ಧಾರಾವಾಹಿಗಳಲ್ಲಿ ನಟಿಸಿದರು. ನಿರಂತರವಾಗಿ ಎಲ್ಲಾ ದೃಶ್ಯಮಾಧ್ಯಮಗಳಲ್ಲಿ ಅಭಿನಯಿಸುತ್ತಾ ತಮ್ಮ ಬದುಕಿಗೆ ನೆಲೆ ಕಂಡುಕೊಂಡ ಉಮಾಶ್ರೀ ತಮ್ಮ ಮಕ್ಕಳ ಭವಿಷ್ಯದ ಬದುಕಿಗೆ ಭದ್ರ ಬುನಾದಿ ಹಾಕಿದರು. ನೇಕಾರ ಸಮುದಾಯದ ಸಮಾವೇಶ ನಡೆಸಿ, ಅವರ ಕಷ್ಟಗಳಿಗೆ ದನಿಯಾದರು. ಸಂಘಟಿತ ಹೋರಾಟವನ್ನು ನಡೆಸಿ, ಎಲ್ಲರಿಗೂ ನ್ಯಾಯ ದೊರಕುವಂತೆ ಮಾಡಿದರು.

ತಮ್ಮ ಸಮುದಾಯವನ್ನಷ್ಟೇ ಅಲ್ಲದೆ, ಒಟ್ಟು ಜನ ಸಮುದಾಯದ ಶೋಷಿತರ ಪರವಾಗಿ ಅನೇಕ ರಚನಾತ್ಮಕ ಕಾರ್ಯ ಹಮ್ಮಿಕೊಂಡರು. ಮಹಿಳೆಯ ಕಲ್ಯಾಣದ ಬಗ್ಗೆ ವಿಶೇಷ ಗಮನ ಹರಿಸಿದರು. ಅಸಂಘಟಿತ ಮಹಿಳಾ ಕಾರ್ಮಿಕರ ಜೊತೆಗೆ ವಿಧವೆಯರು, ಲೈಂಕಿಕ ಕಾರ್ಯಕರ್ತರು, ಮಂಗಳಮುಖಿಯರ ಪರವಾಗಿ ಹೋರಾಡಿ ಅವರಿಗೆ ಅನೇಕ ಸವಲತ್ತು ದೊರಕುವಂತೆ ಮಾಡಿದರು. ನೇಕಾರ ಕುಟುಂಬಗಳಿಗೆ ಸಹಾಯ ಧನ, ಬಡ್ಡಿ ಮನ್ನಾ, ಸುಲಭ ಬಡ್ಡಿ ದರದಲ್ಲಿ ಸಾಲ ಮಂಜೂರಾತಿ ಮುಂತಾದ ಕೆಲಸಗಳನ್ನು ಮಾಡಿದರು.

೨೦೦೮ ವಿಧಾನಸಭಾ ಚುನಾವಣೆಯಲ್ಲಿ ತೇರದಾಳದಲ್ಲಿ ಸೋಲನ್ನನುಭವಿಸಿದರು. ಆದರೆ ೨೦೧೩ ರ ಮೇ ತಿಂಗಳಿನಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ವಿಧಾನಸಭೆ ಪ್ರವೇಶಿಸಿದರು. ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಸಚಿವರೂ ಆದರು. ಇದು ಅಂತಿಂಥ ಸಾಧನೆಯಲ್ಲಾ, ನೊಣವಿನಕೆರೆಯ ಅಮಾಯಕ ಕೂಸೊಂದು ಬೆಂಗಳೂರೆಂಬ ಮಹಾನಗರದ ತೆಕ್ಕೆಗೆ ಬಿದ್ದು, ಬದುಕಿನ ಎಲ್ಲ ರೀತಿಯ ಅನುಭವವನ್ನು ಪಡೆದು, ಮಣ್ಣಿನ ಹುಡಿಯಲ್ಲಿ ಹುಡಿಯಾಗಬಹುದಾಗಿದ್ದ ಬದುಕಿಗೆ ಹೊಸ ಜೀವ ಕೊಟ್ಟು, ಕನಸುಬಿತ್ತಿ, ಬೆಳೆದುನಿಂತು ಮಹಾ ಛಲಗಾತಿಯಾದ ಪರಿ ಸಾಮಾನ್ಯವಾದ ಘಟನೆಯಲ್ಲ.

ಮಧುಗಿರಿಯ ಪುರವರದಲ್ಲಿ ಮೊದಲು ಬಣ್ಣಹಚ್ಚಿದಾಗ ಅಲ್ಲಿ ಕಾಡಿದ ಯುವಕನೊಬ್ಬನಿಗೆ ತಮ್ಮ ಏಟಿನ ರುಚಿ ತೋರಿಸಿದ್ದರಂತೆ. ಒಂಟಿ ಹೆಣ್ಣು ಈ ಸಮಾಜದಲ್ಲಿ ಬದುಕಬೇಕಾದರೆ ಮಾತಿನ ಶಕ್ತಿಯ ಮರ್ಮವನ್ನು ಅರಿತು, ಕಲಿತು, ರಂಗ ಮಾಧ್ಯಮದ ಎಲ್ಲಾ ಟಿಸಿಲುಗಳಲ್ಲಿ ತಮ್ಮ ಪ್ರತಿಭೆಯನ್ನು ಧಾರೆ ಎರೆದ ಉಮಾಶ್ರೀ, ಚಲನಚಿತ್ರರಂಗದಲ್ಲೂ ಹೆಜ್ಜೆ ಮೂಡಿಸಿದಾಗ ಅನುಭವಿಸಿದ ಅವಮಾನ, ಮಾನಸಿಕ ವೇದನೆ ಅಪಾರ. ಸಾಂಸಾರಿಕ ಬದುಕಿನ ಏರುಪೇರು ಒಂದೆಡೆಯಾದರೆ, ಮಕ್ಕಳ ಭವಿಷ್ಯಕ್ಕಾಗಿ ತುಡಿಯುವ ತಾಯಿ ಕರುಳಿನ ತಳಮಳ ಮತ್ತೊಂದೆಡೆ. ಹೊಸ ಬದುಕು, ಹೊಸ ಕನಸು, ಹೊಸ ಹೆಜ್ಜೆ ಎಲ್ಲದಕ್ಕೂ ಒಂದಲ್ಲಾ ಒಂದು ಅಡೆತಡೆ. ಎಲ್ಲವನ್ನು ನಿವಾರಿಸಿಕೊಂಡು ಬೂದಿಯಿಂದೆದ್ದು ಬಂದು, ನಿಂತು ರೆಕ್ಕೆ ಬಿಚ್ಚಿ ಬಾನೆತ್ತರಕ್ಕೆ ಹಾರಿದ ಫೀನಿಕ್ಸ್ ಹಕ್ಕಿಯಂತೆ 'ಒಡಲಾಳ ಒಡತಿ ಸಾಕವ್ವ' ಭೂಮಿಯಲ್ಲಿ ಗಟ್ಟಿಯಾಗಿ ಪಾದ ಊರಿ, ತನ್ನೆಲ್ಲಾ ಸಾಧನೆಗಳ ಮೂಲಕ ಬಾನೆತ್ತರಕ್ಕೆ ಬೆಳೆದ ಪರಿಗೆ ಇದೋ ಅಸಂಖ್ಯ ನಮನಗಳು.

* * * *

# ೨. ಸ್ವಾತಂತ್ರ್ಯ

**ಆಶಯ :**

ಅಲ್ಲಿ–ಆ ಸ್ವಾತಂತ್ರ್ಯ ಸ್ವರ್ಗದಲಿ–ಓ ತಂದೆ
        ನನ್ನದೀ ನಾಡಿಂದು ಕಣ್ತೆರೆಯಲಿ.
ಆಂತರ್ಯದಭಿಮಾನ ತಲೆಯೆತ್ತಿ ನಿಂತಿರಲಿ;
        ಮನದಿ ಭೀತಿಯ ಭೂತ ಬಾರದಿರಲಿ.
ಅರಿವಿನಾ ಹಾದಿಯದು ನಿರ್ವಿಘ್ನವಾಗಿರಲಿ;
        ಸತ್ಯದಾಳದಿ ಶಬ್ದದುಗಮವಿರಲಿ.
ಚಿಕ್ಕಮನೆ ಇರುಕು ಗೋಡೆಗಳಲ್ಲಿ ಸಿಕ್ಕು ಈ
        ಹಿರಿಜಗವು ತುಣುಕಾಗಿ ಹೋಗದಿರಲಿ.
ಎಡೆಬಿಡದ ಹೋರಾಟ, ಪರಿಪೂರ್ಣತೆಯ ಕಡೆಗೆ
        ತನ್ನ ತೋಳುಗಳನ್ನು ಚಾಚುತಿರಲಿ.
ನಿರ್ಜೀವ ರೂಢಿಗಳ ದಾರುಣದ ಮರಳಿನಲಿ
        ತಿಳಿಯ ತಿಳಿಝರಿ ಇಂಗಿ ಹೋಗದಿರಲಿ.
ಸರ್ವದಾ ವಿಕಸಿಸುವ ಬಗೆಯಲ್ಲಿ, ಕೃತಿಯಲ್ಲಿ
        ಮನ, ನಿನ್ನನನುಸರಿಸಿ ಮುನ್ನಡೆಯಲಿ.
ಅಂಥ–ಆ ಸ್ವಾತಂತ್ರ್ಯ ಸ್ವರ್ಗದಲಿ–ಓ ತಂದೆ!
        ನನ್ನದೀ ನಾಡಿಂದು ಕಣ್ ತೆರೆಯಲಿ!

**ಮೂಲ : ರವೀಂದ್ರನಾಥ ಠಾಕೂರ್**
**ಅನುವಾದ : ಚಂದ್ರಶೇಖರ ಪಾಟೀಲ**

# 1. ಗವಾಕ್ಷಿ

ವಿಜಯಾ ದಬ್ಬೆ

ಗವಾಕ್ಷಿಗಳೆಂದರೆ
ನನಗಿಷ್ಟು ಪ್ರೀತಿಯೆಂದು
ನನಗೇ ತಿಳಿದಿರಲಿಲ್ಲ.

ಇದ್ದಿರಬೇಕು ಒಳಗೊಳಗೇ
ಈ ಮೂವತ್ತು ಚಿಲ್ಲರೆ ವರ್ಷಗಳಲ್ಲಿ
ಈಗ ಒಮ್ಮೆಗೇ ಭುಗಿಲೆಂದಿತು
ನಮ್ಮ ಹೊಸಮನೆಗೆ ಗವಾಕ್ಷಿ ಬೇಡೆಂದಾಗ.

ಅವೆಲ್ಲ ಹಳೆಯ ಕಾಲದ್ದಂತೆ
ತಾರಸಿಗಳಿಗೆ ಅವು ಬೇಡವಂತೆ
ಅವಿದ್ದರೆ ಮನೆ ಭದ್ರವಿಲ್ಲಂತೆ
ಇಂಥ ನೂರಾರು ಅಂತೆಗಳು
ಅಂತೂ ಕೊನೆಗೆ ನಮ್ಮನೆಗೆ ಗವಾಕ್ಷಿಗಳಿಲ್ಲ.

ಯಾರಿಗೆ ಹೇಗೆ ವಿವರಿಸಲಿ
ಗವಾಕ್ಷಿಗಳಿಲ್ಲದ ಮನೆ ಮನೆಯಲ್ಲವೆಂದು.
ನಮ್ಮಜ್ಜಿಯ ಎಲ್ಲ ಕಥೆಗಳಲ್ಲೂ
ರಾಜಕುಮಾರಿಯರ ಮನೆಗೆ ಗವಾಕ್ಷಿಗಳಿದ್ದವು.
ರಾಜಕುಮಾರರೆಲ್ಲ ಬಂದದ್ದು ಅಲ್ಲಿಂದಲೇ.

ಹಳೆಯ ಮನೆಗಳಲ್ಲೆಲ್ಲಾ
ಕನಸಾರಿದ ಕಣ್ಣುಗಳಲ್ಲೂ
ಸಕ್ಕರೆಯಚ್ಚಿನಂಥ ಗವಾಕ್ಷಿಗಳ
ನೋಡನೋಡುತ್ತ ಕನಸಿಗಿಳಿದಿದ್ದೆ.

ಗವಾಕ್ಷಿಗಳಿಲ್ಲದ ಮನೆಯಲ್ಲಿ
ರಾಜಕುಮಾರರೆಲ್ಲ ಹೊರಗೆ ನಿಂತು
ನಿಟ್ಟುಸಿರಿಡುವಾಗ ಹೇಗೆ ನಿದ್ರಿಸಲಿ?
ಬಿಕ್ಕುವ ಕನಸುಗಳ ಹೇಗೆ ಸಂತೈಸಲಿ?

# ಅಡುಗೆ ಮನೆಯ ಹುಡುಗಿ

**ವೈದೇಹಿ**

ಇವೆಯಂತೆ ತರತರದ ಅರ್ಥ
ಅಡುಗೆ ಮನೆಗೆ–ತರತರದ ಪದಾರ್ಥಗಳಂತೆ
ಆದರೆ ಆ ಹುಡುಗಿಗಂತೂ ಇದೇ
ಇದೇ ಮನೆ ಅಡುಗೆ ಮನೆ ಆ ಮನೆ ಈ ಮನೆ
ಗಟ್ಟಿ ಕೇಳಿದರೆ ಸ್ಮಶಾನವೂ ಸುಮ್ಮನೆ
ಪ್ರತಿ ಪ್ರಾಣಿಗೂ ಒಂದು ಹೊಟ್ಟೆ ಇದ್ದ ಹಾಗೆ
ಅವಳ ಅಡುಗೆ ಮನೆ
ಯಾರ ಸಿದ್ಧಾಂತ ಪಾಕವೋ
ಬಾಗಿಲಿಲ್ಲ ಕಿಟಕಿಯಿಲ್ಲ
ಹೊಗೆನಳಿಗೆಯೂ ಇಲ್ಲ
ಕೊನೆಗೊಂದು ಕಿರು ಕಿಂಡಿಯಾದರೂ . . .
ಹಂಬಲಿಸುತ್ತಾಳೆ.

ಹುಡುಗಿ ಆಡುವಾಗ ಹೊರಗೆ
ಹಕ್ಕಿ ಪಕ್ಕಿ ಮತ್ತು ಮಕ್ಕಳಾಡುವ ಸದ್ದು
ಬಸ್ಸು ಕಾರು ಆಟೋ ದೂರಕೋ ಕಡಲ ತೀರಕೋ
ಓಡುವ ಸದ್ದು.
ಮಸಾಲೆ ಕಡೆಯತ್ತ ಕಡೆಗಣಿಸುತ್ತಾಳೆ.
ಅಭಾವವಿದ್ದರೆ ವೈರಾಗ್ಯ ತಾನೆ?

ಆದರೂ ಒಮ್ಮೊಮ್ಮೆ
ಕೇಳಿಸಿದರೆ ವಿಮಾನ !
ವಿಮಾನ ವಿಮಾನ ! ಇದ್ದ ಇದ್ದಲ್ಲೇ ಕೂಗುತ್ತಾಳೆ
ಎಷ್ಟೆಂದರೂ ಉಪ್ಪು ಹುಳಿ ವಯೋಮಾನ
ಕೇಳುವಳು – ಎತ್ತ ಪಯಣ?
ಇಪ್ಪತ್ತೊಂದನೆಯ ಶತಮಾನ? ಜೊತೆಗೆ
ಕರೆದೊಯ್ಯುವೆಯ ನನ್ನ?
ಕರಗುತ್ತದೆ
ಆಗಸದ ಸದ್ದು ನಿಧಾ...ನ.

ಕ್ರಿ.ಪೂ. ಅಡುಗೆಮನೆಯ ಹುಡುಗಿ
ಪೂ ಪೂ ಊ
ದುತ್ತ ಹಾಡುವಳು
ಇರಬಹುದು ಈ ವಿಮಾನದೊಳಗೂ ಒಬ್ಬ
ಹಗಲು ವೇಷದ ಯಜಮಾನ
ಇರುವಂತೆ ಪ್ರತಿ ಪ್ರಾಣಿಗೂ ಕದಿಯುವ ಮತ್ತು
ಆಳುವ ಜಾಯಮಾನ.

ಮತ್ತೆ ಬರಬಹುದು ಪುಷ್ಪಕದ ರೆಕ್ಕೆ ಬಡಿಯುತ್ತಾ
ಮಾಡನ್ನು ಸೀಳಿ
ಏಣಿ ಕೆಳಗಿಳಿಸಿ
ಸಾಂಬ್ರಾಣಿ ಸಿಪ್ಪೆ ಬಿಡಿಸುತ್ತಿರುವ ತನ್ನ
ಎತ್ತಿ ಒಯ್ದು ಸಾಮ್ರಾಜ್ಞಿ ಮಾಡಿ
ರಾಮ ರಾಮಾ ! ಲಂಕೆಗೋ, ಆಯೋಧ್ಯೆಗೋ?
ಛೆ ! ಕೇಳಿ ಹಳಸಿದ ಅವವೇ ಊರುಗಳು ಹೆಸರುಗಳು.
ಕಂಡಿದ್ದೀರಾ ಯಾರೂ ಕಾಣದಂಥಾ ಲೋಕ?
ಹಾರಲಲ್ಲಿಗೆ–ಆಜ್ಞೆ ಮಾಡುವವಳು ತಾನು

ಹೀಗೆ–
ಹಾಡು ನೇಯುವವಳು ಹುಡುಗಿ
ಮುರಿಯುತ್ತ ಮೆಣಸಿನ ಚೊಟ್ಟು
ಆಕಾಶದ ಸದ್ದಿಗೆ ಕಿವಿಯ ತೆರೆದಿಟ್ಟು
ಕಳೆಯುವಳು ಆಯುಷ್ಯ ಬೊಟ್ಟು ಬೊಟ್ಟು

# 2. ಸುಸ್ಮಿತ ಮತ್ತು ಹಕ್ಕಿ ಮರಿ

**ಪೂರ್ಣಚಂದ್ರ ತೇಜಸ್ವಿ**

ಒಂದು ದಿನ ಏನೋ ಒಂದು ಪ್ರಯೋಗ ಮಾಡಲು ಹೋಗಿ ವಿನಾಕಾರಣ ಎಂಥ ತೊಂದರೆಗೆ ಸಿಕ್ಕಿಕೊಂಡೆ ಎಂದರೆ ಅದನ್ನು ಅದರ ಪೂರ್ವಾಪರಗಳೊಂದಿಗೆ ತಿಳಿಸುವುದೇ ಈ ಕಥೆ.

ಹಕ್ಕಿಗಳ ಫೋಟೋಗಳನ್ನು ನಾನು ಮೊದಲು ಪುಸ್ತಕಗಳಲ್ಲಿ ನಿಯತಕಾಲಿಕಗಳಲ್ಲಿ ನೋಡಿದಾಗ ಅವುಗಳ ಅಂದಚಂದಗಳನ್ನು ಎಲ್ಲರಂತೆಯೇ ಪ್ರಶಂಶಿಸುತ್ತಿದ್ದೆ. ಆದರೂ ಆ ಚಿತ್ರಗ್ರಾಹಕ ಫೋಟೋ ತೆಗೆಯಲು ಪಟ್ಟಿರಬಹುದಾದ ಕಷ್ಟ ತೊಂದರೆಗಳ ಅಂದಾಜು ಇರಲಿಲ್ಲ. ನೀವು ಸಹ ಚಿತ್ರಗ್ರಾಹಕರಾಗದ ಹೊರತು ಚಿತ್ರಗಳನ್ನು ನೋಡಿ ಮೆಚ್ಚಬಹುದೇ ವಿನಃ ಅವುಗಳನ್ನು ತೆಗೆಯುವ ಕಷ್ಟ ಏನೆಂಬುದು ನಿಮಗೆ ಗೊತ್ತಾಗುವುದೇ ಇಲ್ಲ. ನಾನು ಈವರೆಗೆ ಐದಾರು ಸಾವಿರ ಹಕ್ಕಿಗಳ ಫೋಟೋ ತೆಗೆದಿರಬಹುದು. ಅವುಗಳಲ್ಲಿ ಅರ್ಧದಷ್ಟು ನೆಗೆಟಿವ್‌ಗಳಲ್ಲಾದರೂ ನಾನು ತೆಗೆಯಬಯಸಿದ ಹಕ್ಕಿಗಳೇ ಇಲ್ಲ ಎಂದ ಮೇಲೆ ಎಷ್ಟೊಂದು ಕಾಲ, ಫಿಲ್ಮು, ಹಣ ವ್ಯರ್ಥವಾಗಿರಬಹುದು ನೀವೇ ಊಹಿಸಿ. ಇದಕ್ಕೆ ಮುಖ್ಯ ಕಾರಣ ಹಕ್ಕಿಗಳ ಫೋಟೋ ತೆಗೆಯಲು ಹೋದ ಛಾಯಾಗ್ರಾಹಕನಿಗೆ ತನ್ನ ಕ್ಯಾಮರ ಒಂದನ್ನುಳಿದು ಇನ್ನು ಯಾವುದೂ ಅವನ ಹತೋಟಿಯಲ್ಲಿ ಇಲ್ಲದ ಪ್ರತಿಕೂಲ ಸನ್ನಿವೇಶದಲ್ಲಿ ಅವನು ಕೆಲಸ ಮಾಡಬೇಕಾಗುತ್ತದೆ. ಬೆಳಕು, ಹಕ್ಕಿಗಳು, ಅವುಗಳ ಭಂಗಿ, ಹಿನ್ನೆಲೆ ಇವು ಯಾವುವೂ ನಿಮ್ಮ ಇಷ್ಟಕ್ಕೆ ತಕ್ಕಂತೆ ಇರುವುದೇ ಇಲ್ಲ. ಬೆಳಗಿನಿಂದ ಸಂಜೆಯವರೆಗೆ ಹಠಯೋಗದ ಭಂಗಿಯಲ್ಲಿ ಮರೆಯೊಳಗೆ ಕುಳಿತ ಛಾಯಾಗ್ರಾಹಕ ಸಹನೆಯಿಂದ ಕಾದು, ಇರುವ ಸನ್ನಿವೇಶವನ್ನೇ ಅತ್ಯುತ್ತಮವಾಗಿ ಬಳಸಿಕೊಳ್ಳಲು ಹೆಣಗಬೇಕು. ಜೊತೆಗೆ ಹಕ್ಕಿಗಳು ಅತ್ಯಂತ ಚಿಕ್ಕವೂ, ತುಂಬ ಚಪಲಚಿತ್ತದ ಪ್ರಾಣಿಗಳೂ ಆಗಿರುವುದರಿಂದ ಅಕಸ್ಮಾತ್ ಅವುಗಳ ಫೋಟೋ ಹಿಡಿಯುವುದರಲ್ಲಿ ಛಾಯಾಗ್ರಾಹಕ ಯಶಸ್ವಿಯಾದರೂ ಹಕ್ಕಿ ರೆಕ್ಕೆ ಬಡಿದೋ, ಕುತ್ತಿಗೆ ಅಲ್ಲಾಡಿಸಿಯೋ ಫೋಟೋ ಹಾಳಾಗಿರುತ್ತೆ. ಇದೆಲ್ಲಕ್ಕಿಂತ ಮಿಗಿಲಾಗಿ ಮನುಷ್ಯರ ಬಗ್ಗೆ ಅವಕ್ಕೆ ಇರುವ ಭಯವೇ ಚಿತ್ರಗ್ರಾಹಕರಿಗೆ ಇರುವ ಅತಿ ಮುಖ್ಯ ತೊಂದರೆ. ಅದರೆಡೆಗೆ ಗುರಿ ಹಿಡಿದಿದ್ದು ಕ್ಯಾಮರ ಆದರೂ ಅವು ಅದನ್ನು ಬಂದೂಕೆಂದೇ ತಿಳಿದು ಅಲ್ಲಿಂದ ಪಲಾಯನ ಮಾಡುತ್ತವೆ.

ಇದನ್ನೆಲ್ಲಾ ಅನುಭವಿಸಿ ಬೇಸರಗೊಂಡ ನಾನು ಹೇಗಾದರೂ ಈ ಹಕ್ಕಿಗಳನ್ನೆಲ್ಲಾ ನಾನೇ ಸಾಕಿ ಅವುಗಳಿಗೆ ಮನುಷ್ಯರ ಭಯ ಇಲ್ಲದಂತೆ ಬಳಕೆ ಮಾಡಿಕೊಂಡರೆ ಅನಂತರ ಅವುಗಳ ಫೋಟೋಗಳನ್ನು ಹತ್ತಿರದಿಂದಲೇ ಹೇಗೆ ಬೇಕೋ ಹಾಗೆ ತೆಗೆಯಬಹುದಲ್ಲವೆ ಎಂದು ಯೋಚನೆ ಮಾಡುತ್ತಿದ್ದೆ. ಆದರೆ ಈ ಯೋಜನೆ ಅವುಗಳ ಫೋಟೋ ತೆಗೆಯುವುದಕ್ಕಿಂತ ನೂರುಪಟ್ಟು ಕಷ್ಟಕರವಾದುದು ಎಂದು ಬಹುಬೇಗ ಮನವರಿಕೆಯಾಯ್ತು.

ಪೇಟೆಗಳಲ್ಲಿ ಗುಬ್ಬಚ್ಚಿಗಳು ಹೇಗೆ ಅಸಂಖ್ಯಾತವಾಗಿರುತ್ತವೆಯೋ ಹಾಗೆ ನಮ್ಮ ತೋಟದಲ್ಲಿ ಪಿಕಳಾರ ಅಥವಾ ಬುಲ್‌ಬುಲ್ ಹಕ್ಕಿಗಳು ಇದ್ದುವು. ಬುಲ್‌ಬುಲ್‌ಗಳಲ್ಲಿ ನೂರಾರು ತರದ ಪ್ರಭೇದಗಳಿದ್ದಾವೆ. ಜೊಟ್ಟೆ ಇರುವ ಬುಲ್‌ಬುಲ್, ಕೆಂಪುಮೀಸೆ ಬುಲ್‌ಬುಲ್, ಹಳದಿ ಕಪಾಲದ ಬುಲ್‌ಬುಲ್, ಹೊಂಬಣ್ಣದ ತಲೆಯ ಹಸಿರು ಬುಲ್‌ಬುಲ್, ಬಿಳಿಯ ಕುತ್ತಿಗೆಯ ಬುಲ್‌ಬುಲ್, ಕೆಂಪುಗಲ್ಲದ ಹಳದಿ ಬುಲ್‌ಬುಲ್ ಹೀಗೆ ಅನೇಕ ತರ ಇವೆ. ಇವೆಲ್ಲ ಹಕ್ಕಿಗಳೂ ನಮ್ಮ ತೋಟದಲ್ಲಿ ಅಸಂಖ್ಯಾತವಾಗಿ ಇದ್ದುವು. ಮನೆ ಹತ್ತಿರದ ಲಂಟಾನದ ಗಿಡಗಳಾಗಲೀ, ಚೆರ್ರಿ ಗಿಡಗಳಾಗಲೀ ಹಣ್ಣಾದರೆ ಸಾಕು. ಅಲ್ಲಿ ಅವು ಸೇರಿಕೊಂಡು ಗಲಾಟೆಯೋ ಗಲಾಟೆ. ಮನೆ ಪಕ್ಕ ಪ್ರೈಮರಿ ಸ್ಕೂಲ್ ಇದ್ದ ಹಾಗೆ ನನಗೆ ಭಾಸವಾಗುತ್ತಿತ್ತು. ಆದರೆ ಫೋಟೊ ತೆಗೆಯೋಣೆಂದು ಹೋದರೆ ಸಾಕು, ಅಷ್ಟು ಹಕ್ಕಿಗಳೂ ಬುರ್ರನೆ ರೆಕ್ಕೆ ಬಡಿಯುತ್ತಾ, ಮಿಕ್ಕ ಹಕ್ಕಿಗಳಿಗೆ ಎಚ್ಚರಿಕೆ ಕೂಗು ಕೂಗುತ್ತಾ ದಿಕ್ಕಾಪಾಲಾಗಿ ಪರಾರಿಯಾಗಿ ಬಿಡುತ್ತಿದ್ದವು.

ಕಾಡಿನ ಈ ಚಿಕ್ಕಪುಟ್ಟ ಹಕ್ಕಿಗಳಲ್ಲಿ ಇನ್ನೊಂದು ಅಭ್ಯಾಸ ನಾನು ಗಮನಿಸಿದ್ದೇನೆ. ಇವುಗಳ ಗೂಡುಗಳಿಗೆ ಸದಾ ಕೇರೆ ಹಾವು, ಕೆಂಬೂತ, ಬೆಕ್ಕು, ಕೋಗಿಲೆಗಳು, ಗೂಬೆಗಳು ಕಾಟ ಕೊಡುತ್ತವೆ. ಅನೇಕ ಹಕ್ಕಿಗಳಂತೂ ಹಕ್ಕಿ ಮೊಟ್ಟೆಗಳನ್ನು ಕದ್ದು ತಿಂದೇ ಜೀವನಯಾಪನೆ ಮಾಡುತ್ತವೆ. ಮೊಟ್ಟೆ ಕದಿಯಲು ಹೋದಾಗೇನಾದರೂ ಕಾವು ಕೊಡುತ್ತ ಕುಳಿತ್ತಿದ್ದ ತಾಯಿಹಕ್ಕಿ ಸಿಕ್ಕರೆ ಅದನ್ನೂ ಅವು ಗುಳುಂ ಮಾಡುತ್ತವೆ. ಈ ಉಪದ್ರ ಮಾರಿಗಳಿಂದೆಲ್ಲ ತಮ್ಮ ಗೂಡನ್ನು ರಕ್ಷಿಸಿಕೊಳ್ಳಲಾಗದ ಚಿಕ್ಕಪುಟ್ಟ ಅಸಹಾಯಕ ಹಕ್ಕಿಗಳು ಆದಷ್ಟು ಮನುಷ್ಯರ ಓಡಾಟ ಬಳಕೆ ಇರುವಂಥ ಜಾಗಗಳಲ್ಲೆ, ಎಂದರೆ ಮನೆಯ ಬಳಿ, ಸೌದೆಕೊಟ್ಟಿಗೆಯಲ್ಲಿ, ಸಸಿ ಚಪ್ಪರದ ಸೊಪ್ಪಿನಲ್ಲಿ ಇಂಥ ಜಾಗಗಳಲ್ಲಿ ತಮ್ಮ ಗೂಡನ್ನು ಕಟ್ಟುತ್ತವೆ. ಇದಕ್ಕೆ ಮುಖ್ಯ ಕಾರಣ ಅಪಾಯಕಾರಿ ಹಕ್ಕಿಗಳು ಮನುಷ್ಯರು ಓಡಾಡುವ ಜಾಗಗಳಲ್ಲಿ ಬರಲು ಅಂಜುತ್ತವೆ ಎಂಬುದು.

ಒಮ್ಮೆ ನಮ್ಮ ಸಸಿ ಚಪ್ಪರದ ಪಕ್ಕ ಹೊದಿಸಿದ್ದ ಅಡ್ಡ ತಡಿಕೆಯ ಸೊಪ್ಪಿನಲ್ಲಿ ಒಂದು ಪಿಕಳಾರ ಹಕ್ಕಿ ಗೂಡು ಮಾಡಿತ್ತು. ನಾನು ಸಸಿಗಳನ್ನು ನೋಡಲು ಹೋದಾಗಲೆಲ್ಲ ನನ್ನ ಮಗಳು ಸುಸ್ಮಿತಾಳನ್ನೂ ಕರೆದೊಯ್ದು ಚುಕ್ಕೆಚುಕ್ಕೆಗಳಿರುವ ಕೆಂಬಣ್ಣದ ಮೊಟ್ಟೆಗಳನ್ನೂ, ಹಕ್ಕಿಗೂಡನ್ನೂ ತೋರಿಸುತ್ತಿದ್ದೆ. ಇನ್ನೂ ಸ್ಕೂಲಿಗೆ ಹೋಗದ ಐದಾರು ವರ್ಷದ ಅವಳಿಗೆ ಇವೇ ಮೊದಲ ಪಾಠಗಳಾಗಿದ್ದುವು. ಕಾವು ಕೊಡುತ್ತಿದ್ದ ತಾಯಿಹಕ್ಕಿ ನಾವು ಚಪ್ಪರದೊಳಗೆ ಹೋಗುತ್ತಲೂ ತಮಗೆ ಗೊತ್ತಾಗದಂತೆ ತಡಿಕೆಯ ಇನ್ನೊಂದು ಬದಿಯಿಂದ ಹಾರಿಹೋಗುತ್ತಿತ್ತು. ನಾವು  ಹಿಂದಿರುಗುತ್ತಲೂ ಮತ್ತೆ ಬಂದು ಕಾವು ಕೂರುತ್ತಿತ್ತು. ಹೀಗೇ ಕೆಲವು ದಿನ ನಡೆಯಿತು. ಆದರೆ ಒಂದು ದಿನ ಮಾತ್ರ ನಾವು ಹೋದಾಗ ತಾಯಿಹಕ್ಕಿ ಅಲ್ಲಿರಲಿಲ್ಲ. ಬರೀ ಮೊಟ್ಟೆಗಳು ಮಾತ್ರ ಇದ್ದವು. ತಾಯಿಹಕ್ಕಿ ನಾವು ಬರುವ ಮೊದಲೇ ಹಾರಿ ಹೋಗಿರಬೇಕೆಂದು ತಿಳಿದು ನಾವು ಹಿಂದುರಿಗಿದೆವು. ಆದರೆ ಸಂಜೆ ನೋಡಿದಾಗಲೂ ಗೂಡು ಖಾಲಿ ಇತ್ತು. ಮೊಟ್ಟೆಗಳು ಮಾತ್ರ ಇದ್ದುವು! ತಾಯಿಹಕ್ಕಿಗೆ ಏನೋ ತೊಂದರೆಯಾಗಿರಬಹುದೆಂದು ಅನುಮಾನಿಸಿದೆ. ಆದರೂ ಆ ಬಗ್ಗೆ ಹೆಚ್ಚು ಯೋಚಿಸದೆ ಮನೆಗೆ ಹಿಂದಿರುಗಿದೆ.

ಮಾರನೆ ದಿನ ಮತ್ತೆ ಹೋದಾಗ ಸುಸ್ಮಿತ ನನ್ನ ಜೊತೆ ಇದ್ದಳು. ಆಗಲೂ ಗೂಡಿನಲ್ಲಿ ಮೊಟ್ಟೆಗಳು ಮಾತ್ರ! ತಾಯಿಹಕ್ಕಿಯ ಸುಳಿವಿರಲಿಲ್ಲ. ಮೊಟ್ಟೆಗಳನ್ನು ಮುಟ್ಟಿ ನೋಡಿದೆ. ಸಾಧಾರಣವಾಗಿ ಬೆಚ್ಚಗಿರಬೇಕಾದ ಮೊಟ್ಟೆಗಳು ತಣ್ಣಗಾಗಿದ್ದವು. ಎಂದರೆ ಬಹುಕಾಲದಿಂದ ತಾಯಿಹಕ್ಕಿ ಕಾವು ಕೂರುವುದನ್ನು ನಿಲ್ಲಿಸಿದೆ!

ಏನಾಗಿರಬಹುದೆಂದು ಚಪ್ಪರದ ಆಚೆಗೆ ಇಣುಕಿ ನೋಡಿದೆ. ಅಲ್ಲಿ ತಾಯಿ ಹಕ್ಕಿಯ ಪುಕ್ಕಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಕಂತೆಕಂತೆ ಬಿದ್ದಿತ್ತು. ಗೂಬೆಯೋ ಏನೋ ರಾತ್ರಿ ಬಂದು ಕಾವು ಕೊಡುತ್ತ ಕುಳಿತ ಹಕ್ಕಿಯನ್ನು ಹಿಡಿದು ಅಲ್ಲೇ ಪುಕ್ಕ ಎಲ್ಲಾ ಕಿತ್ತು ತಿಂದಿದೆ. ಅದಕ್ಕೇ ಎರಡು ದಿನದಿಂದ ಹಕ್ಕಿ ಕಾವು ಕುಳಿತಿಲ್ಲ ! ಇನ್ನು ಮೊಟ್ಟೆಗಳು ತಬ್ಬಲಿಗಳೇ ಸರಿ !

ಸುಸ್ಮಿತಳಿಗೆ ಏನಾಗಿದೆಯೆಂದು ವಿವರಿಸಿ ಅಲ್ಲಿ ಬಿದ್ದಿದ್ದ ಪುಕ್ಕಗಳನ್ನೆಲ್ಲ ತೋರಿಸಿದೆ. ತೀರಾ ಚಿಕ್ಕವಳಿದ್ದ ಅವಳಿಗೆ ಹೆಚ್ಚಿಗೆ ಏನೂ ಅರ್ಥವಾಗಿರಲಾರದು. ಆದರೂ, "ಈಗ ಮೊಟ್ಟೆ ಒಡೆದು ಮರಿ ಬರೊಲ್ಲವಾ?' ಎಂದು ಕೇಳಿದಳು. ಅವಳಿಗೆ ಹಕ್ಕಿ ಕಾವು ಕುಳಿತು ಶಾಖ ಕೊಡುವುದು ಮರಿಯಾಗಲು ಎಷ್ಟು ಅಗತ್ಯ ಎಂದು ವಿವರಿಸಿದೆ. ಅದಕ್ಕೆ ಅವಳು, "ಹಂಗಾದರೆ ನಾವೇ ಶಾಖ ಕೊಡೋಣ" ಎಂದಳು. ಶಾಖ ಕೊಡುವುದು ಎಂದರೆ ಬೆಂಕಿಯಲ್ಲಿ ಬಿಸಿ ಮಾಡುವುದು ಎಂದು ತಿಳಿದಿದ್ದಳೋ ಏನೋ!

ಮೊಟ್ಟೆಗಳಿಗೆ ಕೃತಕವಾಗಿ ಕಾವುಕೊಟ್ಟು ಮರಿಮಾಡುವ ಇನ್ಕ್ಯುಬೇಟರ್‌ಗಳನ್ನು ನಾನು ನೋಡಿದ್ದೆ. ಆದರೆ ನನ್ನ ಬಳಿ ಆ ರೀತಿ ನಿಯಂತ್ರಿತ ಶಾಖ ಕೊಟ್ಟು ಮೊಟ್ಟೆ ಮರಿ ಮಾಡುವ ಸಾಧನೆಗಳೇನೂ ಇರಲಿಲ್ಲ. ಆದರೂ ಸುಸ್ಮಿತ, "ನಾವೇ ಶಾಖ ಕೊಡೋಣ" ಎಂದು ಹೇಳಿದ್ದರಿಂದ 'ಹೇಗಿದ್ದರೂ ಈ ಮೊಟ್ಟೆಗಳು ಹಾಳಾದಂತೆಯೇ, ನಾನೇ ಯಾಕೆ ಒಂದು ಪ್ರಯೋಗಕ್ಕೆ ಇವನ್ನು ಉಪಯೋಗಿಸಿಕೊಳ್ಳಬಾರದು?' ಎನ್ನಿಸಿತು.

ಮೆಲ್ಲಗೆ ಗೂಡು ಸಮೇತ ಮೂರು ಮೊಟ್ಟೆಗಳನ್ನು ಎತ್ತಿಕೊಂಡು ಮನೆಗೆ ಬಂದೆವು. ಮನೆಗೇನೋ ತಂದೆವು. ಆದರೆ ಹಕ್ಕಿ ಕಾವು ಕೊಟ್ಟಂತೆ ಅವುಗಳಿಗೆ ಏಕಪ್ರಕಾರವಾಗಿ ಹೇಗೆ ಶಾಖಕೊಡುವುದು ಬಗೆಹರಿಯಲಿಲ್ಲ. ಜೊತೆಗೆ ಪಿಕಳಾರದ ಮೈ ಶಾಖ ಎಷ್ಟಿರುತ್ತದೆಂದೂ ನನಗೆ ಗೊತ್ತಿರಲಿಲ್ಲ. ಕೊನೆಗೆ ನಾನು ಮೊಟ್ಟೆಗಳನ್ನು ಊಟದ ಮನೆಯಲ್ಲಿ ನಲ್ವತ್ತು ಕ್ಯಾಂಡ್ಲಿನ ದೀಪದ ಅಡಿ ದಾರ ಕಟ್ಟಿ ನೇತು ಹಾಕಿದೆ. ಮೊಟ್ಟೆಗಳು ಒಡೆದು ಮರಿಯಾಗಬಹುದೆಂಬ ದೂರದ ಆಸೆಯೂ ನನಗಿರಲಿಲ್ಲ. ಏಕೆಂದರೆ ತಾಯಿಹಕ್ಕಿ ಸತ್ತ ಮೇಲೆ ಸುಮಾರು ಎರಡು ದಿನದವರೆಗೆ ಮೊಟೆಗಳು ತಣ್ಣಗಾಗಿ ಬಿದ್ದಿದ್ದವು. ಜೊತೆಗೆ ಬಲ್ಬಿನ ಶಾಖ ಪಿಕಳಾರದ ಹಕ್ಕಿಯ ಶಾಖದಂತೆ ಕಾಣಲಿಲ್ಲ. ಇದನ್ನೆಲ್ಲಾ ಮಾಡಿದ್ದು ನಾನು ಸುಸ್ಮಿತಳ ಕುತೂಹಲ ಸಮಾಧಾನಗಳಿಗಾಗಿ ಮಾತ್ರ.

ಅದನ್ನು ಮನೆಯಲ್ಲಿ ನೇತುಹಾಕಿದ ಮೇಲೆ ಪ್ರತಿದಿನ ಸುಸ್ಮಿತ ಆಗಿಂದಾಗ್ಗೆ ಅದರೊಳಗೆ ಇಣುಕಿ ನೋಡುವುದು, ಏನೇನಾದರೂ ಪ್ರಶ್ನೆ ಕೇಳುವುದು ನಡೆಸಿದ್ದಳು. ಅವಳಿಗೆ ಜಲಚರಗಳಿಂದ ಹಿಡಿದು ಸಸ್ತನಿಗಳವರೆಗೆ ವಂಶಾಭಿವೃದ್ಧಿ ಹೇಗೆ ಹೇಗೆ ವಿಕಾಸವಾಗುತ್ತ ಬಂದಿದೆ ಎಂದು ನಿಧಾನವಾಗಿ ವಿವರಿಸಿದೆ. ಕಣ್ಣೆದುರಿಗೆ ಮೊಟ್ಟೆ ಇದ್ದುದರಿಂದಲೋ ಏನೋ ನಾನು ಹೇಳಿದ್ದರಲ್ಲಿ ಬಹುಪಾಲು ಅವಳಿಗೆ ಅರ್ಥವಾದಂತೆ ತೋರಿತು.

ಜೀವವಿಕಾಸದಲ್ಲಿ ಕೆಳಗಿನ ಹಂತದ ಜೀವಿಗಳಾದ ಜಲಚರಗಳು ಹಕ್ಕಿಗಳಂತೆ ಮೊಟ್ಟೆಗಳನ್ನು ಜೋಪಾನ ಮಾಡುವುದಿಲ್ಲ. ಅವು ಉಚ್ಚುವ ಮೊಟ್ಟೆಗಳು ವಾತಾವರಣದ ಶಾಖಕ್ಕೇ ಒಡೆದು ಮರಿಯಾಗಬೇಕು. ಅಷ್ಟಲ್ಲದೆ ಅವೇ ಸ್ವಶಕ್ತಿಯಿಂದ ಆಹಾರ ಸಂಪಾದನೆ ಮಾಡಿಕೊಂಡು ಬದುಕಬೇಕು. ಹೀಗಾಗಿ ಅವು ಇಡುವ ಮೊಟ್ಟೆಗಳಲ್ಲಿ ಕೊನೆಗೆ ಬದುಕಿ ಉಳಿಯುವುವು ಶೇಕಡ ಒಂದು ಅಥವಾ ಎರಡು. ಈ ಕಾರಣಗಳಿಂದಲೇ ಜಲಚರಗಳು ಇಡುವ ಮೊಟ್ಟೆಗಳು ಅಸಂಖ್ಯಾತ. ಮೀನುಗಳು ಒಂದೊಂದು ಸಾರಿಗೆ ಎಪ್ಪತ್ತು ಎಂಭತ್ತು ಸಹಸ್ರ ಮೊಟ್ಟೆಗಳನ್ನು ಇಡುತ್ತವೆ. ಕಪ್ಪೆಚಿಪ್ಪುಗಳು ಹಲವು ಲಕ್ಷ ಮೊಟ್ಟೆಗಳನ್ನಿಡುತ್ತವೆ. ಇಷ್ಟಾದರೂ ಇವುಗಳಲ್ಲಿ ಕೆಲವೇ ಬದುಕಿ ಉಳಿಯುವುದು.

ಹಾವು, ಹಲ್ಲಿ, ಓತೀಕ್ಯಾತ, ಆಮೆ ಮುಂತಾದ ಸರೀಸೃಪಗಳು ನೂರಿನ್ನೂರು ಮೊಟ್ಟೆಗಳನ್ನಿಡುತ್ತವೆ. ಮುಟ್ಟಿದರೆ ಮೆತ್ತಗೆ ರಬ್ಬರ್ ಮೊಟ್ಟೆಗಳಂತಿರುವ ಇವನ್ನು ಮರಳಿನಲ್ಲಿ ಗುಂಡಿ ತೋಡಿ ಆಳಕ್ಕೆ ಹುಗಿದಿಡುತ್ತವೆ. ಬಿಸಿ ಮರಳಿನ ಶಾಖಕ್ಕೆ ಅವುಗಳ ಭ್ರೂಣಗಳು ಬೆಳೆದು ಒಡೆದು ಮರಿಗಳು ಹೊರಬರುತ್ತವೆ. ಜಲಚರಗಳಿಗಿಂತ ಇವು ಹೆಚ್ಚಿನ ಆಸ್ಥೆ ಶ್ರದ್ಧೆಯನ್ನು ತೋರಿಸುತ್ತವೆಯಾದರೂ ಈ ಮೊಟ್ಟೆಗಳೂ ಸಹ ವಾತಾವರಣದ ಏರುಪೇರುಗಳನ್ನು ಅವಲಂಬಿಸಿವೆ.

ಆದರೆ ಹಕ್ಕಿಗಳ ಹಂತಕ್ಕೆ ಬರುವ ವೇಳೆಗಾಗಲೇ ನಾವು ಇನ್ನೂ ಸೂಕ್ಷ್ಮ ನಡವಳಿಕೆಯನ್ನು ಕಾಣಬಹುದು. ಅವು ಸಾಧಾರಣವಾಗಿ ತಮ್ಮ ಮೈಯ್ಯಗಲಕ್ಕೆ ಸಮನಾಗುವಷ್ಟು ಎಂದರೆ ಎರಡು ಮೂರು ಮೊಟ್ಟೆಗಳನ್ನು ಮಾತ್ರ ಇಡುತ್ತವೆ. ಅಷ್ಟೇ ಅಳತೆಯಲ್ಲಿ ಗೂಡು ಕಟ್ಟಿ ತಮ್ಮ ಮೈಶಾಖ ಉಳಿಯುವಂತೆ ಸುತ್ತ ಪುಕ್ಕ, ಹತ್ತಿ, ಜೇಡರಬಲೆ ಇತ್ಯಾದಿಗಳ ಹಾಸಿಗೆ ನಿರ್ಮಿಸಿಕೊಳ್ಳುತ್ತವೆ. ವಾತಾವರಣದ ಶಾಖವನ್ನು ಕೊಂಚವೂ ಅವಲಂಬಿಸದೆ ತಮ್ಮ ಮೈ ಶಾಖದಿಂದಲೇ ಭ್ರೂಣಗಳು ಬೆಳೆದು ಹೊರಬರುವಂತೆ ಅವುಗಳ ಮೇಲೆ ಕುಳಿತು ಕಾವು ಕೊಡುತ್ತವೆ. ಅವು ಮರಿಯಾಗಿ ಹೊರಬಂದನಂತರ ಅವುಗಳಿಗೆ ಗುಟುಕು ಕೊಟ್ಟು ಬೆಳೆಸಿ, ಹಾರುವುದನ್ನೂ, ಆಹಾರ ಸಂಪಾದನೆಯನ್ನೂ ಕಲಿಸಿ ಹೊರ ಜಗತ್ತಿಗೆ ಬಿಡುತ್ತವೆ.

ಸಸ್ತನಿಗಳಲ್ಲಿ ಇನ್ನೂ ಹೆಚ್ಚು ಇದು ಮುಂದುವರಿದಿರುವುದನ್ನು ನೋಡಬಹುದು. ಇಲ್ಲಿ ಭ್ರೂಣ ಹೊರ ಜಗತ್ತಿಗೆ ಯಾವ ಸಂಬಂಧವೂ ಇಲ್ಲದಂತೆ ತಾಯಿಯ ಹೊಟ್ಟೆಯೊಳಗೇ ಬೆಳೆದು ಹೊರಬರುತ್ತದೆ.

ದಿನಾ ಒಂದೊಂದು ಪ್ರಶ್ನೆ ಕೇಳುತ್ತ ಮೊಟ್ಟೆಗಳನ್ನು ಇಣುಕಿಣುಕಿ ನೋಡುತ್ತಿದ್ದ ಸುಸ್ಮಿತ ಒಂದು ದಿನ ಉದ್ವೇಗದಲ್ಲಿ ಎದ್ದುಬಿದ್ದು ಓಡಿಬಂದಳು.

"ಅಣ್ಣಾ, ಮೊಟ್ಟೆ ಒಡೆದು ಮರಿ ಬಂದಿದ್ದಾವೆ!" ಎಂದು ಕೂಗಿದಳು.

ನನಗೆ ನಂಬಿಕೆ ಬರಲಿಲ್ಲ. ನಿರ್ಜೀವ ಗೋಲಿಗಳಂತೆ ಬಿದ್ದಿರುತ್ತಿದ್ದ ಚುಕ್ಕೆ ಚುಕ್ಕೆಯ ಕೆಂಪು ಮೊಟ್ಟೆಗಳಿಂದ ಎಂದಾದರೂ ಮರಿಗಳು ಬಂದಾವೆಂದು ನಾನು ಊಹಿಸಿರಲಿಲ್ಲ. ಆದರೆ ಅವುಗಳಿಂದ ಜೀವ ಪವಾಡ ಹೊರ ಬಂದಿದ್ದನ್ನು ಸಾಕ್ಷಾತ್ತಾಗಿ ನೋಡಿ ಸುಸ್ಮಿತ ಅತ್ಯಾಶ್ಚರ್ಯದಿಂದ ಕೂಗಿಕೊಂಡು ಓಡಿಬಂದಿದ್ದಳು.

ನೇತುಹಾಕಿದ್ದ ಗೂಡಿನಲ್ಲಿನ ಮೊಟ್ಟೆಗಳಲ್ಲಿ ಎರಡು ಒಡೆದು ಮರಿಗಳಾಗಿದ್ದವು. ಹತ್ತಿರ ಹೋದರೆ ಸಾಕು ಇಡೀ ಬ್ರಹ್ಮಾಂಡವನ್ನೆ ನುಂಗುವಂತೆ ಬಾಯಿ ಕಳೆಯುತ್ತ ತಲೆಯಾಡಿಸುತ್ತಿದ್ದುವು. ಆಗತಾನೆ ಮೊಟ್ಟೆಯೊಡೆದು ಹೊರಬಂದ ಮರಿಗಳಾದ್ದರಿಂದ ಹಸಿಮಾಂಸದ ಮುದ್ದೆಗಳಂತೆ ಕಾಣುತ್ತಿದ್ದ ಅವು ಹಕ್ಕಿಗಳಂತೆ ಕಾಣುತ್ತಲೇ ಇರಲಿಲ್ಲ. ಕೊಕ್ಕು ಅಗಲಿಸಿ ತಿಂಡಿಗಾಗಿ ಬಾಯಿ ಕಳೆಯುವುದೊಂದೇ ಅಲ್ಲಿ ನಮಗೆ ಕಾಣುತ್ತಿದ್ದ ಸಜೀವ ಲಕ್ಷಣ.

ಸುಸ್ಮಿತ ಅವು ಬಾಯಿ ಕಳೆಯುತ್ತಿದ್ದುದನ್ನು ನೋಡಿ "ಅವಕ್ಕೆ ಊಟ ಬೇಕಾಗಿದೆ" ಎಂದಳು. ಅವಳು ಇದೊಂದು ಗೊಂಬೆಯಾಟದಂತೆ ಎಂದು ತಿಳಿದಿದ್ದಳೋ ಏನೋ! ಅವಳ ಆ ಮಾತು ಕೇಳಿದ ಕೂಡಲೆ ನನಗೆ ಮಾತ್ರ ತಲೆಮೇಲೆ ಆಕಾಶ ಕಳಚಿ ಬಿದ್ದಂತಾಯ್ತು. ಅವುಗಳಿಗೆ ಏನು ಊಟ ಕೊಡುವುದು? ಹೇಗೆ ಸಾಕುವುದು? ಸುಮ್ಮನಿರಲಾರದೆ ಆ ಮೊಟ್ಟೆಗಳನ್ನು ಮನೆಗೆ ತಂದು ತಲೆಮೇಲೆ ಭಯಂಕರ ಜವಾಬ್ದಾರಿ ಎಳೆದು ಕೊಂಡಂತಾಯ್ತು.

ಹಕ್ಕಿಗಳಲ್ಲಿ ಅನೇಕವು ಅನೇಕ ತರದ ಆಹಾರಗಳಿಗೆ ಒಗ್ಗಿರುತ್ತವೆ. ಕೆಲವು ಹಣ್ಣುಗಳನ್ನೇ ತಿನ್ನುತ್ತವೆ. ಕೆಲವು ಕೀಟಗಳನ್ನೇ ತಿನ್ನುತ್ತವೆ. ಕೆಲವು ಭತ್ತ, ಗೋಧಿ ಇತ್ಯಾದಿ ಗಟ್ಟಿ ಕಾಳುಗಳನ್ನೇ ತಿನ್ನುತ್ತವೆ. ಕೆಲವು ಹೂವಿನ ಜೇನನ್ನೇ ಕುಡಿದು ಬದುಕುತ್ತವೆ. ಈ ಹಕ್ಕಿಗಳೆಲ್ಲ ಎಷ್ಟೋಂದು ಮಿಲಿಯಾಂತರ ವರ್ಷದಿಂದ ಆಯಾ ರೀತಿಯ ವಿಶಿಷ್ಟ ಆಹಾರಕ್ಕೆ ಒಗ್ಗಿರುತ್ತವೆಂದರೆ ನಾಲಗೆಯಿಂದ ಹಿಡಿದು ಕರುಳಿನವರೆಗೆ ಅವುಗಳ ಅಂಗಾಂಗಗಳೆಲ್ಲ ಅದಕ್ಕಾಗಿ ರೂಪಾಂತರಗೊಂಡಿರುತ್ತವೆ. ಒಂದರ ಆಹಾರವನ್ನು ಇನ್ನೊಂದು ತಿನ್ನುವುದೇ ಇಲ್ಲ. ತಿಂದರೆ ಸತ್ತೇ ಹೋಗುತ್ತವೆ.

ಮಗಳಿಗೆ ವಿವರಿಸಿದೆ, "ನಮ್ಮ ಊಟ ಅವಕ್ಕೆ ಕೊಟ್ಟರೆ ಅವು ಸತ್ತೇ ಹೋಗುತ್ತವೆ. ಈಗ ಗುಬ್ಬಚ್ಚಿ ಹೆಂಚಿನ ಸಂದಿಯಲ್ಲಿ ಜೇಡರ ಹುಳು ಹಿಡಿದು ಊಟಮಾಡುವುದನ್ನು ನೋಡಿದಿಯಲ್ಲ. ಅದರ ಊಟ ನೀನು ತಿಂದರೆ ಬದುಕುತ್ತೀಯಾ? ಹಾಗೇ ನಿನ್ನ ಊಟ ಅದು ತಿಂದರೆ ಸತ್ತೇ ಹೋಗುತ್ತೆ" ಎಂದೆ. ಅವಳಿಗೆ ಅರ್ಥವಾಯ್ತೆಂದು ತೋರುತ್ತದೆ.

ಆದರೆ ಇದರಿಂದ ನನ್ನ ಸಮಸ್ಯೆ ಪರಿಹಾರವಾಗಲಿಲ್ಲ. ಬಾಯಿ ಕಳೆಯುವ ಮರಿಗಳಿಗೆ ಏನಾದರೂ ಹಾಕಲೇಬೇಕಿತ್ತು. ಏನನ್ನು ಕೊಡಬಹುದು? ಇಂಥ ವಿಷಯಕ್ಕೆಲ್ಲ ನನಗೆ ಮಾರನೇ ಸಲಹೆಗಾರ. ಮನೆ ಹಿಂದುಗಡೆ ಎಲ್ಲೊ ನೆರಳಿನಲ್ಲಿ ನಿದ್ದೆ ಹೊಡೆಯುತ್ತಿದ್ದ ಅವನನ್ನು ಕರೆದೆ.

ಅವನು, "ನಾನ್ಯಾಕೆ ಈ ಸುಡುಗಾಡು ಚಿಟ್ಟಹಕ್ಕಿಗಳನ್ನು ಸಾಕಲಿ ಹೇಳಿ. ಕೋಳೀನೋ, ಕುರೀನೋ ಸಾಕಿದರೆ ಒಂದು ತರ. ಮೂರು ಕಾಸಿನ ಮಾಂಸ ಇಲ್ಲದ ಈ ಗುಬ್ಬಿಗಳನ್ನೆಲ್ಲಾ ಯಾಕೆ ಸಾಕಬೇಕು? ಇದರ ಬದಲು ನಾಕು ಕೋಳಿ

ಪಿಳ್ಳೆ ತಂದುಕೊಡ್ತೀನಿ, ಸಾಕಿ. ನಂತರು ಮನೆಗೆ ಬಂದರೆ ಸಾರುಮಾಡಬಹುದು" ಎಂದು ಹಕ್ಕಿಮರಿಯನ್ನು ಸಾಕುವ ನನ್ನ ಯೋಚನೆಯನ್ನೇ ತಿರಸ್ಕರಿಸಿದ. ನನಗೆ ಬಂದಿರುವ ನೈತಿಕ ಉಭಯಸಂಕಟ ಅವನ ತಲೆಗೇ ಹೋಗಲಿಲ್ಲ.

ಆಮೇಲೆ ನನ್ನ ಬಳಿ ಇದ್ದ ಸಲೀಂ ಆಲಿ ಹಾಗೂ ಇತರ ಪಕ್ಷಿಶಾಸ್ತ್ರಜ್ಞರ ಪುಸ್ತಕ ತಿರುವಿ ಹಾಕಿದೆ. ಅವರು ಯಾರೂ ಹಕ್ಕಿ ಮರಿಗಳನ್ನು ಸಾಕುವುದರ ಬಗ್ಗೆ ಏನನ್ನೂ ಬರೆದಿರಲಿಲ್ಲ. ಬುಲ್‌ಬುಲ್ ಹಕ್ಕಿಗಳು ಫಲ ಮತ್ತು ಕೀಟಾಹಾರಿ ಪಕ್ಷಿಗಳು ಎಂದು ಒಂದೇ ವಾಕ್ಯದಲ್ಲಿ ಅವುಗಳ ಇತ್ಯೋಪರಿಗಳನ್ನೆಲ್ಲಾ ಮುಗಿಸಿದ್ದರು. ಮಾರನ ಸಲಹೆಯಂತೆಯೇ ಇವರ ಪುಸ್ತಕಗಳೂ ನನಗೆ ನಿರುಪಯುಕ್ತವಾಗಿದ್ದುವು.

ಕೀಟಗಳೆಂದರೆ ಯಾವು? ನೂರಾರು ತರದ ಕೀಟಗಳಿದ್ದಾವೆ. ಅವುಗಳಲ್ಲಿ ಯಾವುವನ್ನೂ ಹಿಡಿದು ಮರಿಗಳ ಬಾಯಿಗೆ ತುರುಕಲು ಮನಸ್ಸೇ ಬರಲಿಲ್ಲ. ಅವುಗಳ ಮೀಸೆ, ಕಚ್ಚುವ ದವಡೆ, ಕಾಲಿನಲ್ಲಿರುವ ಮುಳ್ಳುಗಳು ಇವನ್ನೆಲ್ಲಾ ನೋಡಿದರೆ ಆ ಮರಿಗಳ ಬಾಯಿಗೆ ಹಾಕುವುದಿರಲಿ ಕೈಯಿಂದ ಮುಟ್ಟಲೂ ಮನಸ್ಸು ಬರಲಿಲ್ಲ.

ಪಿಕಳಾರಗಳು ಲಂಟಾನ ಹಣ್ಣು ತಿನ್ನುವುದನ್ನು ನೋಡಿದ್ದೆ. ಆದರೆ ಲಂಟಾನ ಹಣ್ಣುಗಳನ್ನು ಹುಡುಕಿದರೆ ಒಂದೇ ಒಂದು ಹಣ್ಣೂ ಗಿಡಗಳಲ್ಲಿ ಕಾಣಲಿಲ್ಲ. ಕೊನೆಗೆ ಇನ್ನೇನೂ ಮಾಡಲಾರದೆ ಮನೆಯಲ್ಲಿದ್ದ ಬಾಳೆಹಣ್ಣನ್ನೇ ಕೊಡೋಣೆಂದು ತೀರ್ಮಾನಿಸಿದೆ. ಆದರೆ ಹಲ್ಲಿಲ್ಲದ ಅವುಗಳ ಬಾಯಿಗೆ ಬಾಳೆ ಹಣ್ಣಿನ ಚೂರು ಹಾಕಿದರೆ ಉಪಯೋಗವಿಲ್ಲವೆಂದು ಬಾಳೆಹಣ್ಣನ್ನು ಕಿವಿಚಿ ಲೇಹ್ಯ ಮಾಡಿದಂತೆ ಮಾಡಿ ಚಮಚದಲ್ಲಿ ಕೊಂಚ ಕೊಂಚವನ್ನೇ ತೆಗೆದು ಎರಡರ ಬಾಯಿಗೂ ಹಾಕಿದೆ.

ದೊಡ್ಡ ಅನಾಹುತವೇ ಆಯ್ತು. ಬಾಳೆಹಣ್ಣಿನ ಲೇಹ್ಯ ಸಹ ನುಂಗುವ ತ್ರಾಣವಿಲ್ಲದ ಆ ಮರಿಗಳ ಗಂಟಲಲ್ಲಿ ಬಾಳೆಹಣ್ಣು ಗಿಡಿದು ಕುಳಿತು ಅವುಗಳ ಮೂಗುಗಳಿಂದೆಲ್ಲಾ ಬಾಳೆಹಣ್ಣಿನ ಲೇಹ್ಯ ಹೊರಬಂದು ನಾನು ಅವಕ್ಕೆ ಉಸಿರಾಡಲು ಪ್ರಾಥಮಿಕ ಚಿಕಿತ್ಸೆಗೆ ಯೋಚಿಸುವ ಮೊದಲೇ ಸತ್ತು ಹೋದವು. ನಾನೇ ಸಾಯಿಸಿದೆ ಎಂದು ಕೋಪಗೊಂಡ ಸುಸ್ಮಿತಾ ಅಳುತ್ತಾ ತನ್ನ ಪುಟ್ಟ ಕೈಗಳಿಂದ ನನ್ನ ಕಾಲಿಗೆ ರಪರಪ ಹೊಡೆದಳು.

ನಾನು ಕೂಡಲೆ ಮಾಡಿದ ಮೊದಲ ಕೆಲಸ ಅಂದರೆ ಇನ್ನೂ ಮರಿಯಾಗದಿದ್ದ ಮೊಟ್ಟೆಯೊಡನೆ ಬಾಯಲ್ಲಿ ಬಾಳೆಹಣ್ಣು ಮೆತ್ತಿಕೊಂಡು ಸತ್ತ ಹಕ್ಕಿಗಳ ಸಮೇತ ಇಡೀ ಗೂಡನ್ನೂ, ಉಳಿದಿದ್ದ ಬಾಳೆಹಣ್ಣಿನ ಲೇಹ್ಯವನ್ನೂ ಒಯ್ದು ಕಾಡೊಳಗೆ ಎಸೆದು ಬಂದೆ. ತಡೆದರೆ ಆ ಮೊಟ್ಟೆಯಿಂದಲೂ ಮರಿ ಹೊರ ಬರುತ್ತದೆಂದು ನನಗೆ ದಿಗಿಲಾಗಿತ್ತು. ಹಕ್ಕಿ ಮರಿಗಳನ್ನು ನಾನೇ ಸಾಕಿ ಫೋಟೋ ತೆಗೆಯಬೇಕೆಂಬ ನನ್ನ ಯೋಜನೆ ಪ್ರಾಥಮಿಕ ಹಂತದಲ್ಲೇ ನುಚ್ಚುನೂರಾಯ್ತು.

ಹಕ್ಕಿಮರಿಗಳನ್ನು ಸಾಕಿ ಫೋಟೊ ತೆಗೆಯಬೇಕೆಂಬ ನನ್ನ ಯೋಜನೆಯನ್ನು ನಾನು ಕೈಬಿಟ್ಟೆ. ಆದರೂ ನಮಗೇಕೆ ಈ ಮರಿಗಳನ್ನು ಸಾಕಲಾಗುವುದಿಲ್ಲ? ವಿಜ್ಞಾನ ಇಷ್ಟೊಂದು ಮುಂದುವರೆದಿರಬೇಕಾದರೆ ಇದು ಮಹಾ ಕಷ್ಟವೆ? ಎಂದು ಯೋಚಿಸುತ್ತಿದ್ದೆ. ಈ ಬಗ್ಗೆ ಅನೇಕ ಪಶುವೈದ್ಯರನ್ನೂ, ಪಕ್ಷಿತಜ್ಞರನ್ನೂ ವಿಚಾರಿಸಿದೆ. ಎಲ್ಲರೂ ಮಾರನಂತೆ ಕೋಳಿ, ಪಾರಿವಾಳ ಮುಂತಾದವನ್ನು ಸಾಕುವ ಬಗ್ಗೆ ಸಲಹೆ ಕೊಡುತ್ತಿದ್ದರೇ ಹೊರತು ಕಾಡಿನ ಚಿಕ್ಕಪುಟ್ಟ ಹಕ್ಕಿಗಳು ಎಂದ ಕೂಡಲೇ ಅವುಗಳ ಸಹವಾಸಕ್ಕೆ ಮಾತ್ರ ಹೋಗಬೇಡಿರೆಂದು ಎಚ್ಚರಿಕೆ ಕೊಡುತ್ತಿದ್ದರು. ಆ ಮರಿಗಳನ್ನು ಅವುಗಳ ತಾಯಂದಿರ ಹೊರತು ಬೇರೆಯವರಿಗೆ ಸಾಕಲು ಕಷ್ಟ ಸಾಧ್ಯ ಎಂಬುದು ಅವರ ಅಭಿಪ್ರಾಯ.

ಇಷ್ಟರಲ್ಲಿ ಇನ್ನೊಮ್ಮೆ ನಾನು ಹಕ್ಕಿಮರಿಗಳನ್ನು ಸಾಕುವ ತೊಂದರೆಗೆ ಸಿಕ್ಕಿಕೊಂಡೆ.

ನಮ್ಮ ಮನೆ ಎದುರಿಗಿದ್ದ ಹಲಸಿನಮರದ ಕೊಂಬೆಯೊಂದು ಗಾಳಿ ಮಳೆಗೆ ರಾತ್ರಿ ಮುರಿದು ಬಿದ್ದಿತ್ತು. ಅದನ್ನು ತೋಟದೊಳಗೆ ಬಿಸಾಡಲು ಹೋದಾಗ ಅದರ ಎಲೆಗಳ ನಡುವೆ ಎಲೆಗಳನ್ನೇ ಹೊಲಿದು ಮಾಡಿದ ಟುವ್ವಿ ಹಕ್ಕಿಯ ಗೂಡೊಂದು ಕಣ್ಣಿಗೆ ಬಿತ್ತು. ಇಣುಕಿ ಒಳಗೇನಿದೆ ನೋಡಿದೆ. ನನಗೆ ಚಿಂತೆಯಾಗುವಂತೆ ಮೂರು ಹಕ್ಕಿಮರಿಗಳು ಬಾಯಿ ಕಳೆಯುತ್ತ ಕುಳಿತಿದ್ದುವು. ಹಿಂದಿನ ಸಾರಿ ಆಗಿದ್ದೆಲ್ಲಾ ಜ್ಞಾಪಕಕ್ಕೆ ಬಂದು ಈ ಸಾರಿ ಸುಸ್ಮಿತಾಳಿಗೆ ಈ ವಿಷಯ ತಿಳಿಸಲು ಹೋಗಲಿಲ್ಲ. ಆ ಕೊಂಬೆ ಎಲ್ಲಿಂದ ಮುರಿದುಬಿದ್ದಿದೆ ಎಂದು ನೋಡಿ ಮುರಿದ ಕೊಂಬೆಯನ್ನು ಅದೇ ಜಾಗಕ್ಕೆ ಭದ್ರವಾಗಿ ಸಿಕ್ಕಿಸಿದೆ. ಕೊಂಬೆ ಮುರಿದಿದ್ದರಿಂದ ಅದರ ಎಲೆಗಳೆಲ್ಲಾ ಆಗಲೇ ಬಾಡಲಾರಂಭಿಸಿದ್ದವು. ಆದರೂ ಅವುಗಳ ತಾಯಿಯೇ ಬಂದು ಮರಿಗಳ ಯೋಗಕ್ಷೇಮ ನೋಡಲಿ ಎಂಬುದೇ ನನ್ನ ಉದ್ದೇಶ.

ತಾಯಿಹಕ್ಕಿಯೇನೋ ಬಂತು. ಆದರೆ ಅಲ್ಲಿ ಇಲ್ಲಿ ಟುವ್ವಿಟುವ್ವಿ ಎಂದು ಕೂಗಿಕೊಂಡು ಓಡಾಡಿತೇ ಹೊರತು ಗೂಡಿನ ಹತ್ತಿರ ಸುಳಿಯಲಿಲ್ಲ. ಕೊಂಬೆಯ ಎಲೆಗಳು ಬಾಡಿದ್ದರಿಂದಲೋ ಅಥವಾ ಮುರಿದ ಕೊಂಬೆಯಾದ್ದರಿಂದಲೋ, ತನ್ನ ಜೀವಕ್ಕೇ ಅಪಾಯವಿದೆ ಎಂದು ಆಲೋಚಿಸಿ ಕಾಡಿಗೆ ಹೋದುದು ಹಿಂದಿರುಗಲಿಲ್ಲ. ಆ ಗೂಡಿನ ಮರಿಗಳು ಮೈಮೇಲೆಲ್ಲ ಪುಕ್ಕ ಬರುವಷ್ಟು ಬೆಳೆದಿದ್ದವು. ತಾಯಿ ಆ ಮರಿಗಳನ್ನು ತಿರಸ್ಕರಿಸಿದರೆ ಎಂತಿದ್ದರೂ ಸಾಯುವ ಆ ಮರಿಗಳನ್ನು ಈ ಸಾರಿಯಾದರೂ ಸಾಕಲು ಸಾಧ್ಯವೇ ಪ್ರಯತ್ನಿಸಬೇಕೆಂದು ಯೋಚಿಸಿದ್ದೆ. ಆದರೆ ತಾಯಿಹಕ್ಕಿ ಅವುಗಳನ್ನು

ಖಾತರಿಯಾಗಿ ತೊರೆದಿದೆ ಎಂದು ಗೊತ್ತಾಗುವವರೆಗೂ ಗೂಡಿನ ತಂಟೆಗೆ ಹೋಗಲಿಲ್ಲ. ಎರಡು ದಿನಗಳಾದರೂ ತಾಯಿಹಕ್ಕಿ ಸುಳಿವಿಲ್ಲ! ಅಷ್ಟೇ ಅಲ್ಲದೆ ಮೂರು ಮರಿಗಳಲ್ಲಿ ಒಂದು ಮರಿ ಹಸಿವು ತಡೆಯಲಾರದೆ ಸತ್ತೇ ಹೋಗಿತ್ತು. ಮಿಕ್ಕೆರಡೂ ದುರ್ಬಲವಾಗಿ ಸಾಯುವ ಹಂತದಲ್ಲಿದ್ದವು. ತಾಯಿಹಕ್ಕಿ ಬರಬಹುದೆಂದು ಇನೂ ತಡೆದರೆ ಅವೂ ಸಾಯುವುದರಲ್ಲಿ ಸಂಶಯವಿರಲಿಲ್ಲ. ಆ ಮರಿಗಳನ್ನು ತಬ್ಬಲಿ ಮಾಡಿ ನನ್ನ ತಲೆಮೇಲೆ ಹಾಕಿದ ತಾಯಿಹಕ್ಕಿಗೆ ಶಪಿಸುತ್ತ ಸತ್ತ ಮರಿಯ ಶವವನ್ನು ತೆಗೆದೆಸೆದು ಮಿಕ್ಕ ಮರಿಗಳನ್ನು ಗೂಡಿನೊಂದಿಗೆ ಮನೆಗೆ ತಂದೆ.

ಪಿಕಳಾರದ ಮರಿಗಳು ಬಾಳೆಹಣ್ಣು ತಿಂದು ಸತ್ತಮೇಲೆ ನಾನು ತುಂಬಾ ಆಲೋಚಿಸಿ ಈ ಮರಿಗಳಿಗೆ ಒಂದು ಆಹಾರದ ಫಾರ್ಮುಲಾ ಕಲ್ಪಿಸಿದ್ದೆ. ಕೋಳಿ ಮೊಟ್ಟೆಯೊಳಗಿನ ಬಿಳುಪನ್ನು ಇವುಗಳಿಗೆ ಆಹಾರವಾಗಿ ಕೊಟ್ಟರೆ ಆಗಬಹುದೆಂದು ತೀರ್ಮಾನಿಸಿದ್ದೆ. ಏಕೆಂದರೆ ಕೋಳೀಮೊಟ್ಟೆಯೊಳಗಿನ ಬಿಳುಪು ವಾಸ್ತವವಾಗಿ ಮೊಟ್ಟೆಯೊಳಗೆ ಬೆಳೆಯುವ ಭ್ರೂಣಕ್ಕೆ ಆಹಾರವಾಗಿಯೇ ಇರುವುದು. ಇನ್ನೂ ಬೆಳೆಯದ ಭ್ರೂಣಗಳೇ ಆಹಾರವಾಗಿ ಇದನ್ನು ತೆಗೆದುಕೊಳ್ಳಬೇಕಾದರೆ ಇನ್ನು ಮೊಟ್ಟೆಯೊಡೆದು ಹೊರಬಂದಿರುವ ಮರಿಗಳಿಗೆ ಇದು ಆಗದೆ?

ಈ ಸಾರಿ ಮರಿಗಳಿಗೆ ಚಮಚದಲ್ಲಿ ಆಹಾರ ಕೊಡಲಿಲ್ಲ. ತಾಯಿಯ ಕೊಕ್ಕನ್ನೇ ಹೋಲುವಂತ ಚಿಮ್ಮಟ ಒಂದನ್ನು ತಂದು ಅದರಲ್ಲಿ ಅರೆಬರೆ ಬೇಯಿಸಿದ ಕೋಳಿಮೊಟ್ಟೆಯ ಬಿಳುಪನ್ನು ಚೂರುಚೂರೇ ತೆಗೆದು ಬಾಯಿಗೆ ಹಾಕಿದೆ. ಮರಿಗಳು ಬೆಳೆದದ್ದರಿಂದಲೇ ಏನೋ, ಆಹಾರ ಏನೂ ತೊಂದರೆ ಕೊಡದೆ ಅವುಗಳ ಗಂಟಲಲ್ಲಿ ಇಳಿಯಿತು. ಅಷ್ಟೇ ಅಲ್ಲದೆ ಆ ಹಕ್ಕಿ ಮರಿಗಳು ಪುಕ್ಕಗೂಡಿಸಿಕೊಂಡು ದಿನದಿಂದ ದಿನಕ್ಕೆ ಬೆಳೆದು ದೊಡ್ಡವಾದವು. ಆಹಾರ ಕೊಡಲು ಹೋದಾಗ ಒಮ್ಮೊಮ್ಮೆ ಗೂಡಿನಿಂದ ಹಾರಿ ಹೆಗಲ ಮೇಲೋ ತಲೆಯ ಮೇಲೋ ಕುಳಿತುಕೊಳ್ಳುತ್ತಿದ್ದವು. ಸುಸ್ಮಿತಳಿಗಂತೂ ಇದೊಂದು ಅತ್ಯಾನಂದದ ಸಂಗತಿಯಾಗಿತ್ತು.

ಆದರೆ ಈ ಹಕ್ಕಿಮರಿಗಳಿಗಿದ್ದ ದೊಡ್ಡ ತೊಂದರೆ ಎಂದರೆ ತಾಯಿಯಿಂದ ಒದಗುತ್ತಿದ್ದ ಶಿಕ್ಷಣ ಇಲ್ಲದುದು. ಅವು ಎಷ್ಟೊಂದು ಬೆಪ್ಪುಗಳಾಗಿದ್ದುವೆಂದರೆ ಆಹಾರವನ್ನು ಕೊಕ್ಕಿನಿಂದ ತೆಗೆದು ಸ್ವತಃ ತಿನ್ನಲು ಸಹ ಬರುತ್ತಿರಲಿಲ್ಲ. ದೊಡ್ಡದಾದ ಮೇಲೂ ಚಿಮ್ಮಟದಲ್ಲಿ ಗಂಟಲಿಗೆ ಆಹಾರ ತುರುಕಲೇಬೇಕಿತ್ತು. ಇಲ್ಲದಿದ್ದರೆ ಕಣ್ಣೆದುರೇ ಆಹಾರ ಹಿಡಿದರೂ ಸುಮ್ಮನೆ ಕುಳುತಿರುತ್ತಿದ್ದವು.

ಇದನ್ನೆಲ್ಲ ನೋಡಿದರೆ ಈ ಪ್ರಕೃತಿ ನಮ್ಮ ಊಹೆಗೂ ನಿಲುಕದ ಎಂಥ ಜಟಿಲವಾದ ಜಾಲ ಎಂದು ಅಚ್ಚರಿಯಾಗುತ್ತದೆ. ತಾಯಿಹಕ್ಕಿ ಮರಿ ಹುಟ್ಟಿದಾಗಿನಿಂದ ದೊಡ್ಡದಾಗುವವರೆಗೆ ದಿನದಿಂದ ದಿನಕ್ಕೆ ಆಹಾರ ಬದಲಿಸುತ್ತಾ ಬರುತ್ತದೆ. ರೆಕ್ಕೆ ಬಲಿತ ಮೇಲೆ ಗೂಡುಬಿಟ್ಟು ಹೊರಬರುವಂತೆ ಪ್ರೇರೇಪಿಸುತ್ತವೆ. ಅವುಗಳೆದುರು ಕುಳಿತು ರೆಕ್ಕೆ ಬಡಿದು ಹೇಗೆ ಹಾರಬೇಕೆಂದು ತೋರಿಸಿಕೊಡುತ್ತದೆ. ಹೇಗೆ ಹುಳುಗಳನ್ನು ಹಿಡಿಯಬೆಕು, ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು. ಪ್ರತಿಯೊಂದನ್ನೂ ತೋರಿಸಿಕೊಡುತ್ತದೆ ಈ ವಿದ್ಯೆಗಳಲ್ಲಿ ಯಾವೊಂದನ್ನು ತಿಳಿದಿಲ್ಲದಿದ್ದರೂ ಆ ಹಕ್ಕಿಮರಿ ಜೀವನ ಸಂಗ್ರಾಮದಲ್ಲಿ ಬದುಕಿ ಉಳಿಯುವುದು ಅಸಂಭವ. ನಮಗೆ ಮೇಲುನೋಟಕ್ಕೆ ಎಲ್ಲ ಸಲೀಸಾಗಿ ತಂತಾನೇ ನಡೆದುಕೊಂಡು ಹೋಗುವಂತೆ ತೋರಿದರೂ ಮಾನವ ಸಮಾಜವನ್ನು ಮೀರಿದ ಜಟಿಲ ಕ್ರಿಯಾವಳಿಗಳು ಅಲ್ಲಿ ನಡೆಯುತ್ತಿರುತ್ತದೆ.

ಈಗ ಈ ಎರಡು ಹಕ್ಕಿಮರಿಗಳ ಜೀವ ಉಳಿಸಿ ಸಂಪೂರ್ಣ ನಮ್ಮನ್ನೇ ಅವಲಂಬಿಸಿ ಬದುಕಬೇಕಾದ ಎರಡು ಪರತಂತ್ರ ಜೀವಿಗಳ ನಿರ್ಮಾಣ ಆಗಿತ್ತು. ನಾನು ಅವುಗಳ ತಾಯಿಹಕ್ಕಿ ನಿರ್ದಯೆಯಿಂದ ಅವುಗಳಿಗೆ ಶಿಕ್ಷಣ ಕೊಡುವಂತೆಯೇ ಶಿಕ್ಷಣ ಕೊಡಲು ನಿರ್ಧರಿಸಿದೆ. ಚಿಮ್ಮಟದಲ್ಲಿ ಅವಕ್ಕೆ ಗುಟುಕು ಕೊಡುವುದನ್ನು ನಿಲ್ಲಿಸಿದೆ. ಹಸಿವಾದರೆ ಹೇಗಾದರೂ ಅವೇ ಆಹಾರ ತಿನ್ನುವುದನ್ನು ಕಲಿಯುತ್ತವೆ ಎಂದು. ಒಂದು ದಿನ ಉಪವಾಸ ಕೆಡವಿದ ಮೇಲೆ ಅವಕ್ಕೆ ಜ್ಞಾನೋದಯವಾಯ್ತೆಂದು ತೋರುತ್ತದೆ. ಬೇಯಿಸಿದ ಕೋಳಿಮೊಟ್ಟೆ ಬಿಳುಪನ್ನು ಕೊಕ್ಕಿನಿಂದ ಕುಕ್ಕಲಾರಂಭಿಸಿದವು. ಆದರೆ ಮೊಟ್ಟೆ ಬಿಳುಪು ಕೊಕ್ಕಿನಿಂದ ಜಾರುತ್ತಿತ್ತು. ಆದ್ದರಿಂದ ಅನ್ನದ ಅಗುಳನ್ನು ತಿನ್ನಬಹುದೆಂದು ಅನ್ನದ ಅಗುಳನ್ನು ಕೊಟ್ಟೆ. ಅವು ಅಗುಳುಗಳನ್ನು ಹುಳಗಳೆಂದೇ ತಿಳಿದುವೋ ಏನೋ. ಅವನ್ನು ಕಚ್ಚಿ ಕುಕ್ಕಿ ತುಂಡುತುಂಡು ಮಾಡಿ ತಿಂದವು. ಅವು ತಾವೇ ಆಹಾರ ತಿನ್ನಲಾರಂಭಿಸಿದ ಕೂಡಲೆ ಅವುಗಳ ವರ್ತನೆಯಲ್ಲೂ ಬದಲಾವಣೆ ಕಂಡಿತು. ಧೈರ್ಯವಾಗಿ ಅತ್ತಿತ್ತ ಹಾರುತ್ತಿದ್ದವು. ಇದಿರಿಗೆ ಕಂಡ ಎಲೆಯ ಚೂರು ಮುಂತಾದ ಚಿಕ್ಕಪುಟ್ಟ ವಸ್ತುಗಳನ್ನು ಕುತೂಹಲಕ್ಕೆಂಬಂತೆ ಕುಕ್ಕಿನೋಡುತ್ತಿದ್ದುವು. ಅವುಗಳ ಆತ್ಮವಿಶ್ವಾಸ ಕಂಡು ನಾನು ಹೀಗೆ ಮುಂದುವರಿದರೆ ಇನ್ನು ಕೊಂಚ ದಿನಗಳಲ್ಲಿ ಇವು ಕಾಡಿನಲ್ಲಿ ಸ್ವತಂತ್ರವಾಗಿ ಜೀವಿಸಲು ಸಾಧ್ಯವಾಗಬಹುದೆಂದು ಯೋಚಿಸಿದೆ.

ಆದರೆ ಒಂದು ದಿನ ಸಾಯಂಕಾಲ ಅವು ಇದ್ದಕ್ಕಿದ್ದಂತೆ ಮಂಕಾಗಿ ಕುಳಿತಲ್ಲಿಂದ ಏಳಲೆ ಇಲ್ಲ. ಅದೇ ರಾತ್ರಿ ಎರಡೂ ಸತ್ತು ಹೋದವು. ಏನನ್ನು ತಿಂದವೋ, ಅಥವಾ ಅನ್ನದ ಊಟ ಅವಕ್ಕೆ ಆಗಲಿಲ್ಲವೋ! ಒಟ್ಟಿನಲ್ಲಿ ಅವು ಸತ್ತುದಕ್ಕೆ ಕಾರಣ ಗೊತ್ತಾಗಲಿಲ್ಲ. ಸುಸ್ಮಿತ ಮಾತ್ರ ಹಕ್ಕಿಮರಿ ಸತ್ತಿದ್ದಕ್ಕೆ ಪೆಚ್ಚುಮೋರೆ ಮಾಡಿಕೊಂಡು ಒಂದು ದಿನವೆಲ್ಲಾ ಇದ್ದಳು.

ನಾನು ಇನ್ನು ಈ ಕಾಡಿನ ಜೀವಿಗಳ ತಂಟೆಗೇ ಹೋಗಬಾರದೆಂದು ಅಖೈರಾಗಿ ನಿರ್ಧರಿಸಿದೆ. ಕಾಡಿನ ಜೀವಸಂಕುಲದೊಳಗೆ ನಾವು ಕೈಹಾಕಿದರೆ ಸಾಕು, ಅದು ಸಹಾಯಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲವೆಂದು ನನಗೆ ಮನದಟ್ಟಾಯ್ತು. ಅವುಗಳಲ್ಲಿ ತೊಂದರೆಗೆ ಸಿಕ್ಕಿದವನ್ನೂ, ತಬ್ಬಲಿಗಳಾದುವನ್ನೂ ರಕ್ಷಿಸುವುದು ನಮ್ಮ ನೈತಿಕ ಜವಾಬ್ದಾರಿ ಎಂದು ಭಾವಿಸುವುದು, ಕಾಡಿನಲ್ಲಿರುವುದನ್ನೆಲ್ಲಾ ತಾನು ತಿನ್ನುವುದಕ್ಕೇ ದೇವರು ಸೃಷ್ಟಿಮಾಡಿದ್ದಾನೆಂದು ತಿಳಿದಿರುವ ಮಾರನ ಮೂರ್ಖತನಕ್ಕಿಂತ ದೊಡ್ಡ ಮೂರ್ಖತನವೆಂದು ಖಂಡಿತವಾಗಿ ಅನ್ನಿಸಿತು.

ಇಷ್ಟೆಲ್ಲಾ ದೃಢನಿರ್ಧಾರ ಮಾಡಿದರೂ ನಾನು ಮತ್ತೊಮ್ಮೆ ಹಕ್ಕಿಮರಿಯ ದೆಸೆಯಿಂದ ನೈತಿಕ ಬಿಕ್ಕಟಿಗೆ ಸಿಕ್ಕಿಬಿದ್ದೆ. ಹೂವಣ್ಣನ ಮಗ ಚಂದ್ರ ನಮಗೆ ವಾರಕ್ಕೊಮ್ಮೆ ತರಕಾರಿ ತಂದುಕೊಡುತ್ತಿದ್ದ. ಅವನ ತರಕಾರಿ ಜಮೀನನ ಬಳಿಯೇ ಹಕ್ಕಿಯೊಂದು ಗೂಡು ಕಟ್ಟಿದೆ ಎಂದು ನನಗೆ ಹೇಳಿದ. ಅದೊಂದು ಮಡಿವಾಳ ಹಕ್ಕಿ ಗೂಡು. ಅಲ್ಲಿ ಹೋಗಿ ಮರೆ ರಚಿಸಿಕೊಂಡು ಕುಳಿತು ಅದರ ಹಲವಾರು ಫೋಟೋಗಳನ್ನು ತೆಗೆದನಂತರ ಇಷ್ಟೆಲ್ಲ ಹೇಳಿ ನನಗೆ ಸಹಾಯ ಮಾಡಿದ್ದಕ್ಕೆ ಅವನಿಗೆ ಒಂದು ರೂಪಾಯಿ ಇನಾಮುಕೊಟ್ಟೆ. ಈ ಸುದ್ದಿ ಯಾವು ಯಾವುದೋ ರೂಪ ತಾಳಿ ಕೊನೆಗೆ ಹಕ್ಕಿ ತಗೊಂಡು ಹೋಗಿ ಕೊಟ್ಟರೆ ಫೋಟೋ ಹೊಡೆದು ಒಂದು ರೂಪಾಯಿ ಕೊಡ್ತಾರಂತೆ ಎಂದು ವಾರ್ತೆಯಾಗಿ, ದನಕಾಯುವ ಹುಡುಗರಿಂದ ಹಿಡಿದು ಸ್ಕೂಲು ಹುಡುಗರವರೆಗೆ ಎಲ್ಲರೂ ತರ ತರದ ಹಕ್ಕಿಮರಿಗಳನ್ನು ಅವುಗಳ ಗೂಡುಗಳಿಂದ ಕದ್ದು ಇದರ ಫೋಟೋ ಹೊಡೆದುಕೊಳ್ಳಿ ಎಂದು ತರತೊಡಗಿದರು. ಅವರೆಲ್ಲರಿಗೂ ಬಯ್ದು ಈ ಕೆಲಸದಿಂದ ವಿಮುಖರನ್ನಾಗಿ ಮಾಡಬೇಕಾದರೆ ನನಗೆ ಸಾಕುಬೇಕಾಗಿ ಹೋಯ್ತು.

ಈ ಸಮಯದಲ್ಲಿ ದನಕಾಯುವ ರಾಮ ಒಂದು ಆಕಾಶ ಬಗರೆ ಹಕ್ಕಿ ಮರಿಯನ್ನು ತಂದು ಮಾರನ ಕೈಲಿ ಕೊಟ್ಟನಂತೆ. ನಾನು ಕಂಡರೆ ಬಯ್ಯುತ್ತೇನೆಂದು ಮಾರ ಹೇಳಿದ್ದರಿಂದ ನಾನು ಬರುವುದರೊಳಗೆ ಜಾಗ ಖಾಲಿ ಮಾಡಿದ್ದ. ಆ ಮರಿಯನ್ನು ಏಕೆ ಇಲ್ಲಿರಿಸಿಕೊಂಡೆ ಎಂದು ನಾನು ಮಾರನಿಗೆ ಬಯ್ದು ಅದನ್ನು ಗೂಡಿಗೆ ಹಿಂದಿರುಗಿಸಲು ರಾಮನಿಗಾಗಿ ಹುಡುಕಾಡಿದೆ. ನಾನು ಅವನಿಗೆ ಹೊಡೆಯಲೆಂದೇ ಹುಡುಕುತ್ತಿದ್ದೇನೆಂದು ತಿಳಿದ ರಾಮ ಪತ್ತೆ ಇಲ್ಲದಂತೆ ತಲೆ ತಪ್ಪಿಸಿಕೊಂಡ. ಆದರೆ ನಾನು ಮಾತ್ರ ಹಕ್ಕಿಮರಿಗಳನ್ನು ಸಾಕುವ ಜವಾಬ್ದಾರಿ ಹೊರಕೂಡದೆಂದು ನಿರ್ಧರಿಸಿದ್ದೆ.

ಈ ಎಲ್ಲ ಹುಡುಕಾಟ ನಡೆಸುತ್ತಿದ್ದಾಗ ಎರಡು ಆಕಾಶ ಬಗರೆ ಹಕ್ಕಿಗಳು ಕೂಗುತ್ತ ನಮ್ಮ ಮನೆ ಮೇಲೆ ಎತ್ತರದಲ್ಲಿ ಸುತ್ತುತ್ತಿರುವುದು ಗೋಚರಿಸಿತು. ನನಗೆ ಇವು ಆ ಮರಿಯ ತಂದೆ-ತಾಯಿಗಳೇ ಇರಬಹುದೆ ಎಂದು ಅನುಮಾನ ಆಯ್ತು. ಇರಲಿ, ನೋಡೋಣ ಎಂದು ಅವುಗಳಿಗೆ ಕಾಣುವಂತೆ ಮನೆ ಕಿಟಕಿಗೆ ಹೊಡೆದಿದ್ದ ತಂತಿ ಜಾಲರಿಯ ಮೇಲೆ ಹಕ್ಕಿಮರಿಗಳನ್ನು ಕೂರಿಸಿದೆ. ಅವು ತಂದೆ-ತಾಯಿಗಳಾದರೂ ಗೂಡಿನಲ್ಲಿಲ್ಲದ ಈ ಹಕ್ಕಿ ಮರಿಗಳಿಗೆ ಇಲ್ಲಿಯೇ ಗುಟುಕು ಕೊಟ್ಟು ನೋಡಿಕೊಳ್ಳುತ್ತವೆ ಎಂದು ನಾನು ಭಾವಿಸಿರಲಿಲ್ಲ. ಏಕೆಂದರೆ ಎಲೆಗಳು ಬಾಡಿದಕ್ಕೇ ಟುವ್ವಿ ಹಕ್ಕಿ ಮರಿಗಳನ್ನು ಪರಿತ್ಯಜಿಸಿ ಕಾಡಿಗೆ ಓಡಿಹೋಗಿದ್ದನ್ನು ನೋಡಿದ್ದೆ.

ಆದರೆ ಕೊಂಚ ಹೊತ್ತಿನ ತರುವಾಯ ತಾಯಿಹಕ್ಕಿ ಆಕಾಶದಲ್ಲಿ ಕೂಗಿಕೊಂಡು ಹಾರಾಡುತ್ತಿದ್ದುದು ಮೆಲ್ಲಗೆ ಇಳಿದು ಮನೆ ಮುಂದಿನ ಮರಗಳ ಮೇಲೆ ಬಂದು ಕುಳಿತುಕೊಂಡಿತು. ಮಧ್ಯಾಹ್ನದ ಹೊತ್ತಿಗೆ ತಾಯಿಹಕ್ಕಿ ಧೈರ್ಯ ಮಾಡಿ ಕಿಟಕಿ ಬಳಿಯೇ ಮರಿಗೆ ಗುಟುಕು ಕೊಡಲಾರಂಭಿಸಿತು. ರಾಮ ಅದರ ಮರಿಯನ್ನು ಕದ್ದು ತಂದಾಗ ತಾಯಿಹಕ್ಕಿ ಅವನನ್ನೇ ಹಿಂಬಾಲಿಸಿ ನಮ್ಮ ಮನೆವರೆಗೂ ಬಂದಿತ್ತು.

ರಾತ್ರಿಯಾದೊಡನೆ ಕಿಟಕಿ ಮೇಲೆ ಕುಳಿತಿದ್ದ ಹಕ್ಕಿಮರಿಯನ್ನು ಕೋಣೆಯೊಳಗೆ ಬಿಡುತ್ತಿದ್ದೆ. ಮತ್ತೆ ಬೆಳಗಾದೊಡನೆ ಅದನ್ನು ಹೊರಗೆ ಕೂರಿಸುತ್ತಿದ್ದೆ. ತಾಯಿಹಕ್ಕಿ ಬಂದು ಹಲವಾರು ಬಾರಿ ಗುಟುಕು ಕೊಟ್ಟು ಎತ್ತಲೋ ಹಾರಿ ಹೋಗುತ್ತಿತ್ತು. ಕೆಲವು ಗಂಟೆಗಳ ತರುವಾಯ ಮತ್ತೆ ಬರುತ್ತಿತ್ತು. ನಾನು ಬಹುಶಃ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಮಿಕ್ಕ ಸಮಯ ವಿನಿಯೋಗಿಸುತ್ತಿದೆ ಎಂದು ತಿಳಿದಿದ್ದೆ.

ಅದು ಗುಟುಕು ಕೊಟ್ಟನಂತರ ತುಂಬ ಸಮಯದವರೆಗೆ ಏಕೆ ನಾಪತ್ತೆಯಾಗುತ್ತದೆ ಎಂದು ನಾಲ್ಕಾರು ದಿನದ ತರುವಾಯ ನನಗೆ ಗೊತ್ತಾಯ್ತು. ಒಂದು ದಿನ ಬೆಳಗಿನ ಹೊತ್ತಿಗೆ ತಾಯಿಹಕ್ಕಿ ಇನ್ನೆರಡು ತನ್ನ ಮರಿಗಳನ್ನೂ ಕರೆತಂದು ಮನೆ ಎದುರಿನ ಮರದಲ್ಲಿ ಕೂರಿಸಿತ್ತು. ರಾಮ ಹಕ್ಕಿಮರಿಯನ್ನು ಕದ್ದು ತಂದಾಗ ಏನೋ ಕಾರಣ ಇನ್ನೆರಡನ್ನು ಗೂಡಿನಲ್ಲೇ ಉಳಿಸಿದ್ದ. ಮರಿಯ ಕೂಗನ್ನು ಅನುಸರಿಸಿ ತಾಯಿಹಕ್ಕಿ ಮನೆವರೆಗೆ ಬಂದರೂ ತನ್ನ ಗೂಡಿನ ಮಿಕ್ಕೆರಡು ಮರಿಗಳನ್ನು

ಮರೆತಿರಲಿಲ್ಲ. ಈ ಮರಿಗೆ ಕಿಟಕಿ ಬಳಿ ಹಲವು ಬಾರಿ ಗುಟುಕು ಕೊಟ್ಟು ಆನಂತರ ಗೂಡಿನ ಮರಿಗಳಿಗೆ ಆಹಾರ ಕೊಡಲು ಹೋಗುತ್ತಿದ್ದುದರಿಂದಲೇ ಅದು ತುಂಬ ಸಮಯದವರೆಗೆ ನಾಪತ್ತೆಯಾಗುತ್ತಿದ್ದುದು.

ಎರಡು ಕಡೆ ಸಂಸಾರ ನೋಡಿಕೊಳ್ಳುವ ಹೊರೆ ತಪ್ಪಿಸಲೆಂದೇ ಗೂಡಿನ ಮರಿಗಳಿಗೆ ಹಾರುವಷ್ಟು ರೆಕ್ಕೆ ಬಲಿಯುತ್ತಲೂ ಅವನ್ನು ಹಾರಿಸಿಕೊಂಡು ಬಂದು ಮನೆ ಬಳಿಯ ಮರದಲ್ಲಿ ಕೂರಿಸಿತ್ತು. ತಂದೆ–ತಾಯಿ ಎರಡೂ ಸೇರಿ ಮೂರು ಬಕಾಸುರ ಮರಿಗಳಿಗೆ ಬಿಡುವಿಲ್ಲದಂತೆ ಆಹಾರ ಒದಗಿಸಲಾರಂಭಿಸಿದವು.

ಅಲ್ಲಿಯವರೆಗೂ ಸುಮ್ಮನೆ ಬೆಪ್ಪು ಹಿಡಿದಂತೆ ಕಿಟಕಿಯ ಕಂಬಿ ಮೇಲೆ ಕುಳಿತು ಆಹಾರ ಸ್ವೀಕರಿಸುತ್ತಿದ್ದ ಹಕ್ಕಿಮರಿ ಮಿಕ್ಕೆರಡು ಹಕ್ಕಿಮರಿಗಳನ್ನು ನೋಡಿತೋ ಇಲ್ಲವೋ ಕುಳಿತಲ್ಲೇ ಕೂಗುತ್ತಾ ರೆಕ್ಕೆ ಬಡಿಯುತ್ತಾ ಉದ್ವೇಗ ಪ್ರಕಟಿಸಿತು. ಒಮ್ಮೆ ತಾಯಿಹಕ್ಕಿ ಮರದ ಮೇಲಿನ ಹಕ್ಕಿಮರಿಗಳಿಗೆ ಗುಟುಕು ಕೊಡುತ್ತಿರಬೇಕಾದರೆ ತಾಳ್ಮೆಯಿಂದ ಕೂರಲಾರದ ಈ ಹಕ್ಕಿಮರಿ ಕೂಗುತ್ತಾ ರೆಕ್ಕೆ ಬಡಿಯುತ್ತಾ ಕಿಟಕಿ ಮೇಲಿಂದ ನೆಗೆದೇ ಬಿಟ್ಟಿತು. ಕೆಲವು ಕ್ಷಣಗಳವರೆಗೆ ಹುಚ್ಚು ಹುಚ್ಚಾಗಿ ರೆಕ್ಕೆ ಬಡಿಯುತ್ತಾ ಗಾಳಿಯಲ್ಲಿ ತೂರಾಡಿದ ಆ ಮರಿ ಆನಂತರ ಯಮ ಸಾಹಸದಿಂದ ನಿಧಾನವಾಗಿ ಎತ್ತರೆತ್ತರಕ್ಕೆ ಸಾಗಿ ಅಂತೂ ಇಂತೂ ಹೋಗಿ ಮರದ ಮೇಲಿನ ತನ್ನ ಸೋದರರನ್ನು ಸೇರಿತು.

ನಾಲ್ಕಾರು ದಿನ ನಮ್ಮೊಡನೆ ಕೋಣೆಯೊಳಗೆ ಕಾಲ ಕಳೆದಿದ್ದ ಆ ಪುಟ್ಟ ಮರಿ ಅಷ್ಟರೊಳಗೆ ಸುಸ್ಮಿತಳಿಗೆ 'ನಮ್ಮ ಹಕ್ಕಿಮರಿ' ಆಗಿಬಿಟ್ಟಿತ್ತು. ತಾಯಿ ಹಕ್ಕಿ ಅದನ್ನು ಹಾರಿಸಿಕೊಂಡು ಹೋಗಿ ಮರದ ಮೇಲೆ ಕೂರಿಸಿದ್ದು ನೋಡಿ "ಅಯ್ಯೋ, ನಮ್ಮ ಹಕ್ಕಿಮರಿ ಮರದ ಮೇಲೆ ಹೋಯ್ತು" ಎಂದು ತಾಯಿ ಹಕ್ಕಿಯ ಮೇಲೆ ಕೋಪಗೊಂಡಳು.

ಎರಡು ದಿನಗಳವರೆಗೆ ಅವಳ ಹಕ್ಕಿಮರಿಯೂ ಮಿಕ್ಕ ಮರಿಗಳ ಜೊತೆ ಕೊಂಬೆಯ ಮೇಲೇ ಇತ್ತು. ಅನಂತರ ಆಕಾಶದ ಕರೆಯನ್ನು ತಡೆಯಲಾರದ ಅವು ಹಾರಿ ವಿಶಾಲ ವಿಶ್ವದಲ್ಲಿ ಲೀನವಾದವು.

ಆಮೇಲೆ ನಮ್ಮ ಮನೆಯ ಬಳಿ ಯಾವ ಆಕಾಶಬಗರೆ ಹಕ್ಕಿ ಹಾರಿದರೂ ಸುಸ್ಮಿತ "ಓಹೋ! ನಮ್ಮ ಹಕ್ಕಿಮರಿ ಮನೆ ನೆನಪು ಮಾಡಿಕೊಂಡು ಬಂದಿದೆ" ಎಂದು ಅದರತ್ತ ಕೈ ಬೀಸುತ್ತಿದ್ದಳು. ಹಕ್ಕಿಗಳಿಗೆ ಅಷ್ಟೊಂದು ಜ್ಞಾಪಕ, ಆತ್ಮೀಯತೆ ಇದೆಯೋ ಇಲ್ಲವೋ ಹೇಳಬಲ್ಲವರಾರು? ಒಟ್ಟಿನಲ್ಲಿ ಸುಸ್ಮಿತಳಿಗೆ ಆ ಹಕ್ಕಿಮರಿ ಜ್ಞಾಪಕ, ಆತ್ಮೀಯತೆ ತಂದುಕೊಟ್ಟಿತ್ತಷ್ಟೆ.

# 3. ಸ್ವಾತಂತ್ರ್ಯವೆಂಬ ಹೊಸ ಮೌಲ್ಯ

**ಎಂ. ಗೋಪಾಲಕೃಷ್ಣ ಅಡಿಗ**

ಪ್ರಜಾಪ್ರಭುತ್ವದ ಮೂಲಪ್ರೇರಕವೂ ಮೂಲತತ್ವವೂ ಆದ ಮೌಲ್ಯವೆಂದರೆ ಸ್ವಾತಂತ್ರ್ಯ. ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲೂ ಪೂಜ್ಯವಾದೊಂದು ಬೆಳಕಿನ ಕಿಡಿ ಇರುವುದರಿಂದ ಅವನು ಎಂಥವನೇ ಇರಲಿ ಅವನ ವ್ಯಕ್ತಿತ್ವಕ್ಕೂ ಬೆಲೆ ಇದೆ, ಅದು ಇನ್ನೊಬ್ಬರ ನಿರ್ಬಂಧಕ್ಕೆ ಒಳಗಾಗದೆ ಇಲ್ಲೇ, ಈ ಜನ್ಮದಲ್ಲೇ ವಿಕಾಸವಾಗಿ ಸಫಲವಾಗಬೇಕು ಎಂಬ ಈಗಿನ ಪ್ರಜಾಪ್ರಭುತ್ವದ ಸಂದರ್ಭದ ಮೌಲ್ಯದ ಅರ್ಥ ನಮಗೆ ಹೊಸತು. ಪ್ರತಿಯೊಬ್ಬನ ಆತ್ಮವೇ ಪರಮಾತ್ಮ ಅಥವಾ ಆತನ ಒಂದಂಶ ಎಂಬ ಭಾವನೆ ತಾತ್ವಿಕವಾಗಿ ನಮ್ಮಲ್ಲಿ ಇದ್ದಿದ್ದರೂ ವ್ಯಾವಹಾರಿಕವಾಗಿ ಈ ಮೌಲ್ಯ ಕಾರ್ಯಗತವಾಗಲಿಲ್ಲ. ಸ್ವಾತಂತ್ರ್ಯ ಕಲ್ಪನೆ ನಮ್ಮ ದೇಶಕ್ಕೆ ಹೊಸತು ಎಂದು ಈ ಮಾತಿನ ಅರ್ಥವಲ್ಲ. ವಿಚಾರ ಸ್ವಾತಂತ್ರ್ಯ, ಮತ ಸ್ವಾತಂತ್ರ್ಯ ಇಲ್ಲಿ ಯಥೇಚ್ಛವಾಗಿ ಇದ್ದುವು. ಸ್ವಾತಂತ್ರ್ಯದ ಕಲ್ಪನೆಯನ್ನು ಒಳಗೊಂಡ ಮುಕ್ತಿ ಅಥವಾ ಮೋಕ್ಷವೆಂಬ ಮೌಲ್ಯದ ಸ್ಥಾಪನೆಯೂ ಆಗಿತ್ತು. ಆದರೆ ಕಾರ್ಯಗತವಾಗಬಲ್ಲ ಸ್ವಾತಂತ್ರ್ಯವೆಂಬ ಮೌಲ್ಯದ ಬೆನ್ನೆಲುಬಾಗಿರುವ ರಾಜಕೀಯ ಸ್ವಾತಂತ್ರ್ಯ, ಎಂದರೆ ದೇಶದ ರಾಜ್ಯಭಾರದಲ್ಲಿ ಇತರರ ಜೊತೆಗೆ ಸಮಾನರಾಗಿ ಪಾಲುಗೊಳ್ಳುವ ಹಕ್ಕು ಮಾತ್ರ ಪ್ರಜಾತಂತ್ರದ ಮೂಲತಂತ್ರವಾಗಿ ಆಧುನಿಕವಾಗಿ ಇದೆ. ಈ ಅರ್ಥದಲ್ಲಿ, ನಮಗೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಕಲ್ಪನೆ ಹೊಸತೇ ಸರಿ. ವಿಚಾರದ ಮಟ್ಟದಲ್ಲಿ, ಅದರ ಅಭಿವ್ಯಕ್ತಿಯ ಮಟ್ಟದಲ್ಲಿ ಎಷ್ಟೇ ಸ್ವಾತಂತ್ರ್ಯ ಇಲ್ಲಿ ಇದ್ದಿದ್ದರೂ, ರಾಜಕೀಯವಾಗಿ ದೇಶದ ರಕ್ಷಣೆಗೆ, ಸುವ್ಯವಸ್ಥೆಗೆ, ಪ್ರತಿಯೊಬ್ಬ ಪ್ರಜೆಯೂ ಜವಾಬುದಾರ, ಏಕೆಂದರೆ ಅವನೆ ತನ್ನ ಪ್ರತಿನಿಧಿಗಳ ಮೂಲಕ ದೇಶವನ್ನಾಳುತ್ತ ಪರಮಾಧಿಕಾರವನ್ನು ಹೊಂದಿರುವ ಪ್ರಭುಶಕ್ತಿ ಎಂಬ ವಿಚಾರ ನಮಗೆ ಇತ್ತೀಚಿನದು. ಅನೇಕ ಶತಮಾನಗಳ ಕಾಲ ರಾಜಮಹಾರಾಜರುಗಳು, ನವಾಬ ಸುಲ್ತಾನರುಗಳ ರಾಜಕೀಯಾಧಿಕಾರವನ್ನು ಹೊಂದಿದ ಈ ದೇಶದಲ್ಲಿ ಅದರ ಅಧಿಕಾರಕ್ಕೆ ತಲೆಬಾಗುವ ಪ್ರವೃತ್ತಿ ಬೇರುಬಿಟ್ಟಿದೆ. ಸ್ವಾತಂತ್ರ್ಯದ ಈ ಹೊಸಾರ್ಥವನ್ನು ರಕ್ತಗತ ಮಾಡಿಕೊಳ್ಳದೆ ಇರುವುದರಿಂದಲೇ ನಮ್ಮಲ್ಲಿ ಪ್ರಜಾಪ್ರಭುತ್ವ ಸಫಲವಾಗದೆ ದೇಶ ಅನಾಯಕತ್ವದ ಕಡೆ ಜಾರುತ್ತಿದೆ.

ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ವಯಸ್ಕಮತದಾನ ಪದ್ಧತಿ ಕಾರ್ಯಗತವಾದ ಕೂಡಲೇ ಸರಕಾರವು ತಮ್ಮ ಯಜಮಾನರುಗಳಿಗೆ ಶಿಕ್ಷಣದಾನ ಕಾರ್ಯಕ್ರಮಗಳನ್ನು ಹಾಕಿಕೊಂಡು ದೇಶದ ಪ್ರತಿಯೊಬ್ಬ ಪ್ರಜೆಯಲ್ಲೂ ರಾಜಕೀಯಪ್ರಜ್ಞೆ ಮೂಡುವಂತೆ ಮಾಡಿತು. ಆದರೆ ನಮ್ಮಲ್ಲಿ ಈ ಕೆಲಸ ನಡೆಯಲಿಲ್ಲ. ನಮ್ಮ ಜನರಲ್ಲಿ ತಾವು ಸ್ವತಂತ್ರರು, ತಮಗೆ ಬೇಕಾದಂಥವರು ಮಾತ್ರ ಅಧಿಕಾರದಲ್ಲಿರುವುದು ಸಾಧ್ಯ, ಸರಕಾರವನ್ನು ಸ್ಥಾಪಿಸುವವರೂ ಕೊನೆಗಾಣಿಸುವವರೂ ತಾವೇ ಎಂಬ ಭಾವನೆ ಇನ್ನೂ ಮೂಡಿಲ್ಲ. ಈಗಲೂ ತಮಗೆ ಅರಿವಿಲ್ಲದಂತೆಯೇ ಜನ "ತಾಯಿ–ತಂದೆ" ಸರಕಾರವನ್ನು ಬಯಸುತ್ತಾರೇನೋ ಎಂದೆನಿಸುತ್ತದೆ. ಒಂದು ಸಲ ಅಧಿಕಾರಕ್ಕೆ ಬಂದರೆ ನಮ್ಮ ಪ್ರತಿನಿಧಿಗಳೂ ರಾಜರಂತೆ ವರ್ತಿಸುತ್ತಾರೆ; ಇವರೆಲ್ಲ ಅನುವಂಶಿಕ ರಾಜರೇ ಎಂಬ ಹಾಗೆ ನಮ್ಮ ಪ್ರಜಾಜನವೂ ತಲೆಬಾಗುತ್ತಾರೆ. ಸ್ವಾತಂತ್ರ್ಯದ ಮೇಲೆ ಎಂಥ ಗದಾಪ್ರಹಾರವೇ ನಡೆಯಲಿ ನಮ್ಮ ಔದಾಸೀನ್ಯಕ್ಕೆ ಭಂಗ ಬರುವುದಿಲ್ಲ. ಇಂಥ ಕಡೆ ಸರ್ವಾಧಿಕಾರ ಸ್ಥಾಪನೆಯಾಗುವುದು ಬಹಳ ಸುಲಭ. ಆ ದಿಕ್ಕಿನಲ್ಲೇ ದೇಶ ನಡೆಯುತ್ತಿರುವ ಹಾಗೆ ತೋರುತ್ತಿದೆ. ಪ್ರಜಾತಂತ್ರದ ಸ್ವಾತಂತ್ರ್ಯವೆಂಬ ಈ ಮೌಲ್ಯ ಪ್ರತಿಯೊಬ್ಬನ ವ್ಯಕ್ತಿತ್ವಕ್ಕೂ ಗೌರವವನ್ನು ಕೊಡುವಂಥದು. ಬಡಬಗ್ಗರು, ದೀನ ಹೀನರು ಎಂದು ಯಾರನ್ನು ಶತಶತಮಾನಗಳಿಂದ ಧಿಕ್ಕರಿಸುತ್ತ ಬಂದಿದ್ದೇವೋ ಅವರೂ ತಲೆಯೆತ್ತಿ ಎದೆಸೆಟೆದು ನಿಂತು, ತಮ್ಮ ವ್ಯಕ್ತಿಗೌರವವನ್ನು ಎತ್ತಿ ಹಿಡಿದು, ಅದಕ್ಕಾಗಿ ಹೋರಾಟ ನಡೆಸಲೂ ಪ್ರಾಣಾರ್ಪಣ ಮಾಡಲೂ ಸಿದ್ಧರಾಗುವಂತೆ ಮಾಡಬೇಕಾಗಿದ್ದ ಈ ಮೌಲ್ಯ ಕೇವಲ ಗ್ರಂಥಸ್ಥವಾಗಿ ಉಳಿದಿರುವುದು ದೇಶದ ದುರ್ದೈವ. ಆ ಮೌಲ್ಯದ ಅನುಷ್ಠಾನ ಸುಲಭವಲ್ಲ. ಇದು ಪ್ರತಿಯೊಬ್ಬರಿಂದಲೂ ಜವಾಬ್ದಾರಿಯುಳ್ಳ ನಡವಳಿಕೆಯನ್ನೂ ಚಿಂತನವನ್ನೂ ಬಯಸುವಂಥದು. ಈ ದೇಶದ ಆಗುಹೋಗುಗಳಿಗೆ ತಾನೇ ಹೊಣೆಗಾರ ಎಂಬ ತಿಳುವಳಿಕೆ ನಮ್ಮಲ್ಲಿ ವಿದ್ಯಾಂತರಲ್ಲೂ ಇನ್ನೂ ಮೂಡಿಲ್ಲವಾಗಿ ಜನಸ್ತೋಮ ಇನ್ನೂ ಹೊಸ ವೇಷತೊಟ್ಟ ರಾಜಮಹಾರಾಜರುಗಳನ್ನೇ ಆಂತರಿಕವಾಗಿ ಬಯಸುವಂತೆ ತೋರುತ್ತದೆ. ಆದಕಾರಣವೇ ಇಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಕ್ರಾಂತಿಕಾರಕವಾಗಬೇಕಾಗಿದ್ದ ಪ್ರಜಾತಂತ್ರ ಪ್ರಯೋಗ ನಮ್ಮ ಜಡತೆಯನ್ನು ಕರಗಿಸಲು ಸಮರ್ಥವಾಗಲಿಲ್ಲ.

ಹಿಂದೆ ಯಾವ ಮಹಾರಾಜರೂಗಳಿಗೂ ಚಕ್ರವರ್ತಿ ಸಾರ್ವಭೌಮರಿಗೂ ದೊರೆಯಲು ಅಸಾಧ್ಯವಾಗಿದ್ದ ಶಕ್ತಿ ಇಂದು ಈ ಜಗತ್ತಿನ ಎಲ್ಲ ಸರಕಾರಗಳಿಗೂ ದೊರೆಯುವ ಸಾಧ್ಯತೆ ಇದೆ. ನೂತನ ಸಂಪರ್ಕಸಾಧನಗಳಾದ ರೈಲು,

ವಿಮಾನ, ರೇಡಿಯೋ, ಫೋನ್ ಇವುಗಳ ಮೂಲಕವಾಗಿ ಸರಕಾರ ದೇಶದ ಎಲ್ಲ ಮೂಲೆಗಳ ಎಲ್ಲ ಜನರ ಮೇಲೂ ತನ್ನ ಹತೋಟಿಯನ್ನಿಟ್ಟುಕೊಳ್ಳುವುದು ಸಾಧ್ಯ. ತನ್ನ ನೂತನ ಮಾರಕಾಸ್ತ್ರಗಳ ಮೂಲಕ ಎಂಥ ದಂಗೆಯನ್ನಾದರೂ ಅಡಗಿಸಲು ಸಾಧ್ಯ. ಪ್ರತಿಯೊಬ್ಬ ಪ್ರಜೆಯ ಪ್ರತಿನಿಮಿಷದ ವರ್ತನೆ, ಮಾತು, ಕೃತಿಗಳ ಮೇಲೆ ನಿಗಾ ಇಟ್ಟುಕೊಂಡು ಭಿನಾಭಿಪ್ರಾಯ ತಲೆದೋರದಂತೆ, ತಲೆಯೆತ್ತದಂತೆ ಮಾಡುವುದು ಸಾಧ್ಯ. ತನಗೆ ಬೇಕಾಗ ವಿಚಾರಗಳನ್ನೇ ಪ್ರಚಾರ ಮಾಡಿ ಜನಸ್ತೋಮಗಳನ್ನು ಮರುಳುಗೊಳಿಸಿ ಅವರ ಮಾತುಗಳನ್ನು ಗೆಬರಿಕೊಳ್ಳುವ ಸಾಧ್ಯತೆ ಇದೆ. ಸ್ವಾತಂತ್ರ್ಯದ ಮೇಲೆ ಈ ರೀತಿ ಧಾಳಿ ನಡೆಯುವುದು ಸಾಧ್ಯವಾಗಿ, ನಡೆಯುತ್ತಲೇ ಇರುವಾಗ, ಪ್ರತಿಯೊಬ್ಬನಲ್ಲೂ ಸ್ವಾತಂತ್ರ್ಯದ ಪ್ರಜ್ಞೆ ನಿಚ್ಚಳವಾಗಿ ನಿಗಿನಿಗಿ ಕೆಂಡವಾಗಿ ಉರಿಯುತ್ತಿರುವುದು ಅತ್ಯಗತ್ಯ. ಹಿಂದಿನ ಕಾಲದಲ್ಲಿ ಒಬ್ಬ ಮನುಷ್ಯ ರಾಜಕೀಯ ಸ್ವಾತಂತ್ರ್ಯವಿಲ್ಲದೆ ಕೂಡ ತನ್ನ ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಕಾದಿಟ್ಟುಕೊಳ್ಳುವುದು ಸಾಧ್ಯವಾಗಿತ್ತು. ಆದರೆ ಈಗ ಅದು ಸಾಧ್ಯವಿಲ್ಲ. ಹಿಂದೆ ಕಾಡಿಗಾದರೂ ಹೋಗಿ ಅಲ್ಲಿ ತನ್ನಿಷ್ಟಬಂದಂತೆ ಇದ್ದುಬಿಡಲು ಸಾಧ್ಯವಾಗುತ್ತಿತ್ತು. ಆದರೆ ಈಗ ಕಾಡೂ ಸರಕಾರದ ಅಧಿಕಾರವ್ಯಾಪ್ತಿಗೆ ಮೀರಿದ್ದಾಗಿ ಇಲ್ಲ. ಹೆಲಿಕಾಪ್ಟರುಗಳ ಸಹಾಯದಿಂದ ಕಾಡಿನ ಅಂಗುಲಂಗುಲವನ್ನೂ ಶೋಧಿಸುವುದು ಸಾಧ್ಯ. ಆದಕಾರಣ ಈ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರತಿಯೊಬ್ಬನನ್ನು ತನ್ನ ಜವಾಬ್ದಾರಿಯನ್ನರಿತು ಸದಾ ಎಚ್ಚರವಾಗಿ ಇಲ್ಲದೆ ಹೋದರೆ ಈ ಮೌಲ್ಯ ನಷ್ಟವಾಗಿ ಹೋಗಿ ಗುಲಾಮಗಿರಿ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ.

ಈ ದೇಶದ ಪ್ರತಿಯೊಬ್ಬನೂ ತನ್ನ ಸಹಜವಾದ ಎತ್ತರಕ್ಕೆ ಬೆಳೆಯುವ ಅವಕಾಶವನ್ನು ಮೊತ್ತಮೊದಲನೆ ಬಾರಿಗೆ ಸ್ವಾತಂತ್ರ್ಯವೆಂಬ ಈ ಮೌಲ್ಯ ತಂದುಕೊಟ್ಟಿದೆ. ಪ್ರತಿಯೊಬ್ಬನೂ, ಸರಿಯಾದ ಅವಕಾಶ ಸಿಕ್ಕಿ, ಬೆಳೆಯತೊಡಗಿದಾಗ ಅತ್ಯಪೂರ್ವವಾದೊಂದು ಸನ್ನಿವೇಶ ಇಲ್ಲಿ ಸೃಷ್ಟಿಯಾಗಬಹುದಾಗಿತ್ತು. ಹಿತಕರವಾದ, ಆದರೆ ತೀವ್ರವಾದ, ಸ್ಪರ್ಧೆಯ ಮೂಲಕ, ಪ್ರತಿಯೊಬ್ಬನಲ್ಲಿಯೂ ಇರುವ ಸಮಾಜೋಪಯೋಗಿ ವೈಯಕ್ತಿಕ ಪ್ರತಿಭೆ ವಿಕಾಸಗೊಂಡು ಇಷ್ಟು ಹೊತ್ತಿಗೆ ಈ ದೇಶ ಆರ್ಥಿಕವಾಗಿಯೂ ಸಾಂಸ್ಕೃತಿಕವಾಗಿಯೂ ಒಂದು ಹೊಸಹುಟ್ಟನ್ನು ಪಡೆಯುವುದು ಸಾಧ್ಯವಾಗಿತ್ತು. ಆದರೆ ಹಾಗೆ ಆಗಿಲ್ಲ. ಇಲ್ಲಿ ಸ್ವಾತಂತ್ರ್ಯ ಬೆಳೆಯಲು ಅಡ್ಡವಾದ ರಾಜಕಾರಣಿಗಳೇ ಸ್ವಾತಂತ್ರ್ಯದ ಶತ್ರುಗಳು ಎಂದು ಹೇಳದೆ ವಿಧಿಯಿಲ್ಲ.

ಸ್ವಾತಂತ್ರ್ಯದ ನಿಜವಾದ ಅರ್ಥ ಜನತೆಗೆ ತಿಳಿಯುವಂಥ ಶಿಕ್ಷಣ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಇದ್ದರೆ ಇಲ್ಲಿ ಸ್ವಾತಂತ್ರ್ಯ ನಷ್ಟವಾಗುವುದರಲ್ಲಿ ಸಂದೇಹವಿಲ್ಲ. ಇಲ್ಲಿ–ಈಗ ಅಧಿಕಾರವುಳ್ಳವರಿಗೆ ಮಾತ್ರ ಸ್ವಾತಂತ್ರ್ಯ ಎನ್ನುವ ಸ್ಥಿತಿ ಬಂದಿದೆ. ಅಧಿಕಾರವಿಲ್ಲದೆಯೂ ಸ್ವತಂತ್ರವಾಗಿ ಗೌರವವಾಗಿ ಬದುಕುವ ಸಾಧ್ಯತೆ ಕಡಿಮೆಯಾಗುತ್ತಿದೆ. ನಮ್ಮ ಮಕ್ಕಳಿಗೂ ಸ್ವತಂತ್ರ ವಿಚಾರ, ಸ್ವತಂತ್ರ ಸಂಶೋಧನಬುದ್ಧಿ ಇವುಗಳನ್ನು ನಮ್ಮ ಶಿಕ್ಷಣ ಪದ್ಧತಿ ಕಲಿಸದೆ ಇರುವುದರಿಂದ ಸ್ವಾತಂತ್ರ್ಯದ ಬಗ್ಗೆ ಆಶೆಯಿಟ್ಟುಕೊಳ್ಳುವುದೂ ಕಷ್ಟವೆನಿಸುವ ಹಾಗೆ ಆಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆ ನಡೆದು ಪ್ರತಿಯೊಬ್ಬನೂ ಸ್ವತಂತ್ರವಾಗಿ ಚಿಂತಿಸುವ ಹಾಗೆ ತಕ್ಕ ತರಬೇತಿ ಕೊಡದೆ ಇದ್ದರೆ ಇಲ್ಲಿ ಸರ್ವಾಧಿಕಾರ ಮೂಡುತ್ತದೆ. ಇನ್ನೊಬ್ಬರು ಹೇಳಿದ್ದನ್ನು ಕೇಳಿ ಬರೆದುಕೊಂಡು ಉರು ಹೊಡೆದು ಅದನ್ನೇ ಒದರುವ ತರುಣರಿದ್ದಲ್ಲಿ, ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರುವ ವಿಧೇಯತೆ ಅಥವಾ ಬೇಜವಾಬ್ದರಿ ಬಂಡಾಯ ಇವುಗಳೇ ಮೌಲ್ಯಗಳಾಗಿ ಸ್ಥಾಪಿತವಾದರೆ ಆಶ್ಚರ್ಯವಲ್ಲ. ಇಂಥ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯವೆಂಬ ಮೌಲ್ಯದಲ್ಲಿ ನಿಷ್ಠೆಯುಳ್ಳವರೆಲ್ಲ ಜಾಗೃತರಾಗಿ ಕಾರ್ಯಕ್ರಮ ಕೈಗೊಳ್ಳುವುದು ಅವರ ಕರ್ತವ್ಯವಾಗಿರುತ್ತದೆ.

ಸ್ವಾತಂತ್ರ್ಯವೆಂಬ ಮೌಲ್ಯ ಅವಿಭಾಜ್ಯವಾದುದು. ತನಗೆ ಮಾತ್ರ ಸ್ವಾತಂತ್ರ್ಯವಿದ್ದರೆ ಸಾಕು ಎಂಬ ಪ್ರವೃತ್ತಿ ಆತ್ಮಘಾತಕವಾದದ್ದು. ತಾನು ಸ್ವತಂತ್ರನಾಗಿರಬೇಕಾದರೆ ಎಲ್ಲರೂ ಸ್ವತಂತ್ರವಾಗಿರುವುದು ಅಗತ್ಯ ಎಂದು ನಮ್ಮ ಅಧಿಕಾರಸ್ಥರಿಗೆ ತೋರದಿರುವುದು ಪರಮಾಶ್ಚರ್ಯ. ಆದರೆ ಅವರಿಗೂ ಸ್ವಾತಂತ್ರ್ಯವೊಂದು ಮೌಲ್ಯವಾಗಿಲ್ಲ. ಅವರ ಮೌಲ್ಯಗಳೇ ಬೇರೆ. ಅಧಿಕಾರ ಮತ್ತು ಭೋಗಸಾಧನವಾದ ಸಂಪತ್ತು. ಇಂಥ ಕಡೆ ಸ್ವಾತಂತ್ರ್ಯ ಮಾತ್ರವಲ್ಲ, ಸಂಸ್ಕೃತಿಯ ಪ್ರತಿಯೊಂದು ಅಂಗಕ್ಕೂ ಭಂಗ ಬರುತ್ತದೆ. ಅದನ್ನೇ ನಾವಿಂದು ಕಾಣುತ್ತಿರುವುದು.

ಸ್ವಾತಂತ್ರ್ಯ ಎರಡು ಬಗೆಯದು: ಬಾಹ್ಯದ್ದು, ಆಂತರಿಕವಾದದ್ದು. ಬಾಹ್ಯವಾಗಿ ಇದು ರಾಜಕೀಯವಾದರೆ ಆಂತರಿಕವಾಗಿ ನೈತಿಕ. ನಮಗೆ ಹೊರಗಿನ ಯಾವ ಶಕ್ತಿಗಳಿಗೂ ವಿನಾಕಾರಣ ತಲೆಬಾಗಬೇಕಾದ ಅಗತ್ಯವಿಲ್ಲದೆ, ಕಾನೂನು ಮತ್ತು ನ್ಯಾಯಕ್ಕೆ ಮಾತ್ರ ಬಗ್ಗಿ ಬದುಕಲು ಸಾಧ್ಯವಾಗುವುದು ಬಾಹ್ಯ ಸ್ವಾತಂತ್ರ್ಯ. ತನ್ನೊಳಗೇ ಇರುವ ಸಮಾಜಘಾತಕವಾದ ಪ್ರವೃತಿಗಳಿಂದ ಬಿಡುಗಡೆ ಹೊಂದಿ, ನ್ಯಾಯ, ಸತ್ಯ ದಯಾದಿಂತ ಉತ್ತಮ ಗುಣಗಳನ್ನು ಸ್ಥಾಪಿಸಿಕೊಂಡು, ತನ್ನದೇ ಆದ ದುರ್ಗುಣಗಳಿಂದ ಮುಕ್ತವಾಗಿ ತನ್ನ ಮೇಲೆ ತನ್ನ ಹತೋಟಿಯನ್ನು ನೆಲೆಗೊಳಿಸಿಕೊಂಡರೆ ಆಗ ಅದು ನೈತಿಕ ಸ್ವಾತಂತ್ರ್ಯ. ಈ ಎರಡೂ ಸೇರಿದಾಗಲೇ ಸ್ವಾತಂತ್ರ್ಯವೆಂಬ ಮೌಲ್ಯ ಸಾರ್ಥಕವಾಗಿ ವ್ಯಕ್ತಿಯ ಮತ್ತು ಸಮಾಜದ ಸುಸ್ಥಿತಿಗೆ ಸಾಧಕವಾಗುತ್ತದೆ. ಆ ದಿಶೆಯಲ್ಲಿ ಯೋಚಿಸುವುದೂ ಹಾಗೆ ನಡೆಯುವುದೂ, ಅಂಥ ವಿಚಾರ ಆಚಾರಗಳಿಗೆ ತಕ್ಕ ವಾತಾವರಣವನ್ನು ಸೃಷ್ಟಿಮಾಡುವುದೂ ದೇಶಪ್ರೇಮಿಗಳಾದವರ ಕರ್ತವ್ಯ.

# 4. ಓದು ಪತ್ಯ – ಗಿಳಿಯ ಕಥೆ

**ರವೀಂದ್ರನಾಥ್ ಠಾಕೂರ್**

೧

ಹೀಗೊಂದು ಪಕ್ಷಿ ಇತ್ತು. ಅದಕ್ಕೆ ಬುದ್ಧಿಯೇ ಇರಲಿಲ್ಲ. ಹಾಡಲು ಬರುತ್ತಿರಲಿಲ್ಲ; ಶಾಸ್ತ್ರ ಓದಿರಲಿಲ್ಲ. ಜಿಗಿಯುತ್ತಿತ್ತು; ನೆಗೆಯುತ್ತಿತ್ತು. ಕಾಯಿದೆ–ಕಾನೂನು ಅಂದರೆ ಏನೆಂಬುದೇ ಅದಕ್ಕೆ ಗೊತ್ತಿರಲಿಲ್ಲ.

ರಾಜ ಅಂದನು : "ಇಂತಹ ಪಕ್ಷಿ ಯಾವ ಕೆಲಸಕ್ಕೂ ಬಾರದು. ಅಲ್ಲದೆ ವನದೊಳಗಿನ ಹಣ್ಣುಗಳನ್ನು ತಿಂದು, ರಾಜ ಬೀದಿಯ ಹಣ್ಣಿನ ಪೇಟೆಯಲ್ಲಿ ಹಾನಿಯನ್ನುಂಟುಮಾಡುತ್ತದೆ".

ಮಂತ್ರಿಯನ್ನು ಕರೆದು ಹೇಳಿದ: "ಈ ಪಕ್ಷಿಗೆ ಬುದ್ಧಿ ಕಲಿಸು" ಎಂದು.

೨

ರಾಜನ ಸೋದರಳಿಯನ ಮೇಲೆ ಪಕ್ಷಿಗೆ ಪಾಠ ಕಲಿಸುವ ಭಾರಬಿತ್ತು. ಪಂಡಿತರೆಲ್ಲ ಕುಳಿತು ತುಂಬ ವಿಚಾರಮಾಡಿದರು. "ಈ ಜೀವದ ಅವಿದ್ಯೆಗೆ ಕಾರಣವೇನು?" ಎಂಬುದೇ ಬಹುದೊಡ್ಡ ಪ್ರಶ್ನೆಯಾಗಿತ್ತು.

ಕೊನೆಗೆ ಸಿದ್ಧಾಂತವಾಯಿತು. ಸಿಕ್ಕಸಿಕ್ಕ ಹುಲ್ಲಿನ ಗರಿಗಳಿಂದ ಪಕ್ಷಿ ಯಾವ ಗೂಡನ್ನು ತಾನು ಇರಲು ಕಟ್ಟಿಕೊಂಡಿದೆಯೊ ಅಲ್ಲಿ ಹೆಚ್ಚಿನ ಬುದ್ಧಿಗೆ ಅವಕಾಶವೇ ಇಲ್ಲ. ಎಲ್ಲದಕ್ಕಿಂತ ಮೊದಲು ಇದಕ್ಕೊಂದು ತಕ್ಕ ಮನೆಯ ಅವಶ್ಯಕತೆ ಹೆಚ್ಚಾಗಿದೆ. ಉತ್ತಮವಾದುದೊಂದು ಗಿಳಿಪಂಜರ ಮಾಡಿಸಿಕೊಡಬೇಕು.

ರಾಜಪಂಡಿತರು ತಮ್ಮ ತಮ್ಮ ದಕ್ಷಿಣೆಯನ್ನು ಪಡೆದು ಸಂತೋಷದಿಂದ ಮನೆಗೆ ಹೋದರು.

೩

ಅಕ್ಕಸಾಲಿಗ ಕುಳಿತ, ಬಂಗಾರದ ಪಂಜರ ತಯಾರಿಸಲು, ಖ್ಯಾತಿಯನ್ನು ಕೇಳಿ ಪರದೇಶದ ಜನರೂ ಕೂಡ ಧಾವಿಸಿಬರುವಷ್ಟು ಪಂಜರ ಸುಂದರವಾಯಿತು. ಕೆಲವರೆಂದರು: "ಶಿಕ್ಷಣವು ಬಹಳ ಆಕರ್ಷಕವಾಗಿದೆ" ಎಂದು. ಮತ್ತೆ ಕೆಲವರು, ಶಿಕ್ಷಣವಾಗದೆ ಹೋದರೂ ಪಂಜರವಾದರೂ ಆಯಿತಲ್ಲ! ಪಕ್ಷಿಯದು ಎಂತಹ ಸುದೈವ! ಅಕ್ಕಸಾಲಿಗ ಚೀಲದ ತುಂಬ ಹಣ ಇನಾಮು ಪಡೆದ. ಅತ್ಯಂತ ಹರ್ಷಚಿತ್ತನಾಗಿ ಸಂತೋಷದಿಂದ ತನ್ನ ಮನೆಗೆ ಕೂಡಲೇ ಹೊರಟು ಹೋದ.

ಪಂಡಿತರೆಲ್ಲ ಪಕ್ಷಿಗೆ ವಿದ್ಯೆ ಹೇಳಿಕೊಡಲು ಕುಳಿತರು. ನಸ್ಯ ಕೈಯಲ್ಲಿ ಹಿಡಿದು ಹೇಳಿದರು: "ಪುಸ್ತಕಗಳೇ ಇಲ್ಲ" ಎಂದು.

ಆಗ ಅಳಿಯನು ಪುಸ್ತಕ ಬರೆಯುವವರ ಶೋಧ ನಡೆಸಿದ. ಅವರು ಬಂದು ಇದ್ದ ಪುಸ್ತಕದ ಪ್ರತಿ ತೆಗೆದರು; ಪ್ರತಿಮಾಡಿದ ಪುಸ್ತಕಗಳ ಪ್ರತಿಗಳನ್ನೂ ಬರೆದು ತೆಗೆದರು. ಒಂದು ಗುಡ್ಡದಷ್ಟು ಪುಸ್ತಕ ಬರೆದು ರಾಶಿಹಾಕಿದರು. ಇದನ್ನು ನೋಡಿದವರು ವಾಹವಾ ಎಂದು ಉದ್ಗಾರ ತೆಗೆದರು. "ಭಲೆ" ಎಂದು ಕತ್ತುಹಾಕಿದರು.

ಪುಸ್ತಕ ಬರೆದವರಿಗೆ ಬಹುಮಾನ ದೊರೆಯಿತು. ಅದನ್ನವರು ಎತ್ತಿನ ಮೇಲೆ ಹೊತ್ತುಕೊಂಡು ಆಕ್ಷಣವೇ ತಮ್ಮ ಮನೆಗೆ ಹೋದರು. ಅವರ ಮನೆಯಲ್ಲಿ ಮತ್ತೆ ಎಳೆದಾಟ, ಕಚ್ಚಾಟ ಉಳಿಯಲಿಲ್ಲ.

ಬಹು ಬೆಲೆಯುಳ್ಳ ಪಂಜರವನ್ನು ಸರಿಯಾಗಿ ಇಟ್ಟುಕೊಳ್ಳುವ ಕೆಲಸ ಅಳಿಯನಿಗೆ ಕ್ಷುಲ್ಲಕವಾದುದೇನೂ ಆಗಿರಲಿಲ್ಲ. ಅದಕ್ಕಾಗಿ ಆಳು ಹೋಳುಗಳನ್ನು ಕೆಲಸಕ್ಕೆ ತಕ್ಕೊಂಡುದಾಯಿತು. ಅವರು ಪಂಜರವನ್ನು ಉಜ್ಜಿ, ಒರೆಸಿ, ತಿಕ್ಕಿ ತೊಳೆದು ಹೊಳೆಯುವಂತೆ ಸದಾ ಕೆಲಸ ಮಾಡುವುದನ್ನು ನೋಡಿದ ಜನರು ಅನ್ನುತ್ತಿದ್ದರು "ಶಿಕ್ಷಣದ ಉನ್ನತಿ ಸಾಕಷ್ಟು ನಡೆದಿದೆ" ಎಂದು.

ಇದಕ್ಕಾಗಿ ಕೆಲಸಕ್ಕೆ ತಕ್ಕೊಂಡ ಜನರೇ ಸಾಕಷ್ಟು ಅಧಿಕ ಸಂಖ್ಯೆಯಲ್ಲಿದ್ದರು. ಅವರು ಹೊತ್ತಿಗೆ ಸರಿಯಾಗಿ ಎಲ್ಲ ಕೆಲಸಗಳನ್ನೂ ಮಾಡಿಕೊಂಡು ಹೋಗುವರೋ ಇಲ್ಲವೋ ಎಂಬುದನ್ನು ನೋಡಲು ಮತ್ತಷ್ಟು ಜನ ಕೆಲಸಗಾರರು ಬಂದರು. ಅವರು ತಿಂಗಳು ತಿಂಗಳಿಗೆ ಕೈತುಂಬ ಸಂಬಳ ತೆಗೆದುಕೊಂಡು ತಮ್ಮ ಖಜಾನೆಯನ್ನು ತುಂಬಿಸಿಕೊಂಡರು.

ಅವರು, ಅವರ ಬಂಧು–ಬಳಗ, ಚಿಕ್ಕಪ್ಪ–ದೊಡ್ಡಪ್ಪ ಎಲ್ಲರೂ ಉಪ್ಪರಿಗೆಯ ಮನೆ ಕಟ್ಟಿಕೊಂಡು ಅದರ ಮೇಲೆ ಕುಳಿತು ಸುಖವಾಗಿ ಜೀವನ ನಡೆಸಿದ್ದರು.

ಜೀವನದಲ್ಲಿ ಅನೇಕ ವಸ್ತುಗಳ ಕೊರತೆಯಿದ್ದರೂ ನಿಂದಕರು ಮಾತ್ರ ಯಥೇಷ್ಟವಾಗಿರುವರು. ಅವರೆಂದರು : "ಪಂಜರದ ಪ್ರಸಿದ್ಧಿ ಸಾಕಷ್ಟು ಆಗುತ್ತಾ ಇದೆ; ಆದರೆ ಪಕ್ಷಿಯನ್ನು ಮಾತ್ರ ಕೇಳುವವರೇ ಇಲ್ಲ' ಎಂದು. ಈ ಮಾತು ಅರಸನ ಕಿವಿಗೂ ಬಿತ್ತು. ಅರಸನು ಅಳಿಯನನ್ನು ಕರೆಸಿ ಕೇಳಿದನು. "ಅಳಿಯನೇ, ಇದೇನು ಸುದ್ದಿ ಕೇಳಿತ್ತಿದ್ದೇನೆ?" ಎಂದು. ಅಳಿಯ ಹೇಳಿದನು: ನಿಜ ಸಂಗತಿಯನ್ನು ಕೇಳಬೇಕೆಂದು ನಿಮಗೆ ಮನಸ್ಸಿದ್ದರೆ ಕರೆಯಿರಿ ಅಕ್ಕಸಾಲಿಗರನ್ನು ಪಂಡಿತರನ್ನು ಲಿಪಿಕಾರರನ್ನು, ಕರೆಯಿರಿ ಪಂಜರವನ್ನು ಸರಿಯಾಗಿ ಇಟ್ಟವರನ್ನು, ದಿನಾಲು ತಿಕ್ಕಿ ತಿಕ್ಕಿ ಹೊಳೆಯುವಂತೆ ಮಾಡಿದ ಜನರನ್ನು; ಕರೆಯಿರಿ ಈ ಕೆಲಸಗಾರರೆಲ್ಲ ಸರಿಯಾಗಿ ಕೆಲಸಮಾಡುವರೋ ಹೇಗೆಂಬುದನ್ನು ನೋಡುತ್ತಿರುವ ಮೇಲ್ವಿಚಾರಕರನ್ನು, ನಿಂದಕರಿಗೆ ತಿನ್ನಲು ಕೂಳು ಸಿಕ್ಕುವುದಿಲ್ಲ. ಹೇಳುತ್ತಾರೆ ಈ ಕೊಳಕು ಮಾತು; ಹೇಳಲಿ.

ಉತ್ತರವನ್ನು ಕೇಳಿ ಅರಸನು ನಿಜ ಸಂಗತಿಯನ್ನು ಸಂಪೂರ್ಣವಾಗಿ ಅರಿತುಕೊಂಡನು. ಆಗ ಅಳಿಯನ ಕೊರಳಲ್ಲಿ ಬಿತ್ತು ಮುತ್ತಿನ ಸರ. ಶಿಕ್ಷಣದ ಪ್ರಗತಿಯು ಭಾರೀ ವೇಗದಿಂದ ಸಾಗಿತ್ತು. ಇದನ್ನು ಅರಸನಿಗೆ ಸ್ವತಃ ನೋಡಿ ತಿಳಿದುಕೊಳ್ಳಬೇಕೆಂದು ಮನಸ್ಸಾಯಿತು. ಒಂದು ದಿನ ಅರಸನು, ಮಂತ್ರಿ, ಸೇನಾಪತಿ, ಮಿತ್ರರು, ಬಂಧುಬಾಂಧವರು ಆಪ್ತೇಷ್ಟರೆಲ್ಲರನ್ನೂ ಕೂಡಿಕೊಂಡು ಪಾಠಶಾಲೆಗೆ ಸ್ವಯಂ ಬಂದು ನಿಂತನು.

ಪಾಠಶಾಲೆಯನ್ನು ತಲುಪುತ್ತಲೆ ಶಂಖಧ್ವನಿ ಕೇಳಿ ಬಂತು. ಗಂಟೆ–ಜಾಗಟೆಗಳು ಬಾರಿಸಿದವು. ಕೊಳಲುಗಳ ಸಂಗೀತ ಕೇಳಿಸಿತು. ಡಮರು, ಢೋಲು, ಮೃದಂಗ, ನಗಾರೀ, ನೌಬತ್ತುಗಳ ನಿನಾದವು ಸುತ್ತಲಿನ ವಾತಾವರಣವನ್ನೇ ತುಂಬಿ ಮೊಳಗರಿಯಿತು.

ಪಂಡಿತರು ಸ್ವರತೆಗೆದು, ಚಂಡಿಕೆ ಕಟ್ಟಿಕೊಂಡು, ಮಂತ್ರ ಹೇಳತೊಡಗಿದರು. ಅಕ್ಕಸಾಲಿಗ, ಶಿಲ್ಪಿ, ಚಿತ್ರಗಾರ, ಲಿಪಿಕಾರ, ನೌಕರರು, ಚಾಕರರು, ಅವರ ಬಂಧುಗಳು, ಬಂಧುಗಳ ಬಂಧುಗಳು, ಆಪ್ತೇಷ್ಟರು ಎಲ್ಲರೂ ಸೇರಿ ಉಚ್ಚಕಂಠದಿಂದ ಜಯ ಜಯಕಾರ ಮಾಡಿದರು.

ಅಳಿಯ ಅತ್ಯಂತ ವಿನಯದಿಂದ ಬಾಗಿನಿಂತು, "ಮಹಾರಾಜ, ಎಲ್ಲವನ್ನೂ ನೋಡಿದರಲ್ಲವೆ?" ಎಂದು ಕೇಳಿದನು. ಮಾಹಾರಾಜರದಕ್ಕೆ, "ಇದೇನಾಶ್ಚರ್ಯ! ಗೌಜುಗದ್ದಲಗಳಿಗೇನೂ ಕಡಿಮೆ ಇಲ್ಲ" ಎಂದು ಉತ್ತರಿವಿತ್ತರು.

ಅಳಿಯನದಕ್ಕೆ "ಬರಿ ಶಬ್ದವಿಷ್ಟೇ ಅಲ್ಲ; ಅದರ ಹಿಂದೆ ಅರ್ಥವೂ ಕಡಿಮೆ ಇಲ್ಲ". ಎಂದು ಅಂದನು.

ರಾಜನಿಗೆ ತುಂಬ ಸಂತೋಷವಾಯಿತು. ಹೊರಗೆ ಬಂದು ಆನೆಯ ಮೇಲೆ ಏರಿ ಕುಳಿತುಕೊಳ್ಳಬೇಕೆಂದಾಗ ಪೊದೆಯ ಮರೆಗೆ ನಿಂದಕ ಅಡಗಿ ನಿಂತದ್ದು ಕಾಣಿಸಿತು. ಅವನು ಮುಂದೆ ಬಂದು ಕೇಳಿದನು: "ಮಹರಾಜ, ಪಕ್ಷಿಯನ್ನು ನೋಡಿದಿರೇನು?" ಎಂದು. ರಾಜನಿಗೆ ಅದೇಕೋ ಆಘಾತವಾದಂತಾಯಿತು. "ಪಕ್ಷಿಯನ್ನು ನೋಡುವುದು ಆಗಲೇ ಇಲ್ಲವಲ್ಲ". ಎಂದು ಅಂದುಕೊಂಡನು. ರಾಜ ತಿರುಗಿ ಬಂದನು. ಪಂಡಿತರನ್ನು ಕರೆದನು. "ಪಕ್ಷಿಗೆ ನೀವು ಅದು ಹೇಗೆ ಕಲಿಸಿರುವೆಂಬುದನ್ನು ನಾನು ನೋಡಬೇಕೆನ್ನುತ್ತೇನೆ" ಎಂದು ರಾಜ ಹೇಳಿದನು.

ಅದನ್ನೂ ನೋಡಿದ್ದಾಯಿತು. ಪಕ್ಷಿಗೆ ಕಲಿಸಿದ ಕ್ರಮವನ್ನು ನೋಡಿದ ರಾಜನಿಗೆ ಮತ್ತಷ್ಟು ಸಂತೋಷವಾಯಿತು. ಶಿಕ್ಷಣ–ಕ್ರಮವು ಪಕ್ಷಿಗಿಂತ ಭಾರೀ ದೊಡ್ಡದಾಗಿತ್ತು. "ಈ ಶಿಕ್ಷಣಕ್ರಮವನ್ನು ನೋಡಿದ ಮೇಲೆ ಪಕ್ಷಿಯನ್ನು ನೋಡದೇ ಹೋದರೂ ಚಿಂತಿಯಿಲ್ಲ". ಎಂದು ರಾಜನಿಗೆ ಅನಿಸದೆ ಇರಲಿಲ್ಲ.

ವ್ಯವಸ್ಥೆಗೇನೂ ಕೊರತೆ ಇರಲಿಲ್ಲ. ತಿನ್ನಲು ಕಾಳು–ಕಡ್ಡಿ, ಕುಡಿಯಲು ನೀರು ಇಲ್ಲದ್ದಿದ್ದರೇನಾಯಿತು? ರಾಶಿ ಪುಸ್ತಕಗಳಿಂದ ರಾಶಿ ರಾಶಿ ಪುಟಗಳನ್ನು ತೆಗೆದು ಅದರ ಮೇಲೆ ಗಲಗಿನಿಂದ ಬರೆದು ಪಕ್ಷಿಯ ಮುಖದಲ್ಲಿ ತುರುಕುವುದು ನಡೆದಿತ್ತು.

ಪಕ್ಷಿಯ ಗಾನವೆಲ್ಲ ಅಡಗಿತ್ತು. ಕಿರಿಚಿಕೊಳ್ಳಬೇಕೆನ್ನುವಷ್ಟು ಪುಸ್ತಕದ ಭಾರ ಅದರ ಮೈಮೇಲೆ ಬಿದ್ದಿತ್ತು. ಇದನ್ನೆಲ್ಲ ನೋಡಿ ಮೈನಮಿರೇಳುವಂತಿತ್ತು.

ಈ ಸಲ ಆನೆಯನ್ನು ಏರಿ ಅಂಬಾರಿಯಲ್ಲಿ ರಾಜ ಕುಳಿತುಕೊಳ್ಳುವಾಗ ಕಾನಮಲ ಸರದಾರನಿಗೆ ಹೇಳಿದ: "ನಿಂದಕರ ಕಿವಿಯನ್ನು ಚೆನ್ನಾಗಿ, ತಿರುವಿ, ಎಳೆದು, ಹಿಂಡು" ಎಂದು.

೪

ಪಕ್ಷಿ ಸತ್ತು ಹೋಯಿತು. ಎಂದು?' ಯಾವಾಗ? ಎಂಬುದನ್ನು ಗೊತ್ತು ಹಚ್ಚುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ದುರ್ದೈವಿ ನಿಂದಕರು ಆ ಸುದ್ಧಿಯನ್ನೂ ಊರತುಂಬ ಹಬ್ಬಿಸಿದರು. "ಪಕ್ಷಿ ಸತ್ತುಹೋಯಿತು; ಸತ್ತೇಹೋಯಿತು." ಎಂದು.

ಅಳಿಯನನ್ನು ಕರೆದು ರಾಜ ಕೇಳಿದ "ಇದೇನು ಸುದ್ದಿ ನಾನು ಕೇಳುತ್ತಿದ್ದೇನೆ?" ಎಂದು.

ಅಳಿಯನೆಂದನು "ಪಕ್ಷಿಯ ಶಿಕ್ಷಣವು, ಮಹಾರಾಜ, ಪೂರ್ಣವಾಗಿದೆ." ಸುಧಾರಿಸಿಕೊಂಡು ರಾಜನು, "ಹಾಗಾದರೇನಿನ್ನು ಅದನ್ನು ಹಾರಿಬಿಡು". ಎಂದು ಹೇಳಿದನು.

ಅಳಿಯನದಕ್ಕೆ "ಹಾಯ್‌ರಾಮ" ಎಂದು ನಿಟ್ಟುಸಿರು ಬಿಟ್ಟು ಹಾಗೇ ನಿಂತನು.

ಇದನ್ನು ಕಂಡು ರಾಜನು "ಅದಕ್ಕೆ ಜಿಗಿಯಲು ಬರುತ್ತದೆಯೆ?" ಎಂದು ಕೇಳಿದನು.

ಅಳಿಯನು "ಇಲ್ಲ" ಎಂದು ಹೇಳಿದನು.

"ಹಾಡು ಹೇಳಲು ಬರುತ್ತದೆಯೆ?" – "ಇಲ್ಲ".

"ತಿನ್ನಲು ಕಾಳು ದೊರೆಯದಿದ್ದರೆ ಕಿರಿಚಿಕೊಳ್ಳುತ್ತದೆಯೆ?" ಎಂದು ರಾಜ ಮತ್ತೆ ಕೇಳಿದ್ದಕ್ಕೆ

ಅಳಿಯ "ಇಲ್ಲ" ಎಂದೇ ಉತ್ತರವಿತ್ತನು.

ಕೊನೆಗೆ ಮಹಾರಾಜನೆಂದನು, "ಒಂದು ಸಲ ಪಕ್ಷಿಯನ್ನಾದರೂ ತಂದು ತೋರಿಸು" ಎಂದು ಆಲುಪರಿದನು.

ಪಕ್ಷಿಬಂತು. ಜೊತೆಗೆ ಕೊತವಾಲನೂ ಬಂದ. ಕಾವಲುಗಾರ, ಕುದುರೆ ಸವಾರ, ಎಲ್ಲರೂ ಬಂದರು.

ರಾಜನು ಪಕ್ಷಿಯನ್ನು ಮುಟ್ಟಿ ನೋಡಿದನು. ಅದು ಹಾ ಅನ್ನಲಿಲ್ಲ; ಹೂ ಅನ್ನಲಿಲ್ಲ. ಕೇವಲ ಅದರ ಹೊಟ್ಟೆಯೊಳಗಿಂದ ಪುಸ್ತಕದ ಒಣಕಾಗದ ಕರಪರ, ಚರ ಚರ ಸ್ವರ ತೆಗೆಯುತ್ತಿತ್ತು.

**ಹೊರಗೆ ಹೊಸ ವಸಂತದ ದಕ್ಷಿಣದ ಗಾಳಿಯಿಂದ ಅಲುಗುವ ಅರಳಿದ ಹೂಗಳಿಂದ ವನವೆಲ್ಲ ಶೋಭಿಸಿತ್ತು.**

* * * *

# ೩ – ನೆರೆಹೊರೆ

**ಆಶಯ :**

**ರತ್ನನ್ ಪರ್ಪಂಚ**

ಯೇಳ್ಕೊಳ್ಳಾಕ್ ಒಂದ್ ಊರು
ತಲೇಮ್ಯಾಗೆ ಒಂದ್ ಸೂರು
ಮಲಗಾಕ್ ಭೂಮ್ತಾಯಿ ಮಂಚ;
ಕೈ ಯಿಡದೋಳ್ ಪುಟ್ನಂಜಿ,
ನೆಗನೆಗತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ! ೧

ಅಗಲೆಲ್ಲ ಬೆವರ ಅರ್ಸಿ
ತಂದದ್ರಲ್ಲೊಸಿ ಮುರ್ಸಿ
ಸಂಜೇಲಿವುಳಿ ಹೆಂಡ ಕೊಂಚ
ಯೀರ್ತಮ್ಮೈ ಝುಂ ಅಂದ್ರೆ
ವಾಸ್ನೆ ಘಂ ಘಂ ಅಂದ್ರೆ
ತುಂಭೋಯ್ತು ರತ್ನನ್ ಪರ್ಪಂಚ! ೨

ಯೇನೋ ಕುಸಿಯಾದಾಗ
ಮತ್ತ್‌ಎಚ್ಚಿ ವೋದಾಗ
ಅಂಗೇನೆ ಪರ್‌ಪಂಚದ್ ಅಂಚ
ದಾಟ್ಕಂಡಿ ಆರಾಡ್ತ
ಕನ್ನಡದಲ್ ಪದವಾಡ್ತ
ಯಿಗ್ಗೋದು ರತ್ನನ್ ಪರ್ಪಂಚ! ೩

ದುಕ್ಕಿಲ್ಲ ದಾಲಿಲ್ಲ
ನಮಗ್ ಅದರಾಗ್ ಪಾಲಿಲ್ಲ
ನಾವ್ ಕಂಡಿಲ್ಲ್ ಆ ತಂಚ ವಂಚ
ನಮ್ಮಸ್ಟಕ ನಾವಾಗಿ
ಇದ್ದಿದ್ರಲ್ಲ್ ಆಯಾಗಿ
ಬಾಳೋದು ರತ್ನನ್ ಪರ್ಪಂಚ! ೪

'ಬಡತನ ಗಿಡತನ
ಯೇನಿದ್ರೇನ್? ನಡತೇನ
ಚೆಂದಾಗ್ ಇಟ್ಕೊಳ್ಳಾದ ಅಚ್ಚ!'
ಅಂದ್ಕೊಂಡಿ ಸುಕವಾಗಿ
ಕಸ್ಟ್‌ಕ್ ನೆಗಮೊಕವಾಗಿ
ನೆನೆಯೋದೆ ರತ್ನನ್ ಪರ್ಪಂಚ! ೫

ದೇವ್ರ್ ಏನ್ರ ಕೊಡಲಣ್ಣ
ಕೊಡದಿದ್ರೆ ಬುಡಲಣ್ಣ
ನಾವೆಲ್ಲ ಔನೀಗೆ ಬಚ್ಚ!
ಔನ್ ಆಕಿದ್ ತಾಳ್ದಂಗೆ
ಕಣ್ ಮುಚ್ಕೊಂಡ್ ಯೋಳ್ದಂಗೆ
ಕುಣಿಯೋದೆ ರತ್ನನ್ ಪರ್ಪಂಚ! – **ಜಿ ಪಿ ರಾಜರತ್ನಂ**

# 1. ಬಕಾಸುರ ವಧೆ

**ಕುಮಾರವ್ಯಾಸ**

ಕೇಳು ಜನಮೇಜಯ ಮಹೀಪತಿ
ಶಾಲಿಹೋತ್ರಾಶ್ರಮವನನಿಬರು
ಬೀಳುಕೊಂಡರು ಮತ್ತೆ ಕಂಡರು ಬಾದರಾಯಣನ
ಹೇಳಿದನು ನಿಮಗೇಕಚಕ್ರ ವಿ
ಶಾಲಪುರದೊಳಗಾರು ತಿಂಗಳು
ಕಾಲ ಸವೆಯಲಿ ಬಳಿಕ ಬಳಸುವಿರುತ್ತರೋತ್ತರವ

ಅವನಿಪತಿ ಕೇಳೇಕಚಕ್ರವ
ನಿವರು ಹೊಕ್ಕರು ವಿಪ್ರನೊಬ್ಬನ
ಭವನದಲಿ ಮಾಡಿದರು ಬೀಡಾರವನು ವಿನಯದಲಿ
ಇವರು ಯಾಚಕ ವಿಷಯದಾತಿ
ಥ್ಯವನು ಕೈಕೊಂಡಲ್ಲಿ ಕತಿಪಯ
ದಿವಸವನು ನೂಕಿದರು ಭಿಕ್ಷಾ ವಿಹಿತ ವೃತ್ತಿಯಲಿ

ತಂದ ಭಿಕ್ಷಾಶನವನೈವರು
ನಂದನರು ತಾಯಿಗೆ ನಿವೇದಿಸ
ಲಿಂದುಮುಖಿ ಭಾಗದ್ವಯವ ಸಾನಂದದಲಿ ಮಾಡಿ
ಒಂದು ಭಾಗ ವೃಕೋದರಂಗುಳಿ
ದೊಂದು ಭಾಗವ ತಾನು ನಾಲ್ವರು
ನಂದನರು ವಿನಿಯೋಗಿಸುವರವನೀಶ ಕೇಳೆಂದ

ಇರಲಿರಲು ಮಾಸಾಂತರದಲಾ
ನೆರೆಮನೆಯ ಶೋಕಾರ್ತ ರವದ
ಬ್ಬರವ ಕೇಳಿದ ಕುಂತಿ ಸಾಯಂಕಾಲ ಸಮಯದಲಿ
ಭರದಿನೈತಂದಕಟ ಭೂಸುರ
ವರ ನಿರೋಧವಿದೇನು ದುಃಖೋ
ತ್ಕರುಷವಾಕಸ್ಮಿಕವದೆಂದಳು ಕುಂತಿ ವಿನಯದಲಿ

ತಾಯೆ ಕೇಳೀ ವಿಪ್ರಪುರದೊಳ
ಗಾಯವುಂಟೆನಗೆಂದು ರಕ್ಕಸ
ನಾಯಿ ನೆಲಸಿಹನೂರ ಹೊರಗಣ ಶೈಲಶಿಖರದಲಿ
ಆಯಿದೊಬ್ಬನ ಮನೆಮನೆಗೆ ಮೇ
ಲಾಯಿ ಮಹಿಷದ್ವಯ ಸಹಿತ ನಿ
ರ್ದಾಯದಲಿ ಹನ್ನೆರಡು ಕಂಡುಗದಕ್ಕಿಯೋಗರವ

ಇನಿತುವನು ಮನೆಮನೆಗೆ ಬಾರಿಯ
ದಿನಕೆ ತೆತ್ತಡೆ ತುಷ್ಟನಿಲ್ಲದ
ದಿನಕೆ ನುಂಗುವನೂರನೀ ಪರಿ ಹಲವು ಕಾಲದಲಿ
ಎನಗೆ ಬಂದುದು ತಾಯೆ ನಾಳಿನ
ದಿನದ ಬಾರಿಯಿದಕ್ಕೆ ತನ್ನಯ
ತನುಜ ತಾನುಳಿದಂತೆ ಮಾನಿಸರಿಲ್ಲ ತನಗೆಂದ

ಮಗನನೀವೆನೆ ಪಾರಲೌಕಿಕ
ವಗಡಹುದಪಖ್ಯಾತಿ ತನ್ನನು
ತಗಹುದೈಹಿಕದಲ್ಲಿ ಬಳಿಕೀ ಸಂತತಿಚ್ಛೇದ
ಬಗೆಯದೆನ್ನೊಡಲಸುರ ಘಾತಿಗೆ
ಮಿಗೆ ವಿಭಾಡಿಸಿ ಕೊಡುವೆನೆಂದೆನೆ
ನಗುತೆ ಕುಂತೀದೇವಿ ನುಡಿದಳು ವಿಪ್ರ ಕೇಳೆಂದು

ಐಸಲೇ ನಿಮಗಾದ ಗಸಣಿಯಿ
ದೇಸರಾಪತ್ತಂಜಬೇಡ ಮ
ಹಾಸುರನ ಬಾಣಸದ ಬೀಯಕೆ ರಪಣವುಂಟೆಮಗೆ
ಏಸು ಕಂಡುಗದಕ್ಕಿಯೋಗರ
ವೈಸ ನೀನಳವಡಿಸು ಮೇಲುಂ
ಟೇಸು ಸಾಧನವನಿತುವನು ತೆಗೆಸೆಂದಳಾ ಕುಂತಿ

ತಿರುಗಿ ನಿಮ್ಮೂರೊಳಗೆ ಕೂಳನು
ತಿರಿದು ಸಲುಹುವೆನೆನ್ನ ಮಕ್ಕಳು
ಧರೆಯನಾಳುವ ಸತ್ಯ ಸಹಸಿಗಳಿದ್ದು ಫಲವೇನು
ಹೊರೆಯಲರಿಯೆನು ದುರುಳನೆರಡೆಂ
ಟರಿಯನದರೊಳಗೊಬ್ಬನುದರಕೆ
ನೆರಹಲಾರೆನು ಕೂಳನೆಂದಳು ಕುಂತಿ ನಸುನಗುತ

ಬಲುಹಿನಲಿ ಭೂಸುರನ ಚಿತ್ತವ
ತಿಳುಹಿ ಬಂದಳು ಮನೆಗೆ ಭೀಮನ
ಕೆಲಕೆ ಕರೆದಳು ಹೇಳಿದಳು ಹೇರಾಳದೌತಣವ
ಉಲಿದು ಮುದದಲಿ ಭೀಮ ಬಾಹ
ಪ್ಪಳಿಸಿದನು ಯಮನಂದನಾದಿಗ
ಳಳಲಿ ನುಡಿದರು ದೈತ್ಯಜಯ ಸಂಶಯದ ಭೇದದಲಿ

ಮರುಳುಗಳು ನೀವೆಂದವರ ಚ
ಪ್ಪರಿಸಿದನು ಕಲಿಭೀಮನಾ ನಡು
ವಿರುಳು ತೊಡಗಿತು ವಿಪ್ರ ಭವನದ ಪಾಕಮಯ ರಭಸ
ಹೊರೆದಳೆನ್ನನು ತಾಯಿ ಕುಂತಿಯ
ಹರಸುವೆನು ಪಾರಣೆಯ ಹೊತ್ತಿನೊ
ಳರಸು ನಾಳಿನೊಳಾನೆನುತ ಹಿಗ್ಗಿದನು ಕಲಿಭೀಮ

ಪರಿಪರಿಯ ಬಹುಭಕ್ಷ್ಯ ಪಾಕದ
ಪರಿಮಳದ ಶಾಕಾದಿಗಳ ವೊ
ಗ್ಗರಣೆಗಳ ಸೌರಭಕೆ ತಿಳಿದುದು ನಿದ್ರೆ ಪವನಜನ
ತರಣಿ ಸುಳಿದನು ಪೂರ್ವ ಶೈಲದ
ಶಿರದ ಬಳಿಯಲಿ ಭೀಮ ಕುಂತಿಯ
ಕರೆದು ಕಳುಹಿದನಾ ಮಹೀಸುರ ಗೃಹಕೆ ವಹಿಲದಲಿ

ಮರಳಿ ಬಂದಳು ಕುಂತಿ ಭೀಮನ
ಕರೆದಳೇಳೈ ಪಾರಣೆಗೆ ಕಾ
ತರಿಸದಿರು ಖಳನೊಡನೆ ಸದೆವುದು ಸತ್ವದನುವರಿದು
ಬರವ ಬರಿದೇ ಬೀಯ ಮಾಡದಿ
ರುರವಣೆಯನರಿದಾನುವುದು ಸಂ
ಹರಿಸು ದೈತ್ಯನನೆಂದು ತಾಯ್ ಹರಸಿದಳು ನಂದನನ

ಬೆರಳ ದರ್ಭೆಯ ಹರಿದು ಧೌತಾಂ
ಬರವನುಟ್ಟನು ಬಿಗಿದು ಕುಂತಿಯ
ಚರಣ ರಜವನು ಕೊಂಡು ಧರ್ಮಜನಂಘ್ರಿಗಭಿನಮಿಸಿ
ಹರುಷ ಮಿಗೆ ಹರಿತಂದು ಬಂಡಿಯ
ಶಿರದ ಹಲಗೆಯನಡರಿದನು ಬಲು
ಹುರಿಯ ಹಗ್ಗವ ಹಿಡಿದು ಜಡಿದನು ಹೂಡಿದೆತ್ತುಗಳ

ಎಡೆಯಲೇ ಭಕ್ಷ್ಯಾದಿಗಳ ಬರಿ
ಹೆಡೆಗೆಯುಳಿದವು ಕೂಳೊಳರ್ಧವ
ಹೊಡೆದು ಸುರಿದನು ಹಾಲುತುಪ್ಪದ ಹರವಿಯೋಜೆಯಲಿ
ಕುಡಿದು ಪಕ್ಕಲೆ ನೀರನೊಯ್ಯನೆ
ನಡೆಸಿ ತಂದನು ಕಂಡು ದನುಜನ
ನುಡಿದನೆಲವೋ ಕುನ್ನಿ ಕೂಳಿದೆ ತಿನ್ನು ಬಾರೆನುತ

ಎರಡು ಕೈಯನು ಬಲಿದು ಮುಷ್ಟಿಯೊ
ಳೆರಗಿದನು ಖಳ ಬೆನ್ನನೇನಂ
ದರಿಯನಿತ್ತಲು ಭೀಮ ಬಲುದುತ್ತುಗಳ ತೋಟಿಯಲಿ
ಮರನ ಮುರಿದೆರಗಿದರೆ ಪುನರಪಿ
ಮುರಿದು ನೋಡಿದು ಬಹೆನು ನಿಲ್ಲೆನು
ತರೆಗೆಲಸ ಪೂರೈಸಲೆಂದನು ನಗುತ ಕಲಿಭೀಮ

ಉಂಡೆವೈ ಸಮಚಿತ್ತದಲಿ ನೀವ್
ಕೊಂಡಿರೈ ಘಾಯಗಳನೆಡೆಯಲಿ
ಹಿಂಡುವಿರಲೈ ನಾವು ಸಹಿತೀ ಊರ ಹಾರುವರ
ಉಂಡೆವೈ ಹಲ ಕಾಲಕಿಂದಿನ
ಲುಂಡದೂಟ ಕಣಾ ನಿಧಾನವು
ಖಂಡಪರಶುವಿನಾಣೆನುತ ಮದವೇರಿದನು ಭೀಮ

ಹಿಡಿದರೊಬ್ಬರನೊಬ್ಬರುರದಲಿ
ಹೊಡೆದು ಹಿಂಗಿದರುಲಿದು ಹೆಮ್ಮರ
ನುಡಿಯೆ ಹೊಯ್ದಾಡಿದರು ತಿವಿದರು ತೋಳು ಬಲುಹಿನಲಿ
ಕೊಡಹಿದನು ಕಲಿ ಭೀಮನವನು
ಗ್ಗಡದ ಸತ್ವದಿಯುಂಡ ಕೂಳಿನ
ಕಡುಹ ತೋರೆಂದೊರಲಿ ತುಡುಕಿದನನಿಲ ನಂದನನ

ಸಿಕ್ಕಿದನು ಕಲಿಭೀಮನೆನೆ ಕೈ
ಯಿಕ್ಕಿ ಕೊಟ್ಟನು ಮೈಯನಸುರನ
ಹೊಕ್ಕು ತಿವಿದನು ತಿರುಗಿ ಬದಿಯೆಲು ನುಗ್ಗು ನುಸಿಯಾಗೆ
ಬಿಕ್ಕುಳಿಯ ತಾಳಿಗೆಯ ಮೂಗಿನೊ
ಳೊಕ್ಕು ರುಧಿರದ ಧಾರೆ ಬಿಗಿದುರೆ
ಡೊಕ್ಕರಿಸಲಸು ನೀಗಿತಸುರನ ತನುವ ನಿಮಿಷದಲಿ

ಕೊಂದು ದನುಜನ ಪೆಣನ ಬಂಡಿಯ
ಹಿಂದೆ ಬಂಧಿಸಿ ಪುರದ ಬಾಹೆಗೆ
ತಂದು ಬಿಟ್ಟನು ತನತನಗೆ ಜನಜಾಲ ಜೋಡಿಯಲಿ
ಬಂದು ಕಂಡುದು ಹೆಣನ ಭೂಸುರ
ರಿಂದು ಧನ್ಯರು ವಿಪ್ರಜಾತಿಗೆ
ಸಂದುದಿನ್ನಗ್ಗಳಿಕೆಯೆಂದುದು ನೆರೆದ ಪೌರಜನ

ಈ ಅಮಾನುಷಶಕ್ತಿಯಮರರ
ರಾಯಗಳವಲ್ಲೆಂದು ವಿಪ್ರ ನಿ
ಕಾಯಕಿದು ಸಾಮಾನ್ಯವೇ ನಮ್ಮಗ್ರಹಾರದಲಿ
ಕಾಯಿದವರಿವರೆಂದು ವಿಪುಲ
ಶ್ರೇಯ ಪದ್ಮಜ ಸೋಮಧರ ನಾ
ರಾಯಣರು ಕೊಡಲೆಂದು ಹರಸಿತು ಭೂಸುರ ವ್ರಾತ

---

ಕವಿ ಕುಮಾರವ್ಯಾಸ ವಿರಚಿತ
ಆಕರ : ಕುಮಾರವ್ಯಾಸಭಾರತ ಅಥವಾ ಗದುಗಿನ ಭಾರತ ಅಥವಾ ಕರ್ಣಾಟಕ ಭಾರತ ಕಥಾಮಂಜರಿ.
ಆದಿಪರ್ವದ ಹತ್ತನೆಯ ಸಂಧಿ

ಅರಗಿನ ಮನೆಯಿಂದ ಹೊರಬಿದ್ದ ಪಾಂಡವರು ಕಾಡಿಂದ ಕಾಡಿಗೆ ಹೋಗುತ್ತ ಸ್ವಲ್ಪಕಾಲದ ಮೇಲೆ ಬ್ರಾಹ್ಮಣರ ವೇಷದಿಂದ ಏಕಚಕ್ರನಗರವನ್ನು ಸೇರಿ ಅಲ್ಲಿ ಒಬ್ಬ ಬ್ರಾಹ್ಮಣರ ಮನೆಯಲ್ಲಿ ವಾಸವಾಗಿದ್ದರು. ಮನೆಮನೆಯಿಂದ ಭಿಕ್ಷೆ ಎತ್ತಿಕೊಂಡು ಬಂದು ಜೀವಿಸುತ್ತಿದ್ದರು. ಆ ಊರಿಗೆ ಇದ್ದ ತೊಂದರೆಯನ್ನು ತಿಳಿದು ಬಕ ಎನ್ನುವ ರಾಕ್ಷಸನನ್ನು ಭೀಮ ಕೊಂದು ಎಲ್ಲರನ್ನು ರಕ್ಷಿಸಿದ ಪ್ರಸಂಗ ಇದಾಗಿದೆ.

## 2. ನಿಮ್ಮೊಡನಿದ್ದೂ ನಿಮ್ಮಂತಾಗದೆ

**ಡಾ.ಕೆ.ಎಸ್.ನಿಸಾರ್‌ಅಹಮದ್**

---

ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೆ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವುದಿದೆ ನೋಡಿ
ಅದು ಬಲುಕಷ್ಟದ ಕೆಲಸ.

ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೇ ಪೋಷಿಸಿ ಸಾಕುತ್ತ
ರೇಖೆಯಲ್ಲೇ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ಒಳಗೊಳಗೆ ಬೇರುಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿಹೀರಿ ಪೇಪರೋದಿ ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ,
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಿನಲ್ಲೇ ತನಿಖೆಮಾಡುವ ಕ್ಷಣವನ್ನ
ಹುಸಿನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.

# 3. ಭೃಂಗದ ಬೆನ್ನೇರಿ

**ಸುಶೀಲಾ ಡೋಣೂರ**

---

ಆ ದಿನ ಓಟಿ ಇದ್ದ ಕಾರಣ ನಡುರಾತ್ರಿ ಒಂದು ಗಂಟೆಯ ಸುಮಾರಿಗೆ ಕೆಲಸ ಮುಗಿಸಿ ಹೊರಬಿದ್ದೆ. ಬೆಳಿಗ್ಗೆ ಬೇಗನೇ ಎದ್ದಿದ್ದಕ್ಕೆ ಕಣ್ಣು ಎಳೆದಂತಾಗುತ್ತಿತ್ತು. ಆ ನಿರ್ಜನ ರಸ್ತೆಯಲ್ಲಿ ನಿಶ್ಯಬ್ದ ಸೀಳುತ್ತ, ಓಡುತ್ತಿದ್ದುದು ನನ್ನದೊಂದೆ ಸ್ಕೂಟಿ ಮೂರು ಬಾರಿ ಹಾರನ್ ಹಾಕಿದ ಮೇಲೆ ಗೇಟ್ ಮನ್ ಬಂದು ಬಾಗಿಲು ತೆಗೆದ.

"ಮೇಡಮ್ ಟೈಂ ಎಷ್ಟಾತು?"

"ಒಂದೂ ಮುಕ್ಕಾಲು ಆದ್ರೆ ಏನ್ಮಾಡೋದು ಹೇಳಿ. ಕೆಲಸ ಜಾಸ್ತಿ ಇತ್ತು".

"ಈ ಟೈಂನಲ್ಲಿ... ಹೆಣ್ಮಕ್ಳು ಒಬ್ರೆ ಓಡಾಡೋದು..."

"ಏನೂ ಮಾಡಾಕಾಗಲ್ಲ ಬಿಡಿ. ಸಾಧಿಸಬೇಕು ಅನ್ನೋ ಹಂಬಲ ಇದೆಯಲ್ಲ. ಅದರ ಬೆನ್ನು ಹತ್ತಿದವರಿಗೆ ಹಗಲಾದ್ರೇನು. ರಾತ್ರಿಯಾದ್ರೇನು ನಿಮಗೊಂದು ವಿಷಯ ಗೊತ್ತಾ" ನಾವು ಬೆಳಿತಾ ಹೋದಂಗೆ ಬದುಕು ಹೆಚ್ಚು ಹೆಚ್ಚು ಜಟಿಲವಾಗುತ್ತೆ. ಬದುಕು ಜಟಿಲವಾದಂಗೆ ನಾವು ಇನ್ನು ಬೆಳೆಯಬೇಕು ಅನ್ನೊ ಹಂಬಲವೂ ಹೆಚ್ಚಾಗುತ್ತೆ..." ಇನ್ನೂ ಏನೋ ಹೇಳುತ್ತಿದ್ದವಳು ಸುಮ್ಮನಾದೆ. ಇದೆಲ್ಲ ಈ ಅಜ್ಜನಿಗೆ ಅರ್ಥವಾಗದ ಮಾತು. ಈತ ನನ್ನ ಭಾಷೆ ಮಾತ್ರ ಅರ್ಥಮಾಡಿಕೊಳ್ಳಬಲ್ಲ; ಭಾವನೆಯನ್ನಲ್ಲ ಎಂದುಕೊಂಡವಳು ಸ್ಕೂಟಿ ಶೆಡ್‌ನಲ್ಲಿ ನಿಲ್ಲಿಸಿ ಮೆಟ್ಟಿಲೇರಿಕೊಂಡೇ ಮೂರನೇ ಮಹಡಿಯಲ್ಲಿರುವ ನನ್ನ ಠಿಕಾಣಿಗೆ ಹೋದೆ.

ಬೆಳಿಗ್ಗೆ ಬ್ರೆಡ್ ಬೇಯಿಸಿಕೊಂಡಿದ್ದ ತವಾ ಇನ್ನು ಗ್ಯಾಸ್ ಮೇಲೇ ಇದೆ. ಟೀ ಕಪ್ ಟೇಬಲ್ ಮೇಲಿದೆ. ಬೆಳಿಗ್ಗೆ ಬಿಸಾಡಿ ಹೋಗಿದ್ದ ನೈಟ್ ಡ್ರೆಸ್ ಕಾಟ್ ಮೇಲೆ ಬಿದ್ದುಕೊಂಡಿದೆ. ತಿಜೋರಿ ತೆರೆದೇ ಇದೆ. ಅದರಲ್ಲಿ ನಾಲ್ಕಾರು ಚೂಡಿ, ಜೀನ್ಸ್, ಮೇಕಪ್ ಬಾಕ್ಸ್ ಬಿಟ್ಟರೆ ಬೇರೇನೂ ಇಲ್ಲ. ಇರೋ ಒಂದೆಳೆ ಚೈನ್ ಯಾವತ್ತೂ ಕೊರಳಲ್ಲೇ ನೇತಾಡುತ್ತೆ, ಯಾವ ಖದೀಮ ಬಂದು ಏನು ಕದ್ದುಕೊಂಡು ಹೋಗ್ತಾನೆ ಈ ಮನೇಲಿ? ಅಂತಂದುಕೊಂಡು ಎಷ್ಟೋ ಬಾರಿ ಮನೆಗೆ ಬೀಗ ಹಾಕುವುದನ್ನೂ ಮರೆತು ಹೋಗಿರುತ್ತೇನೆ. ಮುಖ ತೊಳೆದು ಡ್ರೆಸ್ ಬದಲಿಸಿದೆ. ಅಲ್ಲಲ್ಲಿ ಬಿದ್ದುಕೊಂಡಿದ್ದ ಬಟ್ಟೆಗಳನ್ನು ಅಷ್ಟೆ ಎತ್ತಿಟ್ಟು, ಹಾಸಿಗೆಗೆ ಉರುಳಿ, ಕಣ್ಮುಚ್ಚಿದೆ. ಸಂಜೆ ಕಾಫಿ ಜೊತೆ ಫಿಜ್ಜಾ ತಿಂದಿದ್ದೇ ಸಾಕಾಗಿತ್ತು. ಮತ್ತೇನನ್ನೋ ತಿನ್ನಬೇಕು ಅನಿಸಲಿಲ್ಲ.

***

ಅಮ್ಮ ಇದ್ದಿದ್ದರೆ ಈ ಮನೆಯನ್ನು ಹೀಗಿರಲು ಬಿಡುತ್ತಿದ್ದಳಾ? ಮನೆಯನ್ನು ಓರಣವಾಗಿಡುವುದರಲ್ಲಿ ಅವಳಿಗೆ ಅದೆಂಥ ಖುಶಿ ಇತ್ತೋ. ಮನೆ, ಗಂಡ ಮಕ್ಕಳ ಬಗ್ಗೆ ಕಾಳಜಿ ವಹಿಸುವುದರಲ್ಲಿ ಸಾರ್ಥಕತೆ ಕಂಡವಳು ಅಮ್ಮ. ಮನೆಯಲ್ಲಿ ಕೈಬಳೆ ಸದ್ದು ಮಲ್ಲಿಗೆಯ ಘಂ. ರೊಟ್ಟಿ ತಟ್ಟುವ ಶಬ್ದ, ಒಗ್ಗರಣೆಯ ವಾಸನೆ... ಅದೇಕೋ ಈ ಎರಡು ದಿನಗಳಿಂದ ಅಮ್ಮ ತುಂಬಾನೆ ನೆನಪಾಗ್ತಿದಾಳೆ. 'ಬೆಳಿಗ್ಗೆ ಚಪಾತಿ ತಿಂದು ಚಪಾತಿನೇ ಡಬ್ಬಿಗೆ ಹಾಕ್ಕೊಂಡು ಹೋಗಿದೆ ಮಗು' ಅಂತಂದುಕೊಂಡು ಶಾಲೆಯಿಂದ ಬರುವ ಹೊತ್ತಿಗೆ ಘಂ ಅನ್ನೋ ತಿಂಡಿ ತಯಾರಿಸಿಟ್ಟಿರುತ್ತಿದ್ದಳು. ಚಪಾತಿ ಬಣ್ಣ ಬಣ್ಣದ್ದಾಗಿ ಕಂಡರೆ ಒಂದು ಹೆಚ್ಚಿಗೆ ತಿನ್ನುತ್ತೇನೆ. ಅನ್ನೋ ಕಾರಣಕ್ಕೇ ಹಿಟ್ಟಿನಲ್ಲಿ ಪಾಲಕ್, ಮೆಂತೆ ಸೊಪ್ಪು ಹಾಕಿ ನೋಡಲೂ ಚೆಂದ ಕಾಣುವಂತೆ ಮಾಡೋಳು. ಅವಲಕ್ಕಿ–ಉಪ್ಪಿಟ್ಟು ಅಂದ್ರೆ ನನಗೆ ಸೇರೋದೆ ಇಲ್ಲ ಅಂತ ಶಾವಿಗೆ. ಅಕ್ಕಿ ದೋಸೆ, ರವೆ ದೋಸೆ, ರಾಗಿ ದೋಸೆ, ತಾಲಿಪಿಟ್ಟು ಅಂತೆಲ್ಲ... ಬೆಳಿಗ್ಗೆ ನಾನು ಏಳುವ ಮೊದಲೇ ಬಿಸಿ ನೀರು ಕಾಯಿಸಿಟ್ಟಿರುತ್ತಿದ್ದಳು. 'ಬೇಸಿಗೆ ಇದೆ. ತಣ್ಣೀರು ಮಾಡ್ತೀನಿ' ಅಂದ್ರೂ ಕೇಳೋಳಲ್ಲ. 'ನೆಗಡಿ ಆದ್ರೆ ಶಾಲೆಗೆ ರಜಾ ಹಾಕಬೇಕಾಗುತ್ತೆ ಬಿಸಿ ನೀರು ಮಾಡು' ಅನ್ನೊ ಹಟ ಅಮ್ಮಂದು, ಸ್ನಾನ ಮುಗಿಸಿ ಬರುವ ಹೊತ್ತಿಗೆ ತಿಂಡಿ ರೆಡಿ, ಕ್ಯಾರಿಯರ್ ಹಾಕಿ, ಬ್ಯಾಗು ರೆಡಿ ಮಾಡಿ ನನ್ನ ಹೆಗಲಿಗೇರಿಸಿ ಬಾಗಿಲವರೆಗೂ ಬಂದು ಕಳುಹಿಸುತ್ತಿದ್ದ ಅಮ್ಮನ ಕಣ್ಣಲ್ಲಿ ಎಂಥೆಂಥ ಕನಸು!

***

"ನಿನ್ನ ಬಾಳು ನನ್ನಂಗೆ ಆಗಬಾರದು ಮಗಾ. ಚೆನ್ನಾಗಿ ಓದಬೇಕು. ಒಂದೊಳ್ಳೆ ಕೆಲಸ ಹಿಡಿಬೇಕು. ಆಫೀಸರ್ ಆಗಬೇಕು. ನಾಲ್ಕು ಕಾಸು ಸಂಪಾದಿಸಬೇಕು. ಕಾರು ಓಡಿಸೋ ಹಾಗಾಗಬೇಕು ನೀನು. ನಿನ್ನದೇ ಬಂಗಲೇ ಮಾಡಿಕೊಳ್ಳಬೇಕು. ನಿನ್ನ ತಿಜೋರಿಯಲ್ಲಿ ಕನಿಷ್ಠ ಐವತ್ತು ತೊಲೆ ಬಂಗಾರದ ಒಡವೆ, ಕೇಜಿಗಟ್ಟಲೆ ಬೆಳ್ಳಿ ಆಭರಣ

ಇರಬೇಕು. ರೇಷ್ಮೆ ಸೀರೆ, ಮಿನ–ಮನ ಡ್ರೆಸ್ಸು, ಘಂ ಅನ್ನೋ ಸಾಬೂನು. ಪೌಡರು, ಸುಗಂಧ ದ್ರವ್ಯ... ಇನ್ನು ಏನೇನೋ, ನನಗೆ ಗೊತ್ತಿಲ್ಲದ್ದು. ನನ್ನ ಕಲ್ಪನೆಗೆ ನಿಲುಕದ್ದೆಲ್ಲ ನಿನ್ನ ಹತ್ತಿರ ಇರಬೇಕು" ಬಟ್ಟೆಗೆ ಸೋಪು ಉಜ್ಜುತ್ತ ಅಮ್ಮ ಹೀಗೆ ಹೇಳುವಾಗ ನನ್ನ ಕನಸಿನ ಲೋಕದಲ್ಲಿ ನಾನು ಅದೆಲ್ಲವನ್ನು ಜೀವಿಸಿದ್ದು ಬಂದಿರುತ್ತಿದ್ದೆ.

ಪಕ್ಕದ ಮನೆಯ ಮೀನಾಕ್ಷಿ ಆಂಟಿ ತನ್ನ ಮಗಳು ಅನಿತಾಳಿಗೆ ಅಡುಗೆ ಮಾಡುವುದನ್ನು, ರಂಗೋಲೆ ಬಿಡಿಸುವುದನ್ನು ಹೇಳಿಕೊಡುವಾಗ ಅಮ್ಮ ನನಗೆ ಕನಸು ಕಾಣಲು ಹಚ್ಚುತ್ತಿದ್ದಳು. "ನೀನು ನಿನ್ನಮ್ಮ ನಂಗೆ ಆಗಬಾರದು ಮಗಾ. ನಿನ್ನಪ್ಪನನ್ನೂ ಮೀರಿಸಬೇಕು..." ಅನ್ನುವಾಗ ಅಮ್ಮನ ಧ್ವನಿಯಲ್ಲಿ ಕೋಪವೂ, ತಾಪವೋ, ಸೇಡೋ ಗೊತ್ತಾಗದ ಮಿಶ್ರಭಾವ.

ಅಮ್ಮ ಓದಿದೋಳಲ್ಲ. ಹೊರ ಜಗತ್ತು ಅವಳಿಗೆ ಅಪರಿಚಿತ. ಆದರೆ ಅವಳ ದೃಷ್ಟಿಯಲ್ಲಿ ನನ್ನ ಓದಿಗಿಂತ ಮುಖ್ಯ ವಿಷಯ ಇನ್ನೊಂದಿಲ್ಲ. ನನ್ನ ಪರೀಕ್ಷೆ ಇರುವ ಸಮಯದಲ್ಲಂತೂ ಮನೆಯಲ್ಲಿ ಟಿವಿ ಹಚ್ಚಬೇಡ ಅಂತ ಅಪ್ಪನೊಂದಿಗೆ ಅಮ್ಮನ ರಗಳೆ ತಪ್ಪಿದ್ದಲ್ಲ. ಜೋರಾಗಿ ಮ್ಯೂಸಿಕ್ ಹಚ್ಚಿಕೊಳ್ಳಲೂ ಅಣ್ಣನಿಗೆ ಅನುಮತಿ ಇಲ್ಲ. ನಾನು ಓದುವ ಹೊತ್ತು ತಾನು ಎಂದೂ ಮಲಗಿದವಳಲ್ಲ. ನೀರು ಬೇಕಾ, ಕಾಫಿ ಮಾಡಲಾ, ಹಣ್ಣು ತಿಂತಿಯಾ, ಕ್ಷಣ–ಕ್ಷಣಕ್ಕೂ ಬಂದು ಕೇಳಿಕೊಂಡು ಹೋಗೋಳು.

"ಏನೂ ಬೇಡ ಅಮ್ಮ; ಓದೋದಿದೆ. ನೀನು ಡಿಸ್ಟರ್ಬ್ ಮಾಡಬೇಡ ಪ್ಲೀಸ್..." ಅಂತ ಕೆಲವೊಮ್ಮೆ ಕಿರುಚಿ ಬಿಡುತ್ತಿದೆ. ಅಮ್ಮನಿಗೆ ನನ್ನನ್ನು ಬಿಟ್ಟರೆ ಬೇರೆ ಬದುಕೇ ಇರಲಿಲ್ಲವೇ? ಈಚೆಗಂತು ಅಮ್ಮನಿಗೆ ಅಪ್ಪನೂ–ಅಣ್ಣನೂ ಸೆಕಂಡರಿ ಆಗಿದ್ದು ಸುಳ್ಳೇ? ತನ್ನ ೨೪ ಗಂಟೆಗಳನ್ನು ಅವಳು ಸಂಪೂರ್ಣವಾಗಿ ಕೇವಲ ನನಗೊಬ್ಬಳಿಗೆ ಮೀಸಲಿಟ್ಟಿದ್ದಳ್ಳಲ್ಲ!

***

ಅಮ್ಮ, ಇವತ್ಯಾಕೆ ಎಷ್ಟು ನೆನಪಾಗ್ತಿದ್ದಿ? ಮನದಲ್ಲೇ ಗದರಿಕೊಂಡೆ.

ಮೊಬೈಲ್‌ನಲ್ಲಿ ಸೇವ್ ಮಾಡಿಟ್ಟುಕೊಂಡ ಅಮ್ಮನ ಫೋಟೋ ತೆಗೆದುಕೊಂಡು ನೋಡುತ್ತ ಕುಳಿತೆ. ತನ್ನಂತೆ ನಾನಾಗಬಾರದು ಅನ್ನೋದು ಅಮ್ಮನ ಕೋರಿಕೆ ಆದರೆ ನಾನು ಯಾವ ಜನುಮಕ್ಕೂ ಅಮ್ಮನಂತಾಗಲು ಸಾಧ್ಯವೇ ಇಲ್ಲ. ಅವಳ ಸಹನೆ, ಶಾಂತ ಮನೋಭಾವ, ಮಮಕಾರ, ಗಂಡ, ಮಕ್ಕಳಿಗಾಗಿ ತನ್ನ ಇಡೀ ಬದುಕನ್ನು ತನ್ನದಲ್ಲವೆಂಬಂತೆ ಕಳೆದ ಅಮ್ಮನಂತಾಗಲು ನನ್ನಿಂದ ಸಾಧ್ಯವಾಗುವ ಮಾತಲ್ಲ. ಅಂತಹ ಅಮ್ಮನೊಂದಿಗೆ ಯಾವತ್ತೋ ಕುಳಿತು ಅರ್ಧ ಗಂಟೆ ಹರಟಿದ ದಿನ 'ಇಷ್ಟು ಸಮಯ ವೇಸ್ಟ್ ಆಯ್ತಮ್ಮ' ಅನ್ನುವಷ್ಟು ಸ್ವಾರ್ಥಿ ನಾನು.

ಆ ದಿನ ಸಂಜೆ ನಾನೇ ಅಲಂಕಾರ ಮಾಡಿ ಅಮ್ಮನ ಈ ಕ್ಲೋಸ್ ಅಪ್ ಫೋಟೋ ಕ್ಲಿಕ್ಕಿಸಿದ್ದೆ. "ವಾವ್! ಎಷ್ಟು ಚಂದ ಇದ್ದಿ ಅಮ್ಮ ನೀನು. ನಾನೇಕೆ ನಿನ್ನ ಹಾಗಿಲ್ಲ?" ಅಂತ ಬೆರಗಾಗಿದ್ದೆ. ನಾಚಿದ್ದಳು ಅಮ್ಮ.

"ವಿಭೂತಿ ಬಣ್ಣದ ನೀನು ಇದ್ದಿಲು ಬಣ್ಣದ ಅಪ್ಪನ್ನ ಹೇಗೆ ಕಟ್ಟಿಕೊಂಡೆ? ಇಂಥ ಮುಂಗೋಪಿಯೊಂದಿಗೆ ಇಷ್ಟು ವರ್ಷ ಹೇಗೆ ಸವೆಸಿದೆ? ನಿನ್ನ ಒಂದೇ ಒಂದು ಆಸೆಯನ್ನೂ ಈಡೇರಿಸದ ಅಪ್ಪನ ಮೇಲೆ ನಿನಗೆ ಬೇಸರ ಹುಟ್ಟಲಿಲ್ವೇ? ಡಿವೋರ್ಸ್ ಮಾಡಬೇಕು ಅಂತ ಅನಿಸಲಿಲ್ವೇ?" ನನ್ನ ಪ್ರಶ್ನೆಗಳಿಗೆ ಅಮ್ಮ ಹುಸಿ ಮುನಿಸು ತೋರಿದ್ದಳು.

"ಸುಮ್ನಿರೆ, ನಿಮ್ಮಪ್ಪ ಏನು ಕಟುಕ ಅಂದ್ಕೊಂಡ್ಯಾ? ಅವರಿಗೂ ನನ್ನ ಮೇಲೆ ಜಾಸ್ತಿ ಪ್ರೀತಿ. ಆದರೆ ಮೂಗಿನ ಮೇಲೇ ಕೋಪ. ನಾನು ಕೇಳಿದ್ದು ಕೊಡಿಸಬೇಕು ಅಂತ ಅವರಿಗೂ ಆಸೆ. ಆದ್ರೆ ಸಂಸಾರ ಜಂಜಾಟ ಜಾಸ್ತಿ. ನೀವು ಹುಟ್ಟೋ ಮೊದಲಾದ್ರೂ... ಕಾಯಿಲೆಯ ಅಮ್ಮ ಓದೋ ತಮ್ಮಂದ್ರು, ಮದುವೆ ಆಗೋ ತಂಗಿಯಂದ್ರು... ಅವರ ಮೇಲೆ ಎಷ್ಟು ಜವಾಬ್ದಾರಿ ಇತ್ತು ಗೊತ್ತಾ? ಇದೆಲ್ಲರ ನಡುವೆಯೂ ಆಗಾಗ ನಾನು ಜಗಳ ಮಡಿದಾಗ ಜಾಮೂನು, ಮೈಸೂರು ಪಾಕು, ಮಲ್ಲಿಗೆ ಹೂವು, ಗಾಜಿನ ಬಳೆ ಎಲ್ಲ ತಂದು ಕೊಡ್ತಿದ್ರು.." ಎನ್ನುತ್ತಲೇ ಕನಸಿನ ಲೋಕಕ್ಕೆ ಜಾರಿಕೊಳ್ಳುತ್ತಿದ್ದಳು ಅಮ್ಮ ಅವಳ ಮುಖದಲ್ಲಿ ಒಂಥರಾ ಹೊಳಪು. "ಹಾಗಾದ್ರೆ ಅಪ್ಪನ ಮೇಲಿನ ಮುನಿಸೆಲ್ಲ ಸುಮ್ಮನೇ?"

"ಅದೆಲ್ಲ ಹಾಗೆ ಇದ್ದಿದ್ದು ಅದರರ್ಥ ನಮ್ಮ ನಡುವೆ ಪ್ರೀತಿನೇ ಇಲ್ಲಂತಲ್ಲ. ನಿಂಗೊತ್ತಿಲ್ಲ ಮಗಾ. ನಿನ್ನಪ್ಪ ನಿನ್ನನ್ನೂ ಅಷ್ಟೇ ಪ್ರೀತಿಸ್ತಾನೆ. ಆದ್ರೆ ಪಾಪ ಅವರಿಗೆ ತೋರಿಸಿಕೊಳ್ಳೋಕೆ ಬರಲ್ಲ." ಅಪ್ಪ ಅದ್ಯಾವತ್ತೋ ಒಂದು ದಿನ ಹೋಟೆಲ್‌ಗೆ ಕರೆದುಕೊಂಡು ಹೋಗಿ ಬೆಣ್ಣೆ ದೋಸೆ ತಿನ್ನಿಸಿಕೊಂಡು ಬಂದದ್ದು ತನ್ನ ಬದುಕಿನ ಅಮೂಲ್ಯ ಕ್ಷಣವೆಂಬಂತೆ ಹೇಳಿಕೊಳ್ಳುತ್ತಾಳೆ. ಆತ ತಂದು ಕೊಡುವ ಮೂರಾಣೆಯ ಮಲ್ಲಿಗೆಯಲ್ಲಿ ವಿಚಿತ್ರ ಖುಷಿಪಡುತ್ತಾಳೆ. ಸುಖವಾಗಿರೋಕೆ ಒಂದು ಬೆಣ್ಣೆ ದೋಸೆ, ಪಾವು ಮೈಸೂರು ಪಾಕು, ಮೊಳ ಮಲ್ಲಿಗೆ ಇಷ್ಟೇ ಸಾಕಿದ್ದ ಮೇಲೆ ಮುಗಿಲಿಗೆ ಹಾರಿ ಚಂದಿರನನ್ನು ಹಿಡಿಯುವ ಆಸೆ ನನ್ನಲ್ಲಿ ಯಾಕಾದರೂ ತುಂಬಿದಳೋ.

ಅಮ್ಮನ ಫೋಟೋ ಇರುವ ಲ್ಯಾಪ್‌ಟಾಪ್ ಸ್ಕ್ರೀನ್ ಮೇಲೆ ಮೃದುವಾಗಿ ಎಳೆದೆ. ಅಮ್ಮ ನೆನಪಾದಾಗ ಮೊಬೈಲ್‌ನಲ್ಲೂ ಇರುವ ಈ ಫೋಟೋ ನೋಡಿ ಎರಡು ಹನಿ ಕಣ್ಣೀರಿಳಿಸಿ ಸುಮ್ಮನಾಗುತ್ತೇನೆ. ಅಷ್ಟಕ್ಕೆ ಅಮ್ಮನೂ

ಸುಮ್ಮನಾಗಿ ಬಿಡೋಲ್ಲ. ಕಾಡುತ್ತಾಳೆ. ಅದೇ ಮಾತುಗಳಿಂದ ತಿವಿದು ಎಚ್ಚರಿಸುತ್ತಾಳೆ. ಅಮ್ಮನ ಮಾತು ನೆನಪಾದರೆ ನಿದ್ದೆ ಮರೆಯುತ್ತೇನೆ. ತೊಡೆಯ ಮೇಲಿನ ಲ್ಯಾಪ್‌ಟಾಪ್‌ನ ಕೀಬೋರ್ಡ್ ಮೇಲೆ ಹತ್ತು ಬೆರಳುಗಳೂ ನರ್ತಿಸಲಾರಂಭಿಸುತ್ತವೆ. ಈ ಪ್ರಾಜೆಕ್ಟ್ ಆದ್ರೂ ಸಕ್ಸಸ್ ಆಗಿ ಫಾರಿನ್‌ಗೆ ಹೋಗೋ ಚಾನ್ಸ್ ಸಿಗಬೇಕು. ಒಂದು ಬಾರಿ ಫಾರೀನ್‌ಗೆ ಹೋಗಿ ಬಂದ್ರೆ ಪ್ರಮೋಶನ್ ಸಿಗುತ್ತೆ. ಆಮೇಲೆ ತಿಜೋರಿ ತುಂಬ ಒಡವೆ, ರೇಷ್ಮೆ ಬಟ್ಟೆ, ಕಾರು, ಬಂಗಲೇ... ಅಂತಂದುಕೊಳ್ಳುವ ಹೊತ್ತಿಗೆ ಬೆಳಗು ಕಂಡುಬಿಡುತ್ತೇನೆ. ಮತ್ತದೇ ಧಾವಂತ. ಅರೆಬರೆ ಕಾದ ನೀರನ್ನು ಮೈಮೇಲೆ ಸುರುವಿಕೊಂಡು, ಕೈಗೆ ಸಿಕ್ಕ ಡ್ರೆಸ್ ಹಾಕಿ. ಬ್ರೆಡ್‌ಗೆ ಜಾಮ್ ಮೆತ್ತಿಕೊಂಡು ಬಾಯಿಗಿಟ್ಟುಕೊಳ್ಳುತ್ತಲೇ ಗಾಡಿಗೆ ಕಿಕ್ ಹಾಕಿ ಬಿಡುತ್ತೇನೆ. ಆಫೀಸ್‌ನಲ್ಲಿ ಕಾಫಿಗೂ ಬಿಡುವಿಲ್ಲದಂಥ ದುಡಿತ. ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗುವ ಆತುರ. ಸೀನಿಯರ್ಸ್‌ನ್ನೂ ಹಿಂದೆಸೆಯಬೇಕೆಂಬ ಹಂಬಲ. ಬಾಸ್ ಕೈಯಿಂದ ಭೇಷ್ ಎನಿಸಿಕೊಳ್ಳುವ ತವಕ. ದೇವರೇ ಬೇಗ ಪ್ರಮೋಶನ್ ಆಗಿ ಬದುಕು ಇನ್ನಷ್ಟು ಎತ್ತರಕ್ಕೇರಲಿ ಅನ್ನೋ ಪ್ರಾರ್ಥನೆ.. ಎಲ್ಲದರ ಹಿಂದಿರುವುದು ಒಂದೇ ತುಡಿತ ನನ್ನ ಬಾಳೂ ಅನ್ನೋ ಪ್ರಾರ್ಥನೆ... ಎಲ್ಲದರ ಹಿಂದಿರುವುದು ಒಂದೇ ತುಡಿತ ನನ್ನ ಬಾಳೂ ಅಮ್ಮನಂಗಾಗದಿರಲಿ ಅನ್ನೋದು.

***

"ಸಾಧಿಸಬೇಕು, ನಾಲ್ಕು ಜನ ನಿನ್ನ ಗುರುತಿಸುವಂತಾಗಬೇಕು" ಎನ್ನುತ್ತ ಆ ಭೃಂಗವನ್ನು ತೋರಿಸುತ್ತಿದ್ದಳು ಅಮ್ಮ. ಸಾಧನೆ ಅಂದರೆ ಅಷ್ಟು ಖುಷಿ ಕೊಡ್ತದಾ? ಅಮ್ಮನಿಗೇಕೆ ಅದರ ಮೇಲೆ ಅಂಥ ಪ್ರೀತಿ. ಅಲ್ಲೇನಿರಬಹುದು... ಇದೇ ಕುತೂಹಲದಲ್ಲಿ ಆ ಲೋಕವನ್ನು ಮುಟ್ಟುವ ಕನಸಿನಲ್ಲಿ ನಾ ಎಲ್ಲವನ್ನೂ ಮರೆತು ಬಿಡುತ್ತಿದ್ದೆ. "ಕ್ಲಾಸಿಗೆ ಸರಿಯಾಗಿ ಬರೋಲ್ಲ. ಕ್ಲಾಸ್ ಹೇಳುವಾಗ ಯಾವುದೋ ಲೋಕದಲ್ಲಿರುತ್ತಿ. ಹೀಗೇ ಆದರೆ ನೀ ಎಸ್ಸೆಸ್ಸೆಲ್ಸಿಯಲ್ಲಿ ಫೇಲ್ ಆಗೋದು ಗ್ಯಾರಂಟಿ..." ಕನ್ನಡ ಟೀಚರ್ ರೇಗುತ್ತಿದ್ದರೆ, ನಾ ನಗುತ್ತಿದ್ದೆ. ನಾನು ದೊಡ್ಡ ಆಫೀಸರ್ ಆಗ್ತೇನೆ. ಕೈತುಂಬ ಹಣ. ಓಡಾಡೋಕೆ ಕಾರು, ನನ್ದೇ ಬಂಗಲೆ...' ಮತ್ತು ಅದೇ ಧ್ಯಾನ.

***

ಅಮ್ಮ ಅಳುತ್ತಿದ್ದಳು.

"ನಾನು ಏನು ಆಗಬಾರದು ಅಂದ್ಕೊಂಡಿದ್ದೇನೋ ಅದೇ ಆಯ್ತು. ನಿನ್ನ ಬದುಕು ನನ್ನಂಗೇ... ಫೇಟ್ ನನ್ನಂಗೇ ಆಗುತ್ತೇ. ನಿನ್ನಪ್ಪ ತನ್ನಂಥದೇ ಒಂದು ಬೇವರ್ಸಿನಾ ನೋಡಿ ಮದುವೆ ಮಾಡಿಕೊಡ್ತಾನೆ. 'ರೀ ಸೀರೆ ಹರಿದು ಹೋಗಿ ಮೂರು ತಿಂಗಳಾಯ್ತು ಯಾವಾಗ ಕೊಡಿಸ್ತೀರಾ? ರೀ ಅಮ್ಮನ ಮನೆಗೆ ಹೋಗಿ ಬರ್‍ತೀನಿ, ಒಂದಿನ್ನೂರು ರೂಪಾಯಿ ಕೊಡ್ತೀರಾ? ರೀ ಕಾಯಿಪಲ್ಲೆಗೆ ಚಿಲ್ಲರೆ ಬೇಕಿತ್ತು...' ಅಂತ ಗಂಡನೆದುರು ಕೈಚಾಚುವುದು ಅವನು ಸಾಯೋ ಹಂಗೆ ಬಡಿದರೂ ನೀನೆ ನನ್ನ ದೈವ ಅಂತ ಕಾಲು ಹಿಡಿಯೋದು... ಹೀಗೆ ಆಗುತ್ತೆ ನಿನ್ನ ಬದುಕು. ಆಮೇಲೆ? ಆಮೇಲೆ ಇನ್ನೇನು? ಮಗನೆದುರು ಭಿಕ್ಷೆಗೆ ನಿಲ್ಲೋದು. ಮಗಳ ಹತ್ತಿರ ಮಗನೆದುರು ಭಿಕ್ಷೆಗೆ ನಿಲ್ಲೋದು. ಮಗಳ ಹತ್ತಿರ ಹೋಗಿ ಬರಬೇಕಿತ್ತು ಮಗಾ ಕಳಿಸಿಕೊಡ್ತೀಯಾ? ಅಂತ ಕೇಳುವಾಗ ಮಗನದೂ ಅದೇ ಗಮ್ಮತ್ತು. ಅದೇ ದರ್ಪ... ಈ ಸ್ಥಿತಿ ನಿನಗೆ ಬರಬಾರದು ಅಂತ ನಾನಂದ್ಕೊಂಡ್ರೆ ನೀನು?" ಅವಳು ಗದರುತ್ತಿದ್ದಳೋ, ಅಳುತ್ತಿದ್ದಳೋ, ನೊಂದುಕೊಳ್ಳುತ್ತಿದ್ದಳೋ ಅರ್ಥವಾಗದಿದ್ದರೂ ನಿಂತಲ್ಲಿಯೇ ನಾ ಕಂಪಿಸಿಹೋದೆ. ಅಮ್ಮ ನನ್ನ ಬಗ್ಗೆ ಇಟ್ಟುಕೊಂಡ ಭರವಸೆಗಳನ್ನೆಲ್ಲ ನಾ ತಣ್ಣಗೇ ಕೊಂದು ಬಿಟ್ಟೆನಾ? ಅಮ್ಮ ಇನ್ನು ನನ್ನ ಬಗ್ಗೆ ಕನಸು ಕಾಣುವುದನ್ನೇ ಬಿಟ್ಟು ಬಿಡುತ್ತಾಳಾ? ಇನ್ನು ಅವಳು ಕನಸೇ ಇಲ್ಲದ ಬದುಕು ಜೀವಿಸುತ್ತಾಳಾ? ಭಯವಾಯಿತು ನನಗೆ. "ಅಮ್ಮ ನೀನು ಯೋಚಿಸಬೇಡ. ಇದು ನಾನು ಮಾಡಿದ ಮೊದಲನೇ ಮತ್ತು ಕೊನೇ ತಪ್ಪು. ಇಲ್ಲಿಗೆ ಎಲ್ಲವೂ ಮುಗಿದು ಹೋಗಲಿಲ್ಲ. ಇನ್ನೂ ಸಾಧ್ಯತೆಗಳಿವೆ. ನಾನು ಓದುತ್ತೇನೆ. ದೊಡ್ಡ ಕೆಲಸ ಹಿಡಿಯುತ್ತೇನೆ. ತಿಜೋರಿ ತುಂಬ ಚಿನ್ನದ ಒಡವೆ..." ಅಮ್ಮನಲ್ಲಿ ಕನಸು ತುಂಬಲು ಯತ್ನಿಸಿದೆ.

"ಹೆಚ್ಚಿಗೆ ಮಾತನಾಡಬೇಡ ನೀನು" ನನ್ನನ್ನು ತಡೆದು ಕಿರುಚಿದ್ದಳು ಅಮ್ಮ. "ನಿನ್ನ ಮೇಲೆ ನನಗೆ ಯಾವ ಭರವಸೆಯೂ ಇಲ್ಲ. ನಿಮ್ಮಪ್ಪ ಕರೆದುಕೊಂಡು ಬರುವ ಬೇವರ್ಸಿಗೆ ತಲೆ ಕೊಟ್ಟು ತಾಳಿ ಕಟ್ಟಿಸಿಕೊ ಮತ್ತು ನನ್ನಂತದೇ ಬದುಕು ಜೀವಿಸು" ಅಂಥಂದು ಎದ್ದುಹೋದಳು.

***

ಆರು ತಿಂಗಳಲ್ಲಿ ಮತ್ತೆ ಎಸ್ಸೆಸ್ಸೆಲ್ಸಿಯ ಫಲಿತಾಂಶ ಬಂತು.

"ನೋಡಿದೆಯಾ? ಅನಿತಾಳಿಗಿಂತ ಹೆಚ್ಚು ಮಾರ್ಕಿನಿಂದ ಪಾಸಾಗಿದ್ದೀನಿ. ಕಾಲೇಜು ಸೇರಿಸೋಕೆ ಹೇಳು ಅಪ್ಪಂಗೆ ಮುಂದೆ ಫೇಲಾಗದೆ ಓದ್ತೀನಿ." ಅಮ್ಮನ ಹಿಂದೆ ನಿಂತು ಅಪ್ಪನ ಮಾತು ಕೇಳಿಸಿಕೊಂಡಿದ್ದೆ.

"ಕಾಲೇಜು ಕಲಿತು ಏನ್ಮಾಡ್ತಾಳೆ. ಮನೆಗೆ ತಂದು ಹಾಕ್ತಾಳ?" ಅಪ್ಪನ ದರ್ಪದ ಮಾತು "ನಮಗೆ ತಂದು ಹಾಕದೆ ಇದ್ರೆ ಏನು? ಅವಳಾದ್ರೂ ಸುಖವಾಗಿರ್‍ತಾಳಲ್ವಾ? ಅವಳಿಗೆ ಒಳ್ಳೆ ಕೆಲಸ ಸಿಕ್ರೆ ನಾಳೆ ವರದಕ್ಷಿಣೆ ಇಲ್ಲದೆ ಮದುವೆ ಆಗ್ತಾರೆ. ಆ

ಕಾರಣಕ್ಕಾದ್ರೂ ಕಾಲೇಜು ಸೇರಿಸಿ." "ಕಾಲೇಜು ಸೇರಿಸಿದ ಮಾತ್ರಕ್ಕೆ ನೌಕರಿ ಸಿಕ್ಕು ಬಿಡ್ತದಾ? ಸಿಕ್ಕರೂ ಇವಳಿಗೆಂಥ ನೌಕರಿ ಸಿಕ್ಕೀತು?"

"ಎಂಥದ್ದೋ ಗೊತ್ತಿಲ್ಲ ನಂಗೆ. ಅವಳು ಕಾಲೇಜಿಗೆ ಹೋಗಬೇಕು ಅಷ್ಟೇ." ಅಮ್ಮ ತಮ್ಮ ಜೀವನದಲ್ಲೇ ಮೊದಲ ಬಾರಿಗೆ ಅಪ್ಪನೊಂದಿಗೆ ಹೀಗೆ ಹಟಕ್ಕೆ ಬಿದ್ದಿದಂತೆ. ನಾನು ಓದುಬೇಕು, ನೌಕರಿ ಮಾಡಬೇಕು ಅನ್ನೋ ಹಂಬಲ ಅವಳಲ್ಲಿ ಅಂಥ ಧೈರ್ಯ ತುಂಬಿತ್ತು. ಅತ್ತು ಕರೆದು ಅಪ್ಪನಿಂದ ಒಪ್ಪಿಗೆ ಪಡೆದಳು, ಪಕ್ಕದ ಮನೆಯ ನಾರಾಯಣನ ಸಹಾಯದಿಂದ ಕಾಲೇಜು ಫಾರ್ಮ್ ತರಿಸಿ, ತುಂಬಿಸಿ, ಕಾಲೇಜು ಸೇರಿಸಿಯೇ ಬಿಟ್ಟಳು.

"ನೋಡು ಮಗಾ ಚೆನ್ನಾಗಿ ಓದಬೇಕು. ದೊಡ್ಡ ನೌಕರಿ ಮಾಡಬೇಕು. ನಾನು ಮದುವೆಯಾಗಿ ನಿನ್ನ ತಂದೆಯ ಜೊತೆ ಬಂದಾಗ ನನಗೊಂದು ಕಬ್ಬಿಣದ ಟ್ರಂಕು ಬೇಕಿತ್ತು. ಮೂವತ್ತು ವರ್ಷ ಬೇಡಿದರೂ ನಿನ್ನ ತಂದೆ ಒಂದು ಟ್ರಂಕು (ಕಬ್ಬಿಣದ ಪೆಟ್ಟಿಗೆ) ಕೊಡಿಸಲಿಲ್ಲ. ಟ್ರಂಕಿನಲ್ಲಿ ಇಡುವಂಥದ್ದೇನಿದೆ. ನಿನ್ನಲ್ಲಿ ಅಂತ ಹಂಗಿಸೋರು. ಆದ್ರೆ ನಿನಗೆ ಅಂತಹ ಸ್ಥಿತಿ ಬರಬಾರದು. ನಾನು ಹೇಳಿದ್ದು ನೆನಪಿದೆಯಲ್ಲ? ಓದು. ನೌಕರಿ, ಬಂಗಲೆ, ಕಾರು, ತಿಜೋರಿ, ತುಂಬ..."

"ಹೂಂ ಎಲ್ಲ ನೆನಪಿದೆ ಅಮ್ಮ. ನಿನಗಾಗಿ ಆದ್ರೂ ನಾನು ಅದನ್ನು ಸಾಧಿಸಿಯೇ ತೀರ್ತೀನಿ" ಅಮ್ಮನ ಕೈಮೇಲೆ ಕೈ ಇಟ್ಟು ಭರವಸೆ ಮೂಡಿಸಿದ್ದೇ ಆ ದಿನ.

***

ಹೊಸ ಊರು, ಕಾಲೇಜು, ಹಾಸ್ಟೆಲು, ಹೊಸ ಜನ, ಹೊಸ ಟೀಚರು. ಹೊಸ ಫ್ರೆಂಡ್ಸು... ಎಲ್ಲದರ ನಡುವೆ ಅಮ್ಮನ ಕನಸಿನ ಬುತ್ತಿ ಬಿಚ್ಚಿಕೊಳ್ಳುವುದನ್ನು ಮಾತ್ರ ಮರೆಯುತ್ತಿರಲಿಲ್ಲ. ಕ್ಲಾಸು, ಲೈಬ್ರರಿ, ಓದು ಬಿಟ್ಟರೆ ಅದೇ ಗುಂಗು. ಹಾಸ್ಟೆಲಿನ ಕೋಣೆಯ ಒಂದು ಮೂಲೆಯಲ್ಲಿರುವ ಕಾಟ್ ಮೇಲೆ ಕಾಲು ಚಾಚಿ ಮಲಗಿದಾಗ ಯಾರ್‍ಯಾರೋ ಏನೇನೋ ಕನಸು ಕಂಡು ತಮ್ಮೊಳಗೆ ನಾಚಿಕೊಂಡು, ನುಲಿದು ಹೇಳಿಕೊಳ್ಳಲಾಗದ ವಿಚಿತ್ರ ಖುಷಿ ಪಟ್ಟರೆ ನಾನು ಕನಸಿನಲ್ಲು ತಿಜೋರಿಯನ್ನೇ ಕಾಣುತ್ತಿದ್ದೆ. ಅಮ್ಮ ಹೇಳುತಿದ್ದಳಲ್ಲ ಆ ತಿಜೋರಿ. ಅದರ ತುಂಬ ಚಿನ್ನದ ಒಡವೆ, 'ಪರ್‍ವಾಗಿಲ್ಲ ಮಾಲತಿ, ಗುಡ್, ಒಳ್ಳೆ ಸ್ಕೋರ್ ಮಾಡಿದ್ದೀರಿ. ಎಂದು ಕಾಲೇಜಿನ ಮೇಘನಾ ಮೇಡಮ್ ಹೇಳಿದಾಗ ತಟ್ಟನೇ ಅಮ್ಮ ನೆನಪಾಗುತ್ತಿದ್ದಳು. ವರ್ಷದಿಂದ ವರ್ಷಕ್ಕೆ ಉತ್ತಮ ಫಲಿತಾಂಶ. ಅಪ್ಪನಿಗೂ ಹೇಳಿಕೊಳ್ಳಲಾಗದ, ಒಪ್ಪಿಕೊಳ್ಳಲೂ ಆಗದ ಖುಷಿ. ರಜೆಗೊಮ್ಮೆ ಊರಿಗೆ ಹೋದಾಗ ಅಮ್ಮನ ಮಮತೆಯೊಳಗೆ ಮಿಂದೆದ್ದು ಬರುತ್ತಿದ್ದೆ. ಎಣ್ಣೆ ಮೆತ್ತಿದ ತಲೆಗೆ ಅಂಟವಾಳ ಕಾಯಿ, ಸೀಗೆ ಪುಡಿಯ ಮಿಶ್ರಣ, ಪ್ರತಿದಿನ ತರಹೆವಾರಿ ತಿನಿಸು, ಪಾಯಸ, ಎಣ್ಣೆಗಾಯಿ ಪಲ್ಯಾ, ಕಟಗ ರೊಟ್ಟಿ, ಚಪಾತಿ, ಹೋಳಿಗೆ, ಗಟ್ಟಿ ಮೊಸರು, ಹುಳಿ ಸಾಂಬಾರು.... ಬರುವಾಗ ಮಿಡಿಗಾಯಿ ಉಪ್ಪಿನಕಾಯಿ, ಚಟ್ನಿಪುಡಿ, ತುಪ್ಪ... ಇತ್ಯಾದಿ ಇತ್ಯಾದಿ... ಊರು ಬಿಟ್ಟು ಬರುವಾಗ ಮನಸ್ಸು ತೀವ್ರ ಸಂಕಟಕ್ಕೆ ಬೀಳುತ್ತಿತ್ತು. ಓದು, ನೌಕರಿ, ಹಣ, ಬಂಗಲೆ, ಕಾರು, ತಿಜೋರಿ, ಚಿನ್ನದ ಒಡವೆ, ರೇಷ್ಮೆ ಬಟ್ಟೆ... ಯಾವುದೂ ಬೇಡ, ಅಮ್ಮ ನೀನು ಅಪ್ಪ, ಅಣ್ಣ, ಈ ಮನೆ ನಿನ್ನ ಕೈ ತುತ್ತು, ನಮ್ಮ ತೋಟ, ನಮ್ಮೂರು... ಇಷ್ಟೇ ಸಾಕು ನನಗೆ. ಆ ಊರು ಅಷ್ಟು ಸರಿಯಿಲ್ಲಮ್ಮ. ಛೀ, ಒಂದಕ್ಕೂ ಬುದ್ಧಿ ಇಲ್ಲ. ಕೋತಿ ಆಡಿದಂಗಾಡ್ತವೆ. ಒಂದಕ್ಕೆ ದುಷ್ಟ ಬುದ್ದಿ. ಹುಡುಗ್ರು ಹುಡುಗೀರು ಕೈ–ಕೈ ಹಿಡ್ಕೊಂಡು ಓಡಾಡ್ತವೆ. ಅಸಹ್ಯ ಅಸಹ್ಯ..." ಅಂತ ಅಮ್ಮನೆದುರು ಗೋಗೆರೆದೆ. "ಹಂಗಾದ್ರೆ ಕಾಲೇಜು ಬಿಟ್ಟು ಬಿಡು. ಕೋತಿ ವನ ಕೆಡಿಸ್ತು ಅನ್ನೋ ಹಾಗೆ ಅವರು ನಿನ್ನನ್ನೂ ದಾರಿ ತಪ್ಪಿಸಿಯಾರು" ಅಂತಾಳೆ ಅಮ್ಮ ಅಂದುಕೊಂಡಿದ್ದೆ ನಾನು. ಆದರೆ ಅವಳು ಹಾಗನ್ನಲಿಲ್ಲ.

"ಅವರು ಶೋಕಿಗೆ ಅಂತ ಕಾಲೇಜಿಗೆ ಸೇರಿರೋದು ಮಗಾ. ನೀನು ನಿನ್ನ ಕನಸು ನನಸಾಗಿಸಿಕೊಳ್ಳೋದಿಕ್ಕೆ ಕಾಲೇಜಿಗೆ ಹೋಗಿರುವಿ. ಅದನ್ನ ನೆನಪಿಟ್ಟುಕೊಂಡಿರು. ಇದಷ್ಟು ದಿನ ಕಷ್ಟ ಪಟ್ರೆ ಮುಂದೆ ನೀನೇ ಸುಖವಾಗಿರ್ತಿ" ಅಂದಳು. ಎಲ್ಲ ಸುಳ್ಳು, ಸುಖ ಅನ್ನೋದು ಸಾಧಕರಿಗೆ ನಿಲುಕದ ನಕ್ಷತ್ರ ಅಂತ ಫಿಲಾಸಫಿ ಬೋಧಿಸುತ್ತಿದ್ದ ಪ್ರೊ. ರಂಗಾಯಣ ಹೇಳುತ್ತಿದ್ದರು.

***

ಕಷ್ಟಪಟ್ಟು ಓದಿದೆ. ಅಮ್ಮ ತೋರಿಸಿದ ಬೆಟ್ಟ ಏರುವ ಆತುರದಲ್ಲಿ ಊಟ ನಿದ್ದೆಯನ್ನೂ ಮರೆಯುತ್ತಿದ್ದೆ. ಇನ್ನು ಓದುವ ಹಂತದಲ್ಲಿಯೇ ನೌಕರಿ ಸಿಕ್ಕಿತು. 'ಯು ಆರ್ ಲಕ್ಕಿ ಇಷ್ಟು ಬೇಗ. ಅದೂ ಇಂತಹ ಒಳ್ಳೆ ಕಂಪೆನಿಯಲ್ಲಿ..." ಅಂತ ಎಲ್ಲರೂ ಅಪ್ರಿಷಿಯೇಟ್ ಮಾಡಿದ್ದೇ ಆಯ್ತು. ಆ ದೂರದೂರಲ್ಲಿ ನೀನೊಬ್ಬೆ ಹ್ಯಾಗಿರ್ತೀಯಾ? ಅನ್ನೋ ಚಿಂತೆ ಅಮ್ಮನಿಗೆ ಮಾತ್ರ.

***

ಅಲ್ಲಿಂದ ಜಾರಿಕೊಂಡು ಇಲ್ಲಿಗೆ ಬಂದು ಬಿತ್ತು ಬದುಕು. ನಮ್ಮದಲ್ಲದ ಭಾಷೆ. ಇಲ್ಲಿರುವವರೂ ನಮ್ಮ ಜನರಲ್ಲ, ಸ್ನೇಹಕ್ಕೆಂದೂ ಒಬ್ಬರಿಲ್ಲ... ಜೂಲಿ, ಟೀನಾ, ಹರ್ಷಿತ್... ಯಾರೂ ನನಗೆ ಇಷ್ಟವಾಗೋದೇ ಇಲ್ಲ. ನನಗೆ ಸೋಷಿಯಲ್ ಆಗಿರೋದು ಗೊತ್ತೇ ಇಲ್ಲ ಅಂತಾರೆ.

ಕಾರಣವಿಲ್ಲದೆ ಕೈಕುಲುಕೋದು, ಕಿಲಾ–ಕಿಲಾ ಅಂತ ಹಲ್ಲು ತೆಗೆಯೋದು, ಒಂದೇ ಪ್ಲೇಟಿನಲ್ಲಿ ಕೈ ಹಾಕಿ ತಿನ್ನೋದು, ವೀಕ್ಎಂಡ್‌ನಲ್ಲಿ ಸಿನೆಮಾ, ಪಾರ್ಕು, ಪಬ್ಬು ಅಂತ ಓಡಾಡೋದು ಇದೆಂಥ ಮ್ಯಾನರಿಸಮ್? ಅಂಥದ್ದು ನನಗೆ ಬೇಕಿಲ್ಲ ಅಂದಿದ್ದಕ್ಕೆ 'ಶೀ ಇಸ್ ನಾಟ್ ಸೋಷಿಯಲ್' ಅಂದು ಬಿಡ್ತಾರೆ.

ಮನೆಗೆ ಬಂದರೆ ಇಷ್ಟು ದೊಡ್ಡ ಅಪಾರ್ಟ್‌ಮೆಂಟಲ್ಲಿ ನನಗೆ ಮಾತನಾಡಿಸೋರು ಯಾರೂ ಇಲ್ಲ. ನಾನೆ ಮಾತನಾಡಿದರೂ ವಾಚ್‌ಮನ್ ಜೊತೆ ಮಾತ್ರ. ನಾನು ಮನೆ ಸೇರುವ ಸಮಯಕ್ಕೆ ಎಚ್ಚರವಾಗಿರೋನು ಅವನೊಬ್ಬನೆ. ಸಂಜೆಯ ಮಬ್ಬುಗತ್ತಲಲ್ಲಿ ಸಾಗರದ ದಡದಲ್ಲಿ ಕುಳಿತು ಮರಳಲ್ಲಿ ಬೆರಳಾಡಿಸುತ್ತ ಕುಳಿತಷ್ಟು ಹೊತ್ತು ಒಂದೇ ಪ್ರಶ್ನೆ. ಕಾಣದ ಸುಖ ಅರಸಿ ಇಲ್ಲಿ ಬಂದೆ. ಆದರೆ ಅದು ಎಲ್ಲಿ ಹೊಕ್ಕೀತು? ಅಲ್ಲೇ ಇದೆ. ಅಮ್ಮನ ಮಡಿಲಲ್ಲಿ ಅಪ್ಪನ ನೆರಳಿನಲ್ಲಿ...

'ವೆಲ್‌ಡನ್... ಗುಡ್... ಈಚೆಗೆ ನಿಮ್ಮ ಫರ್‌ಫಾರ್ಮೆನ್ಸ್ ಇಂಪ್ರೂ ಆಗಿದೆ ಮಾಲತಿ' ಅಂತ ಬಾಸ್ ಹೇಳಿದಾಗ ಹಾಗಿದ್ರೆ ಇನ್‌ಕ್ರಿಮೆಂಟ್ ಗ್ಯಾರಂಟಿ, ಇನ್‌ಕ್ರಿಮೆಂಟ್ಸ್ ಅಂತೇನಾದರೂ ಸಿಕ್ಕಾಗ ಈ ಬಾರಿ ಮನಸ್ಸು ಬಿಚ್ಚಿ ಶಾಪಿಂಗ್ ಮಾಡಬಹುದು ಅನ್ನುವ ಹುರುಪು, ಬ್ಯಾಂಕ್ ಅಕೌಂಟ್‌ನ ಅಂಕಿಯ ಮುಂದಿನ ಸೊನ್ನೆ ಹೆಚ್ಚಾಗುತ್ತೆನ್ನುವ ಖುಷಿ. ಇದಷ್ಟನ್ನು ಬಿಟ್ಟರೆ ನನಗೆ ನಿಲುಕುವುದಾದರೂ ಬೇರೇನು?

ಅಮ್ಮ ಬೇಸರವಾಗಿದೆ. ಒಂದೆರಡು ದಿನ ರಜೆ ಹಾಕಿ ಊರಿಗೆ ಬಂದುಬಿಡುತ್ತೇನೆ ಅಂದಾಗ ಅಮ್ಮನಿಗೂ ಖುಷಿ.

***

ಅಮ್ಮನ ತೊಡೆಯ ಮೇಲೆ ತಲೆ ಇಟ್ಟು ಅವಳನ್ನೇ ದಿಟ್ಟಿಸುತ್ತಿದ್ದೆ. ಅಮ್ಮ ನನಗಾಗಿ ಸ್ವೆಟರ್ ಹೆಣೆಯುತ್ತಿದ್ದಳು. ಯಾವುದೊ ಮಹತ್ವದ ಪ್ರಾಜೆಕ್ಟ್ ಒಂದನ್ನು ತಯಾರಿಸಿದ ಅದ್ಭುತ ಸಂತಸ ಅಮ್ಮನ ಮುಖದ ಮೇಲೆ. ಒಂದೊಂದು ಸಾಲು ಪೂರ್ಣಗೊಳಿಸಿದಾಗಲೂ ಅದನ್ನು ಆಚೀಚೆ ತಿರುಗಿಸಿ ನೋಡಿ ಸಂಭ್ರಮಿಸುವ ರೀತಿ... ಈ ಸಂಭ್ರಮ ನನಗೇಕಿಲ್ಲ?

"ಏನ್ ಯೋಚಿಸ್ತಿದ್ದಿ ಮಗಾ?

"ಅಮ್ಮ, ನನಗೊ ಸ್ವೆಟರ್ ಹೆಣೆಯೋಕೆ ಕಲಿಸ್ತೀಯಾ?"

"ಹುಚ್ಚಿ, ಇದೆಲ್ಲ ನಮ್ಮಂತೋರ ಕೆಲಸ, ನಿನಗೋ ಕುಳಿತರೆ ಎದ್ದೇಳೋಕೂ ಆಗದಷ್ಟು ದೊಡ್ಡ ಕೆಲಸ ಇರ್ತವೆ. ನಿನ್ನ ಕೆಲಸ ನಿನಗೆ ಹಣ ತಂದು ಕೊಡುತ್ತೆ. ಇಂಥದ್ದೆಲ್ಲ ನಿನಗ್ಯಾಕೆ?"

"ಅಲ್ಲಿ ನನಗೆ ತುಂಬ ಕಷ್ಟ ಆಗುತ್ತಮ್ಮ. ಅಲ್ಲಿ ಯಾರಿಗೂ ಕನ್ನಡ ಬರುವುದೇ ಇಲ್ಲ ಕನ್ನಡದಲ್ಲಿ ಮಾತನಾಡಬೇಕು ಅಂತ ಆಸೆಯಾದರೆ ವಾಚ್‌ಮನ್‌ಗೆ ಹುಡುಕಿಕೊಂಡು ಹೋಗಬೇಕು. ಆಫೀಸಲ್ಲಿ, ದಾರೀಲಿ, ಕ್ಯಾಂಟೀನ್‌ನಲ್ಲಿ ಎಲ್ಲೆಲ್ಲೂ ಒಂದೊಂದು ತರ ಜನ ಸಿಗ್ತಾರೆ. ಯಾರೋ ಮಾತಿನಿಂದ ಇರಿತಾರೆ. ಮತ್ಯಾರೊ ಕೆಟ್ಟ ನೋಟದಿಂದ ಕೊಲ್ತಾರೆ. ಆಫೀಸಲ್ಲಿ ಒಬ್ಬ ಮ್ಯಾನೇಜರ್ ಇದ್ದಾನೆ. ದುಷ್ಟ, ನನ್ನ ಚಿಕ್ಕ–ಚಿಕ್ಕ ತಪ್ಪನ್ನೂ ದೊಡ್ಡದು ಮಾಡಿ ರಂಪ ಮಾಡ್ತಾನೆ, ಗೋಳಿಟ್ಟುಕೊಳ್ತಾನೆ. ಫರ್‌ಫಾರ್ಮೆನ್ಸ್ ಲೆಟರ್‌ನಲ್ಲಿ ನನಗೆ ಕಮ್ಯುನಿಕೇಶನ್ ಪ್ರಾಬ್ಲಮ್ ಇದೆ ಅಂತ ಬರೀತಾನೆ. ಹತ್ತು ನಿಮಿಷ ಟೀಗೆ ಹೋದ್ರೆ ಒಂದು ಗಂಟೆ ಅಂತ ನೋಟ್ ಮಾಡ್ತಾನೆ, ಪಕ್ಕದ ಮನೇಲಿರೋ ಒಬ್ಬ ಅಂಕಲ್ಲು ಕಿಟಕಿಯಿಂದ ಸದಾ ನನ್ನ ರೂಮಿನ ಕಡೆನೇ ನೋಡ್ತಿರ್ತಾನೆ. ಅದ್ಯಾರೋ ರಾಜು ಅನ್ನೋನೊಬ್ಬ ತಾನೂ ಕನ್ನಡದೋನೇ ಅನ್ನೋ ಕಾರಣಕ್ಕೆ ಬೈಕ್ ತಗೊಂಡು ನನ್ನ ಹಿಂದೆ ಸುತ್ತುತ್ತಾ ಇರ್ತಾನೆ... ಆ ಜಗತ್ತು ಒಂದಿಷ್ಟೂ ಚೆಂದ ಇಲ್ಲ. ಇಲ್ಲಿರೋ ಗೋವಿಂದು ಮಾಮ, ಶಶಾಂಕ ಅಣ್ಣಾ, ಮುನಿಯಪ್ಪ, ರಾಜೇಶ ಕಾಕಾ, ಗಂಗಾವತಿ ಕಾಕು, ವೀಣಕ್ಕ, ಕಾವೇರಿ ಅತ್ಯಾ... ಇಂಥ ಸಂಬಂಧಗಳೇ ಅಲ್ಲಿಲ್ಲ. ಆ ಬದುಕು ಸಾಕಾಗಿದೆ ನನಗೆ. ಅದೆಲ್ಲವನ್ನು ಬಿಟ್ಟು ಸುಮ್ನೆ ಇಲ್ಲೇ ಇದ್ದು ಬಿಡ್ತೀನಿ. ಹಸುಗಳಿಗೆ ಮೇವು ಹಾಕ್ತೀನಿ. ಗದ್ದೆಗೆ ಹೋಗಿ ಸೌದೆ ತರ್ತೀನಿ. ತೋಟಕ್ಕೆ ಹೋಗಿ ಹಕ್ಕಿ ಓಡಿಸ್ತೀನಿ. ಅಡುಗೆ ಕೆಲಸದಲ್ಲಿ ನಿನಗೆ ಸಹಾಯ ಮಾಡ್ತೀನಿ. ಸ್ವೆಟರ್ ಹೆಣೆತೀನಿ, ದೇವರ ಪೂಜೆ ಮಾಡ್ತೀನಿ. ಸಂಜೆ ಆಗ್ತಿದ್ದಂಗೆ ಧಾರವಾಹಿ ನೋಡ್ತಾ ಕೂತಿರ್ತೀನಿ. ನನಗೂ ನಿನ್ನಂಗೆ ಬದುಕೋ ಆಸೆ. ಪ್ಲೀಸ್ ಎಂಜಾಯ್ ಮಾಡೂಕೆ ಬಿಡಮ್ಮ... ಅಂತೆಲ್ಲ ಅಮ್ಮನೆದುರು ಅಂತರಾಳ ಬಿಚ್ಚಿಡಬೇಕೆಂದುಕೊಂಡೆ, ಅಷ್ಟೊತ್ತಿಗೆ ಅಮ್ಮನೇ ಮಾತಿಗಿಳಿದಳು.

"ಕೊನೆಗೂ ನಿನ್ನ ಬದುಕು ನನ್ನ ಹಾಗೆ ಆಗಲಿಲ್ಲ ನೋಡು. ಇಂದು ನೀನೇ ಹಣ ಸಂಪಾದನೆ ಮಾಡುವಿ. ಮೊನ್ನೆ ನಿನ್ನಪ್ಪ ಮನೆ ಖರೀದಿಸುವಾಗ ನೀನು ಹಣ ಕೊಟ್ಟೆ. ಅವರಿಗೆಷ್ಟು ಖುಷಿ ಆಯ್ತು ಗೊತ್ತಾ? 'ಮಗಳಲ್ಲ ಮಗ ಅದು. ಇಷ್ಟು ಚಿಕ್ಕ ವಯಸ್ಸಿಗೆ ಸಂಸಾರಕ್ಕೆ ಬೆಂಗಾವಲಾಯಿತು, ನೋಡು. ನಾನು ನಿವೃತ್ತಿಯ ಹಂತದಲ್ಲಿ ಪಡೆಯುವ ಸಂಬಳ ಮಗಳಿಗೆ ಮೊದಲ ವರ್ಷದಲ್ಲೇ ದಕ್ಕಿದೆ" ಅಂತ ಸ್ನೇಹಿತರೆದುರು ಹೇಳಿಕೊಳ್ಳುತ್ತಾರೆ ಅವರು. ಒಂದು ಸೀರೆ ಖರೀದಿಸುವ

ಆಸೆಯಾದರೂ ನಾನಿನ್ನೂ ನಿಮ್ಮಪ್ಪನೆದುರು ಕೈಚಾಚಿ ನಿಲ್ಲಬೇಕು. ಕಾಸಿನ ಸರ ಮಾಡಿಸಿಕೊಡು ಅಂತ ಇಂದಿಗೂ ಅಂಗಲಾಚಿಕೊಳ್ತೀನಿ. ಬರೋ ತಿಂಗಳು ನೋಡೋಣ ಅಂತಲೇ ಹೇಳ್ತಾರೆ. ಮದುವೇಲಿ ಕೊಡಿಸಿದ ರೇಷ್ಮೆ ಸೀರೆಗೆ ನುಶಿ (ಹುಳು) ಹತ್ತಿ ಹೋಯ್ತು. ಅಂತಹ ಇನ್ನೊಂದು ಸೀರೆ ಕೊಳ್ಳೋಯೋಗ ಇನ್ನೂ ಬಂದಿಲ್ಲ. ಆದ್ರೆ ನಿನ್ನ ವಿಷಯ ಹಾಗಲ್ಲ ನೋಡು. ನೀ ಮನಸ್ಸು ಮಾಡಿದ್ರೆ ಈಗಲೇ ಹತ್ತು ರೇಷ್ಮೆ ಸೀರೆ ಖರೀದಿಸಬಹುದು. ನಾಲ್ಕು ಕಾಸಿನ ಸರ ಮಾಡಿಸಿ ಹಾಕ್ಕೋಬಹುದು. ಅಲ್ವಾ?" ಅಮ್ಮ ಹೇಳುತ್ತಿದ್ದಳು, ನಾನು ಅವಳನ್ನೇ ನೋಡುತ್ತಿದ್ದೆ. ರೇಷ್ಮೆ ಸೀರೆ, ಕಾಸಿನ ಸರ, ಚಿನ್ನದ ಬಳೆ, ತಿಜೋರಿ... ಇದೇ ಬದುಕು ಅಂದುಕೊಂಡಿದ್ದಾಳೆ. ಅಮ್ಮ ತಿಂಗಳು ತಿಂಗಳು ಮಗಳು ಮಗನಂತೆ ಹಣ ಸಂಪಾದಿಸುತ್ತಾಳೆ ಅನ್ನೋದು ಅವಳ ಸಂತಸ ಹೆಚ್ಚಿಸುವ ವಿಚಾರ. ಅಮ್ಮ ನನ್ನಲ್ಲೂ ಅದೇ ವಿಚಾರ ತುಂಬಿದಳು. ಅಮ್ಮ ತೋರಿಸಿದ ಬೃಂಗದ ಬೆನ್ನೇರಲು ಹೆಣಗುವುದರಲ್ಲಿ ಬದುಕಿನ ಮೇಲಿನ ಒಲವನ್ನೇ ಕಳೆದುಕೊಳ್ಳುತ್ತಿದ್ದೇನೆ ನಾನು. ನನ್ನ ಬದುಕು ತನ್ನಂತೆ ಆಗಬಾರದು ಅಂತ ವಿಶ್ ಮಾಡಿದಳು. ನಾನೂ ಹಾಗೇ ಪ್ರಾರ್ಥಿಸಿದೆ. ಆದರೆ ಈಗನಿಸುತಿದೆ ಯಾರ ಬದುಕು ಚೆಂದ? ಪಕ್ಕದ ಮನೆ ಪಂಕಜಕ್ಕನ ಕಷ್ಟ-ಸುಖಕ್ಕೆ ಪಾಲುದಾರಳಾಗುತ್ತಾಳೆ ಅಮ್ಮ. ಕಟ್ಟೆಯ ಮೇಲೆ ಕುಳಿತು ತಾಸು ತಾಸು ಹರಟುತ್ತಾಳೆ. ಗಂಟೆಗಟ್ಟಲೆ ದೇವರನಾಮ ಸ್ಮರಿಸುತ್ತಾಳೆ. ಕಾಮನ ಬಿಲ್ಲು ನೋಡಿ ಬೆರಗಾಗುತ್ತಾಳೆ. ಹೊಲದಲ್ಲಿ ಕಾಣುವ ವಿಚಿತ್ರ ಪಕ್ಷಿಗಳನ್ನು ಗುರುತಿಸುತ್ತಾಳೆ. ನನ್ನಂತೆ ತನ್ನದಲ್ಲದ ವಿಚಾರಗಳಲ್ಲಿ ಅವಳೆಂದು ಜಾರಿಕೊಳ್ಳುವುದಿಲ್ಲ. ದೇಶದ ರಾಜಕೀಯ ಕಟ್ಟಿಕೊಂಡು ಅವಳಿಗೇನೂ ಆಗಬೇಕಿಲ್ಲ. ಓದು ಪರೀಕ್ಷೆ ಫಸ್ಟ್‌ಕ್ಲಾಸು, ಡಿಸ್ಟಿಂಕ್ಷನ್ನು, ಸಿ.ಇ.ಟಿ, ಜಾಬು, ಇನ್‌ಕ್ರಿಮೆಂಟು, ಬೋನಸ್ಸು, ಸುಟ್ಟ-ಸುಡುಗಾಡು ಯಾವುದೂ ಅವಳಿಗೆ ಗೊತ್ತಿಲ್ಲದ ವಿಚಾರವೆ. ಗಂಡ, ಮಗ, ಮಗಳು ಇದಿಷ್ಟೇ ಅಮ್ಮನ ಪ್ರಪಂಚ. ಅಪ್ಪ ಕೋಪಗೊಂಡು ಒಮ್ಮೆ ಗದರಿಸಿದರೂ ಮಾರನೇ ಕ್ಷಣವೇ ಮೈಸೂರು ಪಾಕು, ಮಲ್ಲಿಗೆ ಹೂವು ತಂದು ಸಮಾಧಾನಪಡಿಸುತ್ತಾನೆ. 'ಕೋಪದಲ್ಲಿದ್ದೆ ತಪ್ಪಾಯ್ತು ಮಹಾರಾಣಿ' ಅನ್ನುತ್ತಾನೆ. ಹಸುಗಳು ಅಮ್ಮನ ಧ್ವನಿ ಕೇಳಿದರೆ ಕಿವಿ ನಿಮಿರಿಸಿ ಸಂತಸ ಸೂಚಿಸುತ್ತವೆ. ಗದ್ದೆಯಲ್ಲಿ ಕೆಲಸ ಮಾಡುವ ಹೆಂಗಸರಿಗೆ ಅಮ್ಮ ಅಂದರೆ ವಿಶೇಷ ಪ್ರೀತಿ. ಅಮ್ಮ ಮಾಡುವ ತಪ್ಪುಗಳನ್ನು ಎಣಿಸುವ ಹದ್ದಿನ ಕಣ್ಣು ಅವಳ ಸುತ್ತ ಎಲ್ಲೂ ಇಲ್ಲ. ರಾವಣರು ಅವಳ ಜಗತ್ತಿನಲ್ಲಿಲ್ಲ. ತಾನೆಷ್ಟು ರಿಸ್ಕ್‌ಲೆಸ್, ಸೇಫ್ ಅಂಡ್ ಸೆಕ್ಯೂರ್ ಅಂತ ಅಮ್ಮನಿಗೆ ಗೊತ್ತೇ ಇಲ್ಲ. ಅಮ್ಮನ ಕೈಯಲ್ಲಿ ಕಾಸು ಇಲ್ಲದ್ದು, ಅವಳ ರೇಷ್ಮೆ ಸೀರೆ, ಕಾಸಿನ ಸರದ ಕನಸು ವರ್ಷಗಳ ನಂತರವು ಈಡೇರದಿದ್ದದ್ದು, ಎಲ್ಲದಕ್ಕೂ ಅಮ್ಮ ಅಪ್ಪನೆದುರು ಕೈಚಾಚಬೇಕಾದದ್ದು... ಎಲ್ಲ ಸರಿ. ಆದರೆ ಇದೆಲ್ಲದರೊಂದಿಗೆ ಅಮ್ಮ ಸುಖವಾಗಿದ್ದಾಳೆ. ಅಮ್ಮನ ಬದುಕು ನನಗಿಂತಲೂ ಹೆಚ್ಚು ಕಂಫರ್ಟ್ ಆಗಿದೆ.

ನನ್ನದೇನು?

ಜೀವಮಾನದ ಅರ್ಧ ಆಯುಷ್ಯ ಕಳೆದದ್ದು ಓದು, ಬರೀ ಓದಿನಲ್ಲೇ. 'ಈ ಬಾರಿ ಚೆನ್ನಾಗಿ ಮಾರ್ಕ್ಸ್ ತಗೊಂಡು ನೋಡು, ನೀ ಕೇಳಿದ್ದೆಲ್ಲ ಕೊಡಸ್ತೀನಿ' ಅನ್ನುತ್ತಿದ್ದಳು ಅಮ್ಮ. ಏನೇನೊ ಕೇಳಬೇಕು ಅಂತಂದುಕೊಂಡು ಓದಿದ್ದೊಂದೆ ನೆನಪು. ಆಮೇಲೆ ಅಮ್ಮ ಎಷ್ಟೆಷ್ಟು ತಂದು ಕೊಡುತ್ತಿದ್ದಳು ಅನ್ನೋದು ನೀರಲ್ಲಿ ಚಂದ್ರನ್ನ ತೋರಿಸಿದ ಕತೆಗೆ ಸಂಬಂಧಿಸಿದ್ದು. ಕಾಲೇಜಿನಲ್ಲು ಅಷ್ಟೆ ಯಾರಿಗಿಂತ ಯಾರು ಇಂಟಲಿಜೆಂಟು ಅಂತ ತೋರಿಸುವ ಹುರುಪು. ಹೊಟ್ಟೆಗೆ ಊಟ ಇಲ್ಲದೆ, ಕಣ್ಣಿಗೆ ನಿದ್ದೆ ಕಾಣದೆ ಅದೆಷ್ಟೂ ತಿಂಗಳು ಸವೆಯುತ್ತಿದ್ದವು!

ಈಗಲೂ ಅದೆ ನಾಲ್ಕು ಗೋಡೆಯ ನಡುವೆ ಕುಳಿತು ಕಂಪ್ಯೂಟರ್ ಸ್ಕ್ರೀನ್ ಮೇಲೆ ದೃಷ್ಟಿ ನೆಟ್ಟು, ಕೀ ಬೋರ್ಡ್ ಮೇಲೆ ಬೆರಳಾಡಿಸುವ ಹೊತ್ತು ಹೊರಗೆ ನಡೆಯುವ ವಿಸ್ಮಯ ಗೊತ್ತೆ ಆಗುವುದಿಲ್ಲ. ಬೇಸಿಗೆಯ ನಂತರ ಬೀಳುವ ಮೊದಲ ಮಳೆಗೆ ಭೂಮಿ ಬಿಡುವ ಮಣ್ಣಿನ ಘಮ್ ವಾಸನೆ, ಮಳೆ ನಿಂತ ಮೇಲೆ ಗಿಡದ ಎಲೆಯಿಂದ ಉದುರುವ ತುಂತುರು ಹನಿ. ಅರಳಿ ನಿಂತ ಹೂವಿಗೆ ಚೇಡಿಸುತ್ತಿರುವ ದುಂಬಿ, ಎಳೆ ಬಿಸಿಲಲ್ಲಿ ಮೂಡುವ ಕಾಮನ ಬಿಲ್ಲು... ಯಾವುದನ್ನು ನೋಡಲೂ, ಅನುಭವಿಸಲೂ ಪುರುಸೊತ್ತೇ ಇಲ್ಲ.

ಎಲ್ಲರಿಗಿಂತ ನಾನೇ ಇಂಟಲಿಜೆಂಟು ಅಂತ ತೋರಿಸುವ ಹುಂಬುತನ ಆಗಿದ್ದರೆ, ಎಲ್ಲರಿಗಿಂತ ನಾನೆ ಹಾರ್ಡ್ ವರ್ಕರ್ ಅಂತ ಸಾಬೀತು ಪಡಿಸಬೇಕಾದ ಅನಿವಾರ್ಯತೆ ಇಲ್ಲಿದೆ. ಮೂರು ವರ್ಷಗಳಿಂದ ಜ್ವರ ಬಂದಾಗಲೂ ರಜೆ ಹಾಕದೆ ರಾತ್ರಿ ಹಗಲು ಟೀ ಕಾಫಿ ಅಂತಲೂ ಹೇಳದೆ ದುಡಿದಿದ್ದಕ್ಕೆ ಎರಡು ಇನ್‌ಕ್ರಿಮೆಂಟ್ಸ್ ದಕ್ಕಿವೆ. ತಿಂಗಳು ತಿಂಗಳು ಕೈಸೇರೋ ಸಾವಿರದ ಗಂಟುಗಳು ತಿಂಗಳ ಕೊನೆಯಲ್ಲಿ ಎಲ್ಲಿ ಮಾಯವಾಗಿರುತ್ತವೋ! ಮನೆ ಬಾಡಿಗೆ, ಕರೆನ್ಸಿ, ಪೆಟ್ರೋಲ್, ಮೆಸ್ ಬಿಲ್, ಲೈಟ್ ಬಿಲ್... ಅಂತೆಲ್ಲ ಮುಗಿದು ತಿಂಗಳಿಗೊಂದು ಬಾರಿ ಶಾಪಿಂಗ್ ಮಾಲ್‌ಗೆ ಭೇಟಿ ಕೊಟ್ಟರೆ, ತಿಂಗಳ ಪೂರ್ತಿ ಕಂಜ್ಯೂಸ್ ಆಗಿ ಕಾಲ ತಳ್ಳಬೇಕು. ತಿಂಗಳ ಸಂಬಳದಲ್ಲಿ ಮೂವತ್ತು ಪರ್ಸೆಂಟು ಆದ್ರೂ ಬ್ಯಾಂಕ್ ಅಕೌಂಟ್ ಸೇರದಿದ್ದರೆ ಸಮಾಧಾನವೇ ಆಗುವುದಿಲ್ಲ. ಈ ಬದುಕಿಗಾಗಿ ಇಷ್ಟೆಲ್ಲ ತ್ಯಾಗ ಮಾಡಿ ಬಿಟ್ಟೆ ಅಲ್ಲವಾ ಅಂತ ಎಷ್ಟೋ ಬಾರಿ ಜಿಗುಪ್ಸೆ ಹುಟ್ಟಿ ಬಿಡುತ್ತದೆ.

***

'ಯಾಕ್ ಮಗಾ ಸುಮ್ನಾದಿ? ಏನಾಯ್ತು? ನಾನು ಹೇಳಿದ್ದು ಸುಳ್ಳಲ್ಲ ಅಲ್ಲವಾ?" ಅಮ್ಮನ ಮಾತಿಗೆ ಎಚ್ಚರಗೊಂಡೆ.

ಆದರೆ ಇದನ್ನೆಲ್ಲ ಅಮ್ಮನಿಗೆ ಹೇಳುವುದು ಬೇಡವಾಯಿತು ಮಗಳು ಕಾಸು ಸಂಪಾದಿಸುತ್ತಾಳೆ. ದೊಡ್ಡ ಪಟ್ಟಣದಲ್ಲಿ ಹಾಯಾಗಿದ್ದಾಳೆ. ಹಣ ಅವಳಿಗೆ ಎಲ್ಲ ರೀತಿಯ ಸುಖವನ್ನು ನೀಡಿದೆ ಅಂದುಕೊಂಡಿದ್ದಾಳೆ ಅಮ್ಮ. ಆದರೆ ಬದುಕಿನ ಕೆಲವು ಕೊರತೆಗಳನ್ನು ಹಣ ತುಂಬಲಾರದು ಎಂಬ ಸತ್ಯವನ್ನು ಹಣವೇ ತಿಳಿಸಿಕೊಟ್ಟಿದೆ ನನಗೆ. ಅಮ್ಮನಿಗೆ ಹರ್ಟ್ ಮಾಡಲು ಮನಸ್ಸಾಗದೆ ಎಲ್ಲವನ್ನೂ ಎದೆಯ ಫೋಲ್ಡರ್‌ನಲ್ಲಿಟ್ಟುಕೊಂಡು ಲಾಕ್ ಮಾಡಿಬಿಟ್ಟೆ.

***

"ನೋಡು ಈ ಡಬ್ಬದಲ್ಲಿ ಮಿಡಿಗಾಯಿ ಉಪ್ಪಿನಕಾಯಿ, ಇದರಲ್ಲಿ ಚಟ್ನಿಪುಡಿ ಮತ್ತೆ ಇದರಲ್ಲಿ ತುಪ್ಪ ಇದೆ. ಚೆನ್ನಾಗಿ ಶೇಖರಿಸಿಟ್ಟುಕೊಂಡು ತಿನ್ನು ಆಯ್ತಾ?"

"ಅಮ್ಮ, ಇನ್ನೊಂದೆರಡು ದಿನ ಇಲ್ಲೇ ಇರಬೇಕು. ಅಂತಾಸೆ".

"ಅಯ್ಯೊ ಬೇಡ, ಈ ಅಪ್ಪ–ಅಮ್ಮ ಇಲ್ಲೇ ಇರ್ತವೆ. ಬೇಕಾದಾಗ ಬಂದು ನೋಡಿಕೊಂಡು ಹೋಗಬಹುದು. ಆದ್ರೆ ಸಿಕ್ಕ ಕೆಲಸ ಕೈತಪ್ಪಿ ಹೋದ್ರೆ ಏನ್ಮಾಡ್ತಿ ಹೇಳು? ಅಂದಂಗೆ ಗಂಡಿನ ಕಡೆಯವರು ಕೇಳಿಕೊಂಡು ಬರ್ತಿದ್ದಾರೆ. ಅಂತಹ ಸಮಯದಲ್ಲೆಲ್ಲ ರಜೆ ಬೇಕಾಗುತ್ತೆ. ಈಗ ಹೋಗಿ ಬಿಡು" ಅಮ್ಮ ಮುಖ ನೋಡದೆ ಮಾತನಾಡಿದಳು. ಟ್ರೇನ್ ಹತ್ತಿಸಲು ಅಪ್ಪನೂ ಬಂದಿದ್ದ. ಅಪ್ಪ ಬಾಯಿ ಬಿಟ್ಟು ಹೇಳದಿದ್ದರೂ ಅವನ ನಿರೀಕ್ಷೆಗಳು ಅಮ್ಮನಿಗಿಂತ ಹೆಚ್ಚು ಎತ್ತರದಲ್ಲಿ ಬೆಳೆದು ನಿಂತಿವೆ. ಅಂತ ನನಗೆ ಗೊತ್ತು.

"ಅಪ್ಪ ಮುಂದಿನ ತಿಂಗಳು ನಿಮ್ಮ ಅಕೌಂಟಿಗೆ ಹಣ ಹಾಕಿರ್ತೀನಿ. ಅಮ್ಮನಿಗೆ ಕಾಸಿನ ಸರ, ರೇಷ್ಮೆ ಸೀರೆ ಕೊಡಿಸಿ, ಮಿಕ್ಕಿದ್ದನ್ನ ನಿಮ್ಮ ಖರ್ಚಿಗೆ ಇಟ್ಟುಕೊಳ್ಳಿ. ಆಸ್ಪತ್ರೆ ಅದೂ ಇದು ಅಂತ ಹಣ ಬೇಕಾದ್ರೆ ನನಗೆ ಹೇಳಿ" ಅನ್ನುವಷ್ಟರಲ್ಲಿ ಟ್ರೇನು ಸಿಳ್ಳೆ ಹೊಡೆಯಿತು. ಬೇಡ ಅಂದುಕೊಂಡರೂ ಕಣ್ಣೀರು ಅಮ್ಮನಿಗೆ ಕಾಣುವಷ್ಟು ಫೋರ್ಸ್‌ನಲ್ಲಿ ಇಳಿದು ಬಿಟ್ಟವು. ಅಮ್ಮನ ಕಣ್ಣೀರು ಮೇಲೆ ಇದ್ದರೂ ಅವಳು ತಡೆಹಿಡಿದಳು. ತಾನು ಅತ್ತರೆ ನಾನು ಟ್ರೇನು ಬಿಟ್ಟು ಇಳಿದು ಬಿಡುತ್ತೇನೆ. ಕೆಲಸ ಹೋಗುತ್ತದೆ. ತಿಜೋರಿ ತುಂಬ ಒಡವೆ, ರೇಷ್ಮೆ ಸೀರೆ, ಕಾರು, ಬಂಗಲೇ... ಆ ಕನಸು ಹಾಗೇ ಉಳಿಯುತ್ತದಲ್ಲ ಅದಕ್ಕೆ ದುಃಖವನ್ನೆಲ್ಲ ಅದುಮಿಟ್ಟುಕೊಂಡು ಕೈ ಬೀಸಿದಳು ಅಮ್ಮ. ಆ ಊರು, ಗಿಡ, ಮರ, ಪಕ್ಷಿ, ಅಮ್ಮ, ಅಪ್ಪ, ಎಲ್ಲವೂ ಒಂದೊಂದಾಗಿ ದೃಷ್ಟಿಪಟಲದಿಂದ ದೂರಾದವು. ಕಣ್ಣೆದುರಿಗೆ ಬಂದು ನಿಂತದ್ದು. ಕಂಪೆನಿ. ಕಂಪ್ಯೂಟರು, ಬಾಸು, ಮೆಸ್ ವುಮನ್, ಟೀ ಬಾಯ್, ವಾಚ್‌ಮನ್, ಟೀನಾ, ಜೂಲಿ, ತಮಿಳು ಮಿಶ್ರಿತ ಇಂಗ್ಲಿಷ್ ಮಾತು... ನೀರಸ ನಗು, ನೈಜತೆ ಇಲ್ಲದ ಬದುಕು... ಎಲ್ಲ ಬೇಡವಾದ ಇಮೇಜುಗಳೇ.

# 4. ಓದು ಪಠ್ಯ – ಕಿನ್ನರಿ ಜೋಗಿಯರು

**ಡಾ.ಹಿ.ಚಿ.ಬೋರಲಿಂಗಯ್ಯ**

ಹೀಗೊಂದು ಹಳ್ಳಿ. ಆ ಹಳ್ಳಿಯ ಹೊರ ಪರಿಸರದಲ್ಲಿ ಚಾಮರದಂತೆ ಚದುರಿ ನಿಂತ ಮರವೊಂದರ ತಂಪಿನಲ್ಲಿ ಒಂದೆರಡು ಡೇರೆಗಳು. ಡೇರೆಗಳ ಹೊರ ಮೈ ಒಳ ಮೈಗಳಲ್ಲಿ ಅಲ್ಲಲ್ಲಿ ತೂಗು ಹಾಕಿದ ಅಥವಾ ಹರಡಿದ ಬಣ್ಣ ಬಣ್ಣದ ಕೌದಿ ಮತ್ತಿತರೆ ದಿರಿಸುಗಳು, ಗೂಟಕ್ಕೆ ಕಟ್ಟು ಹಾಕಿದ ಕುದುರೆ ಮತ್ತು ಹಸು. ಇವಿಷ್ಟು ದೃಶ್ಯಗಳನ್ನು ಕಂಡರೆ ಕಿನ್ನರಿ ಜೋಗಿಗಳು ಇದ್ದಾರೆ ಎಂದೇ ಅರ್ಥ.

ಕರ್ನಾಟಕದ ವೃತ್ತಿಗಾಯಕ ಪರಂಪರೆಯಲ್ಲಿ ಅತ್ಯಂತ ಮುಖ್ಯವಾದ ಈ ಗಾಯಕ ಜನವರ್ಗ ಹಾಡಿನಲ್ಲಿಯೇ ಬಾಳು ಸವೆಸಿದ ವೈಶಿಷ್ಟ್ಯತೆಯುಳ್ಳದ್ದು. ತಲೆಗೆ ಬಣ್ಣದ ಮುಂಡಾಸು, ಮುಂಡಾಸಿಗೊಂದು ತ್ರಿಶೂಲ, ಮುಂಡಾಸಿಗೆ ಅಂಟಿಕೊಂಡಂತೆ ಗಾಜಿನ ಕಡ್ಡಿಯ ಗುಳಾಪು, ತಲೆ ತುಂಬ ಬಣ್ಣಬಣ್ಣದ ತುರಾಯಿ, ಕರಿಯ ನಿಲುವಂಗಿ, ಕಚ್ಚೆಪಂಚೆ, ಕುತ್ತಿಗೆ ತುಂಬ ಉದ್ದನೆಯ ಮುತ್ತಿನ ಸರಗಳು, ಕರಿಯ ಕೋಟಿನ ಮೇಲೆ ಕಸೂತಿಯ ಚಿತ್ತಾರದ ಅಡ್ಡಶಲ್ಯ, ಕಿವಿಗೆ ಕರ್ಣ ಕುಂಡಲ ಮತ್ತು ಕಾಪಾಲಿ, ಕೈಯಲ್ಲಿ ಕಿನ್ನರಿ, ಕಾಲಿಗೆ ಗೆಜ್ಜೆ, ಹೆಗಲಿಗೆ ಜೋಳಿಗೆ, ತೀಡಿದ ಹುಬ್ಬು, ಪೊದೆ ಮೀಸೆಯ ಅಂಚಲ್ಲಿ ನಸು ನಗುವ ಮುಖ, ಇಂಥ ರಂಗಿನ ವೇಷದ ಕಿನ್ನರಿ ಜೋಗಿಗಳು ಊರ ಬೀದಿಗಳಲ್ಲಿ ಹೊರಟರೆಂದರೆ, ಅವರ ಹಿಂದೆ ಮಕ್ಕಳ ದಂಡೋ ದಂಡು. ಮನೆ ಮನೆಯ ಮುಂದೆ ನಿಂತು ಸುಮಧುರ ಕಿನ್ನರಿಯನ್ನು ಮೀಟಿ ನುಡಿಸುತ್ತ, ಕಿರುಗೆಜ್ಜೆಯ ಲಯದೊಂದಿಗೆ ಹಾಡಲು ತೊಡಗಿದರೆಂದರೆ, ಮೊರದ ತುಂಬ ಧಾನ್ಯ ತುಂಬಿ ನೀಡಲು ಬಂದ ಗರತಿ ಹಾಗೇ ಪರವಶಳಾಗಿ ನಿಲ್ಲಬೇಕು! ಅಂಥ ಕಂಠ ಮಾಧುರ್ಯ ಅವರದು.

ಕಿನ್ನರಿ ಜೋಗಿಗಳು ಹಾಡುತ್ತಾರೆ. ಆದರೆ, ಈ ಹಾಡುಗಾರರನ್ನೇ ಕುರಿತು ಜನಸಾಮಾನ್ಯರು ಕಟ್ಟಿದ ಹಾಡು ನೋಡಿ:

ಚೆಲುವಯ್ಯ ಚೆಲುವೋ ತಾನಿ ತಂದೆನ್ನ
ಚಿನ್ಮಾಯ ರೂಪೇ ತಂದೆನ್ನ ತಾನಾ
ಬೆಟ್ಟ ಮೇಗಳ ಬೆಳ್ಳಿ ಬಿದಿರು
ಬೇಲಿಮ್ಯಾಗಳ ಸೋರೆ ಬುರುಡೆ
ಲೋಲು ಕಿನ್ನುಡಿ ನುಡಿಸೋನ್ಯಾರಯ್ಯ॥ ಚೆಲುವಯ್ಯ ॥

ಕೇರಿ ಕೇರಿ ತಿರುಗುತೀಯ
ಭಾರಿ ಕಿನ್ನುಡಿ ನುಡಿಸುತೀಯ
ನಮ್ಮಕೇರಿಗ್ಯಾಕೆ ಬರುವಲ್ಲೋ ॥ ಚೆಲುವಯ್ಯ ॥

ಈ ಜೋಗಿಯ ಆಕರ್ಷಣೆಗೆ ಮತ್ತೊಂದು ಉದಾಹರಣೆಯಾಗಿ 'ಎಲ್ಲೋ ಜೋಗಪ್ಪ ನಿನ್ನರಮನೆ' ಎಂಬ ಹಾಡು ಪ್ರಚಲಿತವಾಗಿದೆ. ಜೋಗಿಯ ವೇಷಭೂಷಣ ಹಾಡಿಗೆ ಮರುಳಾದ ಗರತಿಯೊಬ್ಬಳು, ಆಡುವ ಕಂದನನ್ನು ಬಿಟ್ಟು ಕೂಡಿದ ಗಂಡನನ್ನು ಬಿಟ್ಟು ಹೊರಟಳಂತೆ! ಬೇಡುವುದು ಭಿಕ್ಷೆಯಾದರೂ ಜೋಗಿಯ ಹಾಡು ಮತ್ತು ಅವನ ಗಾಂಭೀರ್ಯ ತುಂಬಿದ ನಡವಳಿಕೆ ಜನರಲ್ಲಿ ಗೌರವ ಮತ್ತು ಅಭಿಮಾನವನ್ನು ತುಂಬಿವೆ.

**ಪ್ರಾಚೀನತೆ:** ಮಹಾಭಾರತದ ಅರ್ಜುನನನ್ನೇ ತಮ್ಮ ಗುರು ಮತ್ತು ಸಾಂಸ್ಕೃತಿಕ ನಾಯಕ ಎಂದು ಪರಿಗಣಿಸಿದ ಕಿನ್ನರಿ ಜೋಗಿಗಳು ತಮ್ಮ ಇತಿಹಾಸವನ್ನು ಅಷ್ಟೇ ಹಿಂದಕ್ಕೆ ಕೊಂಡೊಯ್ಯುತ್ತಾರೆ. ಅರ್ಜುನ ಹಲವು ಸಂದರ್ಭಗಳಲ್ಲಿ ಸನ್ಯಾಸಿಯಾಗುವ ಕ್ರಿಯೆಯನ್ನು ಅವನು ಕಿನ್ನರಿ ಜೋಗಿ ವೇಷ ಹಾಕಿದ ಎಂದೇ ಕಲಾವಿದರು ಪ್ರತಿಪಾದಿಸುತ್ತಾರೆ. ಇಡೀ ಮಹಾಭಾರತ ಕಾವ್ಯವನ್ನು ತಮ್ಮದೇ ಆದ ಧಾಟಿಯಲ್ಲಿ ಹಾಡುವ ಕಿನ್ನರಿ ಜೋಗಿಗಳು ಅಲ್ಲಿ ಅರ್ಜುನನನ್ನೇ ಪ್ರಧಾನ ಪಾತ್ರಧಾರಿಯನ್ನಾಗಿ ಮತ್ತು ಬಹುಮುಖ್ಯ ವ್ಯಕ್ತಿಯನ್ನಾಗಿ ಚಿತ್ರಿಸುತ್ತಾರೆ. ಅದರಲ್ಲೂ ಅವನು ವೇಷ ಮರೆಸಿ ಹೋಗುವ ಮತ್ತು ಆ ವೇಷದಲ್ಲಿಯೇ ತನ್ನ ತಾಯಿ ಕುಂತಿಯನ್ನು ಭೇಟಿ ಮಾಡುವ ಸನ್ನಿವೇಶ ಅವರಿಗೆ ಅಚ್ಚುಮೆಚ್ಚು, ಪರಶಿವನೊಡನೆ ಯುದ್ಧ ಮಾಡಿ ಅವನನ್ನು ಮೆಚ್ಚಿಸಿ ಪಾಶುಪತಾಸ್ತ್ರವನ್ನು ಪಡೆಯುವುದಲ್ಲದೆ ಶಿವನನ್ನೇ ತನ್ನ ಗುರುವನ್ನಾಗಿ, ದೈವವನ್ನಾಗಿ

ಸ್ವೀಕರಿಸಿದ ಅರ್ಜುನನೇ ತಮ್ಮ ಮೂಲ ಪುರುಷ ಎಂಬುದು ಅವರ ನಂಬಿಕೆ. ಅಲ್ಲದೆ ಅರ್ಜುನನೇ ತಮಗೆ ಕಿನ್ನರಿಕೊಟ್ಟವನು ಎಂದೂ ಅವರು ಕಥೆ ಹೇಳುತ್ತಾರೆ. ಮಹಾಭಾರತ ಪುರಾಣದ ಮೂಲಕವೇ ತಮ್ಮ ಇತಿಹಾಸವನ್ನು ನಿರೂಪಿಸಲೆತ್ನಿಸುವ ಕಿನ್ನರಿ ಜೋಗಿಗಳಲ್ಲಿ ಇಂಥ ಅನೇಕ ಕಥೆಗಳು ಪ್ರಚಲಿತದಲ್ಲಿದ್ದು ಅವುಗಳ ಸಂಕ್ಷಿಪ್ತ ರೂಪವನ್ನು ಇಲ್ಲಿ ಕೊಡಬಹುದು. ಡಾ.ಜೀ.ಶಂ.ಪರಮಶಿವಯ್ಯ ಅವರು ಸಂಗ್ರಹಿಸಿರುವ ಕಥೆಯಲ್ಲದೆ ಕನ್ನಡ ವಿಶ್ವವಿದ್ಯಾಲಯದ 'ಕರ್ನಾಟಕ ಜನಪದ ಕಲೆಗಳ ಕೋಶ'ದಲ್ಲಿ ನೀಡಲಾಗಿರುವ ಕಥೆಗಳನ್ನು ಇಲ್ಲಿ ಕೊಡಲಾಗಿದೆ.

**ಕಥೆ–೧:** 'ಅರ್ಜುನ ಕಾರಣಾಂತರಗಳಿಂದ ಒಮ್ಮೆ ಭೂಪ್ರದಕ್ಷಿಣೆ ಮಾಡಿ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಬೇಕಾಯಿತು. ತನ್ನ ತೀರ್ಥಯಾತ್ರೆಯನ್ನು ಮುಗಿಸಿ ಅವನು ಹಸ್ತಿನಾವತಿಗೆ ಮರಳುತ್ತಿದ್ದ, ಅವನ ಜೊತೆಯಲ್ಲಿ ಒಬ್ಬ ಬಾಲಕನೂ ಇದ್ದ. ಅನೇಕ ವರ್ಷಗಳ ಮೇಲೆ ತನ್ನ ತಾಯಿಯನ್ನು ನೋಡುತ್ತಿರುವ ಅರ್ಜುನನಿಗೆ ಒಂದು ವಿನೋದವನ್ನು ಮಾಡುವ ಮನಸ್ಸಾಯಿತು. ನಾನಾ ರೀತಿಯ ಬಣ್ಣ ಬಣ್ಣದ ವಸ್ತುಗಳನ್ನು ಧರಿಸಿದ, ತಲೆಗೆ ಮುಂಡಾಸು ಸುತ್ತಿದ, ಕೈಯಲ್ಲಿ ಒಂದು ತಂತೀ ವಾದ್ಯವನ್ನು ಹಿಡಿದ. ತಾಯಿ ಕುಂತಿದೇವಿಯ ಅರಮನೆಯ ಮುಂದೆ ಬಂದು ನಿಂತು ಸೊಗಸಾಗಿ ಹಾಡಿ ಕುಣಿದ. ಅವನ ಹಾಡು ಕೇಳಿ ಕುಂತಿದೇವಿಗೆ ಪರಮ ಸಂತೋಷವಾಯಿತು. ಅರ್ಜುನನನ್ನೇ ಹೋಲುವಂತಿದ್ದ ಅವನನ್ನು ನೋಡಿ ಕಣ್ಣಲ್ಲಿ ನೀರು ತಂದುಕೊಂಡಳು. ಕೊನೆಗೆ ಜೋಗಿಯ ವೇಷದಲ್ಲಿದ್ದ ಅರ್ಜುನ ತಾನಾರು ಎಂಬುದನ್ನು ಹೇಳಿ ತಾಯಿಯನ್ನು ಸಂತೋಷಪಡಿಸಿದ. ಇನ್ನು ತನ್ನ ವೇಷ, ಬಿರುದು, ಬಾವಲಿ, ವಾದ್ಯಗಳನ್ನು ಏನು ಮಾಡಬೇಕು? ತನ್ನ ಸೇವೆ ಮಾಡಿಕೊಂಡು ಜೊತೆಯಲ್ಲೇ ಇದ್ದ ಬಾಲಕನಿಗೆ ಅವನ್ನು ಕೊಟ್ಟನು. ಪಾಂಡವರ ಕಥೆಗಳನ್ನು ಹಾಡಿಕೊಂಡು 'ಅರ್ಜುನ ಜೋಗಿಗಳು ಎಂಬ ಹೆಸರಿನಲ್ಲಿ ಜೀವನ ಮಾಡಿಕೊಂಡು ಹೋಗಿ' ಎಂದು ಹರಸಿದ.

**ಕಥೆ–೨:** "ಅರ್ಜುನ ದೇಶಾಂತರ ಹೋಗಿದ್ದಾಗ ಚಿತ್ರಾಂಗದ ಮತ್ತು ಉಲೂಪಿಯರನ್ನು ಮದುವೆಯಾದ. ಕೃಷ್ಣನ ತಂಗಿಯಾದ ಸುಭದ್ರೆಯನ್ನು ಮದುವೆಯಾದ. ಇವರನ್ನು ಮದುವೆಯಾದ ಅವನು ಆಗಾಗ ಅವರ ಮನೆಗೂ ಹೋಗಿ ಬರುತ್ತಿದ್ದ. ಇದರಿಂದ ದ್ರೌಪದಿಗೆ ಸಿಟ್ಟು ಬಂತು. ಅರ್ಜುನನ ಜೊತೆ ಅವಳು ಜಗಳವಾಡಿದಳು. ಇದರಿಂದ ರೇಗಿದ ಅರ್ಜುನ ಅವರೆಲ್ಲರನ್ನು ಕರೆತಂದ; ದ್ರೌಪದಿಗೂ ಇನ್ನೂ ಸಿಟ್ಟು ಬಂತು. ಅರ್ಜುನನನ್ನು ಜೂಜಿಗೆ ಕರೆದಳು. ಪಗಡೆ ಆಟದಲ್ಲಿ ಸೋತವರು ಜೋಗಿ ವೇಷಧರಿಸಿ ದೇಶಾಂತರ ಹೋಗಬೇಕು ಎಂದು ತೀರ್ಮಾನವಾಯಿತು. ಕೃಷ್ಣನ ಧ್ಯಾನ ಮಾಡಿ ದ್ರೌಪದಿಯೇ ಗೆದ್ದಳು. ಅರ್ಜುನ ಜೋಗಿಯ ವೇಷ ಧರಿಸಿ ದೇಶಾಂತರ ಹೊರಟ. ಹೀಗೆ ದೇಶಾಂತರ ಹೊರಟ ಅರ್ಜುನ ಇಂದ್ರಕೀಲಕ್ಕೆ ಬಂದನು. ಅಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಿದನು. ಒಳ್ಳೊಳ್ಳೆಯ ಅಸ್ತ್ರಗಳನ್ನು ಪಡೆದನು. ಮುಂದೆ ಬಿಲ್ಲನ್ನು ಹೂಡಿ, ಬಾಣದ ತುದಿಗೆ ಒಂದು ಓಲೆಯನ್ನು ಸಿಕ್ಕಿಸಿ ದೇವಲೋಕಕ್ಕೆ ಕಳುಹಿಸಿದನು. ಅರ್ಜುನ ಇಂದ್ರನ ಮಗನಲ್ಲವೇ? ಆದ್ದರಿಂದ ಇಂದ್ರ ಮಗನ ಕೋರಿಕೆಯಂತೆ 'ಹಿರಣ್ಯ ರಾಕಾಸಿ' ಎಂಬ ರಾಕ್ಷಸಿಯನ್ನು ಕೊಂದನು. ಅವಳ ರಕ್ತದಿಂದ ಕೊಡಗಾವಿ ಮಾಡಿದ. ಅವಳ ತಲೆಗೂದಲಿಂದ ದಂಡೆ ದಾರವನ್ನು ಮಾಡಿದ. ಅವಳ ಇನ್ನೆರಡು ಕೂದಲಲ್ಲಿ ಕಾಮಾಕ್ಷಿ ಮಾಡಿದ. ತೊಡೆಯ ಮೂಳೆಯಲ್ಲಿ ಗಳುವನ್ನು ಮಾಡಿದ. ಅವಳ ಎರಡು ಎದೆಗಳಲ್ಲಿ ಎರಡು ಬುರುಡೆಗಳನ್ನು ಮಾಡಿದ. ಅವಳ ಮೂಗು ಶೂಲದ ಕಡ್ಡಿಯಾಯಿತು. ಹದಿನಾರು ಹಲ್ಲು ಹದಿನಾರು ಸಾರಿಗಳಾದವು. ಕೈ ಬೆರಳುಗಳು ಬಿರಡೆಗಳಾದವು. ಬೆನ್ನು ನರಗಳು ತಂತಿಯಾದವು. ಇಂಥ ವಾದ್ಯವನ್ನು ದೇವೇಂದ್ರ ಅರ್ಜುನನಿಗೆ ಅರ್ಪಿಸಿದ. ಕಾಶೀ ಭೈರವನಿಂದ ಅರ್ಜುನ ದೀಕ್ಷೆಯನ್ನು ಪಡೆದು ಜೋಗಿಯಾಗಿ ಹೊರಟ. ಅವನ ಕಿನ್ನರಿಯ ನಾದಕ್ಕೆ ಕೋಗಿಲೆಯೂ ತೂಕಡಿಸಿ ಕೆಳಗೆ ಬಿದ್ದಿತು!"

**ಕಥೆ–೩:** 'ಹದಿನಾಲ್ಕು ವರ್ಷಗಳ ವನವಾಸದಲ್ಲಿದ್ದ ಪಾಂಡವರು ತಮ್ಮ ವನವಾಸದ ಸಂದರ್ಭದಲ್ಲಿ ಜೋಗಿಗಳನ್ನು ಕಾಡಿನಲ್ಲಿ ಭೇಟಿ ಮಾಡುತ್ತಾರೆ. ಆಗ ಅವರ ಬಳಿ ಕಿನ್ನರಿ ಇರುವುದಿಲ್ಲ. ಅರ್ಜುನನು ಅದಾಗ ತಾನೆ ಕೊಂದಿದ್ದ ರಾಕ್ಷಸನ ಬುರುಡೆ ಮತ್ತು ನರಗಳನ್ನು ಕಿನ್ನರಿ ಮಾಡಿ ಆ ಜೋಗಿಗಳಿಗೆ ಕಾಣಿಕೆಯಾಗಿ ಕೊಟ್ಟನು. ಅಂದಿನಿಂದ ಜೋಗಿಗಳು ಪಾಂಡವರ ಕಥೆ ಹಾಡುವುದನ್ನು ಆರಂಭಿಸಿದರು.'

**ಕಥೆ–೪:** 'ಹನ್ನೆರಡು ವರ್ಷ ಭೂಪ್ರದಕ್ಷಿಣೆ ಹೋಗಿದ್ದ ಅರ್ಜುನನಿಗೆ ಹನ್ನೊಂದನೇ ವರ್ಷದಲ್ಲಿ ತನ್ನ ತಾಯಿಯನ್ನು ನೋಡುವ ಬಯಕೆಯಾಗುತ್ತದೆ. ಆದರೆ ಯಾರಾದರೂ ಗುರುತು ಹಚ್ಚಿದರೆ ಮತ್ತೆ ಹನ್ನೆರಡು ವರ್ಷ ಪ್ರದಕ್ಷಿಣೆ ಹೋಗಬೇಕಾಗುತ್ತದೆ. ಅದಕ್ಕಾಗಿ ಋಷಿಗಳಲ್ಲಿ ಹೋಗಿ ಕೇಳುತ್ತಾನೆ. ಅವರ ಆಣತಿಯಂತೆ ರಕ್ಕಸಿಯೊಬ್ಬಳನ್ನು ಕೊಂದು ಅವಳ ದೇಹದ ವಿವಿಧ ಭಾಗಗಳಿಂದ ಕಿನ್ನರಿ ತಯಾರಿಸಿದ. ಕಿನ್ನರಿ ಜೋಗಿ ವೇಷಧರಿಸಿ ತಾಯಿಯನ್ನು ಭೇಟಿ ಮಾಡಿದ. ಕೆಲಸ ಮುಗಿದ ಮೇಲೆ ಅವನ ಶಿಷ್ಯನೊಬ್ಬನಿಗೆ ಜೋಗಿ ದೀಕ್ಷೆ ಕೊಟ್ಟು ಕಿನ್ನರಿಯನ್ನು ಅವನ ಕೈಗೆ ನೀಡಿ ಪಾಂಡವರ ಕಥೆಯನ್ನು ಹಾಡಿಕೊಂಡು ಇರುವಂತೆ ಸೂಚಿಸಿದ.'

**ಕಥೆ–೫:** 'ಒಮ್ಮೆ ದ್ರೌಪದಿಗೆ ತುಂಬಾ ಸಂತೋಷವಾಗಿ ಅರ್ಜುನನ ಜೊತೆ ಪಗಡೆಯಾಟಕ್ಕೆ ಕುಳಿತಳು. ಪಂಥದ ಮೇಲೆ ಆಟ ಆಡಿದರೆ ಸೊಗಸಿರುತ್ತದೆಂದು ಭಾವಿಸಿ ಇಬ್ಬರೂ ಪಂಥ ಕಟ್ಟುತ್ತಾರೆ. ದ್ರೌಪದಿ ಸೋತರೆ ಮಣಿಪುರದ ರಾಣಿಯರ ದಾಸಿಯಾಗುವುದಾಗಿಯೂ ಅರ್ಜುನ ಸೋತರೆ ೧೨ ವರ್ಷ ಜೋಗಿಯಾಗಿ ದೇಶಾಂತರ ಹೋಗಬೇಕಾಗುತ್ತದೆಂದೂ ಪಂಥ ಕಟ್ಟುತ್ತಾರೆ. ಅರ್ಜುನ ಸೋಲುತ್ತಾನೆ. ಸೋತ ಅರ್ಜುನನು ಏಳುತಲೆಗುಡ್ಡದ ಕಲ್ಲಿನ ಮಠಕ್ಕೆ ಬಂದು ಅಲ್ಲಿ ಏಳು ಮಂದಿ ಸಿದ್ಧರ ಸೇವೆಗೆ ನಿಂತನು. ಅವರಲ್ಲಿ ತಾನು ಜೋಗಿಯಾಗುವುದಾಗಿ ಕೇಳಿಕೊಂಡನು. ಸಿದ್ಧರು ಮಾಳಾವತಿ ದೇಶದ ರಕ್ಕಸಿಯನ್ನು ಕೊಂದು ಅವಳ ದೇಹದಿಂದ ಕಿನ್ನರಿ ಮಾಡಿ ಅರ್ಜುನನಿಗೆ ಜೋಗಿ ದೀಕ್ಷೆಯನ್ನು ನೀಡಿದರು. ಆ ಅರ್ಜುನ ಸಂತತಿಯೇ ಈಗಿನ ಕಿನ್ನರಿ ಜೋಗಿಗಳು.'

ಇವಿಷ್ಟು ಕಥೆಗಳ ಹಿನ್ನೆಲೆಯಲ್ಲಿ ಕಿನ್ನರಿ ಜೋಗಿ ಸಂಪ್ರದಾಯದ ಮೂಲವನ್ನು ಹುಡುಕಬೇಕಾಗುತ್ತದೆ. ಇವರ ಪುರಾಣಗಳೆಲ್ಲವೂ ಅರ್ಜುನನ ಸುತ್ತಲೇ ಸುತ್ತಿದರೂ ಜೋಗಿಗಳು ವಾಸ್ತವವಾಗಿ ಭೈರವನ ಆರಾಧಕರು. ಕೆಲವು ಜೋಗಿಗಳು ಶಿವನಿಂದ ಕಿನ್ನರಿ ಮತ್ತು ಕುಲ ಬಿರುದುಗಳನ್ನು ಪಡೆದಿರುವಂತೆಯೇ ಶಿವನಿಂದಲೇ ಕಿನ್ನರಿಯನ್ನು ಪಡೆದೆವು ಎಂದು ಹಾಡುತ್ತಾರೆ. ಆ ಬಗೆಗಿನ ಒಂದು ಕಥೆ ಹೀಗಿದೆ: "ಒಮ್ಮೆ ಶಿವ ಗಂಗೆಯನ್ನು ಮೆಚ್ಚಿಸಲು ಜೋಗಿಯ ವೇಷದಲ್ಲಿ ಹೋದ. ಗಂಗೆಗೆ ಆ ವೇಷ ನೋಡಿ ಸಿಟ್ಟು ಬಂತು. ಆಗ ಶಿವ ತನ್ನ ನಿಜರೂಪವನ್ನು ತೋರಿದ. ಆದರೆ ಈ ವೇಷವನ್ನು ಉಳಿಸುವುದಕ್ಕಾಗಿ ತನ್ನ ಬೆವರಿನಿಂದ ಒಬ್ಬ ಜೋಗಿಯನ್ನು ಮಾಡಿದ. ಅವನಿಗೆ ಕಿನ್ನರಿಯನ್ನು ಕೊಟ್ಟು ಭೂಲೋಕದಲ್ಲಿ ಸಂಚರಿಸು ಅಂತ ಹೇಳಿದ. ಹೀಗೆ ಜೋಗಿಗಳು ಶಿವನಿಂದ ಕಿನ್ನರಿ ಪಡೆದು ತಮ್ಮ ಪ್ರದರ್ಶನ ಆರಂಭಿಸಿದರು."

ಇವೆಲ್ಲವನ್ನೂ ಮೀರಿ ಇನ್ನೂ ಒಂದು ಅಭಿಪ್ರಾಯವಿದೆ. ಕಿನ್ನರಿ ಕೊಟ್ಟವನು ಅರ್ಜುನನೂ ಅಲ್ಲ, ಶಿವನೂ ಅಲ್ಲ, ಅದನ್ನು ಜೋಗಿ ಮಠದ ಸಿದ್ಧರು ಕೊಟ್ಟರು ಎಂಬುದು. ಇದು ವಾಸ್ತವಕ್ಕೆ ಹತ್ತಿರವಾದ ಮಾತು. ಈ ಜೋಗಿ ಸಂಪ್ರದಾಯದ ಹಿಂದೆ ಒಂದು 'ಪಂಥ'ವೇ ಇದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಭೈರವನ ಆರಾಧಕರಾದ ಜೋಗಿಗಳು ನಾಥ ಪಂಥದ ಅನುಯಾಯಿಗಳು ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಊಹಿಸಬಹುದು. ಮಂಗಳೂರಿನ ಕದ್ರಿ ಮತ್ತು ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಇತ್ಯಾದಿಯಾಗಿ ಅನೇಕ ಶೈವ ಆರಾಧನಾ ಕೇಂದ್ರಗಳಿಗೂ ಈ ಜೋಗಿಗಳಿಗೂ ಹತ್ತಿರದ ಸಂಬಂಧವಿದೆ. ಹಾಗೆಯೇ ಮೈಲಾರನ ಭಕ್ತರಾದ ಗೊರವರು, ಯಲ್ಲಮ್ಮನ ಭಕ್ತರಾದ ಜೋಗಪ್ಪ ಜೋಗತಿಯರು, ಆದಿಚುಂಚನಗಿರಿ ಭಕ್ತರಾದ 'ಜೋಗಪ್ಪ'ಗಳು ಇಂಥ ರಹಸ್ಯ ತಾಂತ್ರಿಕವೆನ್ನಬಹುದಾದ ಶೈವ ಹಾಗೂ ಶಕ್ತಿ ಪಂಥದ ಪಳಿಯುಳಿಕೆಗಳಾಗಿ ಇಂದಿಗೂ ನಮ್ಮ ಮುಂದೆ ಉಳಿದಿರುವುದನ್ನು ನೋಡಿದರೆ ಈ ಕಿನ್ನರಿ ಜೋಗಿಗಳು ಕೂಡ ಪಂಥದ ಒಂದು ಭಾಗವೇ ಎಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ. ಯಾಕೆಂದರೆ, ಇಂದಿಗೂ ಇವರು ಭೈರವನ ಆರಾಧಕರು ಅಷ್ಟೇ ಅಲ್ಲ, ಕಿವಿಗೆ 'ಕಪಾಲಿ' ತೊಡಿಸಿ 'ಕರ್ಣ ಕುಂಡಲ'ವಿಟ್ಟು ಭೈರವನ ಸನ್ನಿಧಿಯಲ್ಲಿ ದೀಕ್ಷೆ ನೀಡಲಾಗುತ್ತದೆ. ಮತ್ತು ಕುತ್ತಿಗೆಗೆ 'ಸಿಂಗನಾಥ'ವನ್ನು ಕಟ್ಟಲಾಗುತ್ತದೆ. ಅಲ್ಲಿಂದ ಅವನು ಜೋಗಿಯಾಗುತ್ತಾನೆ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಿದಾಗ ಮೇಲಿನ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತದೆ.

ಕರ್ನಾಟಕದಲ್ಲಿ ಕಿನ್ನರಿ ವಾದ್ಯ ಅಥವಾ ಅದನ್ನು ನುಡಿಸುವ ಜೋಗಿಗಳ ಇತಿಹಾಸ ೧೨ನೇ ಶತಮಾನಕ್ಕೂ ಹಿಂದೆ ಹೋಗುತ್ತದೆ. ಶರಣರ ಸಂಘದಲ್ಲಿ 'ಕಿನ್ನರಿ ಬೊಮ್ಮಯ್ಯ'ನೆಂಬ ಒಬ್ಬ ವ್ಯಕ್ತಿ ಇದ್ದನೆಂಬ ಉಲ್ಲೇಖವಿದೆ. ಇವನು ಭಕ್ತಿಯಿಂದ ಶಿವಾಲಯದಲ್ಲಿ ಕಿನ್ನರಿ ನುಡಿಸಿ ಹನ್ನೊಂದು ಹಣ ದ್ರವ್ಯವನ್ನು ಶಿವನ ದಯೆಯಿಂದ ಸಂಪಾದಿಸಿ, ಆ ಹಣವನ್ನು ಶರಣರ ದಾಸೋಹಕ್ಕೆ ಮೀಸಲಿಡುತ್ತಿದ್ದರಿಂದ ಕಿನ್ನರಿ ಬೊಮ್ಮಯ್ಯನೆಂಬ ಹೆಸರು ಬಂತೆಂದು ಹೇಳಲಾಗಿದೆ. ಭೀಮಕವಿ ವಿರಚಿತ 'ಬಸವ ಪುರಾಣ'ದಲ್ಲಿ ಕಿನ್ನರಿ ಎಂಬ ಶಬ್ದದ ಉಲ್ಲೇಖವಿದೆಯಲ್ಲದೆ, ಕಿನ್ನರಿ ಬೊಮ್ಮಯ್ಯ 'ಕಿನ್ನರಿವೀಣೆ'ಯನ್ನು ನುಡಿಸುತ್ತ ಶಿವಧ್ಯಾನ ಮಾಡುತ್ತಿದ್ದುದನ್ನು ಉಲ್ಲೇಖಿಸುತ್ತಾನೆ. ಶಿವಶರಣ ಕಥಾರತ್ನ ಕೋಶದಲ್ಲಿ ಕೂಡ ಈ 'ಕಿನ್ನರಿ'ಯ ವಿಚಾರ ಬರುತ್ತದೆ. ಕನ್ನಡದ ಗಾದೆಗಳಲ್ಲಿ 'ಕೋಣನ ಮುಂದೆ ಕಿನ್ನರಿ ಬಾರಿಸಿದಂಗೆ' ಎಂಬ ಪ್ರಸಿದ್ಧ ಗಾದೆಯಿದೆ. ಇವೆಲ್ಲ ಕಿನ್ನರಿ ಸಂಪ್ರದಾಯದ ಪ್ರಾಚೀನತೆ ಮತ್ತು ಜನಪ್ರಿಯತೆಯನ್ನು ಹೇಳುತ್ತವೆ.

**ವಲಸೆ ಮತ್ತು ಪ್ರಸರಣ :** ಭಾರತದಾದ್ಯಂತ ಅಲ್ಲಲ್ಲಿ ಕಂಡುಬರುವ ಈ ಕಿನ್ನರಿ ಜೋಗಿಗಳ ಮೂಲ ಎಲ್ಲಿಯದು ಎಂಬ ಬಗ್ಗೆ ಸ್ಪಷ್ಟ ಪುರಾಣಗಳಿಲ್ಲ. ಭಾಷಾ ದೃಷ್ಟಿಯಿಂದ ಮರಾಠಿ, ಕನ್ನಡ, ತೆಲುಗು ಮತ್ತು ಹಿಂದಿ ಭಾಷೆ ಗೊತ್ತಿರುವ ಇವರು ಬಹುಶಃ ಈ ಯಾವುದೋ ರಾಜ್ಯಗಳಿಗೆ ಸೇರಿದವರೇ ಇರಬೇಕು. ಕರ್ನಾಟಕದಲ್ಲಿರುವ ಬಹುತೇಕ ಕಿನ್ನರಿ ಜೋಗಿಗಳ ಮೂಲ ಭಾಷೆ ಮರಾಠಿ. ಇತ್ತೀಚೆಗೆ ಮರಾಠಿ ಮತ್ತು ಕನ್ನಡ ಎರಡನ್ನು ಮನೆ ಭಾಷೆಯಂತೆ ಬಳಸುವ ಇವರಲ್ಲಿಯೇ ಉಪಭಾಷೆಯೊಂದರ ಸೃಷ್ಟಿಯಾಗುತ್ತಿದೆ ಎಂದೂ ಹೇಳಬಹುದಾಗಿದೆ. ಇವರ ಮೂಲ ಭಾಷೆ ಯಾವುದೇ ಇರಲಿ, ಕರ್ನಾಟಕದಲ್ಲಿರುವ ಕಿನ್ನರಿಜೋಗಿಗಳಂತೂ ಕನ್ನಡ ಭಾಷೆಯನ್ನು ನಿರರ್ಗಳವಾಗಿ ಮಾತಾಡಿ, ಹಾಡಬಲ್ಲ ಪ್ರತಿಭಾವಂತರು ಎಂದೇ ಹೇಳಬಹುದು. ಇವರ ಇಡೀ ಸಾಹಿತ್ಯ ಕನ್ನಡ ಜಾಯಮಾನದ್ದು ಎಂಬುದು ಮಾತ್ರ ನಿಜ.

ಭೈರವನನ್ನು ಆರಾಧನಾ ದೈವವನ್ನಾಗಿ ಪಡೆದಂತೆಯೇ ಯಲ್ಲಮ್ಮ ಮತ್ತು ಮೈಲಾರಲಿಂಗನನ್ನು ಆರಾಧಿಸುವ ಇವರ ವಿವಿಧ ಪಂಗಡಗಳನ್ನು ಗಮನಿಸಿದಾಗ ಕರ್ನಾಟಕದಲ್ಲಿರುವ ಕಿನ್ನರಿ ಜೋಗಿಗಳು ಮೂಲದಲ್ಲಿ ಬಹುಶಃ ಮಹಾರಾಷ್ಟ್ರದ ಗಡಿ ಭಾಗಗಳಿಂದ ಕರ್ನಾಟಕದ ಕಡೆಗೆ ವಲಸೆ ಬಂದಿರಬಹುದೇ ಎನಿಸುತ್ತದೆ. ಆದರೆ ಇವರೆಲ್ಲರಿಗೂ ಮೂಲ ದೈವವಾದ ಭೈರವನ ಹಿನ್ನೆಲೆಯಿಂದ ನೋಡಿದಾಗ ಹಾಗೂ ಶೈವ ಮೂಲ ತತ್ವ ಪ್ರಸರಣದ ದೃಷ್ಟಿಯಿಂದ ನೋಡಿದಾಗ ಇವರ ಮೂಲ ನೆಲೆಯನ್ನು ಕಾಶ್ಮೀರದವರೆಗೂ ತೆಗೆದುಕೊಂಡು ಹೋಗಬಹುದಾದರೂ ಸ್ಪಷ್ಟ ಪುರಾವೆಗಳು ದೊರಕುವವರೆಗೆ ಅದು ಊಹೆಯಾಗಿ ಮಾತ್ರ ಉಳಿಯುತ್ತದೆ.

ಪ್ರಸ್ತುತದಲ್ಲಿ ಕರ್ನಾಟಕದಲ್ಲಿರುವ ಕಿನ್ನರಿ ಜೋಗಿಗಳು ಎಲ್ಲಿಯಾದರೂ ಗಟ್ಟಿಯಾಗಿ ನೆಲೆನಿಂತಿದ್ದಾರೆಯೇ ಎಂಬುದನ್ನು ಈಗ ನೋಡಬಹುದು. ಮೂಲತಃ ಅಲೆಮಾರಿ ಬುಡಕಟ್ಟಿನ ಎಲ್ಲ ಲಕ್ಷಣಗಳನ್ನು ಒಳಗೊಂಡ ಇವರು ಒಂದು ಕಡೆ ನೆಲೆನಿಲ್ಲುವ ಸ್ವಭಾವದವರಲ್ಲವಾದರೂ ಕಳೆದ ಒಂದೆರಡು ಶತಮಾನದಲ್ಲಿ ಹಾಗೆ ನೆಲೆಗೊಂಡದ್ದು ಕಂಡುಬರುತ್ತಿದೆ. ಹೀಗೆ ನೆಲೆಗೊಂಡ ಕಾರಣದಿಂದ 'ಜೋಗಿ ಹಳ್ಳಿ' ಎಂಬ ಹೆಸರಿನ ಹಳ್ಳಿಗಳೇ ನಿರ್ಮಾಣಗೊಂಡ ಉದಾಹರಣೆಗಳೂ ಇವೆ. ಹಾಗೆ ಕಿನ್ನರಿ ಜೋಗಿಗಳು ನೆಲೆಗೊಂಡಿರುವ ಉದಾಹರಣೆಗಳನ್ನು ಸ್ಥೂಲವಾಗಿ ಇಲ್ಲಿ ನೀಡಲಾಗಿದೆ. ಹೊಸೂರು, ಹೊಸಕೊಪ್ಪ, ಚೋರಡಿ, ವಳಗೇರಿ, ತುಪ್ಪೂರು (ಸಾಗರ ತಾಲ್ಲೋಕು), ವಡ್ನಿ ರೊಪ್ಪ, ಬಿದಿರ ಮಟ್ಟಿ, ಬಿಸಲ ಕೊಪ್ಪ, ಹಸನ ಹಳ್ಳ (ಶಿರ್ಸಿ ತಾಲ್ಲೋಕು) ಬಟ್ಟೆ ಮಲಪ (ಹೊಸನಗರ ತಾಲ್ಲೋಕು), ತಿಳುವಳ್ಳಿ (ಹಾನಗಲ್ ತಾಲ್ಲೋಕು), ಗುಡುವಿನ ಕೊಪ್ಪ, ಹುಳ್ಳಿ, ಹೊರ್ರೋಡು (ಸೊರಬ ತಾಲ್ಲೋಕು) ಈಚಲು ಬಯಲು, ಶಾನುಕೋಡು (ತೀರ್ಥಹಳ್ಳಿ ತಾಲ್ಲೂಕು) ಸರಪಳಿ, ಮಂಚೆಕಲ್ಲು, ಪಾಡಿಗಾರು (ಘಟ್ಟದ ಕೆಳಗೆ) – ಇವಿಷ್ಟು ಮಲೆನಾಡಿನ ಭಾಗಗಳಾದರೆ, ಧಾರವಾಡ ಹಾಗೂ ಬಳ್ಳಾರಿ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಇವರು ವ್ಯಾಪಕವಾಗಿ ಕಂಡುಬರುತ್ತಾರೆ. ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಿರಳವಾಗಿ ಕಂಡುಬರುತ್ತಾರೆ. ಆದರೂ ಇವರ ಜನಂಖ್ಯೆಯ ನಿಖರ ಲೆಕ್ಕ ಗೊತ್ತಿಲ್ಲ. ಒಟ್ಟು ನಾಲ್ಕರಿಂದ ಐದು ಸಾವಿರ ಜನರಿರಬಹುದೆಂಬ ಅಂದಾಜು ಮಾಡಬಹುದಾಗಿದೆ. ಮಳೆಗಾಲದಲ್ಲಿ ನಿಲ್ಲುವುದಕ್ಕೆ ಒಂದು ಕಡೆ ವಾಸಸ್ಥಾನ ಕಂಡುಕೊಂಡಿದ್ದಾರಾದರೂ ಸುಗ್ಗಿ ಮತ್ತು ಬೇಸಿಗೆಯಲ್ಲಿ ಇವತ್ತಿಗೂ ಇವರು ಅಲೆಮಾರಿಗಳು.

**ಕುಲ–ಬಳಿ–ಉಪಜಾತಿ ಇತ್ಯಾದಿ :** ಕಿನ್ನರಿ ಜೋಗಿಗಳೆಂದರೆ ಕಿನ್ನರಿ ಹಿಡಿದು ಹಾಡುವವರು. ಮೂಲತಃ ಅಲೆಮಾರಿ ಹಾಡುಗಾರರಿವರು. ಆದರೆ ಭೈರವನನ್ನೇ ಆರಾಧ್ಯ ದೈವವನ್ನಾಗಿ ಪಡೆದ ಇತರೆ ಜೋಗಿಗಳೂ ಇದ್ದಾರೆ. ಬಹುಶಃ ಜೋಗಿ ಸಂಪ್ರದಾಯದಲ್ಲಿ ಬರುವ ಉಪಜಾತಿಗಳಿವು. ಆದರೆ ಕಿನ್ನರಿ ಜೋಗಿಗಳನ್ನು ಬಿಟ್ಟು ಬೇರೆ ರೀತಿಯ ಜೋಗಿಗಳು ಹಾಡುಗಾರರಲ್ಲ. ಆದರೆ ಅಲೆಮಾರಿಗಳು ಹೌದು. ಜೋಗಿ ಸಂಪ್ರದಾಯದಲ್ಲಿ ಬರುವ ಇತರೆ ಜೋಗಿಗಳು ಉಪಜಾತಿಗಳನ್ನು ಹೀಗೆ ಪಟ್ಟಿ ಮಾಡಬಹುದು. ಕಿನ್ನರಿ ಜೋಗಿ, ಡಬ್ಬಿ ಜೋಗಿ, ಎಣ್ಣೆ ಜೋಗಿ, ಬಳೆಗಾರ ಜೋಗಿ, ಕುಣಬಿ ಜೋಗಿ, ಹಂದಿ ಜೋಗಿ, ಇತ್ಯಾದಿ. ಅವರವರ ವೃತ್ತಿಯನ್ನು ಆಧರಿಸಿ ಈ ಉಪಜಾತಿಗಳು ಸೃಷ್ಟಿಯಾದಂತಿವೆಯಾದರೂ ಇವರೆಲ್ಲರ ಕುಲದೈವ ಕಾಲಭೈರವ. ಹಾಗೂ ಇವರೆಲ್ಲರ ಮುಖ್ಯ ಮಠ ಕದ್ರಿ. ಎಲ್ಲರೂ ನಾಥ ಪಂಥಕ್ಕೆ ಸೇರಿದವರು. ಅನೇಕ ಉಪವೃತ್ತಿಗಳ ಮೂಲಕ ಇವತ್ತಿಗೂ ಅಲೆಮಾರಿಗಳಾಗಿ ಬದುಕುತ್ತಿರುವ ಈ ಎಲ್ಲ ಜೋಗಿಗಳಿಗಿಂತ ಕಿನ್ನರಿ ಜೋಗಿಗಳು ಹೆಚ್ಚು ಜನಪ್ರಿಯರು. ಇವರ ಕಿನ್ನರಿ ನಾದ ಮತ್ತು ಅವರಿಗಿರುವ ಕಂಠ ಮಾಧುರ್ಯ ಹಾಗೂ ಕಥನ ಕಲೆ ಅವರನ್ನು ಅಷ್ಟರಮಟ್ಟಿಗೆ ಜನಪ್ರಿಯಗೊಳಿಸಿದೆ. ಕಾಲಭೈರವನ ಆರಾಧಕರಲ್ಲಿ ಪ್ರಮುಖವಾಗಿ ಬರುವ ದಕ್ಷಿಣ ಕರ್ನಾಟಕದ ಜೋಗಪ್ಪಗಳಾಗಲೀ ಈ ಕಿನ್ನರಿ ಜೋಗಿ ಅಥವಾ ಇತರೆ ಉಪ ಜೋಗಿ ಜಾತಿಗಳಿಗೆ ಸಂಬಂಧಪಟ್ಟವರಲ್ಲ. ಇವರೆಲ್ಲರೂ ಒಕ್ಕಲಿಗರನ್ನು ಒಳಗೊಂಡಂತೆ ಅವರಿಗಿಂತ ಕೆಳಸ್ತರದಲ್ಲಿ ಬರುವ ಎಲ್ಲ ಶೂದ್ರ ಹಾಗೂ ದಲಿತ ವರ್ಗಗಳಿಗೆ ಸೇರಿದವರಾಗಿದ್ದು ಭೈರವ ಅಥವಾ ಯಲ್ಲಮ್ಮನ್ನ ಸನ್ನಿಧಿಯಲ್ಲಿ ದೀಕ್ಷೆ ಪಡೆದು ಆ ಪಂಥ ಸೇರಿದವರು. ಆದರೆ ಈ ಜೋಗಿಗಳದ್ದು ಒಂದು ಪ್ರತ್ಯೇಕ ಜಾತಿ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು.

ಕಿನ್ನರಿ ಜೋಗಿಗಳ ಒಳಗಿನ ಉಪ ಪಂಗಡಗಳು ಕೂಡ ಅದರ ಮೂಲದಲ್ಲಿ ಇದ್ದಿರಬಹುದಾದ ವೃತ್ತಿಗಳ ಹಿನ್ನಲೆಯಲ್ಲಿಯೇ ರೂಪುಗೊಂಡಂತಿವೆ. ಇವುಗಳನ್ನೇ ನಾವು 'ಕುಲ' 'ಬಳಿ' ಅಥವಾ 'ಮನೆತನ' ಅನ್ನಬಹುದಾದರೆ ಅಂಥ ವಿವರಗಳು ಹೀಗಿವೆ: ಚವಾಣ, ಟೋಮ್ರಿ, ಕೊತ್ವಾಲ್, ಗೋಧಿ, ಬೆಟ್ಟೇರ್, ರಹಿರಾಶಿ, ಭಂಡಾರಿ, ಹಿಂಗಮೆರಿ, ವಡವಾಳಕರ್, ಪ್ರಭಾಳಕರ್, ಮಂಥ ಇತ್ಯಾದಿ. ಸಾಗರ ತಾಲ್ಲೋಕಿನಲ್ಲಿ ಸಂದರ್ಶಿಸಿದ ಒಬ್ಬ ಕಲಾವಿದ ಕೊಟ್ಟ ವಿವರಗಳು ಇವಾಗಿದ್ದು, ಇನ್ನು ಅನೇಕ ಉಪಪಂಗಡಗಳು ಇವರಲ್ಲಿ ಇರುವ ಸಾಧ್ಯತೆಗಳಿವೆ. ಕುಲ ಚಿಹ್ನೆಗಳ ಬಗ್ಗೆ ಅಲ್ಲಿ ಯಾರೂ ಮಾಹಿತಿ ನೀಡಲಿಲ್ಲ. ಈ ಮೇಲ್ಕಂಡ ಕುಲ ಪದ್ಧತಿಯ ಪ್ರಕಾರ ಆಯಾ ಕುಲದೊಳಗೆ ವಿವಾಹಗಳು ಅಥವಾ ಲೈಂಗಿಕ ಸಂಬಂಧಗಳು ನಿಷಿದ್ಧ.

ಕದ್ರಿ ಮತ್ತು ಆದಿಚುಂಚನಗಿರಿ ಇವರ ಮೂಲ ಮಠಗಳಾಗಿದ್ದವು ಎಂದು ಹೇಳುವ ಇವರು ಕೆಲವು ಉಪ ಮಠಗಳಿಗೂ ನಡೆದುಕೊಳ್ಳುತ್ತಾರೆ. ಚಂದ್ರಗುತ್ತಿ (ಸೊರಬ ತಾಲ್ಲೋಕು), ಮೊಣಕಾಲ್ಮೂರು (ಚಿತ್ರದುರ್ಗ ಜಿಲ್ಲೆ), ತುರಬೆ ಗುಡ್ಡ (ಧಾರವಾಡ ಜಿಲ್ಲೆ) ಮುಂತಾದೆಡೆ ಇವರ ಉಪ ಮಠಗಳಿವೆ. ಹಾಗೆಯೇ ಉಪ ದೈವಗಳ ಆರಾಧನೆಯೂ ಉಂಟು.

**ಜೋಗಿ ದೀಕ್ಷೆ** : ಹುಟ್ಟಿದ ಎಲ್ಲ ಗಂಡು ಮಕ್ಕಳಿಗೂ ಕಾಲಭೈರವನ ಹೆಸರಲ್ಲಿ ದೀಕ್ಷೆ ಕೊಟ್ಟು 'ಜೋಗಿ'ಯನ್ನಾಗಿ ಪರಿವರ್ತಿಸುವುದು ಇವರು ರೂಢಿಸಿಕೊಂಡ ಕಡ್ಡಾಯ ಸಂಪ್ರದಾಯ. ಹಾಗೆ ದೀಕ್ಷೆ ತೆಗೆದುಕೊಂಡ ದಿನದಿಂದ ಅವನು ಭೈರವನ ಗುಡ್ಡ. ಭಿಕ್ಷೆ ಮತ್ತು ಅದಕ್ಕೆ ಪೂರಕವಾಗಿ ಹಾಡು ಅಂದಿನಿಂದ ಅವನ ವೃತ್ತಿ. ಮದುವೆಗೆ ಮೊದಲು ಎಲ್ಲ ಗಂಡು ಮಕ್ಕಳಿಗೂ ಈ ದೀಕ್ಷೆ ನೆರವೇರಲೇಬೇಕು.

ಈ ದೀಕ್ಷೆಯನ್ನು ಸಾಮಾನ್ಯವಾಗಿ ಅವರಿಗೆ ಸೇರಿದ ಉಪಮಠಗಳಿಂದ ಗುರುಗಳನ್ನು ಕರೆಸಿ ಮಾಡಲಾಗುತ್ತಿತ್ತು ಅಥವಾ ಕದ್ರಿ ಮತ್ತು ಆದಿಚುಂಚನಗಿರಿ ಸೇರಿದಂತೆ ಮಠಗಳಿಗೇ ಹೋಗಿ ಅಲ್ಲಿ ಹುಡುಗನಿಗೆ ದೀಕ್ಷೆಯ ವಿಧಿ ನೆರವೇರಿಸಲಾಗುತ್ತಿತ್ತು. ಆದರೆ ಈಗ ಮಠಗಳ ಗುರುಗಳು ಮನೆಗಳಿಗೆ ಬರುವುದು ಕಡಿಮೆಯಾಗಿದೆಯಂತೆ. ಹುಡಗನನ್ನೇ ಅಲ್ಲಿಗೆ ಕರೆದುಕೊಂಡು ಹೋಗಲಾಗುತ್ತದೆ. ಇದು ಅವರಲ್ಲಿರುವ ಸಂಪತ್ತಿನ ಶಕ್ತಾನುಸಾರ ನಡೆಯುತ್ತದೆ. ಒಂದು ವೇಳೆ ಗುರುವೂ ಬರದೇ, ಮಠಕ್ಕೂ ಹೋಗಲಾಗದ ಪಕ್ಷದಲ್ಲಿ ಊರಿನಲ್ಲಿಯೇ ಇರುವ 'ಅಪಾ ಗುರು' ಅಥವಾ 'ದಾದಾ ಗುರು' ಇವರ ನೇತೃತ್ವದಲ್ಲಿಯೇ ದೀಕ್ಷಾ ವಿಧಿ ನಡೆಯುತ್ತದೆ. ಅಪಾ ಗುರು ಅಂದರೆ ಹುಡುಗನ ಚಿಕ್ಕಪ್ಪ, ದಾದ ಗುರು ಅಂದರೆ ಹುಡುಗನ ಅಣ್ಣ!

ದೀಕ್ಷೆಯ ವಿಧಾನ ಕೂಡ ಸರಳವಾದದ್ದೇ. ಅಂದು ಹುಡುಗನಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸಿ, ಕಂಬಳಿಯ ಗದ್ದುಗೆ ಹಾಕಿ ಕೂರಿಸಲಾಗುತ್ತದೆ. ನೆಂಟರು-ಇಷ್ಟರು, ಬಂಧು-ಬಾಂಧವರು ಈ ಆಚರಣೆಯಲ್ಲಿ ಪಾಲ್ಗೊಳ್ಳಲು ಬಂದಿರುತ್ತಾರೆ. ಇವರೆಲ್ಲರ ಸಮ್ಮುಖದಲ್ಲಿ, ಗುರುವಾದವನು ಹುಡುಗನ ಎರಡೂ ಕಿವಿಗಳ ತಳಭಾಗದ ತೊಟ್ಟುಗಳನ್ನು ಚೂರಿಯಿಂದ ಕೊಯ್ದು ರಕ್ತ ಒಸರಿದ ನಂತರ, ಹತ್ತಿಯ ಬತ್ತಿಯಿಂದ ರಕ್ತ ನಿಲ್ಲುವಂತೆ ಒತ್ತಿ ಹಿಡಿದು, ಹಾಗೇ ಹೊಸ ವಸ್ತ್ರವನ್ನು ಸುತ್ತಿ ಎರಡು ದಿನದ ಮಟ್ಟಿಗೆ ಹಾಗೇ ಬಿಡುತ್ತಾರೆ. ಈ ಸಂದರ್ಭದಲ್ಲಿ ನೆರೆದಿದ್ದ ನೆಂಟರು ಇಷ್ಟರು ದೀಕ್ಷೆ ಪಡೆದ ಹುಡುಗನಿಗೆ ವಿವಿಧ ಕಾಣಿಕೆಗಳನ್ನು ಅರ್ಪಿಸುತ್ತಾರೆ. ಎಲ್ಲರಿಗೂ ವಿಶೇಷವಾದ ಸಿಹಿ ಊಟವಾಗುತ್ತದೆ. ಎರಡು ದಿನಗಳನ್ನು ಬಿಟ್ಟು ಅನಂತರ ಹುಡುಗನ ಕಿವಿಗೆ ಲೋಹದ ರಿಂಗ್ ರೀತಿಯ "ಮುದ್ರೆ"ಗಳನ್ನು ಹಾಕಲಾಗುತ್ತದೆ. ಈ ಮುದ್ರೆಯನ್ನು ಅವ ಇನ್ನೆಂದಿಗೂ ಕಳೆಯುವ ಹಾಗಿಲ್ಲ. ಪಂಚಲೋಹದಿಂದ ತಯಾರು ಮಾಡಿದ ಈ ಮುದ್ರೆಯನ್ನು 'ಕಾಮಾಕ್ಷಿ', 'ಜೋಗಿಮುದ್ರೆ' ಹಾಗೂ 'ಕರ್ಣ ಕುಂಡಲ' ಇತ್ಯಾದಿ ಹೆಸರುಗಳಿಂದಲೂ ಕರೆಯುವುದುಂಟು. ಇದು ಜೋಗಿಯ ಸಂಕೇತ. ಕಿವಿಯಲ್ಲಿ ಈ ಮುದ್ರೆ ಕಂಡು ಬಂದರೆ ಅವನಿಗೆ ಜೋಗಿ ದೀಕ್ಷೆ ಆಗಿದೆ ಎಂದೇ ಅರ್ಥ. ಅಂದಿನಿಂದ ಈ ಹುಡುಗ ಜವಾಬ್ದಾರಿಯುಳ್ಳವನಾಗಿರುತ್ತಾನೆ. ಎದ್ದ ಕೂಡಲೇ ಭೈರವನನ್ನು ಮನದಲ್ಲಿ ನೆನೆದು, ಊಟಕ್ಕೆ ಕುಂತಾಗ 'ಸಿಂಗನಾದ'ವನ್ನು ನುಡಿಸಿ, ತ್ರಿಶೂಲಕ್ಕೆ ಕೈ ಮುಗಿದು ತನ್ನ ಕರ್ತವ್ಯವನ್ನು ಪರಿಪಾಲಿಸಬೇಕು. 'ಸಿಂಗನಾದ' ಎಂದರೆ ಜಿಂಕೆಯ ಕೊಂಬಿನ ಒಂದು ವಾದ್ಯ. ಇತ್ತೀಚಿನ ದಿನಗಳಲ್ಲಿ ಬೆಳ್ಳಿ ಲೋಹದಲ್ಲಿ ಮಾಡಿದ ಸಣ್ಣ ವಾದ್ಯಗಳನ್ನು ಇದಕ್ಕೆ ಪರ್ಯಾಯವಾಗಿ ಬಳಸುವುದುಂಟು. ತ್ರಿಶೂಲ ಭೈರವನ ಸಾಂಕೇತಿಕ ರೂಪ.

**ಕಿನ್ನರಿಮೇಳ**

ಹರಹರನೆ ಹರನೆ ಜಯತೋ
ಸಿವಸಿವಾ ಮುಕ್ತಿದಾಯಕನೇ ಜಯತೋ
ಶ್ರೀ ಗುರುವರನೆ ನಿನಗೆ ಜಯತು
ಮೂರು ಪುರವನೆ ಗೆದ್ದವಗೆ ಜಯತು
ಬಾರೊ ಕಿನ್ನುಡಿಯ ಮೇಲೆ ।ಅರ್ಜುನ।
ಸಣ್ಣ ಬೆರಳಲಿ ನುಡಿಸುತ
ಹೆಚ್ಚಾದ ಬುರುಡೆಯನ್ನೇ ।ಅರ್ಜುನ।
ಎಡಗೈಯಲಿ ತಿದ್ದುತ ।ಅರ್ಜುನ।
ಅರ್ಥದಲಿ ಕುಣಿದನಾ ॥

ಶಿವನನ್ನ, ಗುರುವನ್ನ ಹಾಗೂ ಅರ್ಜುನನನ್ನು ಅಡಿಗಡಿಗೆ ನೆನಸಿಕೊಳ್ಳುತ್ತಾ ಮಧುರ ಸ್ವರದಲ್ಲಿ ಹಾಡುವ ಕಿನ್ನರಿ ಜೋಗಿಗಳ ಮೇಳವೆಂದರೆ ಅದೊಂದು ಕಿನ್ನರ ಲೋಕದ ಪಯಣವೆ. ಕಿನ್ನರಿ ಎಂಬುದು ಒಂದು ತಂತಿವಾದ್ಯ, ಬಿದಿರಿನ

ಗಳಕ್ಕೆ ಮೂರು ಸೋರೆ ಬುರುಡೆ; ಎರಡು ದೊಡ್ಡವು, ಒಂದು ಚಿಕ್ಕದು. ಬಿದಿರಿನ, ಹೊರಮೈ ಮೇಲೆ ಮುಳ್ಳು ಹಂದಿಯ ಚಿಪ್ಪಿನಿಂದ ಮಾಡಿದ ಹತ್ತು ಮೆಟ್ಟಿಲು, ಇವುಗಳನ್ನು 'ಸಾರೆ' ಎನ್ನುತ್ತಾರೆ. ಈ ಸಾರೆಗಳನ್ನು ಜೇನು ಮೇಣದಿಂದ ಅಂಟಿಸುತ್ತಾರೆ. ಬಿದಿರಿನ ಒಂದು ತುದಿಯ ತಿರುಪುಳ್ಳ ಶೂಲದ ಕಡ್ಡಿಯನ್ನು ಬಂಧಿಸಿ ಸಾರೆಗಳ ಮೇಲಿಂದ ಹಾದು ಬಂದ ತಂತಿಗಳು ಇನ್ನೊಂದು ತುದಿಯ ಮರದ ಗಿಣಿಯನ್ನು ಸುತ್ತುವರೆಯುತ್ತವೆ. ಈ ಶೂಲದ ಕಡ್ಡಿಗಳನ್ನು ತಿರುಗಿಸಿ ಶೃತಿ ಮಾಡಿಕೊಳ್ಳಬಹುದು. ಶೂಲದ ಕಡ್ಡಿಯ ನಂತರ ಬಿದಿರಿನ ಚೂಪು ತುದಿಗೆ ನವಿಲುಗರಿಯನ್ನು ಸಿಕ್ಕಿಸಿ ಮತ್ತಷ್ಟು ಅಂದಗೊಳಿಸುತ್ತಾರೆ.

ಕಿನ್ನರಿ ಜೋಗಿಗಳು ಕೇವಲ ಅರ್ಜುನ ಜೋಗಿ ಹಾಡಿಗೆ ಮಾತ್ರ ಸೀಮಿತವಾಗಿಲ್ಲ. ಮಹಾಭಾರತದ ವಿವಿಧ ಪರ್ವಗಳನ್ನು ಅನೇಕ ರಾತ್ರಿಗಳವರೆಗೆ ಹಾಡಬಲ್ಲ ಇವರು ಶಿವ–ಪಾರ್ವತಿ, ಗಂಗೆ–ಗೌರಿ, ಭೈರವ–ಮಾಳವ್ವ, ಭೈರವ–ಕಾಳಿ ಮುಂತಾದ ಕಥನ ಗೀತೆಗಳನ್ನೂ ಹಾಡುತ್ತಾರೆ. ಆದರೆ ಇವರ ಮಹಾಭಾರತವಾಗಲೀ, ಶಿವ ಪುರಾಣವಾಗಲೀ, ನಮ್ಮ ಶಿಷ್ಟ ಪಂಥದ ರಚನೆಗಳಂಥಲ್ಲ. ಇಲ್ಲಿಯ ನಾಯಕರು, ನಾಯಕಿಯರು ಅಥವಾ ಯಾವುದೇ ಪಾತ್ರ ಜನಸಾಮಾನ್ಯರ ನಡುವಿನ ಪಾತ್ರಗಳು. ಅವರದೇ ಆದ ರೀತಿಯ ಜನಪರವಾದ ಹಾಗೂ ಡಾಂಭಿಕತನವಿಲ್ಲದ ಸರಳ ಕಾವ್ಯಗಳನ್ನೂ ಇವಲ್ಲದೆ ವೈವಿಧ್ಯಮಯವಾದ ಹತ್ತಾರು ಲೌಕಿಕ ಕಾವ್ಯಗಳನ್ನು ಹಾಡುತ್ತಾರೆ. ಅವುಗಳಲಿ ಮುಖ್ಯವಾದುವುಗಳೆಂದರೆ ರಾಜಹಂಸ–ಪರಮಹಂಸ, ಶಿವಶಂಕಿನ ಕುಮಾರ, ಆಶಾವತಿ, ಶಾಮಸೇನ, ಚಿತ್ರಶೇಖರ–ಸೋಮಶೇಖರ, ಬಸವಕುಮಾರ–ಲೋಹಿತಕುಮಾರ, ಸತಿ ಶೀಲಾವತಿ, ವೀರಸೇನ–ಕೋಕಿಲೆ, ಗೋಪಮ್ಮನ ಕತೆ ಇತ್ಯಾದಿ.

ಕಿನ್ನರಿ ಜೋಗಿಗಳದ್ದು ಪ್ರಮುಖವಾಗಿ ಹಾಡಿನ ಸಂಪ್ರದಾಯವಾದರೂ, ಹಾಡುವಾಗ ಕಿನ್ನರಿ ಮತ್ತು ಚಿಟಕಿಯ ತಾಳಕ್ಕೆ ಅನುಗುಣವಾಗಿ ಲಘುನರ್ತನ ಮಾಡುತ್ತಾರೆ. ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ಚಿಟಗಿ, ಗಗ್ಗರ, ಕಿರುಗೆಜ್ಜೆ ಇವು ಇವರು ಬಳಸುವ ಪ್ರಮುಖ ವಾದ್ಯಗಳು. ಇತ್ತೀಚಿನ ದಿನಗಳಲ್ಲಿ ಹಾರ್ಮೋನಿಯಂ ಕೂಡ ಬಳಸುತ್ತಿದ್ದಾರೆ. ಸಾಮಾನ್ಯವಾಗಿ ಐದು ಜನರಿರುವ ಕಿನ್ನರ ಕಲಾತಂಡದಲ್ಲಿ ಪ್ರಧಾನ ಹಾಡುಗಾರ ಮುಮ್ಮೇಳ ಹಾಡುತ್ತಾ ನರ್ತಿಸುತ್ತಾನೆ. ಅವನ ಜೊತೆ ಹಿಮ್ಮೇಳ ಹಾಡುತ್ತಾ ಅವನ ಕತೆಗೆ ಹೂಗುಟ್ಟುತ್ತಾ, ಅವನು ನರ್ತಿಸುವಾಗ ನರ್ತಿಸುತ್ತಾ ಮನರಂಜನೆ ನೀಡುವ ಕುಶಲ ಸಂಭಾಷಣೆಗಳಲ್ಲಿ ಅವನೊಂದಿಗೆ ಸೇರುವ ಉಳಿದ ಎಲ್ಲಾ ಕಲಾವಿದರು, ಒಂದು ರೀತಿಯ ನಾಟಕೀಯ ಸನ್ನಿವೇಶವನ್ನೇ ಉಂಟು ಮಾಡುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಈ ಕಲೆ ಒಂದು ಬೀದಿ ನಾಟಕ ತಂಡವೋ ಅನ್ನಿಸುವುದೂ ಉಂಟು. ಸಂಗೀತ ನೃತ್ಯ ಸಾಹಿತ್ಯ ಮತ್ತು ಸಂಭಾಷಣೆ ಈ ಎಲ್ಲ ಅಂಶಗಳು ಒಟ್ಟಾಗಿ ನೋಡುವ ಮತ್ತು ಕೇಳುವ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಮುಮ್ಮೇಳದ ಕಥೆಗಾರನ ನಿರೂಪಣೆಗೆ ಹಿಮ್ಮೇಳದವರು ಪ್ರತಿಕ್ರಿಯಿಸುವ ರೀತಿಯಾಗಲೀ ಕಥೆಯನ್ನು ಹೇಳುವ ಕ್ರಮವಾಗಲೀ ನೋಡಿದಾಗ ಗೊಂದಲಿಗರಿಗೂ ಇವರಿಗೂ ಅಂಥ ವ್ಯತ್ಯಾಸವೇನೂ ಕಾಣುವುದಿಲ್ಲ.

ಇವೆಲ್ಲಕ್ಕಿಂತ ಮುಖ್ಯವಾದ ಮತ್ತೊಂದು ಅಂಶವೆಂದರೆ ಕಿನ್ನರಿ ಜೋಗಿಗಳು ಆಧುನಿಕ ಯುಗಕ್ಕೆ ಸ್ಪಂದಿಸುತ್ತಿರುವುದಾಗಿದೆ. ಆಯಾ ಸ್ಥಳ, ಸಂದರ್ಭ ಮತ್ತು ಪ್ರೇಕ್ಷಕರ ಪ್ರತಿಕ್ರಿಯೆಯನ್ನು ನೋಡಿಕೊಂಡು ನಿಂತ ನೆಲದಲ್ಲಿಯೇ ಹೊಸದನ್ನು ಕಟ್ಟಿ ಹಾಡಬಲ್ಲ ಶಕ್ತಿ ಇವರಿಗಿದೆ. ವ್ಯವಸ್ಥೆಯ ವಿಂಡಬನೆ, ಸಾಮಾಜಿಕ ಸಂಗತಿಗಳ ವಿಮರ್ಶೆ, ದೊಡ್ಡ ಮನುಷ್ಯರ ದಬ್ಬಾಳಿಕೆಯ ನವಿರು ವ್ಯಂಗ್ಯ ಇವರ ಕಥೆಗಳ ನಡುನಡುವೆ ಬಂದು ಹೋಗುತ್ತವೆ. ಈ ಪ್ರಜಾಪ್ರಭುತ್ವದಲ್ಲಿ ಆಗಿಹೋಗಿರುವ ಮಂತ್ರಿಗಳಿಗೆ ಲೆಕ್ಕವಿಲ್ಲ, ಅದನ್ನು ಹೀಗೆ ವ್ಯಂಗ್ಯವಾಗಿ ಹಾಡುತ್ತಾರೆ.

> ಏನು ಮಂತ್ರಿ ಏನು ಮಂತ್ರಣ್ಣ
> ಈ ದೇಶದಾಗ ಏಸು ಮಂತ್ರು ಆಗಿ ಹೋದ್ರಣ್ಣ

ಇದೇ ಶತಮಾನದ ಆರಂಭದಲ್ಲಿ ಸೈಕಲ್ಲನ್ನೇ ಕಾಣದಿದ್ದ ನಮ್ಮ ಗ್ರಾಮೀಣಲೋಕ, ಈಗ ಸೈಕಲ್ಲನ್ನು ಒಂದು ಮುಖ್ಯ ಸಾಧನವಾಗಿ ಬಳಸುತ್ತಿದೆ. ಈಗ ಎಲ್ಲರಿಗೂ ಬೇಕು ಸೈಕಲ್.

> ಎಲ್ಲವರು ಹತ್ಯಾರಪ್ಪ ಸೈಕಲ್ಲಾ
> ಒಳ್ಳೆ ಸೈಕಲ್ಲಾ
> ಮನೆಗೆ ಹೋದರಾ ಗಂಜಿಗೆ ಉಪ್ಪಿಲ್ಲ.

ಇಂಥ ನೂರಾರು ಹಾಡುಗಳನ್ನು ಕಟ್ಟಿ ಧಾರ್ಮಿಕ ಕಥೆಯ ನಡುವೆ ಧುತ್ತೆಂದು ತಂದು ಮನರಂಜಿಸುವ ಈ ಕಲಾವಿದರ ಚಾತುರ್ಯ ಮೆಚ್ಚುವಂಥದ್ದು. ಈ ರೀತಿಯ ಸ್ಪಂದನದ ಮೂಲಕವೇ ಕಿನ್ನರಿಜೋಗಿ ಕಲೆ ಇಂದಿಗೂ ಹೆಚ್ಚು ಜನಪ್ರಿಯವಾಗಿ ಉಳಿದಿದೆ.

* * * *

# ೪ - ಅಂತರಾಷ್ಟ್ರೀಯತೆ

**ಆಶಯ :**

**ಅನಿಕೇತನ**

ಓ ನನ್ನ ಚೇತನ,
ಆಗು ನೀ ಅನಿಕೇತನ!

ರೂಪ ರೂಪಗಳನು ದಾಟಿ,
ನಾಮ ಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ
ಆಗು ನೀ ಅನಿಕೇತನ!

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ
ಆಗು ನೀ ಅನಿಕೇತನ!

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!
ಓ ನನ್ನ ಚೇತನ
ಆಗು ನೀ ಅನಿಕೇತನ!

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀನ್ ಅನಂತವಾಗು:
ಆಗು, ಆಗು, ಆಗು, ಆಗು,
ಓ ನನ್ನ ಚೇತನ
ಆಗು ನೀ ಅನಿಕೇತನ!

**– ಕುವೆಂಪು**

# 1. ತಾಯ್ನಾಡು

ಮೂಲ : ಮಹಮೂದ್ ದರ್‌ವೇಶ್
ಅನುವಾದ : ವಿಜಯವಾಮನ

---

ಅಲ್ಲಿಂದ ಬಂದವನು ನಾನು, ಮತ್ತೆ ನೆನಪುಗಳಿವೆ
ನನಗೂ ಮಿಕ್ಕವರ ಹಾಗೆ, ಅಮ್ಮ ಇದ್ದಾಳೆ ನನಗೂ
ಮನೆ ಇದೆ, ನಾಲ್ದೆಸೆಗೂ ಕಿಟಕಿಗಳಿವೆ
ಗೆಳೆಯರು ಅಣ್ಣ ತಮ್ಮಂದಿರು ಇದ್ದಾರೆ

ಮತ್ತೆ ಜೈಲಿನ ಕೋಣೆ ತಣ್ಣಗಿನ ಕಿಟಕಿ

ಬೆಳ್ಳಕ್ಕಿಗಳು ಒಯ್ದ ಆ ಕಡಲಿನಲೆ ನನ್ನದು
ಚಿಗುರು ಗರಿಕೆಯ ಕುಡಿ ಕಂಡ ಆ ಕಾಣ್ಕೆ ನನ್ನದು
ಮಾತಿನಾಚೆಗಿನ ದೂರದ ಚಂದ್ರ ನನ್ನದು
ಮತ್ತೆ ಹಕ್ಕಿಗಳ ಹಿಂಡು, ಸಾವಿಲ್ಲದ ಆಲಿವ್ ಮರ.

ಇಲ್ಲೇ, ಇದೆ ನೆಲದಲ್ಲಿ ನಡೆದಾಡಿದ್ದೇನೆ ಒಮ್ಮೆ
ಖಡ್ಗಗಳು ಸವರಿ ಹಸಿರ ರಾಶಿಯು ತಿಂಡಿತಿನಿಸುಗಳ ಟೇಬಲ್ಲಾಗುವ ಮುನ್ನ
ಅಲ್ಲಿಂದ ಬಂದವನು ನಾನು.

ಅಮ್ಮನಿಗೆ ಹಂಬಲಿಸಿ ಹನಿಗರೆವ ಮುಗಿಲನ್ನು
ಇಳೆಗೊಪ್ಪಿಸುತ್ತೇನೆ ನಾನು
ಮರಳಿ ನೀರ್ಮುಗಿಲು ಬಂದಾಗ ನನ್ನಿರವ ತೋರಿಸಲು
ಹನಿಯುತದೆ ಎವೆಯಲ್ಲಿ ಕಣ್ಣ ನೀರು

ಈ ನೆತ್ತರಂಗಳಕ್ಕೆ ಒಪ್ಪುವ ಎಲ್ಲ ನುಡಿಗಳನ್ನು ಕಲಿತಿದ್ದಾಯ್ತು
ಎಲ್ಲ ನಿರ್ಬಂಧಗಳ ಕಿತ್ತೆಸೆದು
ಕಲಿತ ನುಡಿಗಳನ್ನೊಡೆದು
ಹೊಸವೆ ಹೊಸದೊಂದು ಪದ: ತಾಯ್ನಾಡು

---

ಮಹಮೂದ್ ದರ್‌ವೇಶ್ – ಪಾಲೆಸ್ತೈನಿನ ಕವಿಯಾದರೂ ನಮ್ಮ ಸದ್ಯದ ಜಗತ್ತಿನ ತಲ್ಲಣಗಳಿಗೆ ದನಿಯಾಗಿ ಕವಿತೆಗಳನ್ನು ರಚಿಸಿದವನು. ತನ್ನ ಹತ್ತೊಂಬತ್ತರ ಹದಿವಯಸ್ಸಿಗೇ "ರೆಕ್ಕೆ ಕತ್ತರಿಸಿದ ಗುಬ್ಬಚ್ಚಿಗಳು" ಎಂಬ ಕವನ ಸಂಕಲನ ಪ್ರಕಟಿಸುತ್ತಾನೆ. ಶುದ್ಧ ಅರಬ್ಬಿ ಭಾಷೆಯಲ್ಲಿ ಬರೆಯುತ್ತಾ ತಾಯ್ನಾಡನ್ನು ಬಲವಂತದಿಂದ ತೊರೆದು, ಅರಬ್ಬಿ, ಹೀಬ್ರೂ, ಫ್ರೆಂಚ್, ಇಂಗ್ಲಿಷ್ ಇತ್ಯಾದಿ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಾ ಫಿಲಿಸ್ತೀನಿಗಳ ತಬ್ಬಲಿತನವನ್ನು ಜಗತ್ತಿಗೆ ಸಾರುತ್ತಾನೆ. ತಾಯ್ನೆಲಕ್ಕಾಗಿ ಹಂಬಲಿಸಿ, ಹಂಬಲಿಸಿ ಇಸ್ರೇಲಿನ ಜೈಲುಗಳಲ್ಲೇ ಕೊಳೆತು, ನಿರಂತರ ಓಡುತ್ತಾ ಈಜಿಪ್ಟ್, ಲೆಬನಾನ್, ಮಾಸ್ಕೊ ಮುಂತಾದ ಕಡೆ ಸುತ್ತಾಡುತ್ತಾ ಕೊಲೆ, ಸುಲಿಗೆ ದಬ್ಬಾಳಿಕೆಗಳ ವಿರುದ್ಧ ಕವನಗಳನ್ನು ಸಿಡಿಸುತ್ತಾನೆ.

ಫಿಲಿಸ್ತೀನಿ ಜನಗಳ ಸಂಕೇತ ದನಿಯಾಗಿ ಅರಬ್ಬಿಗಳ ಮುಖವಾಣಿಯಾಗಿ ಇಸ್ರೇಲನ್ನು ಎದುರಿಸಿನಿಂತ ಧೀರಕವಿ ಮಹಮದ್ ದರ್‌ವೇಶ್.

ಇವನ ಕವಿತೆಗಳಲ್ಲೆ ಫಿಲಿಸ್ತೀನಿಗಳ ಹಾಡಾಗಿ ಹೋಗಿವೆ. ಪ್ರಖ್ಯಾತ ದಿಗ್ದರ್ಶಕ ಗೂಡಾರ್ಡನ 'ನೋತ್ರೆ ಮ್ಯೂಸಿಕೀ' ಎನ್ನುವ ಚಲನಚಿತ್ರದಲ್ಲಿ ದರ್‌ವೇಶ್ ಕಾಣಿಸಿಕೊಂಡಿದ್ದಾನೆ. "ಸೈನಿಕನ ಬಿಳೀ ಲಿಲ್ಲಿಗಳ ಕನಸು" ಎಂಬ ಕಾವ್ಯವಾಚನಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಜನ ಜಮಾಯಿಸಿದ್ದು ಮಹಮೂದ್ ದರ್‌ವೇಶ್ ಜನಪ್ರಿಯತೆಗೆ ಸಾಕ್ಷಿ. ಫಿಲಿಸ್ತೀನಿಯಾಗಿದ್ದೂ ಯಹೂದಿಗಳನ್ನು ಪ್ರೀತಿಸಿದ್ದು, ಹೀಬ್ರೂ ಕಲಿತಿದ್ದು ಎಲ್ಲವೂ ಇವನೊಬ್ಬ ಯುದ್ಧ ವಿರೋಧಿ, ಮಾನವ ಪ್ರೇಮಿ, ಕವಿ ಎನ್ನುವುದನ್ನು ಸಾಬೀತು ಪಡಿಸುತ್ತವೆ.

೧೩ ಮಾರ್ಚ್ ೧೯೪೧ ರಲ್ಲಿ ಮುಸ್ಲಿಂ ಕುಟುಂಬವೊಂದರಲ್ಲಿ ಹುಟ್ಟಿ, ೧೯೪೮ ರಲ್ಲಿ ಇಸ್ರೇಲ್ ರಾಜ್ಯ ಘೋಷಣೆಯಾದ ಮೇಲೆ ತಾಯ್ನಾಡು ತೊರೆದು ಮತ್ತೆ ರಹಸ್ಯವಾಗಿ ಇಸ್ರೇಲಿಗೆ ಬಂದು ಖೈದಿಯಾಗಿ, ನಂತರ ರಾಖಾ ಎನ್ನುವ ಇಸ್ರೇಲಿ ಕಮ್ಯೂನಿಸ್ಟ್ ಪಕ್ಷದ ಸದಸ್ಯನಾಗಿ ಮಾಸ್ಕೊ, ಬೈರೂತ್, ಪ್ಯಾರೀಸ್‌ಗಳಲ್ಲಿ ಇಪ್ಪತ್ತಾರು ವರ್ಷಗಳ ಕಾಲ ದೇಶಭ್ರಷ್ಟನಾಗಿ ಅಲೆದಾಡುತ್ತಾ... ಕೊನೆಗೆ ೯ ಆಗಸ್ಟ್ ೨೦೦೮ ಟೆಕ್ಸಾಸ್‌ನ ಹ್ಯೂಸ್ಟನ್‌ನಲ್ಲಿ ಕೊನೆಯುಸಿರೆಳೆಯುತ್ತಾನೆ. ಅತ್ಯಂತ ಹೃದಯವಂತನಾದ ಈ ಕವಿ ಕೊನೆಗೆ ಹೃದಯಾಘಾತಕ್ಕೆ ಬಲಿಯಾಗಿದ್ದು ವಿಪರ್ಯಾಸ. ಇಸ್ರೇಲಿನ ಪಶ್ಚಿಮತೀರದ ರಾಮಲ್ಲಾಹ್ ಎಂಬ ಊರಿನಲ್ಲಿ ಎಲ್ಲ ಫಿಲಿಸ್ತೀನಿಗಳು ಶಾಂತಿಕಂಡುಕೊಳ್ಳುವ ತಾಣವಾಗಿ ಇವನ ಸಮಾಧಿ ಇದೆ.

# ೨. ಷೋಯಿಂಕಾ : ನಾಡಿನ ದುಃಖ ಪಾಪಗಳನ್ನು ಹೊರುವ ಲೇಖಕ

**ಪಿ. ಲಂಕೇಶ**

---

೧

ಕೆಲವರ್ಷಗಳ ಕೆಳಗೆ ನೈಜೀರಿಯಾದ ಸರ್ಕಾರ, ಆಫ್ರಿಕಾದ ಹೆಮ್ಮೆಯ ಲೇಖಕ ವೋಲೆ ಷೋಯಿಂಕಾನ ಪಾಸ್‌ಪೋರ್ಟ್ ಕಿತ್ತುಕೊಂಡು ಅವನ ಮನೆ, ಆಸ್ತಿ ಎಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡಿತು. ಅವನ ಒಂದೇ 'ಅಪರಾಧ'ವೆಂದರೆ ಸರ್ಕಾರದ ಭ್ರಷ್ಟತೆಯ ವಿರುದ್ಧ ಮಾತಾಡಿದ್ದು. ವ್ಯಗ್ರನಾದ ಷೋಯಿಂಕಾ ತನಗೆ ನೊಬೆಲ್ ಪ್ರಶಸ್ತಿ ಬಂದಾಗ ಕೊಟ್ಟ ಓಪನ್ ಪಾಸ್‌ಪೋರ್ಟ್ ಹಿಡಿದು ಎಲ್ಲೂ ನಿಲ್ಲದೆ ದೇಶ ವಿದೇಶಗಳಲ್ಲಿ ಅಲೆಯಲಾರಂಭಿಸಿದ. ನೈಜೀರಿಯಾದ ಸರ್ವಾಧಿಕಾರಿ ಆಡಳಿತದ ವಿರುದ್ಧ ಇತರ ದೇಶಗಳಲ್ಲಿ ಜನಾಭಿಪ್ರಾಯ ಮೂಡಿಸಲೆತ್ನಿಸಿದ.

ಷೋಯಿಂಕಾನ ಅಲೆದಾಟ ಇಂದು ನಿನ್ನೆಯದಲ್ಲ.

ತನ್ನ ನಾಡಾದ ನೈಜೀರಿಯಾದಲ್ಲೇ ಇದ್ದು ಆಫ್ರಿಕನ್ ಸಂಸ್ಕೃತಿಯ ಎಲ್ಲ ದ್ರವ್ಯ ಹೀರಿ ಬರೆಯುವ, ನಾಟಕ ಆಡಿಸುವ, ಸಿನಿಮಾ ಮಾಡುವ ಬಯಕೆಯುಳ್ಳ ಷೋಯಿಂಕಾ ಅಲ್ಲೇ ಏಗಿಕೊಂಡು, ಕಾದಾಡಿಕೊಂಡು ಇರಬೇಕೆಂದುಕೊಂಡವನೇ ಹೊರತು ಪರದೇಶಗಳಲ್ಲಿ ಮಿಂಚಬೇಕೆಂದಾಗಲೀ, ಅಲ್ಲಿ ನೆಮ್ಮದಿಯಿಂದ ಇರಬೇಕೆಂದಾಗಲೀ ಬಯಸಿದವನಲ್ಲ. ಅವನ 'ದಿ ಡಿಟೈನಿ' ('ಬಂಧಿ') ಎಂಬ ರೇಡಿಯೋ ನಾಟಕದಲ್ಲೊಂದು ಪ್ರಸಂಗವಿದೆ: ಕೋನು ಎಂಬ ಸಾಮಾಜಿಕ ಕಾರ್ಯಕರ್ತ ಸೆರೆಮನೆಯಲ್ಲಿದ್ದಾನೆ. ಅವನ ಗೆಳೆಯ ಝಿಮೋಲೆ ಕೋನುವಿನ ಮಕ್ಕಳನ್ನು ತನ್ನ ಮನೆಯಲ್ಲಿಟ್ಟುಕೊಂಡು ಕಾಪಾಡುತ್ತಾನೆ. ಆದರೆ ಬರಬರುತ್ತಾ ಸ್ವತಃ ಝಿಮೋಲೆಗೇ ಬದುಕು ಕಷ್ಟವಾಗತೊಡಗುತ್ತದೆ. ಗೆಳೆಯನ ಮಕ್ಕಳನ್ನು ರಕ್ಷಿಸುವುದು ದುಃಸ್ಸಾಧ್ಯವಾಗತೊಡಗುತ್ತದೆ. ಇಂಥ ಸ್ಥಿತಿಯಲ್ಲಿ ಕೋನುವಿನ ಬಳಿ ಹೋದ ಝಿಮೋಲೆ ಕೇಳುತ್ತಾನೆ: 'ನಿನ್ನ ಮಕ್ಕಳನ್ನಾದರೂ ಈ ಉಸಿರು ಕಟ್ಟಿಸುವ ದೇಶದಿಂದ ತಪ್ಪಿಸಿ ಬೇರೆ ಯಾವುದಾದರೂ ದೇಶಕ್ಕೆ ಕಳಿಸಿ ಅವರನ್ನು ಉಳಿಸಲೆ?'

ಬೇಡವೆಂದು ತಲೆಯಲ್ಲಾಡಿಸಿದ ಕೋನು ಹೇಳುವ ಮಾತಿದು: 'ಅವರಿಗೆ ಕೆಟ್ಟದ್ದೇನಾದರೂ ಆಗುವುದಿದ್ದರೆ ಇಲ್ಲೇ ಆಗಲಿ. ಭಯ ಎಂದರೇನೆಂಬುದು ಅವರಿಗೆ ಗೊತ್ತಾದರೆ ಅವರು ಅದನ್ನು ಎದುರಿಸಲೋ ಅಥವಾ ಅದಕ್ಕೆ ಹೊಂದಿಕೊಂಡು ಬದುಕಲೋ ಕಲಿಯುತ್ತಾರೆ. ಅವರಿಗೇ ಆ ಆಯ್ಕೆ ಇರಲಿ. ಅವರನ್ನು ಈ ದೇಶದಿಂದ ದೂರ ಕಳಿಸಬೇಡ, ಝಿಮೋಲೆ.'

ಷೋಯಿಂಕಾನ ಜೀವನ ಹಾಗೂ ಅವನ ಕಾವ್ಯ, ನಾಟಕ, ಕಾದಂಬರಿಗಳನ್ನು ಬಲ್ಲವರಿಗೆ ಕೋನುವಿನ ಮಾತುಗಳು ಸ್ವತಃ ಷೋಯಿಂಕಾನ ಮಾತುಗಳಂತೆಯೇ ಕೇಳುತ್ತವೆ. ಯಾತನೆ, ಹಿಂಸೆ, ಭ್ರಷ್ಟಾಚಾರಗಳ ದೇಶವೊಂದರಲ್ಲಿ ಷೋಯಿಂಕಾನ ಅನೇಕ ಮುಖ್ಯ ಪಾತ್ರಗಳು ನಾಡಿನ ಪಾಪ ಹೊರುವ, ಅದಕ್ಕಾಗಿ ಬಲಿಯಾಗುವ ಯೆರೂಬಾ ಸಂಸ್ಕೃತಿಯ ಆಚರಣೆಯೊಂದರ ಮಾದರಿಯನ್ನನುಸರಿಸಿ ಹುಟ್ಟಿವೆ. ಷೋಯಿಂಕಾ ಸೃಷ್ಟಿಸುವ ಈ ಪಾಪವಾಹಕನಾದ ವ್ಯಕ್ತಿ ಸಮಾಜದ ಪರವಾಗಿ ತಾನು ನೋಯುತ್ತಾನೆ. ಸಮಾಜದ ಖಾಯಿಲೆಯನ್ನು ತಾನು ಸ್ವೀಕರಿಸುತ್ತಾನೆ. ಈ ಖಾಯಿಲೆಯನ್ನು ಗುಣಪಡಿಸಲು ತಾನೇ ಬಲಿಯಾಗುತ್ತಾನೆ. ಇದು ಕೂಡ ಏಕಾಂಗಿ ಬಲಿದಾನದ ರಮ್ಯ ಹೀರೋಯಿಸಂ ಇರಬಹುದೆಂಬ ಅನುಮಾನ ಷೋಯಿಂಕಾಗೂ ಇಲ್ಲದಿಲ್ಲ. ಆದರೂ ತನ್ನ ಸಮಾಜದ ಪಾಪ ಹೊರುವ ವ್ಯಕ್ತಿಯ ಈ ಕಲ್ಪನೆ ಮಾತ್ರ ಅವನ ಬದುಕಿನಲ್ಲೂ ಕೃತಿಗಳಲ್ಲೂ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ.

ಯೆರೂಬಾ ಪೌರಾಣಿಕ ನಂಬಿಕೆಗಳ ಪ್ರಕಾರ, ಸಮಾಜ ತನ್ನ ಸಾಮೂಹಿಕ ಪಾಪವನ್ನು ಹೊರುವ ಹಾಗೂ ಅದನ್ನು ಹೊತ್ತು ಹೊರಗೆ ಸಾಗಿಸುವ ವ್ಯಕ್ತಿಗಾಗಿ ಹುಡುಕುತ್ತಿರುತ್ತದೆ. ಷೋಯಿಂಕಾನ 'ದಿ ಸ್ಟ್ರಾಂಗ್ ಬ್ರೀಡ್' ('ಗಟ್ಟಿ ತಳಿ') ನಾಟಕದಲ್ಲಿ ಬುದ್ಧಿಜೀವಿ ಎಮನ್ ಕೊನೆಗೆ ಆ ಊರಿನ ಪಾಪವನ್ನು ಹೊತ್ತು ಹೊರಸಾಗಿಸುವ ಬಲಿಯಾಗಲು ಮುಂದಾಗುತ್ತಾನೆ. ತನ್ನ ನಾಡಿನ ಯಾತನೆಗಳನ್ನು ಸ್ವೀಕರಿಸುವ ಬುದ್ಧಿಜೀವಿಯ ಜವಾಬ್ದಾರಿ ಹಾಗೂ ಬಲಿದಾನದ ಬಯಕೆಗಳನ್ನು ಪ್ರತಿನಿಧಿಸುವ ಈ ಬಗೆಯ ಪಾತ್ರಗಳನ್ನು ಸೃಷ್ಟಿಸಿದ ಷೋಯಿಂಕಾ ಸ್ವತಃ ತಾನೂ ಆ ಜವಾಬ್ದಾರಿ ನಿರ್ವಹಿಸಿದ್ದಾನೆ. ಸ್ವಾತಂತ್ರ್ಯೋತ್ತರ ನೈಜೀರಿಯಾದ ಎಲ್ಲ ಬಗೆಯ ಸರ್ಕಾರಗಳೂ ಅವನನ್ನು ಜೈಲಿಗೆ ಕಳಿಸಿವೆ. ೧೯೬೭ ರಲ್ಲಿ ಬಯಾಫ್ರಾ ಪ್ರತ್ಯೇಕತಾವಾದಿ ಚಳವಳಿಯ ಪರವಾಗಿ ಬರೆದನೆಂದು ಷೋಯಿಂಕಾನನ್ನು ಜೈಲಿಗೆ ಹಾಕಿದ ಸರ್ಕಾರ ಬರವಣಿಗೆಯೇ ಉಸಿರೆಂದು ತಿಳಿದ ಅವನಿಗೆ ಬರೆಯಲು ಹಾಳೆಯನ್ನು ಕೂಡ ಕೊಡಲಿಲ್ಲ. ಆಗ ಷೋಯಿಂಕಾ ಖಾಲಿ

ಸಿಗರೇಟ್ ಪ್ಯಾಕಿನ ಮೇಲೆ, ಟಾಯ್ಲೆಟ್ ಪೇಪರಿನ ಮೇಲೆ 'ಷಟ್ಲ್ ಇನ್ ದಿ ಕ್ರಿಪ್ಟ್' ಸಂಕಲನದ ಪದ್ಯಗಳನ್ನು ಬರೆದ. ಹೀಗೆ ಹಲವು ಸಲ ಜೈಲು ಸೇರಬೇಕಾಗಿ ಬಂದ ಷೋಯಿಂಕಾ 'ದಿ ಮ್ಯಾನ್ ಡೈಡ್' ಎಂಬ ತನ್ನ ಸೆರೆಮನೆ ದಿನಚರಿಯಲ್ಲಿ ತನ್ನ ತಳಮಳಗಳನ್ನು ದಾಖಲಿಸುತ್ತಿರುವಾಗ ಆತ್ಮಹತ್ಯೆಯ ಯೋಚನೆಯೂ ಸುಳಿಯುತ್ತದೆ: 'ನಾನೂ ಆ ಪಾಪ ಹೊರುವ ಕಲಾವಿದನಂತೆ ನನ್ನ ಸಮಾಜದ ಪಾಪಗಳಿಗಾಗಿ ಬಲಿದಾನವಾಗಿಬಿಡಲೆ?'

– ಇದು ಕ್ರಿಸ್ತನ ಅಥವಾ ಗಾಂಧಿಯ ಬಲಿದಾನದಂತೆ ತನ್ನ ಸಮಾಜವನ್ನು ಸ್ವಲ್ಪವಾದರೂ ಅಲುಗಿಸಬಹುದು. ಸರ್ವಾಧಿಕಾರಿಗಳಲ್ಲಿ ಅಳುಕು ಹುಟ್ಟಿಸಬಹುದು ಎಂಬ ಸಣ್ಣ ನಿರೀಕ್ಷೆ ಷೋಯಿಂಕಾಗೆ ಇತ್ತೆಂದು ಕಾಣುತ್ತದೆ. ಆದರೆ ಮುಂದಿನ ಗಳಿಗೆಗೇ ಕಟುಸತ್ಯ ಅವನಿಗೆ ಗೋಚರಿಸತೊಡಗುತ್ತದೆ. 'ನನ್ನ ಸಾವು ಸಾಮಾಜಿಕವಾಗಿ ಉಪಯುಕ್ತವಾಗುವುದಾಗಲೀ, ನೈತಿಕವಾಗಿ ಅರ್ಥಪೂರ್ಣವಾಗುವುದಾಗಲೀ, ಅಸಾಧ್ಯ. ಕಾರಣ, ಈ ಬಲಿದಾನ ಭ್ರಷ್ಟ ಮಿಲಿಟರಿ ಆಡಳಿತಕ್ಕೆ ಯಾವ ಸವಾಲೂ ಆಗದೆ, ಅದನ್ನು ಇನ್ನಷ್ಟು ಕೊಬ್ಬಿಸಬಹುದು.' ಈ ಸತ್ಯ ಅರಿವಿಗೆ ಬಂದ ತಕ್ಷಣ, 'ದುರಂತದ ಹೊಳೆಗಳಲ್ಲಿ ತಮ್ಮ ಗಾಯಾಗೊಂಡ ಚೇತನಗಳನ್ನು ತೊಳೆದುಕೊಳ್ಳುತ್ತಿರುವ ಪ್ರೊಮಿಥ್ಯೂಸ್‌ಗಳೇ ಚರಿತ್ರೆಯ ತುಂಬಾ ತುಂಬಿಹೋಗಿದ್ದಾರೆ' ಎಂದು ಷೋಯಿಂಕಾಗೆ ಅನ್ನಿಸಿ ದಟ್ಟ ವಿಷಾದ ಅವನನ್ನು ಮುತ್ತ ತೊಡಗುತ್ತದೆ.

೨

ಷೋಯಿಂಕಾನ ಬದುಕಿನಲ್ಲಿ ಅನೇಕ ಹೋರಾಟಗಳು ಹಾಗೂ ಅವನ ಕೃತಿಗಳಲ್ಲಿ ಸಮಾಜವನ್ನು ಮುನ್ನಡೆಸುವ ಜವಾಬ್ದಾರಿಯುತ ಪಾತ್ರಗಳು ಇದ್ದರೂ ಅವನಲ್ಲಿ ಒರಟು ಸಾಮಾಜಿಕ ಪ್ರಜ್ಞೆಯ ಹುಸಿ ಅಬ್ಬರ ಇಲ್ಲ. ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಗೆ ಒತ್ತುಕೊಡುವ ಅನೇಕರು ಷೋಯಿಂಕಾನಿಂದ ಕಲಿಯಬೇಕಾದ ಹಲವು ಪಾಠಗಳಿವೆ. ಅಮೇರಿಕಾದ ಕಪ್ಪು ಜನ 'Black is Beautiful' (ಕಪ್ಪೇ ಸುಂದರ) ಎಂದು ಘೋಷಿಸಿದಂತೆ ಎಪ್ಪತ್ತರ ದಶಕದ ಆಫ್ರಿಕಾದಲ್ಲೂ ನೀಗ್ರೋಗಳ ಆತ್ಮಗೌರವದ ಚಳುವಳಿಯಾದ 'ನೀಗ್ರಿಟ್ಯೂಡ್' ಕಲ್ಪನೆ ಸಾಹಿತ್ಯದಲ್ಲೂ ಪ್ರಧಾನವಾಗತೊಡಗಿತು. ಆಫ್ರಿಕನ್ ಕಾವ್ಯದಲ್ಲಿ ಎಲ್ಲೆಲ್ಲೂ 'ಕಪ್ಪು' ಕವಿಯತೊಡಗಿತು. ಆಗ ಷೋಯಿಂಕಾ 'A tiger need not shout of its tigritude!' ('ಹುಲಿ ತನ್ನ ಹುಲಿತನದ ಬಗ್ಗೆ ಚೀರಿಕೊಳ್ಳಬೇಕಾಗಿಲ್ಲ!') ಎಂದು ತಮಾಷೆ ಮಾಡಿದ. ನೀಗ್ರಿಟ್ಯೂಡ್ ಕವಿಗಳು ಬರೆದ ಕಾವ್ಯವನ್ನು ತೀರಾ ಉತ್ಪ್ರೇಕ್ಷಿಸಿ ಹೊಗಳುತ್ತಿದ್ದ ಫ್ರೆಂಚ್ ಲೇಖಕ ಜಾನ್ ಪಾಲ್ ಸಾರ್ತ್ರ್ 'ನಮ್ಮ ಕಾಲದ ಏಕಮಾತ್ರ ಕ್ರಾಂತಿಕಾರಿ ಕಾವ್ಯವೆಂದರೆ ಇದೇ' ಎಂದು ಕಪ್ಪು ಕವಿಗಳನ್ನು ಉಬ್ಬಿಸುತ್ತಿದ್ದಾಗ, ಈ ಕಪ್ಪು ಕಾವ್ಯವನ್ನು ವಿಮರ್ಶಿಸಿದ ಷೋಯಿಂಕಾ 'ಇದು ಕರಿಯರು ತಮ್ಮನ್ನೇ ತಾವೇ ಪೂಜಿಸಿಕೊಳ್ಳುವ ಕಾವ್ಯ' ಎಂದ. ನೀಗ್ರಿಟ್ಯೂಡ್ ಮಾರ್ಗದ ಕವಿಯನ್ನು 'ಬ್ಲ್ಯಾಕ್ ಆರ್ಫಿಯಸ್' ಎಂದು ಸಾರ್ತ್ರ್ ಕರೆದರೆ, ಈ ಕಪ್ಪು ಆರ್ಫಿಯಸ್ ತನ್ನನ್ನು ತಾನೇ ಅತಿಯಾಗಿ ಮೋಹಿಸಿಕೊಳ್ಳುವ ನಾರ್ಸಿಸಸ್‌ಗೆ ಹತ್ತಿರವಿದ್ದುದನ್ನು ಷೋಯಿಂಕಾ ತೋರಿಸಿದ.

ಒಮ್ಮೆ ಷೋಯಿಂಕಾನ ಬಳಿ ಆಫ್ರಿಕನ್ ದೇಶವೊಂದರ ಬದ್ಧ ರಂಗಭೂಮಿಯ ತರುಣರು 'ನಾವು ಎಷ್ಟೆಲ್ಲ ಕಾಳಜಿಯ, ಕಳಕಳಿಯ ನಾಟಕ ಆಡಿದರೂ ನಮ್ಮ ನಾಟಕ ನೋಡಲು ಈ ಕಾರ್ಮಿಕರು, ರೈತಾಪಿಗಳು ಬರುತ್ತಿಲ್ಲವಲ್ಲ' ಎಂದು ಕೊರಗಿದರು. 'ದಿನವಿಡೀ ಕೆಲಸ ಮಾಡಿ ಸಂಜೆ ಥಿಯೇಟರಿಗೆ ಬಂದು ತಮ್ಮ ಸಮಸ್ಯೆಯ ಬಗ್ಗೆಯೇ ನಾಟಕ ನೋಡೋಕೆ ಅವರ ಮನಸ್ಸು ಎಲ್ಲಿ ಒಪ್ಪುತ್ತೆ?' ಎಂದು ಬದ್ಧ ರಂಗಭೂಮಿಯ ತರುಣರನ್ನು ಷೋಯಿಂಕಾ ತಬ್ಬಿಬ್ಬುಗೊಳಿಸಿದ. ಹಿಂದೊಮ್ಮೆ ಕನ್ನಡ ಸಾಹಿತ್ಯದಲ್ಲಾದಂತೆ, ಆಫ್ರಿಕಾದಲ್ಲೂ ವ್ಯಕ್ತಿ ಹಾಗೂ ಸಮಾಜಗಳ ನಡುವಣ ಸಂಬಂಧದ ಚರ್ಚೆ ನಡೆಯುತ್ತಿದ್ದಾಗ 'ಪಶ್ಚಿಮದ ನಾಟಕಗಳು ವ್ಯಕ್ತಿ ಕೇಂದ್ರಿತವಾದವು, ಆದ್ದರಿಂದ ಅವನ್ನು ತಿರಸ್ಕರಿಸಬೇಕು' ಎಂಬ ವಾದ ಎದ್ದಿತ್ತು. ಆಗ ಷೋಯಿಂಕಾ ಇಂಥ ಹುಂಬ ವಾದಗಳನ್ನೆಲ್ಲ ತಿರಸ್ಕರಿಸಿ, 'ಪ್ರತಿಯೊಬ್ಬ ವ್ಯಕ್ತಿಯೂ ಒಂದು ದೃಷ್ಟಿಯಿಂದ ಅನನ್ಯ. ಚರಿತ್ರೆ, ಮನಃಶಾಸ್ತ್ರ, ಸಮಾಜಶಾಸ್ತ್ರ, ಪರಿಸರ, ಮಾನವನ ಮೂಲಭೂತ ಶಕ್ತಿ, ದೌರ್ಬಲ್ಯ ಇವೆಲ್ಲ ಸೇರಿ ವ್ಯಕ್ತಿಯೊಬ್ಬ ರೂಪುಗೊಳ್ಳುತ್ತಾನೆ. ಆದ್ದರಿಂದ 'ವ್ಯಕ್ತಿ'ಯ ಬಗ್ಗೆ ಪ್ರತಿ ಲೇಖಕನಿಗೂ ಆಸಕ್ತಿ, ಕಾಳಜಿಗಳಿರುವುದು ಸಹಜ' ಎಂದ.

ಇದರರ್ಥ ಷೋಯಿಂಕಾ ವ್ಯಕ್ತಿವಾದಿ ಲೇಖಕನೆಂದಲ್ಲ. ಎಲ್ಲ ದೃಷ್ಟಿಯಿಂದಲೂ ಷೋಯಿಂಕಾ ಒಬ್ಬ ಪೊಲಿಟಿಕಲ್ ಲೇಖಕ. ಸ್ವಾತಂತ್ರ್ಯಾನಂತರದ ಎರಡೇ ದಶಕಗಳಲ್ಲಿ ತನ್ನ ನೈಜೀರಿಯಾ ಒಂದು ಗೊಂದಲಪುರವಾದಾಗ ಹೀಗೆ ರಾಜಕೀಯ ಲೇಖಕನಾಗದೇ ಆತನಿಗೆ ಬೇರೆ ಹಾದಿಯೇ ಇರಲಿಲ್ಲ. ಹಲವು ಗಂಭೀರ ನಾಟಕಗಳನ್ನು ಬರೆದ ಷೋಯಿಂಕಾ ತನ್ನ 'ಗೆರಿಲ್ಲಾ ಥಿಯೇಟರ್' ಮೂಲಕ ಬೀದಿ ನಾಟಕಗಳನ್ನು ಬರೆದು ಆಡಿಸಿದ. 'ಷಾಟ್‌ಗನ್ ಥಿಯೇಟರ್' ಎಂದು ಕರೆಯುವ ಇಂಥ ಹಲವು ನಾಟಕಗಳನ್ನು ಷೋಯಿಂಕಾ ಆಡಿಸಿದ್ದಾನೆ. ಒಮ್ಮೆ ನೈಜೀರಿಯಾದಲ್ಲಿ ಬರಗಾಲ ಬಂದು ಅಕ್ಕಿಯನ್ನು ಆಮದು ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿತು. ಅಂದರೆ ಈ ಆಮದಿನ ಪರ್ಮಿಟ್ಟುಗಳು ಮಂತ್ರಿಗಳ ಜೇಬು

ಸೇರಿದವು ಹಾಗೂ ಅವರು ಕೋಟ್ಯಾಧಿಪತಿಗಳಾದರು ಎಂದೇ ಇದರ ಅರ್ಥ. ಆಗ ಷೋಯಿಂಕಾನ ಗೆರಿಲ್ಲಾ ಥಿಯೇಟರ್ ಹುಡುಗರು 'ಅಕ್ಕಿಯ ನಾಟಕ' ಎಂಬ ಪ್ರಹಸನವನ್ನು ನೈಜೀರಿಯಾದ ರಾಜಧಾನಿ ಲಾಗೋಸ್‌ನಲ್ಲಿ ಆಡಿದರು. ಹಲವು ಪ್ರದರ್ಶನಗಳ ನಂತರ ಬಸ್ಸು ಹತ್ತಿ ಪ್ಲಕಾರ್ಡ್ ಹಿಡಿದು ಅಸೆಂಬ್ಲಿಯ ಬಳಿ ಹೊರಟರು. 'ಬಡವರ ಬಳಿ ಕಿತ್ತುಕೊಳ್ಳುತ್ತೇವೆ; ಉಳ್ಳವರಿಗೆ ಇನ್ನಷ್ಟು ಕೊಡುತ್ತೇವೆ' ಎಂದು ಆ ಪ್ಲಕಾರ್ಡುಗಳು ವ್ಯಂಗವಾಗಿ ಸಾರುತ್ತಿದ್ದವು. ಕೊನೆಗೆ ಅಸೆಂಬ್ಲಿ ತಲುಪಿದ ಕಲಾವಿದರು ಕಸಕಡ್ಡಿಗಳ ಹಲವು ಮೂಟೆಗಳ ಮೇಲೆ 'ಅಕ್ಕಿ' ಎಂದು ಬರೆದು ಅಸೆಂಬ್ಲಿಯ ಎದುರು ಒಟ್ಟಿ ಪೋಲೀಸರು ಬರುವ ಮುನ್ನ ಮಾಯವಾದರು.

ನೊಬೆಲ್ ಪ್ರಶಸ್ತಿ ಪಡೆದು 'ಗಣ್ಯ' ಸಾಹಿತಿಯಂತೆ 'ಗಂಭೀರ'ವಾಗಿರಬೇಕಾಗಿದ್ದ ಷೋಯಿಂಕಾ ಊರ ಉಸಾಬರಿಗಳಲ್ಲಿ ಮುಳುಗಿ ವಿವಾದಾಸ್ಪದ ಲೇಖಕನಾಗುವುದು ಹೀಗೆ. ಅವನಿಗೆ ಬಂದ ನೊಬೆಲ್ ಪ್ರಶಸ್ತಿ ಆಫ್ರಿಕಾ ಖಂಡಕ್ಕೆ ಬಂದ ಮೊದಲ ನೊಬೆಲ್ ಪ್ರಶಸ್ತಿ. ಈ ಪ್ರಶಸ್ತಿ ಬಂದಾಗ 'ಆ ದುಡ್ಡಿನಲ್ಲಿ ಏನು ಮಾಡುತ್ತೀಯ?' ಎಂದು ಯಾರೋ ಕೇಳಿದರೆ, 'ಇರೋದಕ್ಕೆ ಮನೆಯಿಲ್ಲ, ಈ ತನಕ ಯಾವ ಬ್ಯಾಂಕೂ ಸಾಲ ಕೊಡಲು ರೆಡಿಯಿರಲಿಲ್ಲ. ಈಗ ಪರವಾಗಿಲ್ಲ, ಮನೆ ಕಟ್ಟಿಸಬಹುದು' ಎಂದಿದ್ದ ಷೋಯಿಂಕಾ. ಅವನಿಗೆ ನೊಬೆಲ್ ಬಂದಾಗ ಕೆಲ ಆಫ್ರಿಕನ್ ಲೇಖಕರು 'ಬಿಳಿಯರ ಪ್ರಶಸ್ತಿ ಪಡೆದ ಷೋಯಿಂಕಾ ತನ್ನನ್ನು ಬಿಳಿಯರಿಗೆ ಮಾರಿಕೊಂಡಿದ್ದಾನೆ' ಎಂದು ಗಲಾಟೆಯೆಬ್ಬಿಸಿದ್ದರು. ಆದರೆ, ಈ ಪ್ರಶಸ್ತಿ ಪಡೆಯಬಹುದಾಗಿದ್ದ ಇನ್ನೊಬ್ಬ ಶ್ರೇಷ್ಠ ಆಫ್ರಿಕನ್ ಲೇಖಕ ಚಿನುವ ಅಚೀಬೆ ಮಾತ್ರ 'ನಮ್ಮವನೇ ಆದ ಲೇಖಕನೊಬ್ಬ ಬಿಳಿಯರು ಆಡುವ ಆಟದಲ್ಲಿ ಬಿಳಿಯರನ್ನೇ ಸೋಲಿಸಿದ್ದಾನೆ' ಎಂದು ಸಂಭ್ರಮದಿಂದ ಹೇಳಿದ.

೧೯೩೪ ರಲ್ಲಿ ನೈಜೀರಿಯಾದ ಅಬಿಯೊಕುಟಾ ಎಂಬ ಊರಿನಲ್ಲಿ ಹುಟ್ಟಿದ ಷೋಯಿಂಕಾನ ತಂದೆ ಸ್ಕೂಲ್ ಮೇಷ್ಟರು. ತಾಯಿ ಅಂಗಡಿಯಿಟ್ಟಿದ್ದಳು. ತಲೆ ಮೇಲೆ ಸಾಮಾನು ಹೊತ್ತ ಹೆಂಗಸರು ಅವನ್ನು ಮಾರಲು ರಾಗವಾಗಿ ಕೂಗುತ್ತಿದ್ದುದನ್ನು ಕೇಳಿ ಕೇಳಿ ಬಾಲ್ಯದಲ್ಲೇ ಸಂಗೀತದ ಲಯಕ್ಕೆ ಒಲಿದ ಷೋಯಿಂಕಾ ತನ್ನ ನಾಟಕಗಳಲ್ಲಿ ಆಫ್ರಿಕನ್ ಸಂಗೀತದ ವಿಶಿಷ್ಟ ಮಟ್ಟುಗಳನ್ನು ಬಳಸಿದ. ಮುಂದೆ ಕೆಲಕಾಲ ವಿಶ್ವವಿದ್ಯಾಲಯದ ಅಧ್ಯಾಪಕನಾಗಿ, ಆಮೇಲೆ ಕೆಲಸ ಬಿಟ್ಟು ಪುಟ್ಟ ಊರೊಂದರಲ್ಲಿ ನೆಲಸಿದಾಗ ನಿರಾಳನಾದ. ತಾನು ಬರೆಯಬೇಕಾದ, ಆಡಿಸಬೇಕಾದ ನಾಟಕಗಳು, ರೂಪಿಸಬೇಕೆಂದಿದ್ದ ಸಂಗೀತ, ತೆಗೆಯಬೇಕೆಂದಿದ್ದ ಸಿನಿಮಾ ಎಲ್ಲವನ್ನೂ ಈಗ ಶುರುಮಾಡಬಹುದೆಂದು ಖುಷಿಯಾದ. 'ದಿ ಇಂಟರ್‌ಪ್ರಿಟರ್ಸ್', 'ಸೀಸನ್ ಆಫ್ ಅನೋಮಿ' ಎಂಬ ಕಾದಂಬರಿಗಳು, 'ದಿ ರೋಡ್', 'ಲಯನ್ ಅಂಡ್ ದಿ ಜುಯೆಲ್', 'ಡಾನ್ಸ್ ಆಫ್ ದಿ ಫಾರೆಸ್ಟ್ಸ್', 'ದಿ ಸ್ಟ್ರಾಂಗ್ ಬ್ರೀಡ್' ಮುಂತಾದ ನಾಟಕಗಳೂ, 'ಷಟ್ಲ್ ಇನ್ ದಿ ಕ್ರಿಪ್ಟ್', 'ಇದಾನ್ರೆ' ಮುಂತಾದ ಕವನ ಸಂಕಲನಗಳು, 'ದಿ ಮ್ಯಾನ್ ಡೈಡ್' (ಸೆರೆಮನೆ ಡೈರಿ) 'ಆಕೆ' (ಬಾಲ್ಯಕಾಲ ಕುರಿತ ಆತ್ಮಕಥನ) ಇವೆಲ್ಲವನ್ನೂ ಬರೆದ ಷೋಯಿಂಕಾ ಯೊರೂಬಾ ಭಾಷೆಯಲ್ಲಿ ಬರೆಯದೆ ತನಗೆ ಚಿಕ್ಕಂದಿನಿಂದ ಒಗ್ಗಿಹೋಗಿರುವ ಇಂಗ್ಲಿಷಿನಲ್ಲೇ ಬರೆದವನು. ಸೃಷ್ಟಿ–ವಿನಾಶ, ಯಾತನೆ, ಕಲಾವಿದನ ಸೃಜನಶೀಲ ಶಕ್ತಿ–ಇವೆಲ್ಲವನ್ನೂ ಪ್ರತಿನಿಧಿಸುವ ಒಗುನ್ ದೇವತೆಯನ್ನು ತನ್ನ ದರ್ಶನದ ಕೇಂದ್ರದಲ್ಲಿರಿಸಿಕೊಂಡ ಷೋಯಿಂಕಾ ಯರೂಬಾ ದುರಂತ ಕಲ್ಪನೆಯನ್ನಾಧರಿಸಿ 'ದಿ ಫೋರ್ತ್ ಸ್ಟೇಜ್' ರಂಗಭೂಮಿಯ ಕಲ್ಪನೆಯನ್ನು ರಂಗಪ್ರಪಂಚಕ್ಕೆ ಕೊಟ್ಟವನು.

ಈಗ ತನ್ನ ನಾಡಿನ ದುಃಖವನ್ನೂ, ಪಾಪವನ್ನೂ ಹೆಗಲ ಮೇಲೆ ಹೊತ್ತು ನೆಲೆಯಿಲ್ಲದೆ ಗೋಳದ ತುಂಬಾ ಸುತ್ತುವ ಷೋಯಿಂಕಾನ ಹತ್ತಾರು ಫೋಟೋಗಳನ್ನು ನಾನು ನೋಡಿದ್ದೇನೆ. ಅವುಗಳಲ್ಲಿ ಷೋಯಿಂಕಾ ಅತ್ಯಂತ ಗಂಭೀರವಾಗಿರುವ, ನಗಲೆತ್ನಿಸಿರುವ, ನಾಟಕ ಕಲಿಸುತ್ತಿರುವ, ಸಂದರ್ಶನ ಕೊಡುತ್ತಿರುವ ಹಲವಾರು ಭಂಗಿಗಳಿವೆ. ಆದರೆ ಈ ಎಲ್ಲ ಮುಖಗಳಲ್ಲೂ ಆಳದ ಯಾತನೆ ಅವನ ಕಣ್ಣತುಂಬ ಮಡುಗಟ್ಟಿದಂತಿರುತ್ತದೆ. ಈ ಬಗೆಯಲ್ಲಿ ಸದಾ ಕಡುದುಃಖ ಸೂಸುವ ಕಣ್ಣುಗಳನ್ನು ನಾನು ಇನ್ನಾವ ಲೇಖಕನಲ್ಲೂ ಕಂಡಿಲ್ಲ.

# 3. ಅಮೇರಿಕಾ... ಅಮೇರಿಕಾ... ಅಮೇರಿಕಾ... ಅಮೇರಿಕಾ...

**ನಾ. ಡಿಸೋಜ**

---

ಕೆಲಸಕ್ಕೆ ಸೇರಿದ ಆರೇ ತಿಂಗಳಿಗೆ ಅವನಿಗೆ ಅಮೇರಿಕಾಕ್ಕೆ ಹೋಗುವ ಅವಕಾಶ ಬಂದೊದಗಿತ್ತು. ಅದೊಂದು ಅಂತರಾಷ್ಟ್ರೀಯ ಕಂಪನಿ. ಬೆಂಗಳೂರಿನಲ್ಲಿ ಶಾಖೆಗಳಿರುವಂತೆಯೇ ಬೇರೆ ಬೇರೆ ದೇಶಗಳಲ್ಲಿಯೂ ಇದ್ದವು. ಕಂಪ್ಯೂಟರ್ ಇಂಜಿನಿಯರ್ ಆಗಿ ಕೆಲಸಕ್ಕೆ ಸೇರಿಕೊಂಡ ಈತ ವಾಕ್ ಇನ್ ಕಂಪ್ಯೂಟರ್ ಆಯ್ಕೆಯಾಗಿದ್ದ. ಕೆಲಸವೂ ಸಿಕ್ಕಿತು. ಕೊರಳ ಪಟ್ಟಿಗೆ ತನ್ನ ಹೆಸರು, ಕಂಪನಿ ವಿಳಾಸ ಇರುವ ಕಾರ್ಡನ್ನು ಧರಿಸಿಕೊಂಡು ಈತ ಕೆಲಸಕ್ಕೆ ಹೊರಟಾಗಲೆಲ್ಲ ಅವನ ಅಮ್ಮ ಇವನ ಕೆನ್ನೆ ತಲೆ ಮೈ ಮುಟ್ಟಿ ಹೋಗಿ ಬಾ ಹೋಗಿ ಬಾ ಎಂದು ಹತ್ತು ಬಾರಿ ಹೇಳುತ್ತಿದ್ದಳು. ಅವಳ ಕಾಲುಗಳಿಗೆ ಬೆರಳು ತಾಗಿಸಿ ಆ ಬೆರಳುಗಳನ್ನು ಹಣೆಗೆ ಹಚ್ಚಿಕೊಳ್ಳುತ್ತಿದ್ದ.

ತನ್ನನ್ನು ಬೆಳಸುವಲ್ಲಿ ತಾಯಿ ವಹಿಸಿದ ಪಾತ್ರ ಅಂತಹದು ಎಂಬುದು ಅವನಿಗೆ ಗೊತ್ತಿತ್ತು.

ಅವಳೂ ವಿದ್ಯಾವಂತೆಯೇ. ಆದರೆ ಅವಳ ವಿದ್ಯೆ ಹೊರಗಿನ ಯಾವುದೇ ಕೆಲಸಕ್ಕೆ ಬಳಕೆಯಾಗಲಿಲ್ಲ. ತನಗೆ ಇಪ್ಪತ್ತು ವರ್ಷವಾದಾಗ ತನ್ನ ತಂದೆ ತೀರಿಕೊಂಡರು. ಅನಂತರವೇ ಅಮ್ಮನ ಬುದ್ಧಿವಂತಿಕೆ ವ್ಯವಹಾರ ಜ್ಞಾನ ತನಗೆ ತಿಳಿದದ್ದು.

'ಅವರು ನಮ್ಮನ್ನು ಬಿಟ್ಟು ಹೋದರು ವಾಸು... ಆದರೆ ಅಂಜಬೇಡ ನಾನಿದ್ದೇನೆ...' ಎಂದು ಅಮ್ಮ ತನ್ನನ್ನು ಅಪ್ಪಿಕೊಂಡು ಹೇಳಿದ್ದಳು.

ಅಪ್ಪ ಇಂಜಿನಿಯರಿಂಗ್ ಕಾಲೇಜಿಗೆ ಅಷ್ಟೂ ಹಣ ಡೊನೇಷನ್ ಕಟ್ಟಿ ತನ್ನನ್ನು ಕಾಲೇಜಿಗೆ ಕಳುಹಿಸಿದ್ದರು. ಎರಡು ವರ್ಷ ಮುಗಿದಿತ್ತು ಮತ್ತೂ ಮೂರು ವರ್ಷಗಳಿದ್ದವು. ಅಮ್ಮ ತನ್ನ ಬೆಂಗಾವಲಿಗೆ ನಿಂತಳು. ಅಪ್ಪ ಹಣವನ್ನು ಇಟ್ಟಿರಲಿಲ್ಲ. ಹಣ ಇಡುವ ಪ್ರವೃತ್ತಿ ಕೂಡ ಅವರದಾಗಿರಲಿಲ್ಲ. ಅಡಕೆ ವ್ಯಾಪಾರದಲ್ಲಿ ಏನು ಹಣ ಬರುತ್ತಿತ್ತು ಅದನ್ನು ಅಂದಂದೇ ಖರ್ಚು ಮಾಡಿಬಿಡುತ್ತಿದ್ದರು. ಒಂದು ಮನೆ ಕಟ್ಟಿದ್ದರು. ಅಮ್ಮನಿಗೆ ಬಂಗಾರ ಮಾಡಿಸಿದ್ದರು. ಒಂದೆರಡು ಇನ್ಶೂರೆನ್ಸ್ ಪಾಲಿಸಿಗಳಿದ್ದವು ಆದರೆ ದುಡಿಯುವ ವ್ಯಕ್ತಿ ತೀರಿಕೊಂಡರೆ ಇದೆಲ್ಲ ಎಷ್ಟು ದಿನ ಬರುತ್ತದೆ. ಅದೂ ತಾನು ಇಂಜಿನಿಯರಿಂಗ್ ಓದುವವ!

ಇನ್ಶೂರೆನ್ಸಿನ ಹಣ ಖರ್ಚಾಯಿತು. ಅಮ್ಮನ ಮೈಮೇಲಿನ ಬಂಗಾರ ಮಾಯವಾಯಿತು. ಅಮ್ಮ ಭೈರಪ್ಪನವರ ಅಡಕೆ ಮಂಡಿಯಲ್ಲಿ ಕೆಲಸಕ್ಕೆ ಸೇರಿಕೊಂಡಳು. ರೈಟರ್ ಕೆಲಸ. ಲೆಕ್ಕ ಬರೆಯುವುದು. ಭೈರಪ್ಪನವರು ತಂದೆಯವರ ವ್ಯಾಪರಕ್ಕೆ ಬೆಂಬಲ ಕೊಟ್ಟವರೆ, ಆ ಮಂಡಿಯಲ್ಲಿ ಅಡಕೆಕೊಂಡು ಹುಬ್ಬಳ್ಳಿ ಮುಂಬಯಿಗೆ ಕಳುಹಿಸುತ್ತಿದ್ದರಂತೆ. ಅಮ್ಮ ಅವರಲ್ಲಿಗೆ ಹೋಗಿ–

'ನಾನು ಗ್ರಾಜುಯೇಟ್... ಈವರಗೆ ಕೆಲಸ ಮಾಡುವ ಸಂದರ್ಭ ನನಗೆ ಬಂದಿರಲಿಲ್ಲ... ಆದರೆ ಇನ್ನು ನಾನು ಕೆಲಸ ಮಾಡಲಿಲ್ಲ ಅಂದರೆ ಮಗನ ಓದು ನಿಲ್ಲುತ್ತೆ... ಸಂಸಾರ ಮುಂದೆ ಸಾಗಲ್ಲ... ನನಗೆ ನಿಮ್ಮಲ್ಲಿ ಒಂದು ಕೆಲಸ ಕೊಡಿ... ಇಲ್ಲ ಬೇರೆ ಮಂಡಿಗಳಲ್ಲಿ ಎಲ್ಲಿಯಾದರೂ ಕೆಲಸ ಕೊಡಿಸಿ...' ಎಂದಾಗ ಭೈರಪ್ಪನವರು–

'...ತಾಯೀ ವಾಮನರಾಯರು ನಮಗೆ ತುಂಬಾ ಬೇಕಾದವರು. ಒಳ್ಳೇ ವ್ಯವಹಾರಸ್ಥ... ಅವರು ತೀರಿಕೊಂಡದ್ದು ನಮಗೂ ಸಂಕಟದ ವಿಷಯವೆ... ನೀವು ಕೆಲಸ ಮಾಡತೀನಿ ಅಂದರೆ, ನಮ್ಮಲ್ಲಿಗೇನೆ ಬನ್ನಿ... ಬೇರೆ ಗುಮಾಸ್ತರಿಗೆ ಕೊಡೋ ಹಾಗೆ ನಿಮಗೂ ಸಂಬಳ ಕೊಡುತ್ತೇನೆ. ಆದರೆ ನನ್ನ ಕಷ್ಟ ಏನೂ ಅಂದ್ರೆ... ವಾಮನರಾಯರ ಹೆಂಡತಿಗೆ ನಮ್ಮ ಮಂಡೀಲಿ ಕೆಲಸ ಕೊಟ್ಟು ದುಡಿಸಿಕೊಳ್ಳಬೇಕಲ್ಲ ಅನ್ನೋದು' ಎಂದು ಭೈರಪ್ಪ ತಮ್ಮ ಗೋಳು ತೋಡಿಕೊಂಡರು.

'ಅದನ್ನು ನೀವು ತಲೆಗೆ ಹಚ್ಚಿಕೊಳ್ಳಬೇಡಿ' ಎಂದಳು ಅಮ್ಮ.

ಅಮ್ಮ ಮಂಡಿಯಲ್ಲಿ ಕೆಲಸಕ್ಕೆ ಸೇರಿಕೊಂಡಳು.

ಎಂಟು ಗಂಟೆಗೆಲ್ಲ ಅಮ್ಮ ಮಂಡಿಗೆ ಹೋಗಬೇಕಿತ್ತು. ಹೀಗಾಗಿ ಅವಳು ಏಳೂತ್ತಿದ್ದುದು ಬೆಳಗ್ಗೆ ಐದು ಗಂಟೆಗೆ. ಅಷ್ಟು ಹೊತ್ತಿಗೆ ಎದ್ದು ಓದುತ್ತ ಕುಳಿತಿಕೊಳ್ಳುತ್ತಿದ್ದ ತನಗೆ ಕಾಫಿ ಮಾಡಿಕೊಟ್ಟು, ಬಚ್ಚಲೊಲೆಗೆ ಬೆಂಕಿ ಹಾಕಿ ಅಡಿಗೆ ಕೆಲಸ ಪ್ರಾರಂಭಿಸುತ್ತಿದ್ದಳು. ಏಳು ಗಂಟೆಗೆ ಕಾಫಿ ತಿಂಡಿ ಸಿದ್ಧವಾಗಿರುತ್ತಿತ್ತು. ಹಿಂದೆಯೇ ಅಡಿಗೆ ಮಾಡಿ ಮೇಜಿನ ಮೇಲೆ ತಂದು ಜೋಡಿಸಿ ಇಡುತ್ತಿದ್ದಳು.

'ವಾಸು ನಿನ್ನೆ ನೀನು ಪಲ್ಯ ತಿಂದಿಲ್ಲ. ಮೊಸರು ಹಾಕಿಕೊಂಡಿಲ್ಲ... ನಾನು ನಿಂತು ಬಡಿಸೋಣ ಅಂದರೆ ಆಗೊಲ್ಲ, ನೀನೇ ಏನು ಬೇಕೋ ಅದನ್ನ ಬಡಿಸ್ಕೊಂಡು ಊಟ ಮಾಡಬೇಕು... ಈ ವಯಸ್ಸಿನಲ್ಲಿ ಒಂದು ತುತ್ತು ಜಾಸ್ತಿ ತಿಂದರೆ ಏನೂ ತೊಂದರೆ ಆಗೋಲ್ಲ... ಒತ್ತಾಯ ಮಾಡಿ ಬಡಿಸೋರಿಲ್ಲ ಅಂತ ಕಡಿಮೆ ಊಟ ಮಾಡಬೇಡ' ಎಂದು ಮಗನಿಗೆ ಹೇಳಿ ಆ ತಾಯಿ ಎಂಟು ಗಂಟೆಗೆಲ್ಲ ಮನೆ ಬಿಡುತ್ತಿದ್ದಳು. ಗಾಡಿಕೊಪ್ಪ, ಮಲ್ಲಿಗೆಯಳ್ಳಿ ಎಂದೆಲ್ಲ ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ಬಸ್ಸನ್ನು ಹಿಡಿದು ಅವಳು ಮಂಡಿಗೆ ಬರುತ್ತಿದ್ದಳು. ಅಲ್ಲಿ ಸಂಜೆ ಐದರವರೆಗೆ ಕೆಲಸ.

ಯಾರು ಯಾರು ಮಂಡಿಗೆ ಎಷ್ಟು ಎಷ್ಟು ಅಡಕೆ ತಂದು ಹಾಕಿದರು. ಅವರಿಗೆ ಮುಂಗಡ ಹಣ ನೀಡಲಾಯಿತೆ? ಎಷ್ಟು ನೀಡಲಾಯಿತು, ಈ ಅಡಕೆಯಲ್ಲಿ ದಲ್ಲಾಳಿಗಳು ಬೆಲೆ ಕಟ್ಟಿಕೊಂಡುದೆಷ್ಟು, ಅವರು ನೀಡಿದ ಹಣ, ಇದರಲ್ಲಿ ಅಡಕೆ ಹಾಕಿದವರಿಗೆ ಸಂದಾಯವಾದುದೆಷ್ಟು– ಹೀಗೆ ಎಲ್ಲವನ್ನೂ ಬರೆದಿಡುವ, ಲೆಕ್ಕವಿಡುವ ಕೆಲಸ ಇವಳದ್ದು. ಇದು ಅವಳಿಗೇ ಹೊಸದೇ, ವಾಮನರಾಯರು ಮಾತಿನ ನಡುವೆ ಈ ಎಲ್ಲ ವಿಷಯಗಳನ್ನೂ ಅವಳಿಗೆ ಹೇಳುತ್ತಿದ್ದರು ನಿಜ. ಆದರೆ ಈ ಮಾತುಗಳನ್ನು ಅವಳು ಕೇಳಿ ಮರೆತ್ತಿದ್ದಳು. ಈಗ ಅವೆಲ್ಲ ನೆನಪಿಗೆ ಬಂದವು. ಕೆಲ ಸಂದರ್ಭಗಳಲ್ಲಿ ಅವಳಿಗೆ ನೆರವಾದವು.

ಮಂಡಿಯಲ್ಲಿ ಕೆಲಸ ಮಾಡುವ ಬೇರೊಬ್ಬ ರೈಟರು ಇದ್ದರು. ಅವರ ಕೆಲಸ ಮಂಡಿಗೆ ಬರುವ ಅಡಿಕೆಯನ್ನು ಕಾಟಾದ ಮೇಲಿರಿಸಿ ತೂಗಿ ತೆಗೆದುಕೊಂಡು ಗೋದಾಮಿಗೆ ತುಂಬುವುದು, ಬ್ಯಾಂಕಿಗೆ ಹೋಗುವುದು, ಇತ್ಯಾದಿ. ಹೀಗಾಗಿ ಅಮ್ಮನಿಗೆ ತುಂಬಾ ಕೆಲಸ.

ಈ ಕೆಲಸ ಮಾಡಿ ಮುಗಿಸಿ ಮನೆಗೆ ಬಂದರೆ ಮತ್ತೆ ಮನೆಗೆಲಸ. ಮನೆ ಒರೆಸು, ಪಾತ್ರೆ ತೊಳೆ, ರಾತ್ರಿಯ ಅಡಿಗೆ ಮಾಡು, ಬಟ್ಟೆ ಒಗೆ ಹೀಗೆ.

ತಾಯಿಗೆ ನೆರವಾಗಲೆಂದು ವಾಸು ಅದು ಇದು ಕೆಲಸ ಮಾಡಿದ ತನ್ನ ಬಟ್ಟೆ ಕಸುಕಿ ಹಾಕಿದ. ಅವಳು ಶರಟಿನ ಕಾಲರಿನ ಹಿಂದೆ ನೋಡಿದಳು.

'ವಾಸು... ಕೊಳೆ ಹಾಗೇ ಇದೆ... ನಿನಗೆ ಬಟ್ಟೆ ಒಗೆಯಲಿಕ್ಕೆ ಬರೋದಿಲ್ಲ... ನಾಳೆಯಿಂದ ನಾನೇ ಒಗಿತೀನಿ ಬಿಡು...' ಎಂದು ಅವನು ಒಗೆದ ಬಟ್ಟೆಯನ್ನು ಮತ್ತೆ ನೀರಿಗೆ ಅದ್ದಿ ಇರಿಸಿದಳು.

ರಾತ್ರಿ ಹತ್ತರ ತನಕವೂ ಅವಳ ಈ ಕೆಲಸ ಮುಂದುವರೆಯುತ್ತದೆ.

ನಡು ನಡುವೆ ಬಂದು ಮಗನನ್ನು ಮಾತನಾಡಿಸುತ್ತಾಳೆ. ಅವನ ಓದು, ವಿದ್ಯಾಭ್ಯಾಸ, ಕಾಲೇಜು, ಅಲ್ಲಿಯ ಚಟುವಟಿಕೆ, ಮಗನ ಸ್ನೇಹಿತರ ಬಗ್ಗೆ ವಿವರಿಸಿಕೊಳ್ಳುತ್ತಾಳೆ.

ತಾಯಿಯ ಹತ್ತಿರ ಮಾತನಾಡುವುದೆಂದರೆ ಮಗನಿಗೂ ಸಂತಸವೆ.

ತಾಯಿ ಮುಗ್ಧೆಯಲ್ಲ. ಅವಿದ್ಯಾವಂತೆಯಲ್ಲ. ಎಲ್ಲವನ್ನೂ ಬಲ್ಲವಳು ಎಂಬ ಹೆಮ್ಮೆ. ಎಷ್ಟೋ ಸಮಸ್ಯೆಗಳಿಗೆ ಅವಳಲ್ಲಿ ಉತ್ತರವಿರುತ್ತಿತ್ತು. ಮನುಷ್ಯನ ಗುಣಸ್ವಭಾವಗಳನ್ನು ವಿಶ್ಲೇಷಣೆ ಮಾಡುವಲ್ಲಿ ಅವಳು ಎಂದೂ ತಪ್ಪುತ್ತಿರುಲಿಲ್ಲ.

'ಅಮ್ಮ, ಇದು ಏಕೆ ಹೀಗೆ' ಎಂದು ಕೇಳಿದರೆ, ಆಕೆ ಎಲ್ಲವನ್ನೂ ಬಿಡಿಸಿ ಹೇಳುತ್ತಿದ್ದಳು.

ಮುಖ್ಯವಾಗಿ ಅವಳ ಬದುಕು ಕೇಂದ್ರೀಕೃತವಾಗಿರುವುದು ತನ್ನ ಮೇಲೆ ಎಂಬುದು ವಾಸುಗೆ ಗೊತ್ತಿತ್ತು.

ತನ್ನ ಕಷ್ಟ ತಾಪತ್ರಯ ನೋವು ಶ್ರಮ ಎಲ್ಲವನ್ನೂ ಮಗನಿಗಾಗಿ ಮರೆತಾಕೆ ಅವಳು. ಅವಳ ಕಷ್ಟಗಳನ್ನು ಕಡಿಮೆ ಮಾಡಲು ಅವಳನ್ನು ಸದಾ ಸಂತೋಷದಿಂದಿರಲು ಪ್ರಯತ್ನಿಸುತ್ತಿದ್ದವ ವಾಸು. ಕಾಲೇಜಿನಲ್ಲಿ ನಡೆದ ಸ್ವಾರಸ್ಯಕರ ಘಟನೆಗಳನ್ನು ಹೇಳುತ್ತಿದ್ದ. ತಾನು ಕೇಳಿದ್ದನ್ನು ಅವಳಿಗೆ ವಿವರಿಸುತ್ತಿದ್ದ. ಅವಳನ್ನು ನಗಿಸಲು ಕೆಲಹೊತ್ತು ಅವಳನ್ನು ನೆಮ್ಮದಿಯಿಂದಿರಿಸಲು ಯತ್ನಿಸುತ್ತಿದ್ದ. ಹಣಕ್ಕಾಗಿ ಮತ್ತೊಂದಕ್ಕೆ ಅವಳನ್ನು ಪೀಡಿಸುತ್ತಿರಲಿಲ್ಲ. ತಾನು ಹೋಗುತ್ತಿರುವುದು ಇಂಜಿನಿಯರಿಂಗ್ ಕಾಲೇಜ್, ಅಲ್ಲಿರಿವವರೆಲ್ಲ ಶ್ರೀಮಂತರ ಅಧಿಕಾರಿಗಳ ಮಕ್ಕಳು. ಅವರ ಮೋಜು ಮಜ ತನಗೆ ಎಟುಕುವುದಿಲ್ಲ. ಅದಕ್ಕೆಲ್ಲ ಮೀಸಲಿಡುವಷ್ಟುಅ ಹಣ ಅಮ್ಮನಲ್ಲಿಲ್ಲ ಎಂಬುದವನಿಗೆ ಗೊತ್ತಿತ್ತು. ಹೀಗಾಗಿ ಆತ ಒಂದು ಮಿತಿಯಲ್ಲಿರುತ್ತಿದ್ದ. ಈ ವಿಷಯ ಆಕೆಗೂ ಗೊತ್ತಿತ್ತು.

'ನಾನು ದುಡಿಯೋದೇ ನಿನಗಾಗಿ ವಾಸು... ನೀನು ಯಾವುದಕ್ಕೂ ಕಡಿಮೆ ಮಾಡಿಕೊಳ್ಳಬೇಡ' ಅನ್ನುತ್ತಿದ್ದಳು ತಾಯಿ.

'ಇಲ್ಲಮ್ಮ, ಅನಾವಶ್ಯಕವಾಗಿ ನಾನು ಯಾವುದಕ್ಕೂ ಖರ್ಚು ಮಾಡುವುದಿಲ್ಲ...' ಎಂದು ಹೇಳುತ್ತಿದ್ದ ವಾಸು.

'ಅಮ್ಮ ನೀನು ಕೆಲಸ ಮಾಡೋದು ನನಗಿಷ್ಟವಿಲ್ಲ. ನನ್ನ ಇಂಜಿನಿಯರ್ ಮುಗಿದ ಮೇಲೆ ನನಗೆ ಕೆಲಸ ಸಿಕ್ಕ ಕೂಡಲೇ ನೀನು ಕೆಲಸ ಬಿಡಬೇಕು' ಎಂದು ಆಗಲೇ ಕರಾರು ವಿಧಿಸಿದ್ದ.

ಆಯ್ತು ಕಣೋ... ಹಾಗೆ ಮಾಡತೀನಿ ಎಂದಿದ್ದಳವಳು.

ಹಾಗೆಯೇ ಆಯಿತು.

ವಾಸು ಕಂಪ್ಯೂಟರ್ ಇಂಜಿನಿಯರಿಂಗ್ ಅನ್ನು ಶ್ರೇಷ್ಠ ದರ್ಜೆಯಲ್ಲಿ ಮುಗಿಸಿದ. ಕೆಲಸಕ್ಕಾಗಿ ಕೆಲ ಕಡೆಗಳಲ್ಲಿ ಅರ್ಜಿಯನ್ನೂ ಹಾಕಿದ.

ಬೆಂಗಳೂರಿನ ಒಂದು ಕಂಪನಿ ನೇರವಾಗಿ ಬಂದು ಸಂದರ್ಶನ ಮಾಡಿ ಕೆಲಸ ಪಡೆಯಿರಿ ಎಂದು ಪ್ರಕಟಣೆ ನೀಡಿತ್ತು.

ವಾಸು ಶಿವಮೊಗ್ಗದಿಂದ ಬೆಂಗಳೂರಿಗೆ ಹೋದ.

ಕೋರಮಂಗಲದಲ್ಲಿ ಕಂಪನಿಯ ಭವ್ಯ ಕಟ್ಟಡ ನೋಡಿಯೇ ಇವನಲ್ಲಿ ಆಸೆ ಚಿಗುರಿತು. ತನ್ನ ದಾಖಲಾತಿಗಳ ಜೊತೆ ಹೋಗಿ ಸಂದರ್ಶನವನ್ನು ಎದುರಿಸಿದ. ವಾಸು ಆಯ್ಕೆಯಾಗಿದ್ದ.

ಒಂದು ತಿಂಗಳು ಆತ ಯಾರೋ ಸ್ನೇಹಿತನೊಬ್ಬನ ಜೊತೆ ಇದ್ದ. ಶನಿವಾರ ರಾತ್ರಿ ಶಿವಮೊಗ್ಗಕ್ಕೆ ತಿರುಗಿ ಬರುತ್ತಿದ್ದ. ಭಾನುವಾರ ರಾತ್ರಿ ತಿರುಗಿ ಹೋಗುವುದು.

ಅಮ್ಮ ನಿನ್ನ ಬಿಟ್ಟು ನಾನು ಇರಲಾರೆ ಕಣೆ ಎಂದು ಮುಖ ಬಾಡಿಸಿಕೊಂಡು ನುಡಿಯುತ್ತಿದ್ದ.

ಅವಳದ್ದೂ ಅದೇ ಕತೆಯಾಗಿತ್ತು. ಆದರೆ ಅವಳೂ ಬಾಯಿಬಿಟ್ಟು ಹೇಳಲಾರಳು.

ಎರಡನೇ ವಾರ ಬಂದ ವಾಸು...

"ಅಮ್ಮ ನಾನೊಂದು ಮನೆ ಹುಡುಕಿದ್ದೇನೆ. ಒಂದೂವರೆ ಸಾವಿರ ಬಾಡಿಗೆ, ೧೫ ಸಾವಿರ ಮುಂಗಡ. ಮುಂದಿನ ತಿಂಗಳು ನೀನು ಬೆಂಗಳೂರಿಗೆ ಬರಲು ಸಿದ್ಧಳಾಗಬೇಕು" ಎಂದ.

ಹಣಕ್ಕೆ ಏನು ಮಾಡಿದೆ? ಎಂದು ಕೇಳಿದಳವಳು.

ಕಂಪನಿಯವರು ಕೊಡಲು ಒಪ್ಪಿದ್ದಾರೆ ಎಂದ.

ಮಗನಿಗೆ ಕೆಲಸ ಸಿಕ್ಕ ತಿಂಗಳಿಗೆಲ್ಲ ತಾಯಿ ಮಾಡುತ್ತಿದ್ದ ಕೆಲಸ ಬಿಟ್ಟಳು. ಅಡಿಕೆ ಮಂಡಿ ಭೈರಪ್ಪನವರಿಗೆ ಕೃತಜ್ಞತೆ ಹೇಳಿ ಬಂದಳು.

ನಾನಿನ್ನು ಬೆಂಗಳೂರಿಗೆ ಹೋಗತೀನಿ ಮಗನಿಗೆ ಕೆಲಸ ಸಿಕ್ಕಿದೆ... ಎಂದಳು.

ಆಯಿತು ತಾಯಿ ಹೋಗಿ ಬನ್ನಿ ಎಂದರು ಭೈರಪ್ಪ.

ಊರಿನ ಗುರುತು ಪರಿಚಯದವರು ಹೀಗೆ ಹೇಳಿದರು.

ಮನೆಯನ್ನು ಬಾಡಿಗೆಗೆ ಕೊಟ್ಟು ಮನೆಯಲ್ಲಿದ್ದ ಚೂರುಪಾರು ಪಾತ್ರೆ, ಕುರ್ಚಿಗಳನ್ನು ಅಲ್ಲಿಯೇ ವಿಲೇವಾರಿ ಮಾಡಿ ತಾಯಿ ಮಗ ಬೆಂಗಳೂರಿಗೆ ಬಂದರು. ವಾಸುವಿನ ಕಛೇರಿ ಹತ್ತಿರವೇ ಮನೆ. ಕಂಪನಿ ಕಾರು ಬರುತ್ತಿತ್ತು. ಊಟಕ್ಕೆ ಸಂಜೆ ಕಾರು ಬರುತ್ತಿತ್ತು. ವಾಸು ತನ್ನ ಕೆಲಸದ ಬಗ್ಗೆ ಆಫೀಸಿನ ಬಗ್ಗೆ, ತನಗಲ್ಲಿ ಸಿಗುತ್ತಿರುವ ಗೌರವದ ಬಗ್ಗೆ ತಾಯಿಗೆ ಸಾಕಷ್ಟು ಹೇಳಿದ.

ಒಂದು ರೀತಿಯಲ್ಲಿ ಅವಳು ಕೂಡ ಸಂತುಷ್ಟಳಾದಳು.

ಮಗನನ್ನು ಕಂಪ್ಯೂಟರ್ ಇಂಜಿನಿಯರ್ ಮಾಡಬೇಕು ಎಂದು ಗಂಡನ ಆಸೆಯನ್ನು ತಾನು ನೆರವೇರಿಸಿದೆ ಎಂದು ಅವಳೂ ನೆಮ್ಮದಿ ಕಂಡಳು. ಮಗನ ಮಾತು ಕೇಳುತ್ತ ಅವನ ಎಲ್ಲ ಕೆಲಸಗಳನ್ನೂ ಮಾಡಿಕೊಡುತ್ತ ಅವಳು ಸಂತೃಪ್ತಿಯಿಂದಿದ್ದಳು.

ಈಗ ಹಣಕ್ಕೆ ಕೊರತೆ ಇರಲಿಲ್ಲ.

ಮಗ ಮುಂದೆ ಏನೇನು ಬೇಕೋ ಅದನ್ನೆಲ್ಲ ತಂದು ಮನೆ ತುಂಬಿಕೊಂಡಿದ್ದ. ಟಿವಿ, ಬಟ್ಟೆ ಒಗೆಯುವ ಯಂತ್ರ, ಮಿಕ್ಸಿ, ಫ್ರಿಜ್ಜು, ಊಟದ ಮೇಜು, ಕುರ್ಚಿಗಳು, ಸೋಫಾ, ಹೀಗೆ ದಿನಕ್ಕೊಂದು ವಸ್ತು ಮನೆಗೆ ಬರತೊಡಗಿದಾಗ ಅವಳೇ–

"ವಾಸು... ಇವೆಲ್ಲ ಇಲ್ಲದೇನೆ ನಾವು ಕಾಲ ಹಾಕಿದ್ದೆವಲ್ಲಪ್ಪ" ಎಂದಳು.

'ಅವಾಗ ನಮ್ಮ ಸ್ಥಿತಿ ಹಾಗಿತ್ತು ಅಮ್ಮ... ಈಗ ಬದಲಾಗಿದೆ... ಇವೆಲ್ಲ ಇಲ್ಲ ಅಂದ್ರೆ ಇವತ್ತು ಅವನು ಮನುಷ್ಯನೇ ಅಲ್ಲ... ಇರಲಿ ಬಿಡು... ನಿನಗೂ ಅನುಕೂಲ... ಬಟ್ಟೆ ಒಗೆಯೋದಿಲ್ಲ... ಖಾರ ಅರೆಯೋದಿಲ್ಲ. ಹಳಸಿದ್ದನ್ನು ತಿನ್ನಬೇಕೂಂತ ಇಲ್ಲ...' ಎಂದು ಹೇಳಿ ನಕ್ಕ.

ಇದೂ ಸರಿ ಎನಿಸಿತು ಅವಳಿಗೆ.

ಮಗನ ಫೀಸಿಗೆ ಪುಸ್ತಕಕ್ಕೆ ಎಲ್ಲಿ ತೊಂದರೆಯಾಗುತ್ತದೋ ಎಂದು ತಾನು ವರ್ಷಗಟ್ಟಲೆ ಸೀರೆಯನ್ನೇ ಕಂಡಿರಲಿಲ್ಲ. ಇದ್ದುದರಲ್ಲೇ ಹೊಲಿದು ಹೊಲಿದು ಉಡುತ್ತಿದ್ದೆ. ಈಗ ಬಿಗ್ ಬಜಾರಿಗೆ ಹೋದರೆ ಮಗ ಒಂದೇ ಸಾರಿ ಏಳು ಎಂಟು ಸೀರೆ ಕೊಳ್ಳುತ್ತಾನೆ. ಇರಲಿ ಅಂದುಕೊಂಡಳವಳು. ತನ್ನ ಗಂಡನ ನೆನಪೂ ಅವಳಿಗೆ ಬಾರದೇ ಇರಲಿಲ್ಲ.

ಇಷ್ಟಾದರೂ ಅವಳು ಮಗನ ಬೇಕು ಬೇಡಗಳನ್ನು ಪೂರೈಸಲು ಸದಾ ಸಿದ್ಧಳಾಗಿರುತ್ತಿದ್ದಳು.

ಮಗನಿಗೆ ಗ್ರೈಂಡರ್ ಮಿಕ್ಸಿಯಲ್ಲಿ ಮಾಡಿದ ದೋಸೆ ಚಟ್ನಿ, ಸಾರು ಸಾಂಬಾರ ಆಗುತ್ತಿರಲಿಲ್ಲ.

'ಏನೂ ರುಚಿ ಇಲ್ಲ' ಎಂದ. ಆತ ಹೇಳಿದ ಕೂಡಲೇ ಆಕೆ ಮಿಕ್ಸರನ್ನು ಅದರ ರಟ್ಟಿನ ಪೆಟ್ಟಿಗೆಯಲ್ಲಿ ಇರಿಸಿದಳು.

'ಯಾಕಮ್ಮ ಮಿಕ್ಸರ್ ಉಪಯೋಗಿಸೋದಿಲ್ಲ' ಎಂದು ಮಗ ಕೇಳಿದಾಗ ಆಕೆ–

'ಅಲ್ಲೋ... ಇಬ್ಬರಿಗೆ ಈ ಮಿಕ್ಸಿ ಗಿಕ್ಸಿ ಯಾಕೇ ಹೇಳು... ನಾಲ್ಕು ಸಾರಿ ರುಬ್ಬಿದರೆ ಸಾಕು...' ಅನ್ನುತ್ತಿದ್ದಳು.

ಬಟ್ಟೆ ಒಗೆಯುವ ಯಂತ್ರದ ಬಗ್ಗೆಯೂ ಹೀಗೆ ಹೇಳಿದಳು.

ಫುಡ್‌ವರ್ಲ್ಡ್‌ನಿಂದ ಮಗ ಇಡ್ಲಿ ಮಿಕ್ಸ್ ದೋಸೆ ಮಿಕ್ಸ್ ಎಂದು ಏನೇನೋ ಸಿದ್ಧ ಆಹಾರದ ಪೊಟ್ಟಣ ತಂದ.

'ವಾಸು ನಾನು ಮಾಡೋ ಇಡ್ಲಿ ವಡೆ ರುಚಿಯಾಗಿರಲ್ಲ ಅಂತ ಇದನ್ನೆಲ್ಲ ತಂದ್ಯಾ?' ಎಂದು ಮಗನಿಗೆ ಕೇಳಿದಳು. ಆತ–

'ಹಾಗಲ್ಲಮ್ಮ...' ಎಂದು ಉತ್ತರ ಹೇಳಲು ಪೇಚಾಡಿಕೊಂಡ.

ಹೀಗೆ ತಾಯಿ ಮಗನ ಪ್ರಪಂಚ ಸುರುಳೀತವಾಗಿ ಸಾಗಿತು.

ಆರು ತಿಂಗಳಾಗುತ್ತಿದೆ ಅನ್ನುವಾಗ ಮಗ ಒಂದು ಸುದ್ದಿ ತಂದ.

'ಅಮ್ಮ, ಕಂಪನಿಯೋರು ನನ್ನ ಅಮೇರಿಕಕ್ಕೆ ಹೋಗು ಅಂತಿದ್ದಾರೆ...'

'ಅಮೇರಿಕಕ್ಕ?'

'ಹೌದಮ್ಮ... ಅಲ್ಲಿ ನಮ್ಮದೊಂದು ಶಾಖೆ ಇದೆ... ಆರು ತಿಂಗಳ ಮಟ್ಟಿಗೆ ನನ್ನ ಅಲ್ಲಿಗೆ ಕಳಿಸ್ತಿದಾರೆ. ತಿರುಗಿ ಬಂದ ಮೇಲೆ ಸಂಬಳಾನ ದುಪ್ಪಟ್ಟು ಮಾಡತಾರಂತೆ... ಅದಕ್ಕೂ ಮುಖ್ಯವಾಗಿ ಅಮೇರಿಕಕ್ಕೆ ಹೋಗಿ ಬರೋದೇ ಒಂದು ಗೌರವ ಅಲ್ವಾಮ್ಮ...'

ಬೆಂಗಳೂರಿಗೆ ಬಂದ ಮೇಲೆ ಆಕೆ ಈ ಬಗೆಯ ಮಾತುಗಳನ್ನು ಕೇಳಿಸಿಕೊಂಡಿದ್ದಳು. ಬೆಳಿಗ್ಗೆ ಮಧ್ಯಾಹ್ನ ಅವಳಿಗೆ ಸಾಕಷ್ಟು ಬಿಡುವು ಸಿಗುತ್ತಿತ್ತು. ಶಿವಮೊಗ್ಗದಲ್ಲಾದರೆ ಇಡೀ ದಿನ ಕೆಲಸ. ಇಲ್ಲಿ ಯಾವುದೆ ಕೆಲಸವಿಲ್ಲ. ಮಗನಿಗೆ ಅಡಿಗೆ ಮಾಡುವುದಷ್ಟೇ ಕೆಲಸ.

ಹೀಗಾಗಿ ತರಕಾರಿ, ಹಾಲು ತರಲು ಹೊರಗೆ ಹೋದಾಗಲೆಲ್ಲ ರೇಣುಕಾಂಬಾ ಅಪಾರ್ಟ್‌ಮೆಂಟುಗಳಲ್ಲಿರುವವರ ಪರಿಚಯ ಅವಳಿಗೆ ಆಗಿತ್ತು.

ಸರಕಾರಿ ಖಾಸಗಿ ಕಛೇರಿ ಫ್ಯಾಕ್ಟರಿಗಳಿಗೆ ಹೋಗುವ ಮಹಿಳೆಯರೂ ಅವಳಿಗೆ ಪರಿಚಿತರಾಗಿದ್ದರು.

'ನಮ್ಮಲ್ಲಿಗೆ ಬನ್ನಿ ಆಂಟಿ' ಎಂದು ಅವಳನ್ನು ಅಪಾರ್ಟ್‌ಮೆಂಟಿನ ತಮ್ಮ ಮನೆಗಳಿಗೂ ಕರೆದೊಯ್ಯುತ್ತಿದ್ದರು. ಮನೆಯಲ್ಲಿ ಒಂಟಿಯಾಗಿರಲಾರದೆ ಅಲ್ಲೆಲ್ಲ ತಿರುಗಾಡಿ ಬರುತ್ತಿದ್ದಳು ಈಕೆ.

ಅವರೆಲ್ಲರ ಜೊತೆ ಒಡನಾಡುವಾಗ ಬೆಂಗಳೂರಿನ ಬದುಕಿನ ಪರಿಚಯ ಅವಳಿಗೆ ಚೆನ್ನಾಗಿಯೇ ಆಯಿತು.

ನಾಲ್ಕಂಕಿಯ ಸಂಬಳಕ್ಕಿಂತ ಐದಂಕಿಯ ಸಂಬಳಕ್ಕೆ ಹೆಚ್ಚು ಬೆಲೆ ಇತ್ತು.

ಮನೆಯಲ್ಲಿ ಕಾರು ಇಲ್ಲವೆಂದರೆ ಯಾರೂ ಗೌರವ ಕೊಡುತ್ತಿರಲಿಲ್ಲ.

ಮಗನೋ ಮಗಳೋ ಮೊಮ್ಮಕ್ಕಳೋ ಅಮೇರಿಕ, ಆಸ್ಟ್ರೇಲಿಯಾಗಳಲ್ಲಿ ಇರಲೇಬೇಕಿತ್ತು.

ಕೈಯಲ್ಲಿ ಕ್ರೆಡಿಟ್ ಕಾರ್ಡುಗಳನ್ನು ಇರಿಸಿಕೊಂಡು ವ್ಯಾಪಾರಕ್ಕೆ ಹೋಗುವುದು ಪ್ರತಿಷ್ಠೆಯ ವಿಷಯವಾಗಿತ್ತು.

ಹುಟ್ಟಿದ ಹಬ್ಬ ಮ್ಯಾರೇಜ್ ಆನಿವರ್ಸರಿ ಇತ್ಯಾದಿಗಳಿಗೆ ಹೋಗುವವರು ಮೊದಲು ಬ್ಯೂಟಿ ಪಾರ್ಲರ್‌ಗಳಿಗೆ ಹೋಗಿಯೇ ಹೋಗಬೇಕಿತ್ತು.

ಮಾತಿನ ನಡುವೆ ಅಂಕಿಗಳನ್ನೂ, ದಿನಗಳನ್ನೂ ಇನ್ನೂ ಎಷ್ಟೋ ಶಬ್ದಗಳನ್ನು ಇಂಗ್ಲೀಷಿನಲ್ಲಿಯೇ ಹೇಳಬೇಕಿತ್ತು.

ಕ್ರಮೇಣ ಅವಳು ಇವುಗಳಿಗೆ ಹೊಂದಿಕೊಂಡಳು.

ವಾಸುವಿನ ಹತ್ತಿರ ಕ್ರೆಡಿಟ್ ಕಾರ್ಡುಗಳಿದ್ದವು.

ಮೊಬೈಲ್ ಇತ್ತು.

ಕಾರು ಕೊಳ್ಳುವ ಮಾತನ್ನು ಅವನು ಹೇಳತೊಡಗಿದ್ದ.

ಅವಳು ವಿದ್ಯಾವಂತಳಾದುದರಿಂದ ಮಾತಿನ ನಡುವೆ ಇಂಗ್ಲೀಷ್ ಶಬ್ದಗಳನ್ನು ಬಳಸತೊಡಗಿದಳು.

ಆಗಲೇ ಮಗ ಅಮೇರಿಕಕ್ಕೆ ಹೋಗಿ ಬರುವ ಮಾತನಾಡಿದ.

'ಅಮೇರಿಕಕ್ಕ?' ಎಂದು ಹೆಮ್ಮೆಯಿಂದ ಕೇಳಿದಳು.

ಅಮೇರಿಕದಿಂದ ತಿರುಗಿ ಬಂದ ಮೇಲೆ ನಾಲ್ಕು ಅಂಕಿ ಸಂಬಳ ಐದು ಅಂಕಿಯದಾಗುತ್ತದೆಂದು ಮಗ ಹೇಳಿದಾಗ ಅವಳಿಗೆ ಸಂತೋಷವೂ ಆಯಿತು.

ಮಗ ಅಮೇರಿಕಕ್ಕೆ ಹೋಗಲಿರುವ ಸುದ್ದಿಯನ್ನು ಇವಳು ಅವರಿವರಿಗೆ ಹೇಳುವ ಮುನ್ನವೇ ಅದು ರೇಣುಕಾಂಬಾ ಅಪಾರ್ಟ್‌ಮೆಂಟ್ ಶಾಂತಿನಿಕೇತನಗಳಿಗೆ ತಿಳಿದುಹೋಯಿತು. ಮಗ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿಯೇ ಇದ್ದ ಕೆಲವರು ಈ ಅಪಾರ್ಟ್‌ಮೆಂಟುಗಳ ವಾಸಿಗಳಾಗಿದ್ದರಿಂದ ಇವಳು ಅಲ್ಲಿಗೆಲ್ಲ ಹೋಗುವ ಮುನ್ನವೇ–

'ಹೌದು ಆಂಟಿ, ನಿಮ್ಮ ಸನ್ನು ಸ್ಟೇಟ್ಸ್‌ಗೆ ಹೋಗ್ತಾರಂತಲ್ಲ ಹೌದಾ?' ಎನ್ನುವ ಹಲವರು ಕೇಳಿದರು.

ಕೇಳಿದ್ದೊಂದೇ ಅಲ್ಲ, ಆಕೆ ಅಪಾರ್ಟ್‌ಮೆಂಟುಗಳ ನಡುವೆ ಇಡೀ ಕೋರಮಂಗಲದ ನಡುವೆ ಗೌರವಾನ್ವಿತ ವ್ಯಕ್ತಿಯಾಗಿಬಿಟ್ಟಳು. ಎಲ್ಲರೂ ಇವಳನ್ನು ಮಾತನಾಡಿಸುವವರೆ, ನಕ್ಕು ಶುಭ ಹಾರೈಸುವವರೆ.

'ಆಂಟಿ, ಮಗನ ಜೊತೆ ನೀವೂ ಹೊರಟುಬಿಡಿ'

ಅನ್ನುವವರೆ.

ಮಗ ಅಮೇರಿಕಕ್ಕೆ ಹೋಗುವ ದಿನ ಹತ್ತಿರ ಹತ್ತಿರ ಬರುತ್ತಿದೆ ಅನ್ನುವಾಗ ಒಂದು ಬಗೆಯ ಮಂಕು ಕವಿಯತೊಡಗಿತು.

ಮಗ ಆರು ತಿಂಗಳ ಮಟ್ಟಿಗೆ ಅಮೇರಿಕಕ್ಕೆ ಹೋಗುತ್ತಿರುವುದು ಸಂತಸದ ವಿಷಯವೆ. ಆದರೆ ಆತ ತಿರುಗಿ ಬರುವತನಕ ತಾನೊಬ್ಬಳೇ ಇಲ್ಲಿ ಇರಬೇಕಲ್ಲ. ಈವರೆಗೆ ದಿನದ ೨೪ ಗಂಟೆಗಳಿಗೂ ಮಗನ ಕೆಲಸವನ್ನು ಹಂಚಿಹಾಕಿದ್ದೆ. ಅವನ ಕಾಫಿ, ತಿಂಡಿ, ಊಟ, ಬಟ್ಟೆ ಒಗೆಯುವುದು, ನಡುವೆ ಒಂದು ಗಂಟೆ ಅಪಾರ್ಟ್‌ಮೆಂಟುಗಳ ಭೇಟಿ, ಅಲ್ಲಿಗೆ ಹೋದರೂ ವಾಸುವಿನದ್ದೇ ಚಿಂತೆ. ಅವನು ಬಂದಿರಬಹುದು ಎಂಬ ಆತಂಕ. ಅವನಿಗಾಗಿ ರಾತ್ರಿ ಊಟಕ್ಕೆ ಏನು ಮಾಡುವುದು ಎಂಬ ಚಿಂತೆ. ಮಗನ ಬಟ್ಟೆ ಇಸ್ತ್ರಿ ಮಾಡಿಸಬೇಕು. ಅವನ ಕಾಲು ಚೀಲ ಒಗೆದಿದೆಯೋ ಇಲ್ಲವೋ ಎಂಬ ತೊಳಲಾಟದಲ್ಲಿಯೇ ಇರುತ್ತಿದ್ದೆ. ನಾಳೆ ಆತ ಅಮೇರಿಕಾಗೆ ಹೋದ ಮೇಲೆ ಏನು ಮಾಡುವುದು ಎಂಬ ಚಿಂತೆ ಅವಳನ್ನು ಕಾಡತೊಡಗಿತ್ತು.

'ವಾಸು ನೀನೇನೋ ಅಮೇರಿಕಾಕ್ಕೆ ಹೋಗುತೀಯ... ನಾನೇನು ಮಾಡಲಿ?' ಎಂದು ಮಗನಿಗೆ ಕೇಳಿದಳು.

'ಆರಾಮವಾಗಿ ಇರಮ್ಮ... ಟಿ.ವಿ ಇದೆ, ಟೇಪ್‌ರೆಕಾರ್ಡರ್ ಇದೆ, ಪೇಪರ್ ತರಿಸಿಕೋ, ಲೈಬ್ರರಿಗೆ ಮೆಂಬರಾಗು, ಗುರುತು ಪರಿಚಯದವರಂತೂ ಇದಾರೆ...' ಎಂದ ಮಗ. ಆದರೆ ಇವೆಲ್ಲ ಇದ್ದೂ ಮಗನನ್ನು ಅಗಲಿ ಇರುವುದು ಎಷ್ಟು–ಕಷ್ಟ ಎಂಬುದು ಇವನಿಗೆ ತಿಳಿಸಿ ಹೇಳುವುದೆಷ್ಟು ಕಷ್ಟ ಎಂಬುದು ಅವಳಿಗೆ ಅರಿವಾಯಿತು.

ಒಂದೆರಡು ದಿನ ಬಿಟ್ಟು ಅವಳು ಮಗನಿಗೆ ಕೇಳಿದಳು–

'ನಾನು ಯಾವುದಾದರೂ ಕೆಲಸಕ್ಕೆ ಸೇರಿಕೊಳ್ಳಲೇನೋ ವಾಸು?'

'ಕೆಲಸಕ್ಕೆ?'

'ಹೌದು ಸಮಯ ಕಳೆದುಹೋಗುತ್ತೆ... ಬೇಸರಾನೂ'

'ನೋಡಮ್ಮ, ಮಗ ಅಮೇರಿಕಾದಲ್ಲಿದಾನೆ, ಇಲ್ಲಿ ಇವಳು ಕೆಲಸ ಮಾಡುತ್ತಾಳೆ ಅಂತ ಜನ ಮಾತಾಡಿಕೊಳ್ಳುತ್ತಾರೆ. ಒಂದು ಆರು ತಿಂಗಳಷ್ಟೆ... ನಾನು ಬಂದುಬಿಡತೀನಿ... ನೀನು ಬೇಕಾದ್ರೆ ಶಿವಮೊಗ್ಗಕ್ಕೆ ಹೋಗಿ ಸ್ವಲ್ಪ ದಿನ ಇದ್ದು ಬಾ...' ಎಂದ ಮಗ

ಇವಳಿಗೂ ಹೌದೆನಿಸಿತು.

ಮಗ ಅಮೇರಿಕಕ್ಕೆ ಹೊರಟು ನಿಂತಿದ್ದಾನೆ. ಎಲ್ಲ ಜನ ಅಮೇರಿಕ ಅಮೇರಿಕ ಎಂದು ಜಪಿಸುವಾಗ, ಅಮೇರಿಕಕ್ಕೆ ಹೋಗುವುದೇ ಒಂದು ಸೌಭಾಗ್ಯ ಎಂದು ತಿಳಿದಿರುವಾಗ ಮಗನಿಗೆ ಅಂತಹಾ ಒಂದು ಅವಕಾಶ ಬಂದೊದಗಿದೆ. ಈ ಸಂದರ್ಭದಲ್ಲಿ ತಾನು ಗೊಣಗಬಾರದು. ಇದನ್ನೇ ಮುಂದೆ ಮಾಡಿಕೊಂಡು ಮಗನಿಗೆ ಕಿರಿಕಿರಿ ಮಾಡಬಾರದು ಎಂದು. ಅವಳು ಮನಸ್ಸು ಗಟ್ಟಿ ಮಾಡಿಕೊಂಡಳು.

ವಾಸು ಅಮೇರಿಕಾಗೆ ಹೋಗುವ ದಿನ ಬಂದಿತು.

ಕಂಪನಿಯವರೆಲ್ಲ ಸಣ್ಣದೊಂದು ಬೀಳ್ಕೊಡುಗೆಯನ್ನೂ ಇರಿಸಿಕೊಂಡಿದ್ದರು.

ವಾಸು ಹೊಸ ಬಟ್ಟೆ ಹೊಲಿಸಿಕೊಂಡ. ಚರ್ಮದ ಬ್ಯಾಗುಗಳನ್ನೂ ತಂದ.

ಅವನ ತಾಯಿ ಊಟ ವ್ಯವಸ್ಥೆಯ ಬಗ್ಗೆ ಕೇಳಿಯೇ ಕೇಳಿದಳು.

ಅಮೇರಿಕಾದ ಊಟ ಹೇಗೆ? ಉಳಿಯುವ ವ್ಯವಸ್ಥೆ ಹೇಗೆ ವಿಚಾರಿಸಿಕೊಂಡಳು.

'ಮೆಣಸಿನಪುಡಿ ಉಪ್ಪಿನಕಾಯಿ ಮಾಡಿಕೊಡಲೇನೋ?' ಎಂದು ಕೇಳಿದಳು.

'ನೋಡಮ್ಮ ಊಟದ ವ್ಯವಸ್ಥೆ ಉಳಿಯೋ ವ್ಯವಸ್ಥೆ ಕಂಪನೀದೆ. ನನಗೆ ಆರು ತಿಂಗಳು ಅಲ್ಲಿ ಕೆಲಸ... ಬೇಕಾದರೆ ಆ ಕಂಪನೀನ ಬಿಟ್ಟು ನಾನು ಬೇರೆ ಕಂಪನಿ ಸೇರ್‌ಕೋಬಹುದು. ನನಗೆ ಯಾವ ತೊಂದರೇನೂ ಇಲ್ಲ...' ಎಂದು ಅಮೇರಿಕಾದ ತನ್ನ ವ್ಯವಸ್ಥೆಯ ಬಗ್ಗೆ ನುಡಿದ ವಾಸು.

ಆತ ಹೊರಡುವ ದಿನ ಕೂಡ ಬಂದಿತು.

ಅವನ ಸ್ನೇಹಿತರ ಜೊತೆ ಹೋಗಿ ವಿಮಾನ ನಿಲ್ದಾಣದಲ್ಲಿ ಮಗನನ್ನು ಬೀಳ್ಕೊಟ್ಟು ಬಂದಳು ಆಕೆ.

'ಅಮೇರಿಕಕ್ಕೆ ಹೋಗಿ ತಲುಪಿದ ಕೂಡಲೇ ಫೋನ್ ಮಾಡತೀನಿ' ಅಂದಿದ್ದ ವಾಸು.

ತಿರುಗಿ ಬಂದಾಗ ಮನೆ ಬರಿದಾಗಿತ್ತು.

ಮಂಚದ ಮೇಲೊರಗಿ ನೀರವವಾಗಿ ಕುಳಿತಳು ಆಕೆ.

ಮಗನ ಉಡುಗೆ ತೊಡುಗೆಗಳನ್ನು ತೆಗೆದಿರಿಸಿದಳು.

ಬೂಡ್ಸುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ ಇರಿಸಿದಳು. ಅವನ ಪುಸ್ತಕ ಪತ್ರಿಕೆ ಜೋಡಿಸಿದಳು.

ಮಗನ ನೆನಪು ಕಾಡತೊಡಗಿತು.

ಬೆಳಿಗ್ಗೆ ಸ್ನಾನ ಮುಗಿಸಿದ್ದೇ ದೇವರ ಕೋಣೆಗೆ ಹೋಗಿ ದೇವರಿಗೊಂದು ನಮಸ್ಕಾರ ಮಾಡಿ ಬಂದ ಮಗ ಶರಟು, ಪ್ಯಾಂಟು ಕೋಟು ಧರಿಸುತ್ತಿದ್ದುದು. ನಂತರ ಫಳ ಫಳ ಹೊಳೆಯುವ ಬೂಡ್ಸು. ಈ ಉಡುಪು ಧರಿಸಿಯೇ ಕಾಫಿ ತಿಂಡಿ ಮುಗಿಸುತ್ತಿದ್ದ. ನಂತರ ತನ್ನ ಹೆಸರು ಭಾವಚಿತ್ರವಿರುವ ಒಂದು ಕಾರ್ಡನ್ನು ಕೊರಳ ಪಟ್ಟಿಯೊಡನೆ ಕುತ್ತಿಗೆಗೆ ಹಾಕಿಕೊಳ್ಳುತ್ತಿದ್ದ. ಕೋರಮಂಗಲದ ಬಹಳ ಜನ ಹೀಗೆ ಕೊರಳಪಟ್ಟಿ ಧರಿಸುತ್ತಿದ್ದರು. ಮಗ ಇದನ್ನು ನಾಯಿಪಟ್ಟಿ ಎಂದು ಕರೆದು ನಗುತ್ತಿದ್ದ. ಕಾರ್ಪೋರೇಷನ್‌ನವರು ಒಂದು ಬಿಲ್ಲೆ ಇರುವ ಪಟ್ಟಿಯನ್ನು ನಾಯಿಗೆ ನೀಡುತ್ತಾರಂತೆ. ಹಾಗೇ ಇದು ಅನ್ನುತ್ತಿದ್ದ.

ಇಷ್ಟೆಲ್ಲ ಧರಿಸಿ ಆತ ಮನೆಯಲ್ಲಿ ತಿರುಗಾಡುತ್ತಿದ್ದ.

'ಅಮ್ಮ, ಬರುತೀನಿ' ಅನ್ನುತ್ತಿದ್ದ.

ಅವನು ಕೋಟು, ಕಾಲರುಪಟ್ಟಿ ಸರಿಪಡಿಸುವ ನೆಪದಲ್ಲಿ ತಾನು ಆತನನ್ನು ಮುಟ್ಟುತ್ತಿದ್ದೆ. ಮೊದಲಿನಿಂದಲೂ ಹೀಗೆಯೇ. ತಾನು ಅವನನ್ನು ಮುಟ್ಟಿ ತಡವಿ ಅವನ ಕೂದಲು, ಅಂಗಿ, ಪುಸ್ತಕದ ಚೀಲ ಸರಿಪಡಿಸಬೇಕು ಅಂದರೆ ಅವನಿಗೆ ಸಂತೋಷ, ತೃಪ್ತಿ.

ತಾನು ಅವನನ್ನು ಬೀಳ್ಕೊಡಲು ಬಾಗಿಲು ಅಂಗಳದವರೆಗೂ ಹೋಗಬೇಕು. ಅಲ್ಲಿ ಆತ ಬಗ್ಗಿ ತನ್ನ ಕಾಲು ಮುಟ್ಟಬೇಕು.

'ಹೋಗಿ ಬಾ...' ಅನ್ನಬೇಕು ತಾನು.

ಆತ ಬೈ ಹೇಳುತ್ತ ಅಂಗಳ ದಾಟಬೇಕು. ಇದೆಲ್ಲವೂ ನೆನಪಾಯಿತು ಅವಳಿಗೆ.

ಅವಳು ಕಣ್ಣೊರೆಸಿಕೊಂಡಳು. 'ನಾಲ್ಕು ದಿನ ಹೋಗಿ ಶಿವಮೊಗ್ಗದಲ್ಲಿದ್ದು ಬರಬೇಕು' ಎಂದು ನಿರ್ಧರಿಸಿದಳು.

* * *

ಇನ್ನು ಮುಂದಿನ ಕತೆಯಲ್ಲೇನೂ ಸ್ವಾರಸ್ಯವಿಲ್ಲ.

ವಾಸುವಿನ ತಾಯಿ ಎಂದಿನಂತೆ ಬೆಳಿಗ್ಗೆ ಆರು ಏಳು ಗಂಟೆಗೆ ಏಳುತ್ತಾಳೆ. ಸ್ನಾನ ಮಾಡಿ ಒಂದು ಕಾಫಿ ಕಾಯಿಸಿಕೊಂಡು ಕುಡಿಯುತ್ತಾಳೆ. ಒಂದು ಅನ್ನ ಸಾರು ಮಾಡಿಕೊಳ್ಳುತ್ತಾಳೆ. ಅವೆರಡನ್ನೂ ಒಂದು ಕ್ಯಾರಿಯರ್‌ಗೆ ಹಾಕಿಕೊಳ್ಳುತ್ತಾಳೆ. ಒಂದು ಮಿಡಿ ಮಾವಿನಕಾಯಿ ಜೊತೆಗೆ ಇರಿಸುತ್ತಾಳೆ. ಮನೆಗೆ ಬೀಗ ಹಾಕಿಕೊಂಡು ಗಾಡಿಕೊಪ್ಪ, ಮಲ್ಲಿಗೇನಹಳ್ಳಿಗೆ ಹೋಗುವ ಬಸ್ಸು ಹಿಡಿದು ಅವಳು ಭೈರಪ್ಪನವರ ಮಂಡಿಗೆ ಬರುತ್ತಾಳೆ. ಅಲ್ಲಿ ಮಂಡಿ ಲೆಕ್ಕ ಬರೆಯುವ ಕೆಲಸ. ಯಾರು ಅಡಕೆ ತಂದು ಮಂಡಿಗೆ ಲೆಕ್ಕ ಹಾಕಿದರು, ಎಷ್ಟು ಅಡಕೆ ಹಾಕಿದರು, ಅವರಿಗೆ ಎಷ್ಟು ಹಣ ಮುಂಗಡ ನೀಡಿದೆ– ಇತ್ಯಾದಿ ಲೆಕ್ಕ ಬರೆಯುತ್ತ ಕೂರುತ್ತಾಳೆ.

ನಡುವೆ ಒಮ್ಮೊಮ್ಮೆ ಅವಳಿಗೆ ಮಗನ ನೆನಪಾಗುತ್ತದೆ.

ಮಗ ಅಮೇರಿಕಾದ ಟೆಕ್ಸಾಸ್ ಪ್ರಾಂತ್ಯದಲ್ಲಿದ್ದಾನೆ.

ಆಗಾಗ ಮಾತನಾಡುತ್ತಾನೆ. ಇಲ್ಲಿಗೆ ಬಂದು ಬಿಡಮ್ಮ ಅನ್ನುತ್ತಾನೆ. ಇವಳು ನಗುತ್ತಾಳೆ. ಹಣ ಮತ್ತೂ ಬೇಕು ಅಂದ್ರೆ ತಿಳಿಸು ಅನ್ನುತ್ತಾನೆ. ಈ ಮಾತಿಗೂ ನಗುತ್ತಾಳೆ.

ಮಗ ಅಮೇರಿಕ ಸೇರಿ ವರ್ಷಗಳು ಉರುಳಿವೆ.

ಬೆಂಗಳೂರಿನ ಮನೆ ಬಿಟ್ಟು, ಅಲ್ಲಿದ್ದ ಟಿ.ವಿ., ಬಟ್ಟೆ ಒಗೆಯುವ ಯಂತ್ರ ಇತ್ಯಾದಿಗಳನ್ನೆಲ್ಲ ಮಾರಿ ಇವಳು ಮತ್ತೆ ಶಿವಮೊಗ್ಗಕ್ಕೆ ಬಂದದ್ದು ಕೂಡ ಬಹಳ ಹಿಂದೆಯೆ. ಮಗ ಒಂದು ಕಂಪನಿ ಬಿಟ್ಟು ಬೇರೆ ಕಂಪನಿಗೆ ಹಾರಿಕೊಂಡ. ಅಲ್ಲಿಂದ ಇನ್ನೊಂದಕ್ಕೆ ಹಾರಿದ.

ಇವಳು ಮಾತ್ರ ಅದೇ ಮನೆ, ಅದೇ ಅಂಗಡಿ, ಅದೇ ಗಾಡಿಕೊಪ್ಪ, ಮಲ್ಲಿಗೇನಹಳ್ಳಿಯ ಗ್ರಾಮಾಂತರ ಬಸ್ಸು, ಅದೇ ಕೆಲಸ.

ಯಾರಾದರೂ ಅಮೇರಿಕ ಅಂದರೆ ಇವಳ ಕಣ್ಣುಗಳು ಮಿಂಚುತ್ತವೆ. ಅಮೇರಿಕಕ್ಕೆ ಹೋಗುವ ಬಗ್ಗೆ, ಅಲ್ಲಿರುವ ನೆಂಟರ ಬಗ್ಗೆ ಮಾತನಾಡಿದಾಗ ಇವಳು ಗಮನವಿಟ್ಟು ಕೇಳುತ್ತಾಳೆ. ಸಣ್ಣ ನಗೆಯೊಂದು ಇವಳ ಮುಖದ ಮೇಲೆ ತೇಲಿಹೋಗುತ್ತದೆ.

ಮುಂದಿನ ಕ್ಷಣದಲ್ಲಿ ಇವಳು ಮಂಡಿ ಲೆಕ್ಕದ ದಫ್ತರಿನಲ್ಲಿ ತಲೆ ಹುದುಗಿಸಿ ಕೂತುಬಿಡುತ್ತಾಳೆ. ಯಾರಿಗೂ ಕಾಣದ ಹಾಗೆ ಕಣ್ಣೊರೆಸಿಕೊಳ್ಳುತ್ತಾಳೆ.

# 4. ಓದು ಪಠ್ಯ – ಅಂತರಜಾಲದ ವಿಶ್ವರೂಪ

**ಟಿ.ಜಿ.ಶ್ರೀನಿಧಿ**

**ಯಾವುದೋ ಜಾಲತಾಣಕ್ಕೆ ಹೋಗಿ ನಾವು ಪುಸ್ತಕ ಕೊಂಡಂತೆ**
**ನಮ್ಮ ಮನೆಯ ಫ್ರಿಜ್ಜು ತಾನೇ ಕೊತ್ತಂಬರಿ ಸೊಪ್ಪನ್ನೇಕೆ ಕೊಳ್ಳಬಾರದು?**

ಹದಿನೈದು ವರ್ಷಗಳ ಹಿಂದೆ ನಮ್ಮ ಮನೆಗಳಲ್ಲಿ ಒಂದು ಕಂಪ್ಯೂಟರ್ ಇದ್ದರೆ ಹೆಚ್ಚು. ಜೊತೆಗೆ ಮನೆಗೊಂದು ಲ್ಯಾಂಡ್‌ಲೈನ್ ಕನೆಕ್ಷನ್ನು. ಇಂಟರ್‌ನೆಟ್ ಬಳಸಬೇಕಾದರೆ ಅದೇ ಲ್ಯಾಂಡ್‌ಲೈನಿನ ಮೊರೆಹೋಗಬೇಕು – ಒಂದು ಸಮಯಕ್ಕೆ ಒಬ್ಬರೇ ಬಳಸಲು ಸಾಧ್ಯ, ಜೊತೆಗೆ ಯಾರೂ ಫೋನ್ ಮಾಡುವಂತೆಯೂ ಇಲ್ಲ.

ಆಮೇಲೆ ಬ್ರಾಡ್‌ಬ್ಯಾಂಡ್ ಬಂತು. ಥ್ರೀಜಿ ಫೋರ್‌ಜಿಗಳೆಲ್ಲ ಬಂದಮೇಲೆ ಮೊಬೈಲ್ ಮೂಲಕ ಇಂಟರ್‌ನೆಟ್ ಪ್ರಪಂಚ ನಮ್ಮ ಜೇಬಿನೊಳಕ್ಕೇ ಬಂತು.

ಈಗಂತೂ ಮನೆಯ ಯಾವ ಮೂಲೆಯಲ್ಲಿ ನೋಡಿದರೂ ಅಂತರಜಾಲ ಸಂಪರ್ಕವಿರುವ ಸಾಧನ ಕಣ್ಣಿಗೆ ಬೀಳುತ್ತದೆ. ಲ್ಯಾಪ್‌ಟಾಪ್, ಟ್ಯಾಬ್ಲೆಟ್, ಮೊಬೈಲ್ ಫೋನು ಹೋಗಲಿ, ಬೇಕಾದಷ್ಟು ಮನೆಗಳಲ್ಲಿ ಟೀವಿಯೂ ಈಗ ಅಂತರಜಾಲ ಸಂಪರ್ಕ ಪಡೆದುಕೊಂಡು 'ಸ್ಮಾರ್ಟ್' ಆಗಿಬಿಟ್ಟಿದೆ.

ಹೀಗಾಗಿಯೇ ಪ್ರಪಂಚದಲ್ಲಿ ಅಂತರಜಾಲ ಸಂಪರ್ಕ ಪಡೆದುಕೊಂಡಿರುವ ಸಾಧನಗಳ ಸಂಖ್ಯೆ ಭೂಮಿಯ ಜನಸಂಖ್ಯೆಯನ್ನೂ ಮೀರಿಸಿಬಿಟ್ಟಿದೆ. ಈ ಬದಲಾವಣೆಯಾದದ್ದು ಇವತ್ತು ನಿನ್ನೆಯಲ್ಲ, 2008ರಲ್ಲೇ! ಜನಸಂಖ್ಯಾ ಸ್ಫೋಟದಂತೆ ಇದನ್ನು ಅಂತರಜಾಲ ಸಂಪರ್ಕಿತ ಸಾಧನಗಳ ಸಂಖ್ಯಾ ಸ್ಫೋಟ ಎನ್ನಬಹುದೇನೋ.

ಅಂದಹಾಗೆ ಈ ಸ್ಫೋಟವಿನ್ನೂ ನಿಂತಿಲ್ಲ – 2030ರ ವೇಳೆಗೆ 24 ಶತಕೋಟಿ ಸಾಧನಗಳು ಅಂತರಜಾಲದ ಸಂಪರ್ಕದಲ್ಲಿರಲಿವೆ ಎಂದು ಅಂದಾಜಿಸಲಾಗಿದೆ.

ಹಾಗಾದರೆ ಇದರ ಅರ್ಥವೇನು? ಎಲ್ಲ ಮನೆಗಳಲ್ಲೂ ಈಗಾಗಲೇ ಇರುವ ಕಂಪ್ಯೂಟರುಗಳು, ಮೊಬೈಲು–ಟ್ಯಾಬ್ಲೆಟ್ಟುಗಳ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ ಅಂತಲೇ?

ಖಂಡಿತಾ ಅಲ್ಲ ಎನ್ನುತ್ತಾರೆ ಕಂಪ್ಯೂಟರ್ ವಿಜ್ಞಾನಿಗಳು. ಅವರು ಹೇಳುವಂತೆ ಇದು ಅಂತರಜಾಲದ ರೂಪಾಂತರ. ಕಂಪ್ಯೂಟರು–ಮೊಬೈಲು–ಟ್ಯಾಬ್ಲೆಟ್ಟುಗಳ ಪರಿಚಿತ ಪರಿಧಿಯನ್ನು ಮೀರಿ, ಇದೀಗ 'ಸ್ಮಾರ್ಟ್' ಆಗತೊಡಗಿರುವ ಸಾಧನಗಳನ್ನೂ ದಾಟಿ ಬೆಳೆಯಲಿರುವ ಈ ಬೃಹತ್ ಜಾಲವನ್ನು ಅವರು 'ಇಂಟರ್‌ನೆಟ್ ಆಫ್ ಥಿಂಗ್ಸ್' ಎಂದು ಕರೆಯುತ್ತಾರೆ.

**ಇಂಟರ್‌ನೆಟ್ ಆಫ್ ಥಿಂಗ್ಸ್? ಹಾಗೆಂದರೇನು?**

ಅಂತರಜಾಲ ಸಂಪರ್ಕವೆಂದರೆ ನಮಗೆ ಅದಿನ್ನೂ ಕಂಪ್ಯೂಟರುಗಳ, ಮೊಬೈಲು–ಟ್ಯಾಬ್ಲೆಟ್ಟುಗಳ ಮೂಲಕವೇ ಆಗಬೇಕಾದ ಪ್ರಕ್ರಿಯೆ. ಆದರೆ ಅಂತರಜಾಲ ಸಂಪರ್ಕ ನಮಗೆ, ಅಂದರೆ ಮನುಷ್ಯ ಬಳಕೆದಾರರಿಗಷ್ಟೇ ಏಕೆ ಸೀಮಿತವಾಗಬೇಕು? ಯಾವುದೋ ಜಾಲತಾಣದಲ್ಲಿ ನಾವು ಪುಸ್ತಕ ಕೊಂಡಂತೆ ನಮ್ಮ ಮನೆಯ ಫ್ರಿಜ್ಜು ತಾನೇ ಕೊತ್ತಂಬರಿ ಸೊಪ್ಪನ್ನೇಕೆ ಕೊಳ್ಳಬಾರದು?

ಇಂಟರ್‌ನೆಟ್ ಆಫ್ ಥಿಂಗ್ಸ್ ಪರಿಕಲ್ಪನೆಯ ಹಿಂದಿರುವುದು ಇದೇ ಪ್ರಶ್ನೆ.

1982ನೇ ಇಸವಿಯ ಕತೆ ಇದು. ಸ್ಥಳ: ಅಮೆರಿಕಾದ ಕಾರ್ನೆಗಿ–ಮೆಲನ್ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ವಿಜ್ಞಾನ ವಿಭಾಗ. ಆ ವಿಭಾಗದಲ್ಲೊಂದು ವೆಂಡಿಂಗ್ ಮಶೀನ್ ಇತ್ತು – ದುಡ್ಡು ಹಾಕಿದರೆ ತಂಪು ಪಾನೀಯದ ಟಿನ್ ಕೊಡುತ್ತದಲ್ಲ, ಅಂಥದ್ದು. ವಿದ್ಯಾರ್ಥಿಗಳೆಂದಮೇಲೆ ಕೇಳಬೇಕೆ, ಬೇಕಾದಾಗಲೆಲ್ಲ ಹೋಗಿ ತಮ್ಮ ಆಯ್ಕೆಯ ಪಾನೀಯ ಕುಡಿಯುವುದು ಎಲ್ಲರಿಗೂ ಮೆಚ್ಚಿನ ಕೆಲಸವೇ ಆಗಿತ್ತು.

ಆದರೆ ಇಲ್ಲೊಂದು ಸಮಸ್ಯೆಯಿತ್ತು. ಹಲವಾರು ಸಲ ಅವರಿಗೆ ಬೇಕಾದ ಪೇಯ ಮುಗಿದುಹೋಗಿರುತ್ತಿತ್ತು. ಒಂದು ಕಡೆ ನಿರಾಸೆ, ಇನ್ನೊಂದು ಕಡೆ ಮಾಡುತ್ತಿದ್ದ ಕೆಲಸ ಬಿಟ್ಟು ಬಂದಿದ್ದರಿಂದ ಸಮಯ–ಶ್ರಮ ಎರಡೂ ವ್ಯರ್ಥ.

ಇದಕ್ಕೊಂದು ಪರಿಹಾರ ಹುಡುಕಲು ಹೊರಟ ಕೆಲ ವಿದ್ಯಾರ್ಥಿಗಳು ಒಂದಷ್ಟು ಕೆಲಸಮಾಡಿ ಆ ವೆಂಡಿಂಗ್ ಮಶೀನನ್ನು ತಮ್ಮ ವಿಭಾಗದ ಕಂಪ್ಯೂಟರ್ ಜಾಲಕ್ಕೆ ಸೇರಿಸಿದರು. ಪರಿಣಾಮ: ಯಾವ ನಮೂನೆಯ ಪೇಯ ಲಭ್ಯವಿದೆ, ಯಾವುದು ಮುಗಿದುಹೋಗಿದೆ ಎನ್ನುವುದು ಅವರ ಕಂಪ್ಯೂಟರಿನಲ್ಲೇ ಗೊತ್ತಾಗಿಬಿಡುತ್ತಿತ್ತು. ಅನಗತ್ಯವಾಗಿ ಎದ್ದುಹೋಗುವ ಅಗತ್ಯವಿಲ್ಲ, ನಿರಾಸೆಯೂ ಇಲ್ಲ!

ಈ ಪ್ರಯೋಗದಲ್ಲಿ ವೆಂಡಿಂಗ್ ಮಶೀನ್ ಸ್ವತಃ ತನ್ನ ಸ್ಥಿತಿಗತಿಗಳ ಬಗ್ಗೆ ಕಂಪ್ಯೂಟರ್ ಜಾಲಕ್ಕೆ ಮಾಹಿತಿ ಸೇರಿಸುತ್ತಿತ್ತು, ಆ ಮಾಹಿತಿಯನ್ನು ಪಡೆದುಕೊಂಡು ವಿಶ್ಲೇಷಿಸುತ್ತಿದ್ದ ವಿದ್ಯಾರ್ಥಿಗಳು ವೆಂಡಿಂಗ್ ಮಶೀನ್ ಕಡೆ ಹೋಗಬೇಕೋ ಬೇಡವೋ ನಿರ್ಧರಿಸುತ್ತಿದ್ದರು.

ಇಂತಹ ವಸ್ತುಗಳು – ವೆಂಡಿಂಗ್ ಮಶೀನಿನಿಂದ ಜಾಹೀರಾತು ಫಲಕದವರೆಗೆ, ಹಲ್ಲುಜ್ಜುವ ಬ್ರಶ್‌ನಿಂದ ಹೆದ್ದಾರಿ ಸಂಚಾರ ನಿಯಂತ್ರಿಸುವ ವ್ಯವಸ್ಥೆಯವರೆಗೆ – ನೂರಾರು, ಸಾವಿರಾರು ಸಂಖ್ಯೆಯ ವಸ್ತುಗಳು ('ಥಿಂಗ್ಸ್') ಬೃಹತ್ ಜಾಲವೊಂದರ ಭಾಗವಾಗಿ ಬೆಳೆದಾಗ ರೂಪುಗೊಳ್ಳುವುದು ಇಂಟರ್‌ನೆಟ್ ಆಫ್ ಥಿಂಗ್ಸ್. ಅಂತರಜಾಲದ ಸಾಧ್ಯತೆಗಳ ವಿಶ್ವರೂಪವನ್ನೇ ನಾವಿಲ್ಲಿ ಕಾಣಬಹುದು.

ಹೌದು, ಈ ವ್ಯವಸ್ಥೆ ನಮ್ಮ ಮುಂದಿಡುವ ಸಾಧ್ಯತೆಗಳ ಪಟ್ಟಿ ಸುಲಭದಲ್ಲಿ ಮುಗಿಯುವಂತಹುದಲ್ಲ. ನಮ್ಮ ಪರಿಚಯದ ಅಂತರಜಾಲದಲ್ಲಿ ಹೇಗೆ ಲ್ಯಾಪ್‌ಟಾಪ್–ಡೆಸ್ಕ್‌ಟಾಪುಗಳು, ಸರ್ವರುಗಳು, ಮೊಬೈಲ್–ಟ್ಯಾಬ್ಲೆಟ್ಟುಗಳು ಒಂದಕ್ಕೊಂದು ಸಂಪರ್ಕಿತವಾಗಿವೆಯೋ ಹಾಗೆ ಇಂಟರ್‌ನೆಟ್ ಆಫ್ ಥಿಂಗ್ಸ್‌ನಲ್ಲಿ ನಾವು ಕಲ್ಪಿಸಿಕೊಳ್ಳಬಹುದಾದ ಯಾವುದೇ ಸಾಧನ ಜಾಲದ ಸಂಪರ್ಕ ಪಡೆದುಕೊಳ್ಳಬಲ್ಲದು.

ಡೆನ್ಮಾರ್ಕಿನ ಸಂಸ್ಥೆಯೊಂದು ಮಾಡಿರುವ ಕೆಲಸ ನೋಡಿ: ಅಲ್ಲಿ ನೂರಾರು ಸಂಖ್ಯೆಯಲ್ಲಿ ಹಸುಗಳನ್ನು ಸಾಕುವವರಿಗೆ ಈ ಸಂಸ್ಥೆ ಒಂದು ವ್ಯವಸ್ಥೆ ರೂಪಿಸಿಕೊಟ್ಟಿದೆ. ಪ್ರತಿಯೊಂದು ಹಸುವಿನ ಕಿವಿಯ ಬಳಿ ಜೋಡಿಸಿರುವ ಪುಟ್ಟದೊಂದು ನಿಸ್ತಂತು (ವೈರ್‌ಲೆಸ್) ಸೆನ್ಸರ್ ಆ ಹಸುವಿನ ಆರೋಗ್ಯದ ಮೇಲೆ ನಿಗಾ ಇಟ್ಟು ಆಗಿಂದಾಗ್ಗೆ ಆ ಕುರಿತ ವಿವರಗಳನ್ನು ಹಸುಗಳ ಯಜಮಾನನಿಗೆ ಕಳುಹಿಸುತ್ತದೆ!

ಹಸುವಿನ ಆರೋಗ್ಯವನ್ನೇ ಗಮನಿಸಿಕೊಂಡ ಮೇಲೆ ಮನುಷ್ಯರ ಆರೋಗ್ಯವನ್ನು ಬಿಟ್ಟುಬಿಡಲು ಸಾಧ್ಯವೆ? ನಮ್ಮ ಆರೋಗ್ಯಪರಿಸ್ಥಿತಿ ಗಮನಿಸಿಕೊಂಡು ವೈದ್ಯರಿಗೆ ವರದಿ ನೀಡುವ ವ್ಯವಸ್ಥೆಗಳೂ ಬಂದಿವೆ. ಅಂದರೆ, ಹೃದಯಾಘಾತವಾಗಿರುವ ಸಂಗತಿ ಆ ವ್ಯಕ್ತಿಗೆ ಗೊತ್ತಾಗುವ ಮೊದಲೇ ಆತನ ವೈದ್ಯನಿಗೂ ಆಂಬುಲೆನ್ಸ್ ಚಾಲಕನಿಗೂ ತಿಳಿಸಿಬಿಡುವುದು ಇಂತಹ ವ್ಯವಸ್ಥೆಗಳ ಮೂಲಕ ಸಾಧ್ಯವಾಗಲಿದೆ. ಅನಾರೋಗ್ಯಪೀಡಿತ ವ್ಯಕ್ತಿಯೊಬ್ಬನ ಹೊಟ್ಟೆಯೊಳಗೆ ಓಡಾಡಿ ಫೋಟೋ ತೆಗೆದು ಕಳುಹಿಸುವ ಮಾತ್ರೆಯಂತಹ ಕ್ಯಾಮೆರಾಗಳ ಕತೆಯೂ ಇಂತಹುದೇ.

ಆರೋಗ್ಯದ ಕತೆ ಹಾಗಿರಲಿ, ವಾಣಿಜ್ಯೋದ್ಯಮಗಳಲ್ಲೂ ಈ ತಂತ್ರಜ್ಞಾನಕ್ಕೆ ಬಹಳಷ್ಟು ಉಪಯೋಗಗಳಿವೆ. ಜಾಹೀರಾತು ಫಲಕದ ಮುಂದೆ ಯಾರು ನಿಂತಿದ್ದಾರೆ ಎಂದು ಗಮನಿಸಿ ಅವರನ್ನು ಸೆಳೆಯುವಂತಹ ಜಾಹೀರಾತು ಪ್ರಸಾರಮಾಡುವುದು ಸಾಧ್ಯವಾದರೆ ಅದು ಲಾಭದ ವ್ಯವಹಾರವೇ ತಾನೆ?

ಈ ಸಾಧ್ಯತೆಗಳನ್ನೆಲ್ಲ ಊಹಿಸಿಕೊಂಡು 1999ರಷ್ಟು ಹಿಂದೆಯೇ ಇಂತಹುದೊಂದು ಜಾಗತಿಕ ವ್ಯವಸ್ಥೆಯ ಬಗೆಗೆ ಯೋಚಿಸಿದ್ದು ಮತ್ತು ಅದಕ್ಕೆ 'ಇಂಟರ್‌ನೆಟ್ ಆಫ್ ಥಿಂಗ್ಸ್' ಎಂದು ಹೆಸರಿಟ್ಟಿದ್ದು ಕೆವಿನ್ ಆಶ್‌ಟನ್ ಎನ್ನುವ ವ್ಯಕ್ತಿ.

ಎಲ್ಲೆಲ್ಲೂ ಬಳಕೆಯಾಗುವ ಸೆನ್ಸರುಗಳ ಮೂಲಕ ಅಂತರಜಾಲದ ವ್ಯಾಪ್ತಿ ಡಿಜಿಟಲ್ ಪ್ರಪಂಚದಿಂದಾಚೆ ಭೌತಿಕ ಜಗತ್ತನ್ನೂ ಆವರಿಸಿಕೊಳ್ಳುವುದು ಸಾಧ್ಯ ಎಂದು ಆತ ಹೇಳಿದ್ದ. ಈ ವ್ಯವಸ್ಥೆಯಲ್ಲಿ ಸೆನ್ಸರುಗಳೇ ವಿವಿಧ ರೀತಿಯ ಮಾಹಿತಿಯನ್ನು (ಉದಾ: ಹಸು ಹುಷಾರಾಗಿದೆಯೋ ಇಲ್ಲವೋ, ಫ್ರಿಜ್ಜಿನಲ್ಲಿ ಹಾಲು ಇದೆಯೋ ಮುಗಿದಿದೆಯೋ ಇತ್ಯಾದಿ) ಕಲೆಹಾಕಿ ಅದನ್ನು ಉಪಯುಕ್ತವಾಗಿ ಬಳಸಲು ಅನುವುಮಾಡಿಕೊಡುತ್ತಿದ್ದವು (ಉದಾ: ನಿರ್ದಿಷ್ಟ ಸಮಸ್ಯೆಯ ವಿವರದೊಡನೆ ಪಶುವೈದ್ಯರಿಗೆ ಕರೆಮಾಡುವುದು, ಎರಡು ಲೀಟರ್ ಹಾಲು ಕಳಿಸುವಂತೆ ಪಕ್ಕದ ಬೀದಿಯ ಅಂಗಡಿಗೆ ಸಂದೇಶ ಕಳಿಸುವುದು ಇತ್ಯಾದಿ). ಈ ವ್ಯವಸ್ಥೆಯಲ್ಲಿ ಆರ್‌ಎಫ್‌ಐಡಿ ತಂತ್ರಜ್ಞಾನ ಬಳಸಬಹುದೆಂದು ಆತ ಹೇಳಿದ್ದ.

**ಆರ್‌ಎಫ್‌ಐಡಿ**

ಈಗ ಚಾಲ್ತಿಯಲ್ಲಿರುವ ಯೂನಿವರ್ಸಲ್ ಪ್ರಾಡಕ್ಟ್ ಕೋಡ್ (ಯುಪಿಸಿ) – ಬಾರ್ ಕೋಡ್ – ನಮಗೆಲ್ಲ ಗೊತ್ತೇ ಇದೆ: ಈ ಬಾರ್ ಕೋಡ್‌ಗಳಲ್ಲಿ ದಪ್ಪ–ಸಣ್ಣ ಗೆರೆಗಳ ಸಂಯೋಜನೆಯಿಂದ ಯಾವುದೇ ವಸ್ತುವಿನ ಬೆಲೆಯನ್ನು

ಪ್ರತಿನಿಧಿಸಲಾಗುತ್ತದೆ. ಸೂಪರ್‌ಮಾರ್ಕೆಟ್‌ಗಳಲ್ಲಿ ಬಳಕೆಯಾಗುವ ಪುಟ್ಟ ಸ್ಕ್ಯಾನರ್‌ಗಳು ಈ ಗೆರೆಗಳನ್ನು ಅರ್ಥೈಸಿಕೊಂಡು ನೀವು ಕೊಂಡ ಸಾಮಾನುಗಳ ಬಿಲ್ ತಯಾರಿಸುತ್ತವೆ.

ಯುಪಿಐ ಮೂಲಕ ಹಣ ಪಾವತಿಸಲು ನಾವೆಲ್ಲ ಬಳಸುವ ಕ್ವಿಕ್ ರೆಸ್ಪಾನ್ಸ್ 'ಕ್ಯೂಆರ್' ಕೋಡ್ ಕೆಲಸವೂ ಹೆಚ್ಚೂಕಡಿಮೆ ಹೀಗೆಯೇ. ಆರ್‌ಎಫ್‌ಐಡಿ (ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್) ತಂತ್ರಜ್ಞಾನವೂ ಅಷ್ಟೆ.

ಬಾರ್‌ಕೋಡ್‌ನಲ್ಲೋ ಕ್ಯೂಆರ್ ಕೋಡ್‌ನಲ್ಲೋ ಇರುವ ಚಿತ್ರರೂಪದ ಸಂಕೇತಗಳ ಬದಲಿಗೆ ಇಲ್ಲಿ 'ಆರ್‌ಎಫ್‌ಐಡಿ ಟ್ಯಾಗ್'ಗಳು ಬಳಕೆಯಾಗುತ್ತವೆ. ಇಂತಹ ಟ್ಯಾಗ್‌ಗಳು ಒಂದು ನಿರ್ದಿಷ್ಟ ಪ್ರಮಾಣದ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳುವ ಹಾಗೂ ಆ ಮಾಹಿತಿಯನ್ನು ರೇಡಿಯೋ ಸಂಕೇತಗಳ ಮೂಲಕ ಬಿತ್ತರಿಸುವ ಶಕ್ತಿಯನ್ನು ಹೊಂದಿರುತ್ತವೆ. ಇಂತಹ ಟ್ಯಾಗ್‌ಗಳು ಹಾಗೂ ಅವು ಬಿತ್ತರಿಸುವ ಸಂಕೇತಗಳನ್ನು ಅರ್ಥಮಾಡಿಕೊಳ್ಳಬಲ್ಲ ಗ್ರಾಹಕ(ರೀಡರ್)ಗಳ ನೆರವಿನಿಂದ ಅಪೂರ್ವ ವ್ಯವಸ್ಥೆಯೊಂದನ್ನು ರೂಪಿಸಬಹುದು.

ನಾವೆಲ್ಲರೂ ನಮ್ಮ ಮನೆಗಳಿಗೆ ಪ್ಯಾಕೆಟ್ ಹಾಲು ತರಿಸಿಕೊಳ್ಳುವುದು ಸಾಮಾನ್ಯ ತಾನೆ? ಇಂತಹ ಹಾಲಿನ ಪ್ಯಾಕೆಟ್‌ಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ.

ಡೈರಿಯಲ್ಲಿ ಆ ಪ್ಯಾಕೆಟ್‌ಗಳಲ್ಲೆಲ್ಲ ಒಂದೊಂದು ಆರ್‌ಎಫ್‌ಐಡಿ ಟ್ಯಾಗ್‌ಗಳನ್ನು ಅಳವಡಿಸಿರುತ್ತಾರೆ ಎಂದುಕೊಳ್ಳೋಣ. ಪ್ಯಾಕ್ ಮಾಡಿದ ದಿನಾಂಕ, ಹಾಲಿನ ಪ್ರಮಾಣ, ಆ ಹಾಲನ್ನು ಎಷ್ಟು ದಿನಗಳ ಒಳಗೆ ಉಪಯೋಗಿಸಬೇಕು ಎಂಬಂತಹ ಮಾಹಿತಿಯನ್ನೆಲ್ಲ ಈ ಟ್ಯಾಗ್‌ನಲ್ಲಿ ಶೇಖರಿಸಲಾಗುತ್ತದೆ. ಡೈರಿಯಿಂದ ಹೊರಟ ಈ ಪ್ಯಾಕೆಟ್‌ಗಳು ಅಂಗಡಿಗೆ ಬರುತ್ತವೆ. ಈ ಟ್ಯಾಗ್‌ಗಳಿಂದ ಪ್ರಸಾರವಾಗುವ ಮಾಹಿತಿಯನ್ನು ಅಲ್ಲಿರುವ ರೀಡರ್‌ಗಳು ತಕ್ಷಣವೇ ಗ್ರಹಿಸಿ ಅಂಗಡಿಯಲ್ಲಿರುವ ಹಾಲಿನ ಪ್ರಮಾಣ ಎಷ್ಟು ಎನ್ನುವುದನ್ನು ಲೆಕ್ಕವಿಟ್ಟುಕೊಳ್ಳುತ್ತವೆ. ನಂತರ ನೀವು ಅಂಗಡಿಗೆ ಬಂದು ಹಾಲು ಖರೀದಿಸುತ್ತೀರಿ ಎಂದುಕೊಳ್ಳೋಣ. ನೀವು ಹಾಲು ಕೊಂಡು ಅಂಗಡಿಯಿಂದ ಹೊರಟ ತಕ್ಷಣ ಕಾರ್ಯಪ್ರವೃತ್ತವಾಗುವ ರೀಡರ್‌ಗಳು ದಾಸ್ತಾನಿನಲ್ಲಿದ್ದ ಪ್ಯಾಕೆಟ್‌ಗಳ ಪೈಕಿ ಒಂದು ಖರ್ಚಾಯಿತು ಎಂಬುದನ್ನು ದಾಖಲಿಸಿಕೊಳ್ಳುತ್ತವೆ.

ನೀವು ಮನೆಗೆ ಬಂದು ಆ ಪ್ಯಾಕೆಟ್ ಅನ್ನು ಫ್ರಿಜ್ಜಿನಲ್ಲಿಟ್ಟ ಕೂಡಲೆ ಅಲ್ಲಿರುವ ರೀಡರ್ ಹಾಲಿನ ಪ್ರಮಾಣ, ಅದನ್ನು ಯಾವತ್ತಿನ ಮುಂಚೆ ಉಪಯೋಗಿಸಬೇಕು ಮುಂತಾದ ವಿವರಗಳನ್ನೆಲ್ಲ ಗ್ರಹಿಸಿಕೊಳ್ಳುತ್ತದೆ. ಇಲ್ಲಿಂದ ಮುಂದಕ್ಕೆ ಹಾಲು ಹಳೆಯದಾಗಿದೆ, ಅಥವಾ ಮುಗಿದುಹೋಗಿದೆ ಮುಂತಾದ ವಿವರಗಳನ್ನೆಲ್ಲ ನಿಮ್ಮ ಫ್ರಿಜ್ ನಿಮಗೆ ಹೇಳುತ್ತದೆ. ಹಾಲು ಮುಗಿದಿದೆಯೆಂದಾಗ ಎರಡು ಲೀಟರ್ ಹಾಲಿನ 'ಡೋರ್ ಡೆಲಿವರಿ' ಕಳಿಸುವಂತೆ ಅಂಗಡಿಗೆ ಸಂದೇಶ ಕಳುಹಿಸುವುದೂ ಸಾಧ್ಯವಾಗುತ್ತದೆ.

ಸರಳವೆಂದು ತೋರುವ ಇಂತಹ ಆಲೋಚನೆಗಳ ಮೂಲಕ ಹುಟ್ಟಿಕೊಂಡ 'ಇಂಟರ್‌ನೆಟ್ ಆಫ್ ಥಿಂಗ್ಸ್' ಪರಿಕಲ್ಪನೆ ಇದೀಗ ಇನ್ನೂ ಕ್ಲಿಷ್ಟವಾದ ಕೆಲಸಗಳನ್ನೆಲ್ಲ ಸಾಧ್ಯವಾಗಿಸಲು ಹೊರಟಿದೆ.

ಮೇಲಿನ ಉದಾಹರಣೆಯನ್ನೇ ನೋಡಿ. ಅಂಗಡಿಯಲ್ಲಿ ಹಾಲಿನ ಪೊಟ್ಟಣ ಕೊಳ್ಳುವುದು, ಅದರ ಲೆಕ್ಕ ತಕ್ಷಣವೇ ದಾಖಲಾಗುವುದು ಎಲ್ಲವೂ ಸರಿ. ಆದರೆ ಅದಕ್ಕೆ ದುಡ್ಡುಕೊಡಲು ಬಿಲ್ಲಿಂಗ್ ಕೌಂಟರಿನಲ್ಲಿ ಕಾಯಬೇಕಲ್ಲ!

ಅಂತಹ ಸನ್ನಿವೇಶ ತಪ್ಪಿಸಲಿಕ್ಕೂ ತಂತ್ರಜ್ಞಾನವನ್ನು ಬಳಸುವುದು ಸಾಧ್ಯ. ಮೊಬೈಲ್ ದೂರವಾಣಿಗಳಲ್ಲಿ, ಡೆಬಿಟ್–ಕ್ರೆಡಿಟ್ ಕಾರ್ಡುಗಳಲ್ಲಿ ಕಾಣಿಸಿಕೊಳ್ಳುತ್ತಿರುವ ನಿಯರ್ ಫೀಲ್ಡ್ ಕಮ್ಯೂನಿಕೇಶನ್ (ಎನ್‌ಎಫ್‌ಸಿ) ತಂತ್ರಜ್ಞಾನ ಇದಕ್ಕೊಂದು ಉದಾಹರಣೆ. ಅಂಗಡಿಯಲ್ಲಿ ಹಾಲಿನ ಪ್ಯಾಕೆಟ್ ಕೊಂಡು ಬಿಲ್ಲಿಂಗ್ ವಿಭಾಗದಲ್ಲಿರುವ ರೀಡರಿನ ಮುಂದೆ ಮೊಬೈಲ್ ಫೋನನ್ನೋ ಕ್ರೆಡಿಟ್ ಕಾರ್ಡನ್ನೋ ಹಿಡಿದು ಮುಂದೆ ಸಾಗುವ ಕಲ್ಪನೆ ಈ ತಂತ್ರಜ್ಞಾನದಿಂದಾಗಿ ಸಾಕಾರವಾಗಿದೆ.

**ಸ್ಮಾರ್ಟ್ ಮನೆಗಳ ಸುತ್ತಮುತ್ತ**

ಆರು ಗಂಟೆಗೆ ಎದ್ದು ಏಳುಗಂಟೆಗೆ ಆಫೀಸಿಗೆ ಹೊರಡಬೇಕು ಎಂದರೆ ನಾವು ಐದೂ ಮುಕ್ಕಾಲಿಗೋ ಆರುಗಂಟೆಗೋ ಅಲಾರಂ ಇಟ್ಟುಕೊಳ್ಳುತ್ತೇವಲ್ಲ, ನಮ್ಮ ಮನೆಯ ಸಾಧನಗಳೆಲ್ಲ 'ಸ್ಮಾರ್ಟ್' ಆಗಿಬಿಟ್ಟರೆ ಆ ಅಲಾರಂ ಅವುಗಳೆಲ್ಲವುದಕ್ಕೂ ಅನ್ವಯಿಸುವಂತೆ ಮಾಡಿಕೊಳ್ಳಬಹುದು. ಅಂದರೆ, ಏಳುವ ಹೊತ್ತಿಗೆ ಗೀಸರಿನಲ್ಲಿ ಬಿಸಿನೀರು, ಕಾಫಿಮೇಕರಿನಲ್ಲಿ ಡಿಕಾಕ್ಷನ್ ಎಲ್ಲವೂ ರೆಡಿಯಾಗಿರುವುದು ಸಾಧ್ಯವಾಗುತ್ತದೆ!

ಇಂಟರ್‌ನೆಟ್ ಆಫ್ ಥಿಂಗ್ಸ್‌ನಿಂದಾಗಿ ಸಾಧ್ಯವಾಗುವ ಎಲ್ಲ ಹೊಸ ಸೌಲಭ್ಯಗಳೂ ಇಷ್ಟೆಲ್ಲ ಸಂಕೀರ್ಣ ವ್ಯವಸ್ಥೆಗಳನ್ನೇ ಬಳಸಬೇಕು ಎಂದೇನೂ ಇಲ್ಲ. ನಮ್ಮ ಸರಳ ಅಗತ್ಯಗಳನ್ನು ಪೂರೈಸುವ ಪರಿಣಾಮಕಾರಿ ವ್ಯವಸ್ಥೆಗಳನ್ನೂ ನಾವು ಇಂಟರ್‌ನೆಟ್ ಆಫ್ ಥಿಂಗ್ಸ್‌ನಲ್ಲಿ ಕಾಣಬಹುದು.

ಉದಾಹರಣೆಗೆ ಕಾರಿನದೋ ಬೈಕಿನದೋ ಮನೆಯದೋ ಕೀಲಿಕೈಯನ್ನೇ ತೆಗೆದುಕೊಳ್ಳೋಣ. ಹಾಗೆ ನೋಡಿದರೆ ಇವನ್ನು ತೆಗೆದುಕೊಳ್ಳುವುದೇ ಸಮಸ್ಯೆ: ನಮಗೆ ಬೇಕಾಗುವ ಸಮಯಕ್ಕೆ ಸರಿಯಾಗಿ ಎಲ್ಲೋ ನಾಪತ್ತೆಯಾಗಿಬಿಡುವ ವಿಶೇಷ ಗುಣ ಅವುಗಳಿಗಿರುತ್ತದಲ್ಲ! ಪ್ಯಾಂಟಿನ ಜೇಬಿನಲ್ಲಿದೆಯೋ ಮೇಜಿನ ಮೇಲಿದೆಯೋ ವ್ಯಾನಿಟಿ ಬ್ಯಾಗಿನಲ್ಲಿದೆಯೋ ಎನ್ನುವ ಹುಡುಕಾಟ ನಮ್ಮಲ್ಲಿ ಅನೇಕರ ದಿನನಿತ್ಯದ ಕೆಲಸಗಳಲ್ಲಿ ಒಂದಾಗಿ ಸೇರಿಹೋಗಿದೆ.

ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಕ್ಕೂ ಇಂಟರ್‌ನೆಟ್ ಆಫ್ ಥಿಂಗ್ಸ್ ಪರಿಕಲ್ಪನೆ ನೆರವಾಗಬಲ್ಲದು. ಕೀಲಿಕೈಗೊಂದು ಕೀಬಂಚ್ ಜೋಡಿಸುತ್ತೇವಲ್ಲ, ಆ ಕೀಬಂಚಿನಲ್ಲೊಂದು ಪುಟ್ಟ ಸೆನ್ಸರ್ ಅಳವಡಿಸಿಬಿಟ್ಟರೆ ಆಯಿತು. ಕೀಲಿಕೈ ಕಾಣಿಸುತ್ತಿಲ್ಲ ಎಂದಾಗ ಮೊಬೈಲಿನಲ್ಲಿ ಅಳವಡಿಸಿಕೊಂಡಿರುವ ಆಪ್ ಬಳಸಿದರೆ ಆಯಿತು: ಕೀಲಿಕೈ ಎಲ್ಲಿದೆ ಎಂದು ಅದು ನಮಗೆ ನಿಖರವಾಗಿ ಹೇಳುತ್ತದೆ.

ಮನೆಯಲ್ಲಿ ಬಳಕೆಯಾಗುವ ಇನ್ನೂ ಅನೇಕ ಸಾಧನಗಳಿಗೂ ಇಂತಹವೇ ವ್ಯವಸ್ಥೆಗಳು ರೂಪುಗೊಂಡಿವೆ. ಇದಕ್ಕೊಂದು ಸರಳ ಉದಾಹರಣೆ ಹಲ್ಲುಜ್ಜುವ ಬ್ರಶ್ಶಿನದು. ಸೆನ್ಸರುಗಳ ಮೂಲಕ ಮೊಬೈಲ್ ಫೋನಿನೊಡನೆ ಸಂಪರ್ಕ ಸಾಧಿಸಿಕೊಳ್ಳುವ 'ಸ್ಮಾರ್ಟ್' ಬ್ರಶ್ಶುಗಳು ಮೊಬೈಲ್ ಆಪ್ ಮೂಲಕ ನಾವು ಹೇಗೆ ಹಲ್ಲುಜ್ಜುತ್ತೇವೆ ಎನ್ನುವ ಬಗ್ಗೆ ತಮ್ಮ ಅಭಿಪ್ರಾಯ ಹೇಳಬಲ್ಲವು!

ಮನೆಯಲ್ಲಿ ಪುಟ್ಟ ಮಕ್ಕಳನ್ನೋ ಹುಷಾರಿಲ್ಲದವರನ್ನೋ ಕೆಲಸದವರ ಮೇಲ್ವಿಚಾರಣೆಯಲ್ಲಿ ಬಿಟ್ಟುಹೋಗುವವರು ಮನೆಯ ಪರಿಸ್ಥಿತಿಯ ಮೇಲೆ ಅಂತರಜಾಲದ ಮೂಲಕವೇ ಒಂದು ಕಣ್ಣಿಟ್ಟಿರಲು ಅನುವುಮಾಡಿಕೊಡುವ ಕ್ಯಾಮೆರಾಗಳನ್ನೂ ಇಂತಹ ಸಾಧನಗಳ ಸಾಲಿಗೆ ಸೇರಿಸಬಹುದು. ಈ ಬಗೆಯ ಕ್ಯಾಮೆರಾಗಳು ಕೆಲವೇ ಸಾವಿರ ರೂಪಾಯಿ ಬೆಲೆಯಲ್ಲಿ ನಮ್ಮ ದೇಶದಲ್ಲೂ ಸಿಗುತ್ತಿವೆ.

ಅಷ್ಟೇ ಅಲ್ಲ, ಮನೆಯ ವಿದ್ಯುನ್ಮಾನ ಉಪಕರಣಗಳನ್ನು ಮೊಬೈಲ್ ಆಪ್ ಮೂಲಕ ನಿಯಂತ್ರಿಸುವ 'ಹೋಮ್ ಆಟೊಮೇಶನ್' ಪರಿಕಲ್ಪನೆ ಕೂಡ ಈಗಾಗಲೇ ಪ್ರಚಲಿತಕ್ಕೆ ಬಂದಿದೆ. ದಿವಾನಖಾನೆಯ ದೀಪ ಸರಿಯಾದ ಸಮಯಕ್ಕೆ ತನ್ನಷ್ಟಕ್ಕೆ ತಾನೇ ಹೊತ್ತಿಕೊಳ್ಳುವಂತೆ ಮಾಡುವುದು, ಬಿಸಿಲಲ್ಲಿ ನಿಲ್ಲಿಸಿರುವ ಕಾರ್ ಹತ್ತಿ ಬೆವರು ಸುರಿಸುವ ಬದಲು ಮೊಬೈಲ್ ಆಪ್ ಬಳಸಿ ಕಾರ್ ಹತ್ತುವ ಐದು ನಿಮಿಷ ಮೊದಲೇ ಏಸಿ ಆನ್ ಮಾಡುವುದೂ ಈಗ ಸಾಧ್ಯವಾಗಿದೆ!

**ಎಲ್ಲೆಲ್ಲೂ ಅಂತರಜಾಲ!**

ಸಣ್ಣಸಣ್ಣ ಸಾಧನಗಳೆಲ್ಲ ಅಂತರಜಾಲ ಸಂಪರ್ಕ ಪಡೆದುಕೊಂಡು 'ಸ್ಮಾರ್ಟ್' ಆಗುತ್ತವಲ್ಲ, ಅದರ ಉಪಯೋಗ ಮನೆಯೊಳಗಿನ ಬಳಕೆಗಷ್ಟೇ ಸೀಮಿತವೇನಲ್ಲ. 'ಇಂಟರ್‌ನೆಟ್ ಆಫ್ ಥಿಂಗ್ಸ್' ಪರಿಕಲ್ಪನೆ ಮನೆಯ ಹೊರಗೂ ಹಲವು ವಿಶಿಷ್ಟ ಸೌಲಭ್ಯಗಳನ್ನು ರೂಪಿಸಬಲ್ಲದು. ನಗರಗಳನ್ನು ಕಾಡುತ್ತಿರುವ ಟ್ರಾಫಿಕ್ ಸಮಸ್ಯೆಯನ್ನು ಕೊಂಚಮಟ್ಟಿಗೆ ಪರಿಹರಿಸುವುದು ಇಂತಹ ಸಾಧ್ಯತೆಗಳಲ್ಲೊಂದು.

ನಗರದ ಕೇಂದ್ರಭಾಗಗಳಿಗೆ (ಉದಾಹರಣೆಗೆ ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶ ಎಂದುಕೊಳ್ಳೋಣ) ಸಾರ್ವಜನಿಕ ಸಂಪರ್ಕ ವ್ಯವಸ್ಥೆ ಚೆನ್ನಾಗಿರುತ್ತದೆ, ಅಲ್ಲದೆ ಖಾಸಗಿ ವಾಹನಗಳನ್ನು ನಿಲ್ಲಿಸಲು ಜಾಗದ ಕೊರತೆಯೂ ಇರುತ್ತದೆ. ಇಲ್ಲಿಗೆ ಹೆಚ್ಚುಹೆಚ್ಚು ಜನ ತಮ್ಮ ಕಾರುಗಳಲ್ಲಿ ಬಂದರೆ ಟ್ರಾಫಿಕ್ ಜ್ಯಾಮ್ ಖಚಿತ.

ಕಾರುಗಳೆಲ್ಲ 'ಸ್ಮಾರ್ಟ್' ಆಗಿದ್ದವೆಂದರೆ ಈ ಸಮಸ್ಯೆಯನ್ನು ಕೊಂಚಮಟ್ಟಿಗೆ ಕಡಿಮೆಮಾಡಬಹುದೆಂದು ತಜ್ಞರು ಹೇಳುತ್ತಾರೆ. ಹೆಚ್ಚು ಸಂಚಾರದಟ್ಟಣೆಯ ಸಮಯದಲ್ಲಿ ಮೆಜೆಸ್ಟಿಕ್‌ಗೆ ಬಂದ ಕಾರುಗಳನ್ನು ಟ್ರಾಫಿಕ್ ಪೊಲೀಸರು ಗುರುತಿಸುವುದು, ಆ ಕಾರುಗಳ ಮಾಲಿಕರಿಗೆ ದಂಡ ವಿಧಿಸುವುದು (ವಿದೇಶಗಳಲ್ಲಿ ಇದನ್ನು ಕಂಜೆಶನ್ ಚಾರ್ಜ್ ಎಂದು ಕರೆಯುತ್ತಾರೆ) ಮತ್ತು ಆ ಮೂಲಕ ಖಾಸಗಿ ವಾಹನಗಳ ಬಳಕೆಯನ್ನು ಕೊಂಚವಾದರೂ ಕಡಿಮೆಮಾಡಲು ಪ್ರಯತ್ನಿಸುವುದು ಸಾಧ್ಯವಾಗಲಿದೆಯಂತೆ.

ದಂಡ ವಿಧಿಸಲಷ್ಟೇ ಅಲ್ಲ, ಪಾರ್ಕಿಂಗ್ ಶುಲ್ಕ – ರಸ್ತೆ ಬಳಕೆಗೆ ಟೋಲ್ ಇತ್ಯಾದಿಗಳನ್ನು ಸಂಗ್ರಹಿಸಲೂ ಇಂತಹುದೇ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಸಾಧ್ಯ. ಸಾಧ್ಯವಷ್ಟೇ ಏಕೆ, ಈಗ ನಾವೆಲ್ಲರೂ ಬಳಸುತ್ತಿರುವ ಫಾಸ್ಟ್ಯಾಗ್ ವ್ಯವಸ್ಥೆ ಇದರದ್ದೇ ಉದಾಹರಣೆ.

ಕಸ ಸಂಗ್ರಹಣೆ ಮತ್ತು ವಿಲೇವಾರಿಯನ್ನೂ ಇಂತಹ ವ್ಯವಸ್ಥೆ ಬಳಸಿ ಹೈಟೆಕ್ ಆಗಿಸುವುದು ಸಾಧ್ಯ ಎಂದು ಕೆಲವು ದೇಶಗಳು ತೋರಿಸಿವೆ. ಕಸವನ್ನು ಸಂಗ್ರಹಿಸಲು ಪ್ರತಿ ಮನೆಗೂ ವಿಶೇಷ ಕಸದ ಬುಟ್ಟಿಗಳು ಅಥವಾ ಚೀಲಗಳನ್ನು ಕೊಟ್ಟು ಅವರು ಎಷ್ಟು ಕಸ ಎಸೆಯುತ್ತಿದ್ದಾರೆ ಎನ್ನುವುದರ ಆಧಾರದ ಮೇಲೆ ಅವರಿಂದ ಶುಲ್ಕ ಸಂಗ್ರಹಿಸುವ ವ್ಯವಸ್ಥೆ ಇದು.

ವಿದ್ಯುತ್ ಹಾಗೂ ನೀರಿನ ಬಳಕೆ ನಿಯಂತ್ರಣದಲ್ಲೂ 'ಸ್ಮಾರ್ಟ್' ಸಾಧನಗಳು ಬಳಕೆಯಾಗುತ್ತವೆ. 'ಪೀಕ್ ಅವರ್'ಗಳಲ್ಲಿ ಹೆಚ್ಚಿನ ದರ ವಿಧಿಸುವ ಮೂಲಕ ವಿದ್ಯುತ್ ಬಳಕೆ ಕಡಿಮೆಮಾಡಲು ಪ್ರಯತ್ನಿಸುವುದು ಈ ಮೂಲಕ ಸಾಧ್ಯವಾಗಿದೆ. ನೀರಿನ ಬಳಕೆಯನ್ನು ಸಮರ್ಪಕವಾಗಿ ಅಳೆಯುವುದು ಹಾಗೂ ಪೋಲಾಗುವಿಕೆಯನ್ನು ನಿಯಂತ್ರಿಸುವುದರಲ್ಲೂ ಇಂತಹ ವ್ಯವಸ್ಥೆಗಳ ಬಳಕೆ ಸಾಧ್ಯ.

ಕಾರ್ಖಾನೆಗಳಲ್ಲಿಯೂ 'ಇಂಟರ್‌ನೆಟ್ ಆಫ್ ಥಿಂಗ್ಸ್' ಪರಿಕಲ್ಪನೆ ಸಹಾಯಕವಾಗಬಲ್ಲದು. ವಸ್ತುಗಳ ತಯಾರಿಕೆಯಲ್ಲಿ ಮಾನವರ ಹಸ್ತಕ್ಷೇಪ ಈಗ ಇರುವುದಕ್ಕಿಂತ ಕಡಿಮೆಯಾಗಿ ಪರಸ್ಪರ ಸಂಪರ್ಕದಲ್ಲಿರುವ ಯಂತ್ರಗಳೇ ಸಂಪೂರ್ಣ ಜವಾಬ್ದಾರಿಯನ್ನು ಹೊರುವುದು ಸಾಧ್ಯವಾಗುವ ನಿರೀಕ್ಷೆಯಿದೆ.

### ಸ್ಮಾರ್ಟ್ ಡಸ್ಟ್

ದಿನನಿತ್ಯದ ಬಳಕೆಯ ವಸ್ತುಗಳಲ್ಲೆಲ್ಲ ಸೆನ್ಸರುಗಳನ್ನು ಸೇರಿಸುವುದು ಇಂಟರ್‌ನೆಟ್ ಆಫ್ ಥಿಂಗ್ಸ್ ಪರಿಕಲ್ಪನೆಯ ಮೂಲಮಂತ್ರ ಎನ್ನಬಹುದು ತಾನೆ? ಎಲ್ಲೆಡೆಯೂ ಇರುವ ಸೆನ್ಸರುಗಳು ಕಳುಹಿಸುವ ಮಾಹಿತಿಯನ್ನು ಸಂಗ್ರಹಿಸಿ ಸಂಸ್ಕರಿಸಿದಾಗಲೆ ಆ ವಸ್ತುಗಳೆಲ್ಲ ನಮ್ಮೊಡನೆ ಅಥವಾ ಪರಸ್ಪರ ತಮ್ಮ ನಡುವೆಯೇ ಸಂವಹನ ನಡೆಸುವುದು ಸಾಧ್ಯವಾಗುತ್ತದೆ.

ನಿರ್ದಿಷ್ಟ ವಸ್ತುಗಳೊಳಗೆ ಸೆನ್ಸರುಗಳನ್ನು ಸೇರಿಸುವ ಬದಲಿಗೆ ಸೆನ್ಸರುಗಳನ್ನು ತೀರಾ ಸಣ್ಣ ಗಾತ್ರಕ್ಕೆ ಕುಗ್ಗಿಸಿಬಿಟ್ಟರೆ? ಎಲ್ಲೆಲ್ಲೂ ಸೆನ್ಸರುಗಳನ್ನು ಇರಿಸುವುದು ಸಾಧ್ಯವಾಗುತ್ತದಲ್ಲ!
ಈ ಆಲೋಚನೆಯಿಂದ ಹುಟ್ಟಿದ್ದೇ 'ಸ್ಮಾರ್ಟ್ ಡಸ್ಟ್' – ಸೆನ್ಸರುಗಳನ್ನು ಧೂಳಿನ ಕಣಗಳಷ್ಟು ಸಣ್ಣದಾಗಿಸಿ ಎಲ್ಲೆಲ್ಲೂ ಹಾರಿಬಿಡುವ ಪ್ರಯತ್ನ. ಮೈಕ್ರೋ ಎಲೆಕ್ಟ್ರೋಮೆಕ್ಯಾನಿಕಲ್ ಸಿಸ್ಟಂಸ್, ಅಂದರೆ MEMSಗಳನ್ನು ಬಳಸುವ ಈ ಸೆನ್ಸರುಗಳು ಮೂಲತಃ ಮಿಲಿಟರಿ ಉಪಯೋಗಗಳಿಗಾಗಿ ರೂಪುಗೊಂಡವಾದರೂ ಈಗ ಬೇರೆಯ ಕ್ಷೇತ್ರಗಳಲ್ಲೂ ಕಾಣಿಸಿಕೊಳ್ಳುತ್ತಿವೆ. ಶತ್ರುಪ್ರದೇಶದಲ್ಲಿ ಗೂಢಚಾರಿಕೆ ನಡೆಸುವುದರಿಂದ ನಮ್ಮದೇ ಕೃಷಿಭೂಮಿಯಲ್ಲಿರುವ ಬೆಳೆಯ ಮೇಲೆ ನಿಗಾ ವಹಿಸುವವರೆಗೆ, ದೇಹದ ಮೇಲೆ ಪೌಡರಿನಂತೆ ಕುಳಿತು ಆರೋಗ್ಯ ಗಮನಿಸಿಕೊಳ್ಳುವುದರಿಂದ ಅರಣ್ಯ ಪ್ರದೇಶದಲ್ಲಿ ಹರಡಿಕೊಂಡು ವನ್ಯಜೀವನದ ಅಧ್ಯಯನ ನಡೆಸುವವರೆಗೆ 'ಸ್ಮಾರ್ಟ್ ಡಸ್ಟ್' ಹಲವು ವಿಧಗಳಲ್ಲಿ ಉಪಯುಕ್ತವಾಗಲಿದೆ ಎನ್ನುವುದು ತಜ್ಞರ ಹೇಳಿಕೆ.

### ಮುಂದಿನ ದಾರಿ

ಇಂಟರ್‌ನೆಟ್ ಆಫ್ ಥಿಂಗ್ಸ್ ಎನ್ನುವ ಈ ಕಲ್ಪನೆ ಬಹಳ ರೋಚಕವಾದದ್ದು ಎನ್ನುವುದೇನೋ ಸ್ಪಷ್ಟ. ಆದರೆ ಈ ಕಲ್ಪನೆಯನ್ನು ಸಾಕಾರಗೊಳಿಸುವುದು ಹೇಗೆ? ಈ ಪ್ರಶ್ನೆಗೆ ಉತ್ತರಿಸುವ ಮುನ್ನ ಅಂತರಜಾಲದ ರಚನೆಯನ್ನು ಕೊಂಚ ಗಮನಿಸೋಣ.

ಅಂತರಜಾಲಕ್ಕೆ ವಿವಿಧ ಸಾಧನಗಳ ನಡುವೆ ಮಾಹಿತಿ ವಿನಿಮಯ ಆಗುತ್ತದಲ್ಲ, ಹೀಗೆ ವಿನಿಮಯವಾಗುವ ಮಾಹಿತಿ ಎಲ್ಲಿಂದ ಎಲ್ಲಿಗೆ ಹೋಗುತ್ತದೆ ಎಂದು ಗುರುತಿಸಲು ಪ್ರತಿಯೊಂದು ಸಾಧನಕ್ಕೂ ವಿಶಿಷ್ಟವಾದ ವಿಳಾಸ ಇರಬೇಕಾಗುತ್ತದೆ. ಈ ವಿಳಾಸವನ್ನೇ ಐಪಿ ಅಡ್ರೆಸ್ ಎಂದು ಕರೆಯುತ್ತಾರೆ. ಬರೆದ ಪತ್ರವನ್ನು ಅಂಚೆಗೆ ಹಾಕುವ ಮೊದಲು ಲಕೋಟೆಯ ಮೇಲೆ ಅದು ತಲುಪಬೇಕಾದ ವಿಳಾಸ ಹಾಗೂ ಅದನ್ನು ಕಳುಹಿಸುತ್ತಿರುವವರ ವಿಳಾಸ ಬರೆಯುತ್ತೇವಲ್ಲ, ಇದೂ ಹಾಗೆಯೇ. ಅಂಚೆಪೆಟ್ಟಿಗೆಗೆ ಹಾಕಿದ ಪತ್ರವನ್ನು ಇಲಾಖೆಯವರು ಪೂರ್ವನಿರ್ಧಾರಿತ ಮಾರ್ಗದಲ್ಲಿ ಕೊಂಡೊಯ್ದು ಅದು ಹೋಗಿ ಸೇರಬೇಕಾದ ಸ್ಥಳಕ್ಕೆ ತಲುಪಿಸುತ್ತಾರೆ. ಅಂತರಜಾಲದ ಲೋಕದಲ್ಲಿ ಈ ಕೆಲಸ ಮಾಡುವುದು ಇಂಟರ್‌ನೆಟ್ ಪ್ರೋಟೋಕಾಲ್ (ಐಪಿ) ಎಂಬ ಶಿಷ್ಟಾಚಾರ.

ಇದೀಗ ಉಪಯೋಗದಲ್ಲಿರುವುದು ಇಂಟರ್‌ನೆಟ್ ಪ್ರೋಟೋಕಾಲ್‌ನ 4ನೇ ಆವೃತ್ತಿ (ಐಪಿವಿ4). ಇದರಲ್ಲಿ ವಿಳಾಸಗಳನ್ನು ನಿಯೋಜಿಸಲು 32 ಬಿಟ್‌ಗಳನ್ನು ಬಳಸಲಾಗುತ್ತದೆ. ಅಂದರೆ, ಇಂದಿನ ಅಂತರಜಾಲದ ವ್ಯವಸ್ಥೆ ಸುಮಾರು 400 ಕೋಟಿ ಸಾಧನಗಳಿಗೆ ಮಾತ್ರವೇ ವಿಳಾಸಗಳನ್ನು ನೀಡಬಲ್ಲದು.

ಆದರೆ, ಈ ಲೇಖನದ ಪ್ರಾರಂಭದಲ್ಲಿ ನೋಡಿದಂತೆ, ಇನ್ನು ಕೆಲವೇ ವರ್ಷಗಳಲ್ಲಿ ಸಾವಿರಾರು ಕೋಟಿ ಸಾಧನಗಳು ಅಂತರಜಾಲದ ಸಂಪರ್ಕಕ್ಕೆ ಬರುವ ಅಂದಾಜಿದೆಯಲ್ಲ? ಇದರಿಂದಾಗಿಯೇ ಅಂತರಜಾಲದ ಲೋಕ ಇಂಟರ್‌ನೆಟ್ ಪ್ರೋಟೋಕಾಲ್‌ನ ಹೊಸ ಆವೃತ್ತಿಯತ್ತ ಹೊರಟಿದೆ. ಐಪಿವಿ6 ಎಂದು ಕರೆಸಿಕೊಂಡಿರುವ ಈ ಆರನೇ ಆವೃತ್ತಿಯಲ್ಲಿ ವಿಳಾಸಗಳನ್ನು ನಿಯೋಜಿಸಲು 128 ಬಿಟ್‌ಗಳನ್ನು ಬಳಸಲಾಗುತ್ತದೆ. ಹಾಗಾಗಿ ಐಪಿವಿ4ನಲ್ಲಿ ಬಳಸಲು ಸಾಧ್ಯವಿರುವುದಕ್ಕಿಂತ ಅದೆಷ್ಟೋ ಹೆಚ್ಚು ಸಂಖ್ಯೆಯ ಸಾಧನಗಳನ್ನು ಐಪಿವಿ6 ವ್ಯವಸ್ಥೆಯಲ್ಲಿ ಬಳಸಬಹುದು.

ಅಲ್ಲಿಗೆ ಇಷ್ಟೆಲ್ಲ ಸಾಧನಗಳು ಅಂತರಜಾಲದ ಸಂಪರ್ಕಕ್ಕೆ ಬರಲು ಇದ್ದ ಒಂದು ಅಡಚಣೆಗೆ ಪರಿಹಾರ ಇದೆ ಎಂದಾಯಿತು.

ಇಂಟರ್‌ನೆಟ್ ಆಫ್ ಥಿಂಗ್ಸ್ ಪರಿಕಲ್ಪನೆ ಬೆಳೆದು ಹೆಚ್ಚು ಹೆಚ್ಚು ಸಂಸ್ಥೆಗಳು, ಬಳಕೆದಾರರು ಈ ಕ್ಷೇತ್ರಕ್ಕೆ ಬರಬೇಕು ಎನ್ನುವುದಾದರೆ ಇಷ್ಟೆಲ್ಲ ಸಾಧನಗಳು ಸೃಷ್ಟಿಸುವ, ರವಾನಿಸುವ ದತ್ತಾಂಶವನ್ನೆಲ್ಲ ಸರಿಯಾಗಿ ನಿರ್ವಹಿಸುವ ವ್ಯವಸ್ಥೆಗಳು ಬೇಕು. ಇದಕ್ಕೆ ಬಿಗ್ ಡೇಟಾ ಎಂಬ ಇನ್ನೊಂದು ಪರಿಕಲ್ಪನೆ ನೆರವಾಗುತ್ತದೆ.

ಅಂತರಜಾಲದಲ್ಲಿ ಹಲವಾರು ಮೂಲಗಳಿಂದ ಹರಿದುಬರುವ ಅಗಾಧ ಪ್ರಮಾಣದ ದತ್ತಾಂಶವನ್ನು 'ಬಿಗ್ ಡೇಟಾ' ಎಂದು ಗುರುತಿಸಲಾಗುತ್ತದೆ. ಸರ್ಚ್ ಇಂಜನ್ ಹುಡುಕಾಟಗಳು, ಸಮಾಜಜಾಲಗಳಲ್ಲಿ ಹರಿದಾಡುವ ಸಂದೇಶಗಳು, ಆನ್‌ಲೈನ್ ಅಂಗಡಿಗಳಲ್ಲಿ ಮಾರಾಟವಾಗುವ ಸರಕುಗಳ ವಿವರ ಮುಂತಾದ ಸಂಗತಿಗಳ ಜೊತೆಗೆ ವಿವಿಧ ಸೆನ್ಸರುಗಳಿಂದ ಹರಿದುಬರುವ ದತ್ತಾಂಶವೂ ಈ ಸಾಲಿಗೆ ಸೇರುತ್ತದೆ. ಬಿಗ್ ಡೇಟಾ ಸಂಸ್ಕರಣೆ–ವಿಶ್ಲೇಷಣೆಗೆ ರೂಪಿಸಲಾಗಿರುವ ವ್ಯವಸ್ಥೆಗಳನ್ನೇ ಇಂಟರ್‌ನೆಟ್ ಆಫ್ ಥಿಂಗ್ಸ್‌ನಲ್ಲಿ ಹರಿದಾಡುವ ದತ್ತಾಂಶವನ್ನು ನಿರ್ವಹಿಸಲೂ ಬಳಸಬಹುದು.

ಇಂದಿನ ಅಂತರಜಾಲ ಪ್ರಪಂಚದ ಇನ್ನೊಂದು ಪ್ರಮುಖ ಅಂಗವಾದ ಕ್ಲೌಡ್ ಕಂಪ್ಯೂಟಿಂಗ್ ಕೂಡ ಇಂಟರ್‌ನೆಟ್ ಆಫ್ ಥಿಂಗ್ಸ್‌ನಲ್ಲಿ ಮಹತ್ವ ಪಡೆದುಕೊಂಡಿದೆ. ಇಲ್ಲಿನ ವಿವಿಧ ಸಾಧನಗಳು ಸಂಗ್ರಹಿಸುವ ದತ್ತಾಂಶ ಬಹುಮಟ್ಟಿಗೆ ಅಂತರಜಾಲದ ವಿವಿಧೆಡೆಗಳಲ್ಲಿ – ಅಂದರೆ 'ಕ್ಲೌಡ್'ನಲ್ಲಿ – ಶೇಖರವಾಗುತ್ತದೆ. ದತ್ತಾಂಶವನ್ನು ಎಲ್ಲಿಂದ ಯಾವ ಸಾಧನದ ಮೂಲಕ ಬೇಕಾದರೂ ಪಡೆದುಕೊಳ್ಳುವುದು, ಯಾರೊಂದಿಗೆ ಬೇಕಾದರೂ ಹಂಚಿಕೊಳ್ಳುವುದು – ಇವೆಲ್ಲ ಸಾಧ್ಯವಾಗುವುದು ಈ ಕ್ಲೌಡ್‌ನಿಂದಾಗಿಯೇ.

ತಂತ್ರಜ್ಞಾನ ಇಷ್ಟೆಲ್ಲ ಬೆಳೆದಿದ್ದರೂ, ಇಷ್ಟೆಲ್ಲ ಪ್ರಯೋಗಗಳು ನಡೆದಿದ್ದರೂ ಇಂಟರ್‌ನೆಟ್ ಆಫ್ ಥಿಂಗ್ಸ್ ನಮ್ಮ ಜೀವನದ ಭಾಗವಾಗಿ ಬೆಳೆಯಲು ಇನ್ನೂ ಕೊಂಚ ಸಮಯ ಬೇಕು ಎಂದು ತಜ್ಞರು ಹೇಳುತ್ತಾರೆ. ಬೇರೆಬೇರೆ ರೀತಿಯ ಸೆನ್ಸರುಗಳ–ಸಾಧನಗಳ ನಡುವಿನ ಸಂವಹನಕ್ಕೆ ಸುಲಭ ಮಾರ್ಗಗಳಿಲ್ಲದಿರುವುದು, ಇಷ್ಟೆಲ್ಲ ಸಾಧನಗಳು ಅಂತರಜಾಲ ಸಂಪರ್ಕಕ್ಕೆ ಬಂದಾಗ ಸುರಕ್ಷತೆ ಕಾಪಾಡಿಕೊಳ್ಳಲು ಕಷ್ಟಪಡಬೇಕಾಗುವುದು – ಇಂತಹ ಸಂಗತಿಗಳನ್ನೆಲ್ಲ ಸುಧಾರಿಸಲು ಅವರು ಪ್ರಯತ್ನಪಡುತ್ತಿದ್ದಾರೆ. ಫೋನನ್ನೋ ಟ್ಯಾಬ್ಲೆಟ್ಟನ್ನೋ ಕಂಪ್ಯೂಟರನ್ನೋ ಬದಲಾಯಿಸಿದಷ್ಟು ಬೇಗ ಜನರು ಗೃಹೋಪಯೋಗಿ ವಸ್ತುಗಳನ್ನು ಬದಲಾಯಿಸುವುದಿಲ್ಲ ಎನ್ನುವುದು ಅವರು ಹೇಳುವ ಇನ್ನೊಂದು ಅಂಶ. ಹಾಗಾಗಿ 'ಸ್ಮಾರ್ಟ್' ಸಾಧನಗಳು ಹೆಚ್ಚುಹೆಚ್ಚು ಮನೆಗಳನ್ನು ಸೇರಲು ಇನ್ನೂ ಕೊಂಚ ಸಮಯ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಇದೀಗ ಪ್ರಚಲಿತಕ್ಕೆ ಬರುತ್ತಿರುವ 5ಜಿ ಮೊಬೈಲ್ ತಂತ್ರಜ್ಞಾನವು ಇಂಟರ್‌ನೆಟ್ ಆಫ್ ಥಿಂಗ್ಸ್‌ನ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಲಿದೆ ಎನ್ನುವುದು ಸದ್ಯದ ಅಂದಾಜು.

* * * *

**ಲೇಖಕರ ಪರಿಚಯ:**

**ಟಿ. ಜಿ. ಶ್ರೀನಿಧಿ** ಕಳೆದ ಎರಡು ದಶಕಗಳಿಂದ ಕನ್ನಡದಲ್ಲಿ ವಿಜ್ಞಾನ ಸಂವಹನ ನಡೆಸುತ್ತಿದ್ದು, 2000ಕ್ಕೂ ಹೆಚ್ಚು ಲೇಖನ ಹಾಗೂ 19 ಪುಸ್ತಕಗಳನ್ನು ಬರೆದಿದ್ದಾರೆ. ವಿಜ್ಞಾನ–ತಂತ್ರಜ್ಞಾನ ವಿಷಯಗಳಿಗೆ ಮೀಸಲಾದ ಕನ್ನಡ ಜಾಲತಾಣ ejnana.com ಅನ್ನು ನಡೆಸುತ್ತಿದ್ದಾರೆ, ಹಾಗೂ ಕನ್ನಡದ ಹಲವು ಪ್ರತಿಷ್ಠಿತ ಪತ್ರಿಕೆಗಳ ಅಂಕಣಕಾರರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ ಸಾಹಿತ್ಯ ಪ್ರಶಸ್ತಿ', ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ 'ಶ್ರೇಷ್ಠ ಲೇಖಕ' ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳನ್ನು ಪಡೆದಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಹಲವು ವೇದಿಕೆಗಳಿಂದ ವಿಚಾರ ಮಂಡನೆ ಮಾಡಿದ್ದಾರೆ. ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವೀಧರರಾದ ಅವರು ಸದ್ಯ ಬೆಂಗಳೂರಿನ ಬಹುರಾಷ್ಟ್ರೀಯ ಸಂಸ್ಥೆಯೊಂದರಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ಸೇವೆಸಲ್ಲಿಸುತ್ತಿದ್ದಾರೆ. ಪ್ರಸ್ತುತ ಲೇಖನವನ್ನು ಭಾರತೀ ಪ್ರಕಾಶನ ಪ್ರಕಟಿಸಿರುವ ಅವರ ಕೃತಿ 'ಟೆಕ್ಸ್ಟ್ ಬುಕ್ ಅಲ್ಲ, ಇದು ಟೆಕ್ ಬುಕ್!'ನಿಂದ ಆರಿಸಿಕೊಳ್ಳಲಾಗಿದೆ.

**3ನೇ ಸೆಮಿಸ್ಟರ್ ಬಿಬಿಎ ಪಠ್ಯಪುಸ್ತಕ ಸಂಪಾದಕ ಮಂಡಳಿ**


1) ಡಾ. ಎಸ್.ಎಲ್.ಮಂಜುನಾಥ,
ಸಹ ಪ್ರಾಧ್ಯಾಪಕರು, ವಿಜಯ ಕಾಲೇಜು, ಜಯನಗರ
11ನೇ ಮುಖ್ಯರಸ್ತೆ, 4ನೇ ಬಡಾವಣೆ, ಜಯನಗರ, ಬೆಂಗಳೂರು 560 011.
ಮೊ. ಸಂಖ್ಯೆ : 9448068328. ಇ–ಮೇಲ್ - manjunath.sulur@gmail.com

2) ಡಾ. ಎನ್.ರವಿ,
ಸಹ ಪ್ರಾಧ್ಯಾಪಕರು, ಬಿಇಎಲ್ ಪ್ರಥಮ ದರ್ಜೆ ಕಾಲೇಜು,
ಜಾಲಹಳ್ಳಿ, ಬೆಂಗಳೂರು 560 013.
ಮೊ. ಸಂಖ್ಯೆ : 9902953981. ಇ–ಮೇಲ್ - raviayana14@gmail.com

3) ಡಾ. ಜಗದೀಶ್‌ಬಾಬು ಬಿ ವಿ,
ಸಹ ಪ್ರಾಧ್ಯಾಪಕರು, ಸೇಂಟ್ ಫ್ರಾನ್ಸಿಸ್ ಪದವಿ ಕಾಲೇಜು,
ಕೋರಮಂಗಲ, ಬೆಂಗಳೂರು 560 034.
ಮೊ. ಸಂಖ್ಯೆ : 9880123307. ಇ–ಮೇಲ್ - jagadeshbabuv@gmail.com

# ಮಾದರಿ ಪ್ರಶ್ನೆಪತ್ರಿಕೆ

**ಸಮಯ : 3 ಗಂಟೆಗಳು** **ಅಂಕಗಳು : 70**

**I. ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:** **5 × 2 = 10**

1. ನಮ್ಮ ಪ್ರಾಚೀನ ಕವಿಗಳು ನಾಟಕ ಪ್ರಕಾರವನ್ನು ಬೆಳೆಸದೆ ಇರಲು ಕಾರಣವೇನು?
2. ಕಾವ್ಯಸ್ವಾದನ ಕುರಿತು ರಿಚರ್ಡ್ಸ್ ಹೇಳಿರುವ ಅಂಶಗಳಾವುವು?
3. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಯಾವ ರೀತಿಯ ಟ್ರೈನಿಂಗ್ ಕೊಡುವುದಾಗಿ ಹಯವದನರಾವ್ ಪುಟ್ಟಲಕ್ಕಮ್ಮನಿಗೆ ತಿಳಿಸಿದರು?
4. ಅಡುಗೆ ಮನೆಯ ಹುಡುಗಿ ಏನನ್ನು ಕಡೆಗಣಿಸುತ್ತಾಳೆ?
5. ದನಕಾಯುವ ರಾಮನಿಂದ ಲೇಖಕರಿಗೆ ಬಂದೊದಗಿದ ಜವಾಬ್ದಾರಿ ಏನು?
6. ಮಗಳನ್ನು ಕಾಲೇಜಿಗೆ ಸೇರಿಸುವ ಹೊತ್ತಲ್ಲಿ ಅಮ್ಮ ಮಗಳಿಗೆ ಏನೆಂದು ಹೇಳಿದಳು?
7. ಅಮ್ಮ ಮಂಡಿಯಲ್ಲಿ ಕೆಲಸಕ್ಕೆ ಸೇರಿಕೊಂಡ ಮೇಲೆ ಅವಳ ದಿನಚರಿ ಹೇಗಿತ್ತು?
8. ಷೋಯಿಂಕಾನ ಬಳಿ ಆಫ್ರಿಕನ್ ರಂಗಭೂಮಿಯ ತರುಣರು ಏನೆಂದು ತಮ್ಮ ಕೊರಗನ್ನು ತೋಡಿಕೊಂಡರು?

**II. ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ:** **4 × 5 = 20**

1. ಸಾಹಿತ್ಯ ಕೃತಿಗಳಿಗಿಂತ 'ನಾಟಕ' ಹೇಗೆ ಭಿನ್ನ ಎಂಬುದನ್ನು ಪ್ರೇಕ್ಷಕರ ಮನಸ್ಸಿನ ಮೇಲೆ ಏರ್ಪಡಿಸುವುದು ಹೇಗೆ?
2. ಹೆಣ್ಣು ತನ್ನ ಕನಸುಗಳನ್ನು ಸಾಕಾರಗೊಳಿಸುವಲ್ಲಿ 'ಗವಾಕ್ಷಿ' ಎಷ್ಟು ಮುಖ್ಯ ಎಂಬುದನ್ನು ಕವಯಿತ್ರಿ ಹೇಗೆ ತಿಳಿಸಿದ್ದಾರೆ?
3. ಕವಿಗೆ ಯಾವುದು ಬಲು ಕಷ್ಟದ ಕೆಲಸವಾಗಿದೆ?
4. ತಾಯ್ನಾಡಿನ ಹಂಬಲವನ್ನು ಕವಿ ಹೇಗೆ ನೆನಪಿಸಿಕೊಂಡಿದ್ದಾರೆ?
5. ಭಾರತದಲ್ಲಿ ಪ್ರಜಾಪ್ರಭುತ್ವ ಸಫಲವಾಗದೆ ಅನಾಯಕತ್ವದ ಕಡೆ ಜಾರಲು ಕಾರಣವೇನು?
6. ಷೋಯಿಂಕಾ ಪೊಲಿಟಿಕಲ್ ಲೇಖಕನೆಂದು ಗುರುತಿಸಿಕೊಳ್ಳಲು ಕಾರಣವೇನು?

**III. ಮೂರು ಪ್ರಶ್ನೆಗಳಿಗೆ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ:** **3 × 10 = 30**

1. ಕರ್ನಾಟಕದಲ್ಲಿ ನಾಟಕ ಪುನರುದ್ಧಾರವಾಗಲು ಅ.ನ.ಕೃ. ಅವರ ನಿಲುವುಗಳೇನು?
2. ಹಯವದನರಾವ್ ಮತ್ತು ಪಂಚಮನ ನಡುವಿನ ಸಂಘರ್ಷಕ್ಕೆ ಕಾರಣಗಳೇನು?
3. ಲೇಖಕರು ಕಾಡಿನ ಜೀವಿಗಳ ತಂಟೆಗೇ ಹೋಗಬಾರದೆಂದು ಅಖೈರಾಗಿ ನಿರ್ಧರಿಸಿದ್ದು ಏಕೆ?
4. ಭೀಮ ಬಕಾಸುರನನ್ನು ವಧಿಸಿದ ಪ್ರಸಂಗವನ್ನು ವಿವರಿಸಿ.
5. ಬದುಕಿನ ಕೆಲವು ಕೊರತೆಗಳನ್ನು ಹಣ ತುಂಬಲಾರದು ಎಂಬ ಸತ್ಯದ ಅರಿವು ಮಗಳಿಗೆ ಉಂಟಾದದ್ದು ಹೇಗೆ?
6. ವಾಸುವಿನ ತಾಯಿ ಮತ್ತೆ ಭೈರಪ್ಪನವರ ಮಂಡಿಗೆ ಲೆಕ್ಕ ಬರೆಯುವ ಕೆಲಸಕ್ಕೆ ಬರುವುದರ ಹಿಂದಿನ ಸ್ವಾರಸ್ಯವನ್ನು ಪರಿಚಯಿಸಿ.

**IV. ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ: (ಓದು ಪಠ್ಯ)** **2 × 5 = 10**

1. ಉಮಾದೇವಿ ರಂಗಭೂಮಿಗೆ ಬಂದ ರೀತಿಯನ್ನು ತಿಳಿಸಿ.
2. ಗಿಳಿಯ ಕಥೆಯ ಸಾರಾಂಶವೇನು?
3. ಕಿನ್ನರಿ ಜೋಗಿಗಳಿಗೂ ಅರ್ಜುನನಗಿರುವ ಸಂಬಂಧವೇನು?
4. 'ಇಂಟರ್‌ನೆಟ್ ಆಫ್ ಥಿಂಗ್ಸ್' – ಹಾಗೆಂದರೇನು?